(ಶ್ರೀ ಈಶ್ವರಪ್ಪನವರು ಸ್ವಿಚ್ ಹಾಕದೆ ಮಾತನಾಡಿದರು)

ಅಧ್ಯಕ್ಷರು: ನಿಮಗೆ ಸ್ವಲ್ಪವೂ ತಾಳ್ಮೆ ಇಲ್ಲ. ತಾವೆಲ್ಲ ಹೊರಗಡೆ ಇದ್ದಿರೆಂದು ಕಾಗದಪತ್ರಗಳನ್ನು ಸಭೆಯ ಮುಂದಿಟಿದ್ದೇವೆ. ಬೇರೇನೂ ಬಿಸಿನೆಸ್ ತೆಗೆದುಕೊಂಡಿಲ್ಲ. ನೀವೆಲ್ಲರೂ ಒಳಗಡೆ ಬರಲಿ ಎಂಬ ದೃಷ್ಟಿಯಿಂದ ಅಷ್ಟು ಹೊತ್ತಿಗೆ ಕಾಗದಪತ್ರಗಳನ್ನು ಸಭೆಯ ಮುಂದಿಡಿಸೋಣ ಎಂದು ಮಾಡಿದೆ. ಅದು ಬೇಡ ಎಂದರೆ ಇಲ್ಲಿಗೆ ನಿಲ್ಲಿಸುತ್ತೇನೆ. ನಿಮ್ಮ ಹಿತದೃಷ್ಟಿಯಿಂದ ಈ ವ್ಯವಸ್ಥೆ ಮಾಡಿದ್ದು ಮೊದಲನೆಯದಾಗಿ, ಪ್ರತಿಪಕ್ಷ ನಾಯಕರು ನೋಟಿಸ್ ಕಳುಹಿಸಿಕೊಟ್ಟಿದ್ದಾರೆ. ತಮ್ಮದೆಲ್ಲರದ್ದು ಇದೆ. ಮೊದಲಿಗೆ ಅವರು ಪ್ರಾರಂಭ ಮಾಡುತ್ತಾರೆ.

(ಶ್ರೀ ಖರ್ಗೆಯವರು ಸ್ವಿಚ್ ಹಾಕದೆ ಮಾತನಾಡಿದರು)

ಅಧ್ಯಕ್ಷರು: ನೀವು ಎಲ್ಲಿದ್ದೀರೆಂದು ನನಗೆ ಇನ್ನೂ ಕ್ಲಿಯರ್ ಆಗಿ ಗೊತ್ತಾಗಿಲ್ಲ.

(ನಗು)

ಆಗ ನೀವು ಅಲ್ಲಿದ್ದೀರಿ, ಈಗ ಇಲ್ಲಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ:- ಇಡೀ ದೇಶದಲ್ಲಿ ಇದೇ ಪರಿಸ್ಥಿತಿ ಆಗಿದೆ.

ಅಧ್ಯಕ್ಷರು:-ನಾನು ಅದನ್ನು ಹೇಳಲಿಲ್ಲ. ನಾನು ಹೇಳಿದ್ದಕ್ಕೆ ನೀವು ಬೇರೆ ಅರ್ಥ ಕಲ್ಪಿಸುವುದು ಬೇಡ.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ವಿಷಯ: ''ವಿದ್ಯುತ್ ದರ ಮತ್ತು ಕೇಂದ್ರ ಸರ್ಕಾರ ಪೆಟ್ರೋಲ್ ಡೀಸೆಲ್ ಅನಿಲ ಇವೆಲ್ಲದರ ಬೆಲೆಯಲ್ಲಿ ಹೆಚ್ಚಳ.''

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಹೇಳಿದ್ದು ಬೇರೆ. ನಾನು ವಿಷಯ ಎತ್ತಿದೆ. ಎತ್ತಿದ ಮೇಲೆ ಧರಣಿ ಮಾಡುತ್ತಿದ್ದೆನೆ. ಪ್ರಶ್ನೋತ್ತರದ ವೇಳೆಯನ್ನು ಮುಂದೂಡಿ ಅಡ್ಜರ್ನ್‌ಮೆಂಟ್ ಪೋಷನ್ ಅನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ. ನಾನು ನನ್ನ ಮಾತನ್ನು ಮುಂದುವರಿಸಬಹುದೆ ಅಥವಾ . . . . ..

ಅಧ್ಯಕ್ಷರು: ತಾವು ದಯಮಾಡಿ ಕುಳಿತುಕೊಳ್ಳಿ. ಮೊದಲು ಪತ್ರಿಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀಹೆಚ್. ಎಸ್. ನಂಜೇಗೌಡ: ಅದಕ್ಕೆ ಮುಂಚೆ ಒಂದು ಕ್ಲಾರಿಫಿಕೇಷನ್ ಅನ್ನು ಮಾನ್ಯ ಕಾಂಗ್ರೆಸ್ ಪಕ್ಷದ ನಾಯಕರಿಂದ ನಿರೀಕ್ಷೆ ಮಾಡುತ್ತೇನೆ. ಈಗ ಡೆಲ್ಲಿಯಲ್ಲಿ ಅವರು ಇವರು ಒಂದಾಗಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ:- ಒಂದಾಗಿರುವುದು ಡೆಲ್ಲಿಯಲ್ಲಿ.

ಶ್ರೀ ಹೆಚ್.ಎಸ್.ನಂಜೇಗೌಡ: ಅಲ್ಲಿ ಬೇರೆ ವ್ಯವಹಾರ, ಇಲ್ಲಿ ಬೇರೆ ವ್ಯವಹಾರ. ಅದು ಹೇಗೆ ಎಂದು ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಬಹಳ ಜನರ ಮನಸ್ಸಿನಲ್ಲಿದೆ. ಇದುಪದೇಪದೇ .

ಅಧ್ಯಕ್ಷರು: ನೀವೇ ವಿದ್ಯುತ್ ವಿಚಾರ ಬಹಳ ಮುಖ್ಯ ಎಂದು ಹೇಳಿ ನಿಮಗೆ ಅವಕಾಶ ಕೊಟ್ಟರೆ,

ಅದನ್ನು ಪಕ್ಕಕ್ಕೆ ಇಟ್ಟು ಬೇರೆ ಮಾತನಾಡುತ್ತಿದ್ದರೆ ಜನರು ನೋಡುತ್ತಾರೆ ನನಗೇನಂತೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದು ಬಹಳ ಮುಖ್ಯ.

ಅಧ್ಯಕ್ಷರು: ವಿದ್ಯುತ್‌ಗಿಂತ ಮುಖ್ಯವೇ ಇದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸೀನಿಯರ್ ಮೆಂಬರ್ ಇದನ್ನು ಎತ್ತಿದ್ದಾರೆ. ಆದರೆ ಡೆಲ್ಲಿಯಲ್ಲಿ ಏನು ಯುನೈಟೆಡ್ ಫ್ರಾಂಟ್ ಸರ್ಕಾರಕ್ಕೆ ಬೆಂಬಲ ಏನಿದೆ ಅದು ನಮ್ಮ ಐಡಿಯಾಲಾಜಿಕಲ್ ಬೇಸಿಸ್ ಮೇಲಿದೆ. ನೀವು ಸಾವಿರ ತಪ್ಪು ಮಾಡಿದರೂ ಸಪೋರ್ಟ್ ಹಳ್ಳಿಯಿಂದ ದಿಲ್ಲಿಯವರೆಗೆ ಮಾಡಬೇಕು ಎಂದು ಇಲ್ಲ. ಅಲ್ಲಿ ನಿಮ್ಮ ಕಾಟ ತಪ್ಪಿಸಿಕೊಳ್ಳುವುದಕ್ಕೋಸ್ಕರ, ಈ ದೇಶದಲ್ಲಿ ಆಗತಕ್ಕ ಅನಾಹುತ ಏನಿತ್ತು ನೀವು ಅಧಿಕಾರಕ್ಕೆ ಬಂದಿದ್ದರೆ ಅದನ್ನು ತಪ್ಪಿಸಬೇಕೆಂದು ಯುನೈಟೆಡ್ ಫ್ರಾಂಟ್ ಸರ್ಕಾರಕ್ಕೆ ನಾವು ಬೆಂಬಲ ಕೊಟ್ಟಿದ್ದೇವೆಯೇ ಹೊರತಾಗಿ ಅವರು ಸಾವಿರ ತಪ್ಪು ಮಾಡಿದರೂ ಬೆಂಬಲ ಕೊಡಬೇಕೆಂದು ಅಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ಕಾಂಗ್ರೆಸ್ ಸರ್ಕಾರದವರು ಮಾಡಬಾರದ್ದನ್ನೆಲ್ಲ ಮಾಡಿದ್ದಾರೆಂದು ಅದನ್ನು ಉಳಿಸುವುದಕ್ಕೋಸ್ಕರ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ: ಇವರಲ್ಲಿ ಒಬ್ಬರು ಸಭಾತ್ಯಾಗ ಮಾಡಿದರು. ಒಬ್ಬರು ಧರಣಿ ಕುಳಿತವರು ವಿದ್ಯುತ್ (ಬಗ್ಗೆ ಚರ್ಚೆ ಮಾಡುವುದಕ್ಕೆ ಈಗ ಅವರವರೇ ಜಗಳ ಆಡುತ್ತಿದ್ದಾರೆ.)

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಪೋರ್ಟ್ ಮಾಡಿ ಎಂದು ಎಐಸಿಸಿ. ಅಧ್ಯಕ್ಷರು ಹೇಳಿದ್ದಾರೆ. ನಾವು ತಪ್ಪು ಮುಚ್ಚಿಕೊಳ್ಳವುದಕ್ಕೋಸ್ಕರ ಅಲ್ಲ. ಎಲ್ಲದಕ್ಕೂ ನಾವು ಸಿದ್ಧರಿದ್ದೇವೆ. ಯಾವ ಇನ್‌ವೆಸ್ಟಿಗೇಷನ್ ಬೇಕಾದರೂ ಮಾಡಿ. ಯಾವ ಎನ್‌ಕ್ವೈರಿ ಬೇಕಾದರೂ ಮಾಡಿ. ಏನು ಮಾಡಿದರೂ ನಾವು ಅದಕ್ಕೆ ಉತ್ತರಕೊಡುವುದಕ್ಕೆ ಸಿದ್ಧರಿದ್ದೇವೆ. ಫೇಸ್ ಮಾಡುವುದಕ್ಕೆ ಸಿದ್ಧರಿದ್ದೇವೆ. ನೀವು ಹೋಗುತ್ತೀರಿ. ಇಬ್ಬರೂ ಬಂದಿದ್ದಿರಿ ಸುಮ್ಮನಿರಿ.

ಒಬ್ಬ ಮಾನ್ಯ ಸದಸ್ಯರು: ಇನ್ನೊಂದು ಸಾರಿ ಬೇಕಾದರೆ ಜೈಲಿಗೆ ಹೋಗುತ್ತೇವೆ ಆದರೆ ಭ್ರಷ್ಟಾಚಾರ ಮಾಡಿ ಜೈಲಿಗೆ ಹೋಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದನ್ನು ಹೇಳಿಕೊಳ್ಳಬೇಡಿ. 1977 ರಲ್ಲಿ ಎಲ್ಲಿದ್ದರು ಇವರು ಯುನೈಟೆಡ್ ಫ್ರಾಂಟ್ ಗವರ್ನ್ಮೆಂಟ್ ಜನರ ಜೊತೆಯಲ್ಲಿ ಇರಲಿಲ್ಲವೆ? 1989 ರಲ್ಲಿ ಎಲ್ಲಿದ್ದರು? ಅವರ ಜೊತೆಯಲ್ಲಿ ಇರಲಿಲ್ಲವೇ ?. ಶ್ರೀ ವಾಟಾಳ್ ನಾಗರಾಜ್: ಚರ್ಚೆಗೆ ತಾವು ಅವಕಾಶ ಕೊಟ್ಟಿದ್ದೀರಿ. ನಾವು ಕೂಡ ಅದರಲ್ಲಿ ಭಾಗವಹಿಸುತ್ತೇವೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸಪೋರ್ಟ್ ಮಾಡಬೇಕೆಂಬ ಕಾರಣದಿಂದ ಅಲ್ಲಿ ಮಾಡಿದ್ದಾರೆಯೇ ಹೊರತು, ಇಲ್ಲಿ ಸಾವಿರ ತಪ್ಪು ಮಾಡಿದರೂ ಸಪೋರ್ಟ್ ಮಾಡ ಬೇಕೆಂದು ಎಲ್ಲಿಯೂ ಕೂಡ ಪಕ್ಷ ಮಾರ್ಟಗೇಜ್ ಮಾಡಿಕೊಂಡಿಲ್ಲ. ಯಾರ ಬಳಿಯೂ ಹೋಗಿಲ್ಲ. ಅವರ ಆಶೀರ್ವಾದದಿಂದ ಬೆಳೆಯುತ್ತದೆಂಬ ಮಾತನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಅದಕ್ಕೆ ಜನತಾದಳದವರು ಕೈ ಚಪ್ಪಾಳೆ ಹೊಡೆಯುತ್ತಿದ್ದಾರೆ. ಇದು ಹೇಗಿದೆ ನೋಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವೂ ಅನೇಕ ಸಾರಿ ಹೊಡೆದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ನಾನು ಯಾವತ್ತೂ ಇವರ ಪಾರ್ಟಿ ಹೆಸರು ಹೇಳಲೇ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಜನತೆಯ ವ್ಯಾಂಡೇಟ್ ಪ್ರಕಾರ ಸರ್ಕಾರ ರಚಿಸಬಹುದಾಗಿತ್ತು. 45 ವರ್ಷಗಳಿಂದ ಅಧಿಕಾರ ನಡೆಸಿದಂಥ ಯಾ ಕಾಂಗ್ರೆಸ್ ಸರ್ಕಾರವನ್ನು ಜನ ರಿಜೆಕ್ಟ್ ಮಾಡಿದರೋ ಆ ರೀತಿ ಜನರ ತೀರ್ಮಾನಕ್ಕೆ ವಿರುದ್ಧವಾಗಿ ಒಂದು ರೀತಿ ಸರ್ಕಾರ ಏನು ಮಾಡಿದಿರಿ ಬಹುಶಃ ಕಾಂಗ್ರೆಸ್ಸಿನ ದೃಷ್ಟಿಯಿಂದ ಅವರಿಗೆ ಅದು ಅಗತ್ಯ ಇತ್ತು. ನೀವು ಅದಕ್ಕೆ ಬೇರೆ ಹೆಸರುಗಳನ್ನು ಹೇಳಬಹುದು. ಆದರೆ ಅಕಸ್ಮಾತ್ ಮಾಡಿರುವಂಥ ಅನೇಕ ಪಾಪದ ಒಂದು ಫಲದ ಪರಿಣಾಮ ಏನು ಒಂದು ದುಷ್ಪರಿಣಾಮ ನಿಮ್ಮ ಮೇಲೆ ಆಗುವುದಿತ್ತು ನಿಮ್ಮ ನಾಯಕರ ಮೇಲೆ ಆಗುತ್ತಿತ್ತು ಅನೇಕ ಅವ್ಯವಹಾರಗಳಿಂದ ಏನು ಗೊಂದಲದ ವಾತಾವರಣ ಉಂಟಾಗುತ್ತಿತ್ತು ಹಾಗಾಗಿ ಜನರ ವ್ಯಾಂಡೇಟ್‌ಗೆ ವಿರುದ್ಧವಾಗಿ. . . .

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಅಧ್ಯಕ್ಷರೇ, ವಿದ್ಯುಚ್ಛಕ್ತಿ ಬಗ್ಗೆ ಚರ್ಚೆ ನಡೆಯುತ್ತಿದೆಯೋ ಅಥವಾ ಯಾವುದರ ಬಗ್ಗೆ ಚರ್ಚೆ ನಡೆಯುತ್ತಿದೆ ಎಂಬುದನ್ನು ಹೇಳಬೇಕು ದಯವಿಟ್ಟು. ನಾವೂ ಚರ್ಚೆ ಮಾಡುತ್ತೇವೆ ಅದರ ಮೇಲೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೋಡೋಣ. ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಾನೂ ಹೇಳುತ್ತೇನೆ.

ಶ್ರೀ ಜೆ.ಎಚ್.ಪಟೇಲ್:-(ಮುಖ್ಯಮಂತ್ರಿಗಳು)

ಅಧ್ಯಕ್ಷರೇ, ನಾನು ಎಲೆಕ್ಟ್ರಿಕಲ್ ಪವರ್ ಬಗ್ಗೆ ಏನು ಹೇಳುತ್ತೀರೋ ಎಂದು ಆಲೋಚನೆ ಮಾಡುತ್ತಿದ್ದೆ. ನೀವು ಏನು ಹೇಳುತ್ತೀರೋ ಅದಕ್ಕೆ ಉತ್ತರ ಕೋಡೋಣ ಅಂತ ಇದ್ದೆ. ನೀವು ಪೊಲಿಟಿಕಲ್ ಪವರ್‌ಬಗ್ಗೆ ಹೇಳುತ್ತಿದ್ದೀರಿ. ವಿಷಯದ ಗಂಭೀರತೆಯೇ ಹೊರಟುಹೋಗಿದೆ. ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರು ಎಲೆಕ್ಟ್ರಿಸಿಟಿ ಬಗ್ಗೆ ಮಾತನಾಡಲಿ. ಅಲ್ಲಿ ಡೆಲ್ಲಿಯದು ಅದರ ಬಗ್ಗೆ ಹೇಳಿದರೆ ಅದಕ್ಕೆ ನಾನು ಉತ್ತರ ಕೊಡುತ್ತಾ ಕುಳಿತುಕೊಳ್ಳುವುದಿಲ್ಲ. ಅದಕ್ಕೆ ನನಗೆ ಪುರಸೊತ್ತಿಲ್ಲ. ಎಲೆಕ್ಟ್ರಿಸಿಟಿ ಬಗ್ಗೆ ಹೇಳಲಿ.

ಶ್ರೀ ಕೆ.ಎಸ್.ಈಶ್ವರಪ್ಪ:- ಇವತ್ತು ದೇಶದಲ್ಲಿ ಎಲೆಕ್ಟ್ರಿಕ್ ಪವರೂ ಹಾಳಾಗಿದೆ. ಪೊಲಿಟಿಕಲ್ ಪವರೂ ಹಾಳು ಮಾಡಿಬಿಟ್ಟಿದ್ದಾರೆ. ಎರಡೂ ಮಾಡಿದ್ದು ಪಟೇಲರೇ.

ಶ್ರೀ ಬಿ.ಬಿ.ಶಿವಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಎದುರುನಿಂತಿದ್ದಾರೆ ಹೋರಾಟ ಮಾಡುವುದಕ್ಕೆ. ತಾವು ಎದುರು ನಿಲ್ಲುವ ಸಂಧರ್ಭದಲ್ಲಿ ಬಗಲ್ ಮೇಲೂ ಕೂತುಬಿಟ್ಟು ತಾವು ಎದುರು ನಿಂತುಕೊಂಡು ಹೋರಾಟ ಮಾಡಿ ಹೋರಾಟ ಮಾಡಿ ಅಂದರೆ ಯಾವ ಪವರ್ ಮೇಲೆ ಹೋರಾಟ ಮಾಡುವುದು ? ಬಗಲ್ ಮೇ ಹೈ, ಸಾಮ್ನೇ ಬಿ ಹೈ. ಕೈಸಾ ಕರ್ತಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮ್ಮದು ಹೇಗೆ ಅಂದರೆ ಮುಖ್ ಮೇ ನಾಮ್, ಬಗಲ್ ಮೇ ಚೂರಿ ನಿಮ್ಮದು. ನಮ್ಮದು ಹಾಗಲ್ಲ. ನಾವು ಏನಿದ್ದರೂ ಎದುರು ಎದುರು ಹೇಳುತ್ತೇವೆ.

ಶ್ರೀ ಎಚ್.ಎನ್.ನಂಜೇಗೌಡ:- ಅಧ್ಯಕ್ಷರೆ. . . . .

ಅಧ್ಯಕ್ಷರು:- ಇನ್ನೂ ಸ್ವಲ್ಪ ಹೊತ್ತು ಮಾತನಾಡಿಕೊಳ್ಳಲಿ. ಪವರ್ ಬಗ್ಗೆ ಚರ್ಚೆಯಾಗಲಿ ಎಂದು ಇಷ್ಟು ಗಲಾಟೆ ಮಾಡಿ ಕ್ವೆಶ್ಚನ್ಸ್ ಎಲ್ಲಾ ಬಿಟ್ಟು ಹೋಗಿ . . . ರಾಮಾ ರಾಮಾ.

ಶ್ರೀ ಎಚ್.ಎನ್.ನಂಜೇಗೌಡ:- ಅಧ್ಯಕ್ಷರೇ, ನಾನು ಸ್ವಲ್ಪ ತಡವಾಗಿ ಬಂದೆ. ನನ್ನಿಂದ ಅಪರಾಧ ಆಯಿತು.

ಅಧ್ಯಕ್ಷರು:- ಏನಿಲ್ಲ.

★ಶ್ರೀ ಎಚ್.ಎನ್.ನಂಜೇಗೌಡ:- ಡಾಕ್ಟರನ್ನು ನೋಡುವುದಕ್ಕೆ ಹೋಗಿದ್ದೆ. ಅದಕ್ಕೇ ಲೇಟಾಯಿತು. ಇಲ್ಲದಿರುವ ಮಂತ್ರಿಗಳನ್ನು ಪರಿಚಯ ಮಾಡಿಸಿದರಂತೆ. ತುಂಬಾ ಸಂತೋಷ. ಒಂದು ನಾನು ಮೆಚ್ಚಿಕೊಳ್ಳಬೇಕಾದ್ದು. ನಾನು 1957 ನೇ ಇಸವಿಯಲ್ಲಿ ಎಲೆಕ್ಷನ್ ಏಜೆಂಟ್ ಆಗಿದ್ದೆ. ಅಂದರೆ ಇನ್ನು ಒಂದು ವರ್ಷ ಬಂದರೆ 40 ವರ್ಷ ಆಯಿತು ನಾನು ರಾಜಕೀಯ ನೋಡಿ. 40 ವರ್ಷದಲ್ಲಿ ಪ್ರಧಾನ ಮಂತ್ರಿಗಳ, ಮುಖ್ಯಮಂತ್ರಿಗಳ ಹೇಳಿಕೆಯೆಲ್ಲಾ ನೋಡಿಕೊಂಡು ಬಂದಿದ್ದೇನೆ. ಗಂಡಸುತನ ಬೇಕು. ತಾಕತ್ತು ಬೇಕು. ಒಂದು ಸ್ಟೇಟ್‌ಮೆಂಟ್ ಬಂತು ನಮ್ಮ ರಾಜ್ಯದಲ್ಲಿ. ಎಲ್ಲರೂ ಮಾಡುವುದಕ್ಕಾಗುವುದಿಲ್ಲ. ಇಂದಿರಾಗಾಂಧಿ ಮಾಡಲಿಲ್ಲ ಆ ಸ್ಟೇಟ್‌ಮೆಂಟ್‌ನ್ನು. ರಾಜೀವ್ ಗಾಂಧಿ ಮಾಡಲಿಲ್ಲ, ನೆಹರೂ ಮಾಡಲಿಲ್ಲ, ಲಾಲ್‌ಬಹದ್ದೂರ್ ಶಾಸ್ತ್ರಿ ಮಾಡಲಿಲ್ಲ, ಮುರಾರ್ಜಿ ಅವರು ಮಾಡಲಿಲ್ಲ, ಚರಣಸಿಂಗ್ ಅವರು ಮಾಡಲಿಲ್ಲ. ವಿ.ಪಿ.ಸಿಂಗ್ ಮಾಡಲಿಲ್ಲ ನಮ್ಮ ರಾಜ್ಯದ ಸೌಭಾಗ್ಯ. ನಾನು ಮೆಚ್ಚಿಕೊಳ್ಳುತ್ತೇನೆ. ನಾನು ಕಂಗ್ರಾಚುಲೇಟ್ ಮಾಡಬೇಕಾಗಿತ್ತು. ನಾನು ತಡವಾಗಿ ಬಂದೆ. ಅದಕ್ಕಾಗಿ ಈಗ ಮಾಡುತ್ತಿದ್ದೇನೆ ಮುಖ್ಯಮಂತ್ರಿಗಳನ್ನು ಅವರು ಒಂದು ಮಾತು ಹೇಳಿದರು. ಕರಪ್ಟ್ ಮಂತ್ರಿಗಳನ್ನೆಲ್ಲಾ ಕೈ ಬಿಟ್ಟಿದ್ದೇನೆ ಅಂತ.

ಶ್ರೀ ಜೆ.ಎಚ್.ಪಟೇಲ್:- ಇದು ರೆಕಾರ್ಡ್‌ಗೆ ಹೋಗಬಾರದು. ಏಕೆಂದರೆ ನಾನು ಹಾಗೆ ಹೇಳಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸೇರಿಸಿಕೊಂಡಿದ್ದೇನೆ ಅಂತ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ನೋಡಿ. ನಂಜೇಗೌಡರು ಲೇಟಾಗಿ ಬಂದು ಈ ತರಹ ಗೊಂದಲ ಮಾಡುತ್ತಾರೆ. ಪಟೇಲರು ಹೇಳಿದ್ದೇ ಬೇರೆ. ಇವರು ಹೇಳುವುದೇ ಬೇರೆ.

ಅಧ್ಯಕ್ಷರು:- ವಾಟಾಳ್ ನಾಗರಾಜ್ ಅವರೇ, ಎಲ್ಲಿ ವಿದ್ಯುಚ್ಛಕ್ತಿ ?

ಶ್ರೀ ವಾಟಾಳ್ ನಾಗರಾಜ್:- ನನಗೆ ಬಹಳ ಸಂಕಟವಾಗಿಬಿಟ್ಟಿದೆ ಈಗ. ಇವರು ತಡವಾಗಿ ಬಂದು ನಮ್ಮ ಪ್ರಾಣ ತೆಗೆಯುತ್ತಿದ್ದಾರೆ. ಇದು ಸರಿಯಲ್ಲ. ಬರುವಾಗ ಸಮಯಕ್ಕೆ ತಕ್ಕಂತೆ ಬರಬೇಕು. ಮುಖ್ಯಮಂತ್ರಿಗಳು ಏನು ಹೇಳಿಕೆ ಕೊಟ್ಟಿದ್ದಾರೆ. ಅದನ್ನು ಗಮನಿಸಬೇಕು. ಭ್ರಷ್ಟಾಚಾರದ ಮಂತ್ರಿಗಳನ್ನು ಹೊರಗೆ ಹಾಕಿಲ್ಲ. ಎಲ್ಲಿ ಹೇಳಿದ್ದಾರೆ ಅವರು ಆ ಮಾತು ಹೇಗೆ ಹೇಳುತ್ತಾರೆ.

ಶ್ರೀ ಜೆ.ಎಚ್.ಪಟೇಲ್:- ನಾನು ಏತಕ್ಕೆ ಹೇಳಲಿಲ್ಲ ಅಂದರೆ ಭ್ರಷ್ಟಾಚಾರದ ಮಂತ್ರಿಗಳಿಲ್ಲ ನಮ್ಮಲ್ಲಿ. ಅದಕ್ಕೆ ಹೇಳಲಿಲ್ಲ.

★ಶ್ರೀ ಬಿ.ಎಸ್.ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಕ್ಷಮಿಸಬೇಕು; ಅನಿವಾರ್ಯವಾಗಿ ಎರಡು ನಿಮಿಷ ಹೋಯಿತು. ರಾಜ್ಯದ ಮುಖ್ಯಮಂತ್ರಿಗಳಾಗಿ ಸನ್ಮಾನ್ಯ ಜೆ.ಎಚ್.ಪಟೇಲ್ ಅವರು

ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ನಾನು ಅವರಿಗೆ ಪ್ರಾರಂಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಪೂರ್ಣ ಅಧಿಕಾರದಲ್ಲಿರಲಿ. ಜನ ಏನು ಮ್ಯಾಂಡೇಟ್ ಕೊಟ್ಟಿದ್ದಾರೆ ಅದರಂತೆ ಅವರು ಪೂರ್ಣವಧಿ ಆಧಾರದಲ್ಲಿರಬೇಕು. ಚುನಾವಣಾ ಸಮಯದಲ್ಲಿ ಜನತೆಗೆ ಕೊಟ್ಟಂಥ ಭರವಸೆಗಳನ್ನು ಈಡೇರಿಸಬೇಕು ಎಂದು ಈ ಕಡೆ ಕುಳಿತಿರುವಂಥ ನಮ್ಮ ಅಪೇಕ್ಷೆ ಇದೆ. ಜನತೆಯ ಅಪೇಕ್ಷೆ ಕೂಡ ಇದೆ. ತಾವು ಮುಖ್ಯಮಂತ್ರಿ ಆದಮೇಲೆ ತಮ್ಮ ಮುಖದಲ್ಲಿ ಕಳೆ ಬಂದಿದೆ. ಆದರೆ ಅಧಿಕಾರಕ್ಕೆ ಬಂದ ಮೂವತ್ತು ದಿವಸದಲ್ಲಿ ರಾಜ್ಯದ ಜನರ ಮುಖ ಮಾತ್ರ ಬಾಡಿದೆ; ಒಂದು ರೀತಿ ಕಮರಿ ಹೋಗಿದೆ. ಆ ರೀತಿಯ ಒಂದು ಪರಿಸ್ಥಿತಿಗೆ ತಾವು ತಂದಿರಲ್ಲಾ ಎನ್ನುವುದು ದು:ಖ ತರತಕ್ಕ ಸಂಗತಿ. ಏನೋ ಗೊತ್ತಿಲ್ಲ ಪಟೇಲರೆ. ತಾವು ಮುಖ್ಯಮಂತ್ರಿ ಆದಾಗಿನಿಂದ ದೈವೇಚ್ಛೆ ಏನಿದೆಯೋ ಗೊತ್ತಿಲ್ಲ. ಬಹಳ ಗೊಂದಲ. ನಿಮ್ಮ ಪಕ್ಷದಲ್ಲೂ ಗೊಂದಲ ಇದೆ. ರಾಜ್ಯದ ಜನರಲ್ಲೂ ಗೊಂದಲ ಇದೆ. ಜನಕ್ಕೂ ಏನು ಮಾಡಬೇಕು ಎಂದು ತೋಚುತ್ತಿಲ್ಲ. ನಮಗೂ ಏನು ಮಾಡಬೇಕು ಎಂಬುದು ತೋಚುತ್ತಿಲ್ಲ. ಬೇರೆ ಬೇರೆ ರೀತಿಯ ಕಾರ್ಯಕ್ರಮಗಳನ್ನು ಹಾಕಕೊಳ್ಳುತ್ತೀರಿ. ಮುಖ್ಯಮಂತ್ರಿಗಳಾಗಿ ಮೂವತ್ತು ದಿವಸವೂ ಆಗಲಿಲ್ಲ, ಸ್ವಲ್ಪವೂ ಅವಕಾಶ ಕೊಡಲಿಲ್ಲ ಅಂತ ಜನ ಏನಾದರೂ ಹೇಳಬಹುದೇನೋ ಅಂತ ಭಯ. ಆದರೂ ಸಹ ಅನಿವಾರ್ಯವಾಗಿ ಒಂದು ಮಾತನ್ನು ನಾನು ಹೇಳಬೇಕಾಗಿದೆ. ಕಳೆದ ಒಂದು ತಿಂಗಳಲ್ಲಿ ತಾವೇ ಹೇಳಿರುವ ಪ್ರಕಾರ ರಾಜ್ಯದ ಜನರ ಮುಂದೆ ತಾವು ಕ್ಷಮಾಪಣೆಯನ್ನು ಕೇಳಿದ್ದೀರಿ. ಅನಿವಾರ್ಯ ಕಾರಣಕ್ಕಾಗಿ ಶಬ್ದಗಳನ್ನು ತಾವು ಹೇಳದಿದ್ದರೂ ಸಹ ತಾವು ಅಧಿಕಾರಕ್ಕೆ ಬಂದು, ಆನೆ ಗಾತ್ರದ ಮಂತ್ರಿ ಮಂಡಲ ಮಾಡಿದಿರಿ 45 ಜನರದ್ದು. ಅದನ್ನು ಅನಿವಾರ್ಯವಾಗಿ ಮಾಡಬೇಕಾಯಿತು ಎಂದು ನೀವು ಕ್ಷಮಾಪಣೆ ಕೇಳಿದ್ದೀರಿ. 30 ದಿವಸದಿಂದ ರಾಜ್ಯದ ಜನರ ಹಿತದ ಬಗ್ಗೆ ತಾವು ಗಮನ ಕೊಡುವುದಕ್ಕೆ ಆಗಲಿಲ್ಲ. ಅಭಿವೃದ್ಧಿ ಕಡೆ ಗಮನ ಕೊಡುವುದಕ್ಕೆ ಆಗಲಿಲ್ಲ. ಡೆಲ್ಲಿ ಸುತ್ತುವುದರಲ್ಲೇ ಆಯಿತು. ಅದಕ್ಕಾಗಿ ತಾವು ಕ್ಷಮಾಪಣೆಯನ್ನು ಕೇಳುವಂಥ ಪರಿಸ್ಥಿತಿ ಬಂತು. ಅದನ್ನು ನೀವೇ ಪ್ರಾಮಾಣಿಕವಾಗಿ ಹೇಳಿದ್ದೀರಿ. ಇರುವುದನ್ನು ಇದ್ದಹಾಗೆ ಯಾವುದೇ ಮುಲಾಜಿಲ್ಲದೇ ಹೇಳುವಂಥವರು ತಾವು. ತಾವು ದಾವಣಗೆರೆಯಲ್ಲಿ ಎಂದು ಸಮಾವೇಶವನ್ನು ಕರೆದಿರಲ್ಲ ಆ ಸಮಾವೇಶದಲ್ಲಿ ತಾವು ಒಂದು ಮಾತನ್ನು ಹೇಳಿದಿರಿ. ನಾವು ಇದೇರೀತಿ ಕಚ್ಚಾಡುವುದನ್ನು ಮುಂದುವರೆಸಿದರೆ ಜನ ನಮ್ಮನ್ನು ಕಸದ ಬುಟ್ಟಿಗೆ ಹಾಕುತ್ತಾರೆ ಎಂದು ಅಂದರೆ ಆ ಮಾತು ಈ ರಾಜ್ಯದ ಮುಖ್ಯಮಂತ್ರಿಗಳ ಬಾಯಿಯಿಂದ ಬಂದಿದೆ ಅಂದರೆ ಎಷ್ಟು ನೋವನ್ನು ನೀವು ಅನುಭವಿಸುತ್ತಾ ಇರಬಹುದು. ಯಾವ ರೀತಿ ಪಕ್ಷದ ಸ್ಥಿತಿ ಈ ರೀತಿ ಆಯಿತಲ್ಲ ಎನ್ನುವುದು ಒಂದು ಕಡೆ ಈ ರೀತಿ ಇಡೀ ಮಂತ್ರಿಮಂಡಲ ಮೂವತ್ತೆರಡು ದಿವಸದಿಂದ ಯಾವುದೇ ಕೆಲಸವನ್ನು ಮಾಡುವುದಕ್ಕಾಗದೇ ಮುಖ್ಯಮಂತ್ರಿಗಳೂ ಕೆಲಸ ಮಾಡುವುದಕ್ಕಾಗದೇ ತಾವು ಉಳಿದುಕೊಳ್ಳವುದಕ್ಕೋಸ್ಕರ ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಡೆಲ್ಲಿಗೆ ಓಡಾಡುವಂಥ ಪರಿಸ್ಥಿತಿಯಲ್ಲಿದ್ದೀರಿ ಅಂದರೆ ಕಳೆದ 32 ದಿವಸದಿಂದ ಒಂದು ರೀತಿ ಅಭಿವೃದ್ಧಿಕಾರ್ಯಗಳು ಸಂಪೂರ್ಣ ಸ್ಥಗಿತ ಆಗಿದೆ. ಲೋಕಸಭಾ ಚುನಾವಣೆಯ ಹಿನ್ನೆಯಲ್ಲಿ. ನೀವು ಅಧಿಕಾರಕ್ಕೆ ಬಂದ ತಕ್ಷಣ ವಿಶೇಷವಾದ ಕಾರ್ಯಕ್ರಮವನ್ನು ತಾವು ರೂಪಿಸುತ್ತೀರಿ ಅಂತ ನಾನಾದರೂ ಭಾವಿಸಿದ್ದೆವು. ಅದು ಆಗಲಿಲ್ಲ. ಒಂದ ರೀತಿ ಮಳೆಯೂ ಬರಲಿಲ್ಲ. ಬಿತ್ತನೆ ಮಾಡಿದಂಥ ಬೀಜ ಹೊರಗೆ ಬಂದಿಲ್ಲ. ಬಂದಿರುವಂಥ ಅಲ್ಪಸ್ವಲ್ಪವೂ ಒಣಗಿಹೋಗುತ್ತಿದೆ. ಜಲಾಶಯಗಳು ಬತ್ತಿಹೋಗುತ್ತಿದೆ.

ತಾವೇ ಹೇಳುತ್ತೀರಿ ವಿದ್ಯುಚ್ಛಕ್ತಿ ಮತ್ತೆ ಕಟ್ ಮಾಡುವ ಸಂದರ್ಭ ಬರಬಹುದು. ಅಂತ. ಬಹುಶ: ಕಳೆದ 15-20 ವರ್ಷದಲ್ಲಿ ಹಿಂದೆಂದೂ ಕಾಣದ ಒಂದು ದಾರಿದ್ರ್ಯ ಒಂದು ಅನಿಷ್ಟ ಇವತ್ತು ನಮ್ಮ ರಾಜ್ಯದ ಜನರನ್ನು ಕಾಡುತ್ತಿದೆ. ಅದಕ್ಕೆ ಒಂದು ಸಲಹೆ ನಿಮ್ಮ ದೃಷ್ಟಿಯಿಂದ, ನಿಮ್ಮ ಪಕ್ಷದ ದೃಷ್ಟಿಯಿಂದ ಮತ್ತು ಜನರ ಹಿತದೃಷ್ಟಿಯಿಂದ ಕೊಡುತ್ತಿದ್ದೇನೆ. ಯಾವುದಾದರೂ ಒಂದು ಒಳ್ಳೆಯ ಪೂಜೆ ಮಾಡಿಸಿ. ಒಬ್ಬ ಮುಖ್ಯಮಂತ್ರಿ ಅಂದರೆ ಒಬ್ಬ ರಾಜ ಇದ್ದಹಾಗೆ. ಈ ಒಂದು ಕಾಟ, ಒಂದು ತರಹ ಗೊಂದಲ ಈ ಒಂದು ಅನಿಷ್ಟ ಏನು ರಾಜ್ಯದಲ್ಲಿ ಸುತ್ತಿಕೊಂಡಿದೆ ಅದನ್ನು ತೆಗೆದುಹಾಕುವುದಕ್ಕೆ ಏನಾದರೂ ಒಂದು ವಿಶೇಷ ಪೂಜೆ ಮಾಡಿ ಅದನ್ನು ಸರಿಪಡಿಸುವುದಕ್ಕೆ ಏನಾದರೂ ಸಾಧ್ಯವಾದರೆ ತಾವು ಪ್ರಯತ್ನ ಮಾಡಬೇಕು ಅಂತ ನಾನು ಕೇಳಿಕೊಳ್ಳುತ್ತೇನೆ.

ಸನ್ಮಾನ್ಯ ಮುಖ್ಯಮಂತ್ರಿಯವರು, ಹಿಂದೆ ಅವರೇ ಮುಖ್ಯಮಂತ್ರಿಗಳಾಗಿದ್ದಾಗ ಈ ಎಕ್ಸೈಸ್ ಹಾಗೂ ಪವರ್ ಇಲಾಖೆಯನ್ನು ಅದೇ ಉಪ-ಮುಖ್ಯಮಂತ್ರಿಯವರಾಗಿದ್ದಾಗಲೂ ನೋಡಿಕೊಳ್ಳುತ್ತಾ ಇದ್ದರು. ತಾವುಗಳು ಮುಖ್ಯಮಂತ್ರಿಯವರಾದ ಮೇಲೆಯೂ ಸಹ ಪ್ರಜಾಪ್ರಭುತ್ವದ ಸತ್ಸಂಪ್ರದಾಯಕ್ಕೆ ಅನುಗುಣವಾಗಿ ಒಂದು ಕೊಡುಗೆಯನ್ನು ಕೊಡುವಂಥ ಕೆಲಸವನ್ನು ತಾವು ಮಾಡಿದ್ದೀರಿ. ಅಂದರೆ ಪ್ರಜಾತಂತ್ರದ ಈ ಸಂಪ್ರದಾಯಗಳಿಗೆ ಕಿಕ್ ಕೊಟ್ಟಿದ್ದೀರಿ. ಜನಹಿತಕ್ಕೆ ಒಂದು ರೀತಿಯಲ್ಲಿ ಶಾಕ್‌ನ್ನು ಕೊಟ್ಟಿದ್ದೀರಿ. ತಾವುಗಳು ಮಾಜಿ ಸಮಾಜವಾದಿಗಳಿದ್ದೀರಿ. ಮಾನ್ಯ ಗೋಪಾಲಗೌಡರ ಶಿಷ್ಯರಾಗಿದ್ದವರಾಗಿದ್ದೀರಿ. ಸಮಾಜವಾದವನ್ನು ಅಕ್ಷರಶಃ ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಆಗದಿದ್ದರೂ ಕೂಡ ವಿದ್ಯುತ್ ದರದ ಏರಿಕೆಯ ವಿಚಾರದಲ್ಲಿ ಮಾತ್ರ ತಾವು ಸಮಾಜವಾದ ಜಾರಿಗೆ ತಂದಿದ್ದೀರಿ. ಬಡವರಿಗೆ, ರೈತರಿಗೆ, ಸಣ್ಣ ಉದ್ದಿಮೆದಾರರಿಗೆ, ಜನಸಾಮಾನ್ಯರಿಗೆ, ವ್ಯಾಪಾರಸ್ಥರಿಗೆ ವಿದ್ಯುತ್ ದರದ ಶಾಕ್‌ನ್ನು ತಾವು ಕೊಟ್ಟಿದ್ದಿರಿ . ಸಮಾಜವಾದವನ್ನು ಎಲ್ಲಾ ಜನರಿಗೂ ತಲುಪಿಸತಕ್ಕಂಥ ತಮ್ಮ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೀರಿ. ನಾವು ನಿಮ್ಮಿಂದ ಇಂಥ ಕಾರ್ಯವನ್ನು ನಿರೀಕ್ಷೆ ಮಾಡಬಹುದೆ? ಪ್ರಜಾತಂತ್ರದ ಸತ್ ಸಂಪ್ರದಾಯದ ಬಗ್ಗೆ ಗಂಟೆಗಟ್ಟಳೆ ಭಾಷಣ ಮಾಡತಕ್ಕಂಥ ನೀವು ಮುಖ್ಯಮಂತ್ರಿಗಳಾದ ಮೇಲೆ, ಪ್ರಜಾತಂತ್ರ ವ್ಯವಸ್ಥೆಯ ರೀತಿಯಲ್ಲಿ ಮುಖ್ಯಮಂತ್ರಿಯಾಗಿ ಕೆಲಸ ಮಾಡಿಕೊಂಡು ಹೋಗಬೇಕೆಂಬ ಕಳಕಳಿ ನಿಜವಾಗಿಯೂ ನಿಮಗೆ ಇದೆಯೇ ? ಈ ವಿದ್ಯುತ್ ದರವನ್ನು ಹೆಚ್ಚಿಸಿರುವುದು ದೇಶದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಒಂದು ಗಿನ್ನಿಸ್ ದಾಖಲ್‌ಗೆ ಸೇರಬೇಕು. 43 ಪರ್‌ಸೆಂಟ್‌ನಷ್ಟನ್ನು ಯಾರೂ ಇದುವರೆಗೆ ಏರಿಕೆ ಮಾಡಿರಲಿಲ್ಲ. ಇತಿಹಾಸದಲ್ಲಿ ಒಂದೇ ಬಾರಿಗೆ, ಒಂದೇ ಇಲಾಖೆಗೆ ಸಂಬಂಧಪಟ್ಟಂಥ ತೆರಿಗೆಯನ್ನು ಪ್ರಮಾಣದಲ್ಲಿ ಜನರ ಮೇಲೆ ಯಾರೂ ಹಾಕಿರಲಿಲ್ಲ. ಬರಗಾಲ, ಅತಿವೃಷ್ಟಿ, ನೆರೆಹಾವಳಿ, ಭೂಕಂಪದ, ಜೊತೆಗೆ ವಿದ್ಯುತ್ ಸರಬರಾಜು ಸರಿಯಾಗಿ ಮಾಡವುದಕ್ಕೆ ಆಗದೇ ಇರುವಂಥ ಪರಿಸ್ಥಿತಿಯಲ್ಲಿ ರೈತ ಐಪಿ ಸೆಟ್‌ಗಳನ್ನು ಇಟ್ಟುಕೊಂಡು ಸಾಲ ಮಾಡಿಕೊಂಡು ಬೆಳೆ ಬೆಳೆಯಲು ಆಗದೇ ಕಣ್ಣೀರು ಹಾಕುತ್ತಾ ಇದ್ದಾನೆ. ವಿದ್ಯುತ್ ಅಭಾವದಿಂದ ವಿದ್ಯುತ್ ದರದಿಂದ ಅನೇಕ ಸಣ್ಣ, ದೊಡ್ಡ, ಕಾರ್ಖಾನೆಗಳು ಮುಚ್ಚಿದುದರಿಂದಾಗಿ ಲಕ್ಷಾಂತರ ಜನ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಈಗ ಕೆರೆಕುಂಟೆಗಳು ತುಂಬದೇ, ಜಲಾಶಯಗಳು ತುಂಬದೇ ಪುನಃ ವಿದ್ಯುತ್ ಕಡಿತವನ್ನು ಮಾಡಬೇಕೆಂಬ ಕಾಲದಲ್ಲಿ, ಇಂಥ ವಿಚಿತ್ರ ಸನ್ನಿವೇಶದಲ್ಲಿ ತಾವುಗಳು ಸುಮಾರು 18 ತಿಂಗಳ ಕಾಲದಲ್ಲಿ ತಾವೇ ಇಲಾಖೆಯನ್ನು

ಇಟ್ಟುಕೊಂಡಿರತಕ್ಕಂಥ ಕಾಲದಲ್ಲಿ ತಾವೇ ನೋಡಿದ ಹಾಗೆ ನಿಮ್ಮ ಇಲಾಖೆಯನ್ನು ಸುಧಾರಿಸುವುದಕ್ಕೆ, ಸರಿಪಡಿಸುವುದಕ್ಕೆ, ವಿದ್ಯುತ್ ಸರಬರಾಜುನ್ನು ಸರಿಯಾದ ರೀತಿಯಲ್ಲಿ ಮಾಡಲು, ಯಾವುದೇ ಪ್ರಾಮಾಣಿಕ ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಮುಖ್ಯಮಂತ್ರಿಗಳಾದ ತಕ್ಷಣ, ಜನತೆಯ ಆರ್ಶಿವಾದದಿಂದ ಆ ಒಂದು ಸ್ಥಾನ ನಿಮಗೆ ಸಿಕ್ಕ ತತ್‌ಕ್ಷಣವೇ ಜನರಿಗೆ ಒಂದು ರೀತಿಯ ಬಳುವಳಿಯನ್ನು ಈ ಮೂಲಕ ಕೊಟ್ಟಿರಲ್ಲ ಇದು ನಿಮಗೆ ಶೋಭೆ ತರುವಂಥ ಸಂಗತಿಯೇ ? ವಿಧಾನ ಮಂಡಲದ ಅಧಿವೇಶನವನ್ನು ಕರೆದು ನಮ್ಮನ್ನು ಇಲ್ಲಿ ಏತಕ್ಕಾಗಿ ಸೇರಿಸಿದ್ದೀರಿ ? ವಿಧಾನ ಮಂಡಲದ ಬಗ್ಗೆ ನಿಮಗೆ ವಿಶ್ವಾಸವಿಲ್ಲದ ಮೇಲೆ ಸಭೆಯನ್ನು ಕರೆಯಬೇಕಾಗಿತ್ತು ? ತಾವು ಈ ಟ್ಯಾರಿಫ್ ಜಾಸ್ತಿ ಮಾಡುವುದಕ್ಕೆ ಮುನ್ನ, ವಿದ್ಯುತ್ ದರವನ್ನು ನಿಶ್ಚಯ ಮಾಡುವುದಕ್ಕೆ ಮುನ್ನಾ ಅಧಿವೇಶನ ಕರೆದಾಗಿತ್ತು. ಆದರೆ ವಿಧಾನಸಭಾಧಿವೇಶನದ ದಿನ ನಿಶ್ಚಯವಾದ ಮೇಲೆ ಏಕಾಏಕಿ ಒಂದು ತರಹ ಡಿಕ್ಟೇಟರ್ ರೀತಿ ಯಲ್ಲಿ, ಸರ್ವಾಧಿಕಾರಿಯಂತೆ ಹೀಗೆ ವಿದ್ಯುತ್ ದರವನ್ನು ಏರಿಸುವಂಥ ತೀರ್ಮಾನವನ್ನು ತೆಗೆದುಕೊಂಡಿರುವುದು ಶೋಭೆ ತರುವಂಥ ಸಂಗತಿಯೇ ? ವಿದ್ಯುತ್‌ದರ ಏರಿಕೆಯ ಬಗ್ಗೆ ಎಲ್ಲಿಯಾದರೂ ಯಾರ ಜೊತೆಗಾದರೂ ಚರ್ಚೆ ಮಾಡಿದ್ದೀರೋ ? ಸಚಿವಸಂಪುಟದಲ್ಲಿ ಸುದೀರ್ಘವಾಗಿ ಇದನ್ನು ಮಾಡುವುದಕ್ಕೆ ಮುಂಚೆ ನಮ್ಮೊಂದಿಗೆ ಚರ್ಚೆ ಮಾಡಿದ್ದೀರೋ ? ನೀವು ಹೇಳಬಹುದು. . . . ಕೆಲವು ಮಾತುಗಳನ್ನು ಹೇಳಿದರೆ ಕೆಲವರಿಗೆ ನೋವು ಆಗಬಹುದು. ಅದರ ಬಗ್ಗೆ ರಾಟಿಫೈ ಮಾಡಿಕೊಳ್ಳಬಹುದು. ಅಥವಾ ಬೇರೆ ಏನಾದರೂ ಹೇಳಬಹುದು. ಆದರೆ ನನಗೆ ತಿಳಿದಿರುವ ಪ್ರಕಾರ ಕೆಲವು ಮಂತ್ರಿಗಳು ಕೊಟ್ಟಿರುವಂಥ ಉತ್ತರಗಳನ್ನು ನಾನು ಹೇಳುತ್ತೇನೆ. ಮಂತ್ರಿಮಂಡಲದಲ್ಲಿ ಇದರ ಬಗ್ಗೆ ಚರ್ಚೆಯಾಗಿಲ್ಲ. ಇನ್ನೊಂದು ರಾಜಕೀಯ ವ್ಯವಹಾರದ ಸಮಿತಿ ಇದ್ದು ಅದರಲ್ಲಿಯೂ ಚರ್ಚೆಯಾಗಿಲಿಲ್ಲ. ಶಾಸಕಾಂಗ ಪಕ್ಷದ ಸಭೆಯಲ್ಲಿ ನಿಮ್ಮ ಶಾಸಕರೊಂದಿಗೆ ಚರ್ಚೆ ಮಾಡುವ ಪ್ರಯತ್ನವನ್ನೂ ಮಾಡಲಿಲ್ಲ. ನಾವಿನ್ನೂ ಬದುಕಿದ್ದೇವೆ. ಎಂಥ ಸ್ಥಿತಿಯಲ್ಲಿ ನೀವು ಅಧಿಕಾರವನ್ನು ನಡೆಸುತ್ತಾ ಇದ್ದೀರಿ ? ಎಷ್ಟು ಜನ ತಾವುಗಳು ಇದ್ದೀರಿ ಸ್ವಾಮಿ ? ಈಗ 108, 109 ಜನರು ಇದ್ದೀರಿ. ಸ್ವಲ್ಪ ಹೆಚ್ಚು ಕಡಿಮೆ ನಾವೆಲ್ಲರೂ ಸರಿಸಮ ಇದ್ದೇವೆ. ನಾವೆಲ್ಲರೂ ಈ ಕಡೆ ಇರುವವರು ಅನೇಕ ಕಾರಣಗಳಿಗೋಸ್ಕರ ಕಚ್ಚಾಟ, ಬೈದಾಟ ಬಿಟ್ಟು ರಾಜ್ಯದ ಹಿತದೃಷ್ಟಿಯಿಂದ ಬಿಜೆಪಿ, ಕಾಂಗ್ರೆಸ್ ಮುಂತಾದ ಪಕ್ಷಗಳಲ್ಲಿ ಬೇಕಾದಷ್ಟು ರಾಜಕೀಯ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಈ ರೀತಿಯಲ್ಲಿ ಜನರಿಗೆ ವಂಚನೆ ಮಾಡತಕ್ಕಂಥ ವಚನಭ್ರಷ್ಟ ಸರಕಾರ ಅಧಿಕಾರದಲ್ಲಿ ಮುಂದುವರಿಯಬಾರದು ಎಂಬ ಭಗವಂತನ ದಯೆಯಿಂದ ನಮಗೆ ಸದ್ಬುದ್ಧಿ ಬಂದರೆ ನಾವುಗಳು ಒಂದಾದರೆ ಆಕ್ಷಣದಲ್ಲಿಯೇ ನೀವು ಮುಖ್ಯ ಮಂತ್ರಿಪದವಿಗೆ ರಾಜೀನಾಮೆ ಕೊಟ್ಟು ಅಧಿಕಾರವನ್ನು ಕಳೆದುಕೊಳ್ಳುವಂಥ ದುಸ್ಥಿತಿಯಲ್ಲಿ ನೀವಿರುವಾಗ ಪ್ರತಿಪಕ್ಷಗಳಲ್ಲಿ ಯರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೇ ಇಂಥ ತೀರ್ಮಾನವನ್ನು ನೀವು ತೆಗೆದುಕೊಳ್ಳುತ್ತಿದ್ದೀರಲ್ಲ ಇದು ಸರಿಯೇ ? ಹಾಗಾದರೆ ನೀವು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕೆಲಸ ಮಾಡುವುದಕ್ಕೆ ಸಿದ್ಧರಿದ್ದೀರೋ ? ನಿಮಗೆ ಅದರ ಮೇಲೆ ನಂಬಿಕೆ ಇದೆಯೇ ? ನಾನು ಅಂದುಕೊಂಡೆ, ನಮ್ಮ ಕಾಂಗ್ರೆಸ್ ಸ್ನೇಹಿತರು ಬಿಜೆಪಿ ಯವರು ಅಧಿಕಾರದಲ್ಲಿ ಬರಬಾರದು ಎಂಬ ಕಾರಣಕ್ಕೋಸ್ಕರವಾಗಿ ಡೆಲ್ಲಿಯಲ್ಲಿ ಬೆಂಬಲ ಕೊಡುತ್ತಿರುವಂಥ ಕಾಲದಲ್ಲಿ ಇಲ್ಲಿಯೂ ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದಾರೋ ಎಂದರೆ ಅದೂ ಆಗಲಿಲ್ಲ. ಅವರು ವಾಕ್‌ಔಟ್ ಮಾಡಿದರು, ವೆಲ್‌ನಲ್ಲಿ

ಕುಳಿತುಕೊಂಡರು.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇಲ್ಲಿಯೂ ಅವರು ಸಪೋರ್ಟ್ ಮಾಡುತ್ತಾರೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. . . . .

ಶ್ರೀ ಹೆಚ್.ಎನ್ ನಂಜೇಗೌಡ:- ನಿಮ್ಮ ಪಕ್ಷದ ಪ್ರಧಾನರು ಈಗ ಮಾನ್ಯ ನರಸಿಂಹರಾಯರು. ಅವರು ಹೀಗೆ ಮಾಡಿ ಅಂದರೆ ನೀವು ಮಾಡುತ್ತೀರಿ. ಕಾಂಗ್ರೆಸ್ ಅಂದರೆ ಒಂದು ಡಿಸಿಪ್ಲಿನ್ ಪಾರ್ಟ್. ಮೊದಲಿನಿಂದಲೂ ಡೆಲ್ಲಿಯಿಂದ ರಾಜೀವ್ ಗಾಂಧಿ ಹೇಳಿದರೆ ಕೊನೆಯ ಮನುಷ್ಯನು ಮಾಡುತ್ತಿದ್ದ, ನರಸಿಂಹರಾಯರು ಹೇಳಿದರು. ಕೊನೆಯ ಮನುಷ್ಯ ಮಾಡುತ್ತಿದ್ದ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ನಿಮ್ಮಲ್ಲಿಯೂ ಅದೇ ಪರಿಸ್ಥಿತಿ ಇದೆ ಗುಜರಾತ್‌ನಲ್ಲಿ ಏನು ನಡೆದಿದೆ ಅದು ನಿಮಗೆ ಗೊತ್ತಿದೆ. ಸುಮ್ಮನೆ ಅದನ್ನು ಹೇಳಿಕೊಳ್ಳುವುದು ಬೇಡ. ಅಲ್ಲಿ ಏನು ನಡೆದಿದೆ ಅದನ್ನು ನೋಡಿಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನೇನು ಆಕ್ಷೇಪಣೆಯ ಮಾತನ್ನು ಹೇಳಿಲ್ಲವಲ್ಲ. ಮಾನ್ಯ ಅಧ್ಯಕ್ಷರೆ ಅಂಥ ಆಕ್ಷೇಪಣಾರ್ಹ ಪದಗಳನ್ನು ಹೇಳಿದ್ದರೆ ಅದನ್ನು ತೆಗೆದು ಹಾಕಿಬಿಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಿಮಗೆ ಬೇಕಾದುದನ್ನು ಹೇಳಿ. ಆದರೆ ಪದೇ ಪದೇ ಕಾಂಗ್ರೆಸ್‌ನವರಲ್ಲಿ ಸಪೋರ್ಟ್ ಮಾಡುತ್ತಾರೆ. ಇಲ್ಲಿ ಸಪೋರ್ಟ್ ಮಾಡುತ್ತಾರೆ ಎಂದು ಹೇಳುವುದು ಬೇಡ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಒಂದು ಸಾರಿ ನಾನು ಉದ್ವೇಗದಲ್ಲಿ ಮಾತನಾಡಿ ನನ್ನ ಜೀವನ ಪರ್ಯಂತ ಎಚ್ಚರಿಕೆ ವಹಿಸುವಂಥ ಪಾಠವನ್ನು ನಾನು ಈ ಸದನದಲ್ಲಿ ಕಲಿತಿದ್ದೇನೆ. ನಾನು ಹೇಳಿದ್ದೇನೆಂದರೆ, ವಿದ್ಯುತ್ ದರ ಏರಿಕೆಯನ್ನು ಮಾಡುವಂಥ ಕಾಲದಲ್ಲಿ ಪ್ರತಿಪಕ್ಷ ಅಂದರೆ ಬಿಜೆಪಿ ಎಂದು ತಿಳಿದುಕೊಂಡು ನಮ್ಮ ಜೊತೆಗೆ ಚರ್ಚೆ ಮಾಡುವುದು ನಿಮಗೆ ವಿಶ್ವಾಸವಿಲ್ಲ, ಅದಕ್ಕೆ ನೀವೇ ಉಪಮುಖ್ಯಮಂತ್ರಿಗಳಾಗಿ ಹೇಳಿದ್ದೀರಿ '' ಏನು ಬೇಕಾದರೂ ಆಗಲಿ ನಾನು ಸಹಿಸುತ್ತೇನೆ. ಪ್ರತಿಪಕ್ಷದ ಸ್ಥಾನದಲ್ಲಿ ಬಿಜೆಪಿ ಕುಳಿತುಕೊಂಡಿತಲ್ಲ ? ಇದು ನನಗೆ ದುಃಖ ತರುವಂಥ ಸಂಗತಿ ಎಂದು ತಾವೇ ಹೇಳಿದ್ದೀರಿ. ನಮಗೆ ಪ್ರತಿಪಕ್ಷ ಎಂದು ಜನರು ಆಯ್ಕೆ ಮಾಡಿ ಇಲ್ಲಿ ಕುಳಿಸಿದ್ದರೂ ಕೂಡ, ಸನ್ಮಾನ್ಯ ಜೆ.ಹೆಚ್.ಪಟೇಲರು. ಸನ್ಮಾನ್ಯ ಉಪ-ಮುಖ್ಯಮಂತ್ರಿಯವರಾಗಿದ್ದಾಗಲೇ ಆ ಅಭಿಪ್ರಾಯವನ್ನು ಇಲ್ಲಿ ವ್ಯಕ್ತಪಡಿಸಿದ್ದರು. ನಾನು ಏನು ಹೇಳಲು ಹೊರಟೆ ಅಂದರೆ, ನಮ್ಮ ಕಾಂಗ್ರೆಸ್‌ನ ಸ್ನೇಹಿತರು ಅಲ್ಲಿ ಬೆಂಬವನ್ನು ಕೊಡುತ್ತಾ ಇದ್ದಾರೆ, ಆ ಹಿನ್ನಲೆಯಲ್ಲಿ ಕೊನೆಪಕ್ಷ ನಮ್ಮ ಪಕ್ಷದ ಮೇಲೆ ವಿಶ್ವಾಸವಿಲ್ಲದಿದ್ದರೂ ಕೂಡ ಕಾಂಗ್ರೆಸ್‌ನ ಸ್ನೇಹಿತರನ್ನಾದರೂ ಕರೆದು ವಿದ್ಯುತ್ ದರವನ್ನು ಏರಿಸುವಂಥ ಸಂದರ್ಭದಲ್ಲಿ ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೋ ಎಂದು ನಾನು ಅಂದುಕೊಂಡಿದ್ದೆ. ಆದರೆ ನಾವು ವಾಕ್ ಔಟ್ ಮಾಡಿದರೆ ಅವರು ವೆಲ್‌ನಲ್ಲಿ ಕುಳಿತುಕೊಂಡಿದ್ದನ್ನು ನೋಡಿದರೆ ಅವರೊಂದಿಗೆ ಚರ್ಚೆ ಮಾಡಿಲ್ಲವೆಂದು ಗೊತ್ತಾಯಿತು-ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದೇನೆಯೇ ಹೊರತು ಬೇರೆ ಏನನ್ನೂ ಹೇಳಿಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಲ್ಲಿ ಕಾಂಗ್ರೆಸ್‌ನವರು ಹೇಳಿದ ಹಾಗೆ ಅವರು

ರಾಜ್ಯಭಾರ ಮಾಡುತ್ತಿದ್ದಾರೆಂಬ ಭಾವನೆಯು ನಿಮ್ಮ ತಲೆಯಲ್ಲಿದೆ. 1983 ರಲ್ಲಿ ನೀವು ಯಾರಿಗೆ ಬೆಂಬಲಕೊಟ್ಟಿದ್ದೀರಿ ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಲ್ಲಿ ಅವರು ಒಂದು ರೀತಿಯಲ್ಲಿ ಇಕ್ಕಟಿನ ಸ್ಥಿತಿಯಲ್ಲಿರುವುದರಿಂದ ನಾವು ಏನೇ ಕಾರಣ ಹೇಳಿದರೂ ಅದಕ್ಕೆ ಉತ್ತರಕೊಡಬೇಕಾಗಿ ಬರುತ್ತದೆ. ಅಲ್ಲಿ ಹಾರುವ ಹಾಗಿಲ್ಲ, ಇಲ್ಲಿ ಬೀಳುವ ಹಾಗಿಲ್ಲ ಎಂಬ ಸ್ಥಿತಿಯಲ್ಲಿರುವ ನಮ್ಮ ಕಾಂಗ್ರೆಸ್ ಸ್ನೇಹಿತರು ನಾವು ಏನೇ ಹೇಳಿದರೂ ಅಪಾರ್ಥ ಮಾಡಿಕೊಳ್ಳುತ್ತಾರೆ. ನನಗೆ ಯಾರನ್ನೂ ನೋವುಂಟು ಮಾಡುವ ಉದ್ದೇಶವಿಲ್ಲ. ನನ್ನ ಮನಸ್ಸಿನಲ್ಲಿ ಎಲ್ಲಾ ಪ್ರತಿಪಕ್ಷದವರನ್ನು ಮನ ಒಲಿಸಿ ಒಟ್ಟು ಮಾಡಿ ಈ ಅನಿಶ್ಚಿತತೆಯ ಪ್ರತಿಪಕ್ಷವನ್ನು ಕಿತ್ತು ಹಾಕೋಣ . . . ಮಾನ್ಯ ಮುಖ್ಯಮಂತ್ರಿಯವರು ಗಮನಿಸಬೇಕು. ತಾವುಗಳು ವಿದ್ಯುತ್ ಚ್ಛಕ್ತಿದರವನ್ನು ಏರಿಸಿದ ಮೇಲೆ ಪ್ರತಿಭಟನಾರ್ಥವಾಗಿ ನಡೆದ ಬೇರೆ ಬೇರೆ ಸಭೆಗಳಿಗೆ ನಾನು ಹೋಗಿದ್ದೆ. ಅಲ್ಲಿ ಜನ ಮಾತನಾಡುತ್ತಾ ಏನು ಯಡಿಯೂರಪ್ಪನವರೇ, ಮಾನ್ಯಗೌಡರು ಪ್ರಧಾನಿಯಾದರೂ ಮಾನ್ಯ ಪಟೇಲರು ಮುಖ್ಯಮಂತ್ರಿಯವರಾದರು, ಇವರಿಬ್ಬರೂ ಈ ಸ್ಥಾನಕ್ಕೇರಲು ಮೂಲ ಕಾರಣಕರ್ತರಾಗಿರತಕ್ಕಂಥವರನ್ನು ಪಕ್ಷ ಬಿಡಿಸಿ ಓಡಿಸಿ ಬಿಟ್ಟರು. ಹೋಗಲಿ ನಮ್ಮನ್ನಾದರೂ ಉಳಿಸುತ್ತಾರೆಂದು ಅಂದುಕೊಂಡರೆ ಮಾನ್ಯ ಪಟೇಲ್ ಮುಖ್ಯಮಂತ್ರಿಯವರಾದರು. ಇವರಿಬ್ಬರೂ ಈ ಸ್ಥಾನಕ್ಕೇರಲು ಮೂಲ ಕಾರಣಕರ್ತರಾಗಿರತಕ್ಕಂಥವರನ್ನು ಪಕ್ಷ ಬಿಡಿಸಿ ಓಡಿಸಿ ಬಿಟ್ಟರು. ಹೋಗಲಿ ನಮ್ಮನ್ನಾದರೂ ಉಳಿಸುತ್ತಾರೆಂದು ಅಂದುಕೊಂಡರೆ ಮಾನ್ಯ ಪಟೇಲ್ ರವರು ಮುಖ್ಯಮಂತ್ರಿಯಾದ ಮೇಲೆ ಹಾಲಿನ ಹೊಳೆ ಹರಿಯಬಹುದು, ಎಂದು ಕುಣಿದು ಕುಪ್ಪಳಿಸಿ, ಬಡತನವನ್ನು ಹೋಗಲಾಡಿಸಬಹುದೆಂಬ ವಿಶ್ವಾಸವನ್ನು ಇಟ್ಟುಕೊಂಡು ಅವರನ್ನು ಅಭಿನಂದಿಸಲು ದಾವಣಗೆರೆಗೆ ಹೋಗಬೇಕೆಂದಿದ್ದೆವು- ಎನ್ನುತ್ತಿದ್ದರು.

ನಿಮ್ಮ ಇಂಟಲಿಜೆನ್ಸ್ ಇದೆ. ನೀವೇ ಹೋಮ್ ಡಿಪಾರ್ಟಮೆಂಟ್‌ನ್ನು ಇಟ್ಟುಕೊಂಡಿದ್ದೀರಿ. ಜನ ಏನು ಮಾತನಾಡುತ್ತಿದ್ದಾರೆ ಎಂದು ಕೇಳಿ. ಯಡಿಯೂರಪ್ಪನವರ ಮಾತು ಬೇಡ. ಯಾರೇ ಅದರೂ ನಿಮ್ಮಪರಿಸ್ಥಿತಿಯಲ್ಲಿ ಮಾಡಲೇಬೇಕು. ''ಹುಶಾರ್ ನನ್ನ ಮೈಮುಟ್ಟಿದರೆ. . ನನ್ನ ಕುರ್ಚಿ ಅಲ್ಲಾಡಿಸಲಿಕ್ಕೆ ಬಂದರೆ. . . ಆದರೆ ನೀವು ಇದನ್ನೇನೂ ಮಾಡದೆ ತೋರಿಸಿದ್ದರೆ, ಐದು ಲಕ್ಷ ಜನ ಬರೋರು ಹತ್ತು ಲಕ್ಷ ಬರುತ್ತಿದ್ದರು.

ಶ್ರೀ ಆರ್.ವಿ.ದೇಶಪಾಂಡೆ:- ಬಾಯಿ ಮುಚ್ಚಿಸಿದರು ಎಂದು ಹೇಳುವುದು ಸರಿಯಲ್ಲ. I request the Hon'ble Speaker that it should not go no record. .. ಯಾರ ಬಾಯಿಯನ್ನು ಮುಚ್ಚಿಸಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಹೆ.ಹೆಚ್.ಪಟೇಲರ ಮಿಾಟಿಂಗ್ ಇದೆ ಎಂದರೆ ಹೋಗಿ ಕುಳಿತುಕೊಂಡು ಕೇಳಿಕೊಂಡು ಬರುತ್ತಾರೆ ಎಂದರೆ ಸರ್ಕಾರದ ಬಗ್ಗೆ ಅವರಿಗೆ ಎಷ್ಟು ಆಸಕ್ತಿ ಇದೆಯೆಂದು ಗೊತ್ತಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲ, ಬಾಯಿ ಮುಚ್ಚಿಸ್ಸಿಲ್ಲ. ಜನತಾದಳದ ಕಾರ್ಯಕರ್ತರೇ ವಿರೋಧ ಶುರುಮಾಡಿದ್ದಾರೆ. ಇದಕ್ಕೆ ಜನತಾದಳದ ಕಾರ್ಯದರ್ಶಿ ಮಾನ್ಯ ಉಗ್ರಪ್ಪನವರೇ ಸಾಕ್ಷಿ. ಅವರೇ ಸ್ಪಷ್ಟಮಾಡಿದ್ದಾರೆ ವಿದ್ಯುತ್ ದರ ಏರಿಸಿರುವುದು ತಪ್ಪು ಎಂದು. ಇದಕ್ಕಿಂತ

ಬೇರೆ ಬೇಕೇ ?

ಶ್ರೀ ಆರ್.ವಿ.ದೇಶಪಾಂಡೆ:- ಉಗ್ರಪ್ಪನವರು ಈ ಮನೆಯ ಸದಸ್ಯರಲ್ಲ. ಅವರು ಏನು ಅಭಿಪ್ರಾಯಪಟ್ಟಿದ್ದಾರೆ ಎಂದು ಗೊತ್ತಿಲ್ಲ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತಿದ್ದೇನೆ. ತಾವು ಮಾತನಾಡುವಾಗ ಫ್ಯಾಕ್ಟ್ ಬಗ್ಗೆ ಮಾತನಾಡಿದರೆ ಒಳ್ಳೆಯದು. ಅನಾವಶ್ಯಕವಾಗಿ ಮಾನ್ಯ ಮುಖ್ಯಮಂತ್ರಿಗಳು ಬಾಯಿ ಮುಚ್ಚಿಸಿದರು ಎಂದು ಹೇಳುವುದು ಸರಿಯಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:- ಯಾರು ವಿರೋಧ ಮಾಡಿದರೂ ಅದು ವಿರೋಧವೇ. ನಿಮ್ಮ ಪಕ್ಷದವರು ಕೂಡ ಜನ ವಿರೋಧಿ ನೀತಿಗೆ ವಿರೋಧ ಮಾಡುತ್ತಿದ್ದಾರೆಯೆಂಬುದು ಸರ್ಕಾರದ ಗಮನಕ್ಕೆ ಬರಲಿ, ಅಷ್ಟೆ.

ಶ್ರೀ ಡಿ.ಟಿ. ಜಯಕುಮಾರ್:- ಅವರು ಅಭಿಪ್ರಾಯ ಎಂದು ಹೇಳಿದ್ದಾರೆ. ಮಾನ್ಯ ಈಶ್ವರಪ್ಪನವರು ಪತ್ರಿಕೆಗಳಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದೇ ಕೊಟ್ಟಿದ್ದು, ಬಿ.ಜೆ.ಪಿ. 28 ಕ್ಕೆ 28 ಸೀಟುಗಳನ್ನು ಗೆದ್ದು ಬರುತ್ತೇವೆ ಎಂದು ಹೇಳಿ. ಆದರೆ ಜನ ಏನು ಹೇಳಿದರು. ?

ಶ್ರೀ ಕೆ.ಎಸ್.ಈಶ್ವರಪ್ಪ:- ಹಾಗೆ ಹೇಳಿದ್ದಕ್ಕೇ 28 ರಲ್ಲಿ 6 ಸೀಟುಗಳನ್ನು ಹೊಡೆದಿದ್ದೇವೆ.

ಶ್ರೀ ಬಿ.ಬಿ.ಶಿವಪ್ಪ:- ಜನ ಏನು ಹೇಳಿದರು ಎಂದು ಮಂತ್ರಿಗಳೇ ಕೇಳಬೇಡಿ. ಜನರ ತೀರ್ಪು ಬೇರೆ, ಬಂದಿರತಕ್ಕ ತೀರ್ಪೇ ಬೇರೆ. ಜನರ ತೀರ್ಪು ಏನೆಂದು ಹೇಳಿ. ಜನ ಏನು ಹೇಳಿದ್ದಾರೆ ಎಂದು ಮಾತನಾಡಬೇಡಿ. ಜನ ಸರಿಯಾದ ತೀರ್ಪು ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ತಪ್ಪು ತಿಳಿದುಕೊಂಡುದ್ದೀರಿ. ಅವರು ಮೊದಲು ಹೇಳಿದ್ದರು. ನಾವು ಮಸಲ್‌ಪವರ್, ಮನಿಪವರ್ ಮತ್ತು ಎಕ್ಸೈಸ್ ಈ ಮೂರನ್ನು ಉಪಯೋಗಿಸಿಕೊಂಡು ನಾವು ಗೆದ್ದಿದ್ದೇವೆ ಎಂದು. ಮೊದಲೇ ಇದನ್ನು ಹೇಳಿಕೊಂಡು ಬಂದಿದ್ದಾರೆ. ಅದಕ್ಕೆ ಬಂದಿವರಿಗೆ ನೋಡಿಕೊಳ್ಳಿ, ಒಳಗಡೆ ಹಾಕಿ- ಅಂತ ಹೇಳಿ ಸ್ಟೇಟ್‌ಮೆಂಟ್ ಬಂದಿದೆ. ಅದಕ್ಕೆ ಇದೆಲ್ಲ ಕೂಡ ಮಾಡಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ:- ಶಾಸನಸಭೆಯಲ್ಲಿ ಮಾತನಾಡುವುದಕ್ಕೆ ಬರುತ್ತದೆ ಎಂದು ಹೇಳಿ ಬೇಜವಾಬ್ದಾರಿಯಿಂದ ಮಾತನಾಡಬಾರದು. ಅವರು ಯಾರು ಮಾತನಾಡಿದ್ದಾರೆ, ಯಾರು ಹೇಳಿದ್ದಾರೆ ಎಂದು ಹೇಳಲಿ. ಮನಿ, ಮಸ್‌ಲ್, ಎಕ್ಸೈಸ್ ಅಂತ ಯಾರು ಹೇಳಿದರು ಎಂಬುದನ್ನು ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಪೋಲಿಸ್ ಜೀಪ್‌ನಲ್ಲಿ ಎಲ್ಲಾ ಕಡೆ ಡಿಸ್ಟ್ರಿಬ್ಯುಟ್ ಮಾಡಿದ್ದರು.

ಶ್ರೀ ಆರ್.ವಿ.ದೇಶಪಾಂಡೆ:- ಪೋಲಿಸ್ ಜೀಪಿನಲ್ಲಿ ಸಾರಾಯಿ ನೋಡಿದರೆ ಏಕೆ ಕಂಪ್ಲೇಂಟ್ ಮಾಡಲಿಲ್ಲ ?

(ಗೊಂದಲ)

ಶ್ರೀ ಬಿ.ಬಿ.ಶಿವಪ್ಪ:- ಹಿಡಿದು ಕೊಟ್ಟಿದ್ದನ್ನು ಏನು ಮಾಡಿದಿರಿ ? ಕೈಗೆ ಹಿಡಿದುಕೊಟ್ಟಿದ್ದನ್ನು ಏನು ಮಾಡಿದ್ದೀರಿ?

(ಗೊಂದಲ)

ಶ್ರೀ ಸಿ.ಬೈರೇಗೌಡ:- ಪ್ರಶ್ನೋತ್ತರ ವೇಳೆಯನ್ನು ಮೊಟಕು ಮಾಡಿ ವಿದ್ಯುಚ್ಛಕ್ತಿ ಬೆಲೆಯೇರಿಕೆ

ಬಗ್ಗೆ ಚರ್ಚೆಯಗಬೇಕಾಗಿದೆ. . . .

ಶ್ರೀ ಎಂ.ಶ್ರೀನಿವಾಸ್:- ಸ್ವಾತಂತ್ರ್ಯ ಬಂದನಂತರ 49 ವರ್ಷಗಳಲ್ಲಿ ಯಾವುದೇ ಚುನಾವಣೆಯೊಳಗೆ ಜನರು ಬೇರೆಯವರು ಹಂಚಿದ್ದನ್ನು ಕುಡಿದು ನೆಮ್ಮದಿಯಾಗಿದ್ದರು. ನೀವು ಲೋಕಸಭೆ ಚುನಾವಣೆಯಲ್ಲಿ ಹಂಚಿದಂಥ ಡ್ರಿಂಕ್ಸ್ ಕುಡಿದು ನನ್ನ ಕ್ಷೇತ್ರದಲ್ಲಿ ನಾಲ್ಕು ಜನ ಸತ್ತರು.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:- ನೀವು ಹಂಚಿದಂಥ ಸಾರಾಯಿ, ಹೆಂಡ ಸೇವಿಸಿ ನನ್ನ ಕ್ಷೇತ್ರದಲ್ಲಿ ನಾಲ್ಕು ಜನ ಸತ್ತರು.

(ಗೊಂದಲ)

ಶ್ರೀವಿ.ಎಸ್.ಯಡಿಯೂರಪ್ಪ:- ಅಧ್ಯಕ್ಷರೇ, ಬಹಳ ದಿವಸಗಳಾದ ಮೇಲೆ ನಾವು ಸೇರಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ:- ಸೇಂದಿ, ಸಾರಾಯಿ, ಹಣವನ್ನು ಎಲೆಕ್ಷನೆ ಸಮಯದಲ್ಲಿ ಕೊಡದೇ ಇರುವವರು ಯಾರು ಎಂದು ಹೇಳಿಬಿಡಿ. ಯಾರು ಕೊಟ್ಟಿಲ್ಲವೆಂದು ಹೇಳಿಬಿಟ್ಟರೆ ಸಾಕು.

ಒಬ್ಬ ಮಾನ್ಯ ಸದಸ್ಯರು:- ನಾವು ಕೊಟ್ಟಿಲ್ಲ, ನೀವೇ ಕೊಟ್ಟಿದ್ದುದು.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ:- ಕೊಟ್ಟಿಲ್ಲ ಎನ್ನುವುದಕ್ಕೆ ಏನು ಆಧಾರ ಇದೆ ತೋರಿಸಿ. ನೀವು ಕೊಟ್ಟಿದ್ದೀರಿ ಎಂದು ನಾನು ಆಧಾರ ತೋರಿಸುತ್ತೇನೆ.

ಶ್ರೀ ಎಂ.ಶ್ರೀನಿವಾಸ್:- ನಾವು ಕೊಟ್ಟಿಲ್ಲವೆಂದು ಹೇಳುತ್ತಿದ್ದೇವಲ್ಲ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗ ಸಾರಾಯಿ ಬಗ್ಗೆ ಚರ್ಚೆ ಮಾಡೋಣವೇ ಇಲ್ಲ, ವಿದ್ಯುತ್‌ಚ್ಛಕ್ತಿ ಬಗ್ಗೆ ಚರ್ಚೆ ಮಾಡೋಣವೇ ? ಈಗ ಸಾರಾಯಿಯನ್ನು ಸರ್ಕಾರವೇ ಮಾರುತ್ತದೆ ಎನ್ನುವ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡೋಣವೇ ಇಲ್ಲ, ವಿದ್ಯುತ್‌ಚ್ಛಕ್ತಿ ಬಗ್ಗೆ? ಯಡಿಯೂರಪ್ಪನವರೇ, ನೀವು ಯಾವುದಕ್ಕೆ ತಯಾರಿಗಿದ್ದೀರಿ ? ಸಾರಾಯಿ ಬಗ್ಗೆ ಚರ್ಚೆ ಮಾಡೋಣವೇ ಅಥವಾ ವಿದ್ಯುತ್‌ಚ್ಛಕ್ತಿ ಬಗ್ಗೆ ?

★ **ಶ್ರೀ ವಿ.ಎಸ್.ಯಡಿಯೂರಪ್ಪ:-** ನಮಗೆ ಸಮಸ್ಯೆ ಬಂದಿರುವುದು ಏನೆಂದರೆ . . .

ಅಧ್ಯಕ್ಷರು:- ಒಂದೇ ನಿಮಿಷ. ಸನ್ಮಾನ್ಯ ವಿರೋಧ ಪಕ್ಷದ ನಾಯಕರೇ ಕೇಳಿ. ನಾನು ಯಾರಿಗೂ ಅಡ್ಡಿಪಡಿಸಲಿಕ್ಕೆ ಹೋಗಲಿಲ್ಲ. ಆದರೆ ಬಹಳ ನೋವಿನಿಂದ ಒಂದು ಮಾತನ್ನು ಸದನಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ನಾವು 224 ಜನರು ಜನ ಸದಸ್ಯರು ಅಲ್ಲದೆ ಅಧಿಕಾರಿಗಳು ಒಂದು ಕಡೆಗೆ, ಪತ್ರಕರ್ತರು ಒಂದು ಕಡೆಗೆ ಮತ್ತೆ ಮೇಲೆ ಪ್ರೇಕ್ಷಕರು ಅಲ್ಲಿ ಕುಳಿತಿದ್ದಾರೆ. ಸಾರ್ವಜನಿಕ ಸಮಾರಂಭಗಳಲ್ಲೂ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ನಾವು ನಮ್ಮ ಉದ್ವೇಗದಲ್ಲಿ ರಾಜಕೀಯದಲ್ಲಿರತಕ್ಕಂಥವರು ಪರಸ್ಪರ ಆರೋಪಗಳನ್ನು ಮಾಡಿಕೊಳ್ಳುವ ಹಂತದಲ್ಲಿ ಪಕ್ಷಗಳ ಮೇಲಾಗಲೀ, ವೈಯಕ್ತಿಕ ಹಂತದಲ್ಲಾಗಲೀ ಎಲ್ಲೋ ಒಂದು ಕಡೆ ಬ್ಯಾಲೆನ್ಸ್ ತಪ್ಪುತ್ತೇವೆ. ಹೀಗಾಗಿ ಒಟ್ಟಾರೆ ರಾಜಕಾರಣಿ ಎನ್ನತಕ್ಕಂಥವನು ಸಮಾಜಸೇವಕ ಅಲ್ಲವೇ ಅಲ್ಲ. ಇವನು ಬಹಳ ಕನಿಷ್ಟ ಮಟ್ಟದ ವ್ಯಕ್ತಿ ಎನ್ನತಕ್ಕಂಥ ಅಭಿಪ್ರಾಯವನ್ನು ಸಾರ್ವಜನಿಕ ಜೀವನದಲ್ಲಿ ಜನರಲ್ಲಿ ನಾವು ಈಗಾಗಲೇ ಆ ಭಾವನೆ ಬರುವ ಹಾಗೆ ಸ್ಥಾಪನೆ ಮಾಡಿಬಿಟ್ಟಿದ್ದೇವೆ. ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೇ. ದಯಮಾಡಿ

ನೀವು ಹಾಸ್ಯ ಮಾಡಿ, ಒಂದು ಆರೋಪವನ್ನು ಮಾಡಿ, ಅದಕ್ಕೆ ಅವರು ಪ್ರತಿ ಆರೋಪಣೆ ಮಾಡಲಿ. ಇದು ಎಲ್ಲವೂ ಕೂಡ ಸಮಾಜದ, ಸಾರ್ವಜನಿಕವಾಗಿ ಜನರ ಮನಸ್ಸಿನಲ್ಲಿ ನಮ್ಮ ಬಗ್ಗೆ ತೀರಾ ಕೆಳಮಟ್ಟದ ಅಭಿಪ್ರಾಯ ಬಾರದೇ ಇರತಕಂಥ ರೀತಿಯಲ್ಲಿ ಸ್ವಲ್ಪ ನಡೆದುಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಮತ್ತೆ ಇತರೆ ಸದಸ್ಯರಿಗೆ, ನೀವು ದಿವಸವೂ ಹೀಗೆ ಮಾಡಿದರೆ ನಾನು ಲೈವ್ ಟೆಲಿಕಾಸ್ಟ್ ಮಾಡಿಸುತ್ತೇನೆ. . . . .

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾಡಿಸಿ ಸಾರ್, ಒಳ್ಳೆಯದು.

ಅಧ್ಯಕ್ಷರು:- ಆವಾಗ ಜನರಿಗೆಲ್ಲ ಗೊತ್ತಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ಆ ಸ್ಥಾನದಲ್ಲಿ ಕುಳಿತು ನಾವು ಮಾತನಾಡಿದ ಸಂದರ್ಭದಲ್ಲಿ ನಾನು ಒಂದು ಶಬ್ದ. . . . .

ಅಧ್ಯಕ್ಷರು:- ಇದು ತಮ್ಮ ಪ್ರಶ್ನೆ ಅಲ್ಲ. ಇಡೀ ಸದನಕ್ಕೆ ನಾನು ವಿನಂತಿ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾವು ಎಚ್ಚರ ವಹಿಸುತ್ತೇವೆ.

ಅಧ್ಯಕ್ಷರು:- ಈಗ ಆ ಕಡೆಗೆ ಸಭಾನಾಯಕರು ನಿಂತುಕೊಂಡಾಗ ಬೇರೆ ಮಂತ್ರಿಗಳು ಅಥವಾ ಸದಸ್ಯರು ಎದ್ದುನಿಲ್ಲುವುದು, ಈ ಕಡೆಗೆ ವಿರೋಧ ಪಕ್ಷದ ನಾಯಕರು ಎದ್ದು ನಿಂತು ಮಾತನಾಡುತ್ತಾ ಇರಬೇಕಾದರೆ ಬೇರೆ ಸದಸ್ಯರು ಎದ್ದುನಿಲ್ಲುವುದು ಅಷ್ಟು ಚೆನ್ನಾಗಿ ಕಾಣಿಸುವುದಿಲ್ಲ. ನಾನು ಎಲ್ಲಾ ಗಮನಿಸುತ್ತಿದ್ದೇನೆ. ಇವತ್ತಿನವರೆಗೆ ಬಹುಶಃ ಕರ್ನಾಟಕ ವಿಧಾನಸಭೆ ಬೇರೆ ಎಲ್ಲಾ ರಾಜ್ಯಗಳ ವಿಧಾನಸಭೆಗಿಗಿಂತಲೂ ಉತ್ತಮವಾದ ವಿಧಾನಸಭೆ ಎಂಬ ಹೆಮ್ಮೆಯನ್ನು ನನ್ನ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೇನೆ. ಅದಕ್ಕೆ ಪೆಟ್ಟು ಬೀಳದ ರೀತಿಯಲ್ಲಿ ತಾವೆಲ್ಲರೂ ಸಹಕರಿಸಬೇಕು ಎಂದು ನಾನು ತಮ್ಮಲ್ಲಿ ವಿನಯದಿಂದ ಕೇಳುತ್ತಿದ್ದೇನೆ.

ಶ್ರೀಬಿ.ಎಸ್.ಯಡಿಯೂರಪ್ಪ:- ನಾನು ಏನು ಮಾತನಾಡುವುದಕ್ಕೆ ಹೊರಟಿದ್ದೆ ಎಂದರೆ, ಈ ವಿದ್ಯುತ್ ದರ ಏರಿಕೆ ಮಾಡುವಂಥ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ನನಗೆ ಅನಿಸಿರುವ ಪ್ರಕಾರ ಇದರ ಬಗ್ಗೆ ಸಚಿವಸಂಪುಟದಲ್ಲೂ ಇದು ಚರ್ಚೆಯಾಗಿಲ್ಲ. ದಳದ ಶಾಸಕಾಂಗಪಕ್ಷದ ಸಭೆಯಲ್ಲೂ ಚರ್ಚೆಯಾಗಲ್ಲವೆಂದು ನನಗೆ ಅನ್ನಿಸಿದೆ. ನಿಜವಾಗಿಯೂ ಆ ಸ್ಥಾನದಲ್ಲಿರುವಂಥ ಮಾನ್ಯ ಹಿರಿಯರಾದ ಜೆ.ಎಚ್.ಪಟೇಲರು ಮುಖ್ಯಮಂತ್ರಿಗಳಾದಾಗ ಪ್ರತಿಪಕ್ಷವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚರ್ಚೆ ಮಾಡುತ್ತಾರೆ ಎಂದು ನಾನು ಅಂದುಕೊಂಡಿದ್ದೆ. ಅಥವಾ ಜನತೆ ಯಾರು ಇದ್ದಾರೆ, ಕನ್‌ಸ್ಯೂಮರ್ಸ್ ಯಾರು ಇದ್ದಾರೆ, ಅವರು ವ್ಯಾಪಾರಸ್ಥರು ಇರಬಹುದು ಅವರ ಜೊತೆಗೂ ಚರ್ಚೆ ಮಾಡಲಿಲ್ಲ. ನನಗೆ ಗೊತ್ತಿಲ್ಲ. ಸನ್ಮಾನ್ಯ ದೇಶಪಾಂಡೆಯವರ ಹೇಳಿಕೆ ಅನೇಕ ಪತ್ರಿಕೆಗಳಲ್ಲಿ ಬಂದಿದೆ. ವಿದ್ಯುತ್‌ಚ್ಛಕ್ತಿ ದರ ಏರಿಕೆ ಬಗ್ಗೆ ಪ್ರಶ್ನೆ ಕೇಳಿದಾಗ, ಆವಾಗ ಒಬ್ಬ ಕ್ಯಾಬಿನೇಟ್ ಸಚಿವರಾಗಿ ಅವರು ಹೇಳಿದ್ದಾರೆ.

''ವಿದ್ಯುತ್ ಬಗ್ಗೆ ಮಾತನಾಡಿದರೆ ಪದವಿಯಿಂದ ಕಿತ್ತೊಗೆದಾರು . . . . '' ಇದು ಹೆಡ್‌ಲೈನ್ಸ್.

ಶ್ರೀ ಆರ್.ವಿ.ದೇಶಪಾಂಡೆ:- ಇಲ್ಲ. . . . . .

★ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಪೂರ್ತಿ ಮಾಡುತ್ತೇನೆ, ಕೇಳಿ. ಅದು

ಹೆಡ್‌ಲೈನ್ಸ್. ಅದು ಇಲ್ಲವೆನ್ನುವಿರಾದರೆ ನನ್ನ ವಿರೋಧ ಇಲ್ಲ. ಜೂನ್ 26ರ ಕನ್ನಡಪ್ರಭ ಪತ್ರಿಕೆಯಲ್ಲಿ ಸ್ವಾಮಿ ಅವರು ಹೇಳಿದ್ದಾರೆ . . . .

'' . . . . . ರಾಜ್ಯದಲ್ಲಿ ವಿದ್ಯುತ್ ದರ ಹೆಚ್ಚಳದ ಬಗ್ಗೆ ನಾನೇನೂ ಹೇಳಲಾರೆ. ಕೇಳಿದರೆ ಪದವಿಯಿಂದ ನನ್ನನ್ನು ಕಿತ್ತೊಗೆದಾರು. ರಾಜ್ಯ ಮಧ್ಯಮ ಹಾಗೂ ಬೃಹತ್ ಕೈಗಾರಿಕಾ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆಯವರು ವಿದ್ಯುತ್ ದರ ಏರಿಕೆ ಬಗ್ಗೆ ಪತ್ರಕರ್ತರ ಬಳಿ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲು ನಿರಾಕರಿಸಿದ್ದರೆ ಬಗ್ಗೆ ಅಥವಾ ಸಧ್ಯದ ರಾಜಕೀಯ ಬಿಸಿಗೆ ಮತ್ತು ಕೆ.ಇ.ಬಿ. ನೀಡುವ ವಿದ್ಯುತ್ ಶಾಕಿಗೆ ಅವರು ಏಕಕಾಲದಲ್ಲಿ ನೀಡಿರುವ ಮಾರ್ಮಿಕ ಉತ್ತರ ಇದು ಇದ್ದಿರಬಹುದು. ಇದು ಒಂದು ಪಾಯಿಂಟ್.

ಅವರು ಇನ್ನೊಂದು ಹೇಳಿದ್ದಾರೆ:-

'' . . . . ವಿದ್ಯುತ್ ಬರದಿಂದ ಏನು ಸಮಸ್ಯೆ ಆಗುತ್ತಿದೆ ಎಂದರೆ . . . . ರಾಜ್ಯದ ಕೈಗಾರಿಕಾ ಅಭಿವೃದ್ಧಿಗೆ ಮೂಲಭೂತವಾದ ಸೌಕರ್ಯವಾದ ವಿದ್ಯುತ್ ಕೊರತೆ ಇರುವುದರಿಂದ ಹಲವು ಕೈಗಾರಿಕೆಗಳು ರಾಜ್ಯಕ್ಕೆ ಆಗಮಿಸಲು ಹಿಂದೇಟು ಹಾಕುತ್ತಿವೆ . . . .

(ಶ್ರೀ ಧರ್ಮಸಿಂಗ್ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

. . . . . ಅದರಲ್ಲೂ ಈ ವಿದ್ಯುತ್ ಹೆಚ್ಚಳ ನಿರ್ಧಾರದ ಪರಿಣಾಮವಾಗಿ ರಾಜ್ಯದ ಉದ್ಯಮಿಗಳು ರಾಜ್ಯದಿಂದ ಕಾಲ್ತೆಗೆಯಲು ಬಯಸಿದ್ದು ಕೈಗಾರಿಕಾ ಪ್ರಗತಿ ಕುಂಠಿತ ಗೊಳ್ಳುವ ಲಕ್ಷಣ ತಲೆದೋರಿದೆ ಎಂಬ ಪತ್ರಿಕೆಗಳ ಶಂಕೆಗೆ ಉತ್ತರಿಸುತ್ತಾ ದೇಶಪಾಂಡೆಯವರು 'ಉದ್ಯಮಗಳು ರಾಜ್ಯದಿಂದ ಹೊರಹೋಗುವ ಮಾತನಾಡುತ್ತಿಲ್ಲ. ವಿದ್ಯುತ್ ಕೊಡಿ ಎಂದು ಕೇಳುತ್ತಿದ್ದಾರೆ. . . .

ಈ ಮೊದಲು ಸಮಾರಂಭದಲ್ಲಿ ಭಾಷಣ ಮಾಡಿದ ಸಚಿವರು ಮೂಲಭೂತ ಸೌಕರ್ಯ ಕೊರತೆಯಿಂದಾಗಿ ಹಲವು ಎಲೆಕ್ಟ್ರಾನಿಕ್ ಉದ್ಯಮಗಳು ರಾಜ್ಯಬಿಟ್ಟು, ಪುಣೆ ಹಾಗೂ ಮದ್ರಾಸ್‌ಗಳತ್ತ ವಲಸೆ ಹೋಗುತ್ತಿವೆ. ಈ ರಾಜ್ಯದಲ್ಲಿ ಮೂಲಭೂತ ಸೌಕರ್ಯ ಒದಗಿಸಿಕೊಟ್ಟರೆ ಮಾತ್ರ ರಾಜ್ಯದ ಕೈಗಾರಿಕಾ ಪ್ರಗತಿ ಮುಂದುವರಿಯಲು ಸಾಧ್ಯ ಎಂದು ಹೇಳಿದರು. ತುಮಕೂರು ಬಳಿ ಸ್ಟಾರ್ ಟಿ.ವಿ. 8 ಸಾವಿರ ಎಕರೆ ಜಮೀನು ಬಗ್ಗೆ ಮಾತನಾಡುತ್ತಾ, ಇತ್ತೀಚೆಗೆ ರಾಷ್ಟ್ರೀಯ ಆಂಗ್ಲ ಪತ್ರಿಕೆಯಲ್ಲಿ ಈ ಬಗ್ಗೆ ವರದಿ ಪ್ರಕಟವಾಗಿರುವುದಕ್ಕೆ ಆಶ್ಚರ್ಯ ವ್ಯಕ್ತಪಡಿಸಿದ ಅವರು, ಅಲ್ಲಿ 150 ಎಕರೆ ಜಾಗಕ್ಕೆ ಪರದಾಡಬೇಕಾಗಿರುವಾಗ, 8 ಸಾವಿರ ಎಕರೆ ಭೂಮಿಯ ಮಾತೆಲ್ಲಿ ಎಂದು ಮರು ಪ್ರಶ್ನೆ ಹಾಕಿದರು. ಇದು ಪತ್ರಕೆಯಲ್ಲಿ ವರದಿಯಾಗಿರುವುದು. ನಾನು, ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನಿಮ್ಮ ಮೇಲೆ ಚಾರ್ಜ್‌ಮಾಡುತ್ತಾ ಇಲ್ಲ. ನನಗೇನು ಅನಿಸುತ್ತದೆಂದರೆ, ಈ ಒಂದು ಉದ್ಯಮದ ಬಗ್ಗೆ ಅವರು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುವುದನ್ನು ನೋಡಿದಾಗ, ಸಚಿವ ಸಂಪುಟದಲ್ಲಿ ಸುದೀರ್ಘವಾದ ಚರ್ಚೆಯಾಗಲಿಲ್ಲ. ಎನ್ನುವುದಕ್ಕೆ ಇದನ್ನು ಪುಷ್ಟೀಕರಿಸಿದೆ ಎನ್ನುವಂತಾದ್ದು ನನ್ನ ನಿಲುವು. ಎರಡನೆಯದು ಈಗಾಗಲೇ ವಿದ್ಯುತ್ ಬರದಿಂದ ಇಲ್ಲಿ ಬರತಕ್ಕ

ಕೈಗಾರಿಕೋದ್ಯಮಿಗಳು ವಾಪಸ್ ಹೋಗುತ್ತಿದ್ದಾರೆ. ಲಕ್ಷಾಂತರ ಜನ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರು ಬೀದಿ ಪಾಲಾಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ವಿದ್ಯುತ್ ದರವನ್ನು ಜಾಸ್ತಿ ಮಾಡಿದರೆ, ಇದರ ದುಷ್ಪರಿಣಾಮ ಎಲ್ಲದರ ಮೇಲೆ ಆಗುತ್ತದೆ. ಎಂಬುದಾಗಿ ಈ ರೆಫರೆನ್ಸ್‌ನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ಇದರ ಬಗ್ಗೆ ಚರ್ಚೆ ಮಾಡುವಂತಾದ್ದು, ಆರೋಪ ಮಾಡುವಂತಾದ್ದು ಯಾವುದೂ ಇಲ್ಲ.

★**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಅಧ್ಯಕ್ಷರೇ, ಒಂದು ವಿಚಾರ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇನ್‌ಫ್ರಾಸ್ಟ್ರಕ್ಚರ್ ಎಂದರೆ, ಪವರ್. ಇನ್‌ಫ್ರಾಸ್ಟ್ರಕ್ಚರ್ ಅಲ್ಲ. ಇವತ್ತು ನಾವು ಎಲ್ಲಿಯವರೆಗೆ ಪವರ್ ಜನರೇಟ್ ಮಾಡುವುದಿಲ್ಲ, ಅಲ್ಲಿವರೆಗೆ ಅಗ್ರಿಕಲ್ಚರ್ ಆಗಲೀ ಇಂಡಸ್ಟ್ರಿ ಆಗಲೀ ಯಾವುದೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಇವತ್ತು ಕೆ.ಇ.ಬಿ. 11-12 ಕೋಟಿ ರೂಪಾಯಿಗಳ ಲಾಸ್‌ನಲ್ಲಿದೆ. ಮಾನ್ಯ ಮಾಜಿ ಮುಖ್ಯಮಂತ್ರಿಗಳು, ಇವತ್ತಿನ ಪ್ರಧಾನಿಗಳು ಮತ್ತು ಇವತ್ತಿನ ಮುಖ್ಯಮಂತ್ರಿಗಳು ಕೂಡಿ, ಕಳೆದ ಒಂದು ವರ್ಷದಲ್ಲಿ, ಈ ರಾಜ್ಯದಲ್ಲಿ ವಿದ್ಯುತ್ ಸಮಸ್ಯೆಯನ್ನು ದೂರ ಮಾಡಬೇಕೆಂದು 7 ಸಾವಿರ ಮೆಗಾವ್ಯಾಟ್ ಪವರ್ ಪ್ರಾಜೆಕ್ಟ್ ಕ್ಲಿಯರ್ ಮಾಡಿದ್ದಾರೆ. ಅವರು ಕೆ.ಇ.ಬಿ.ಯಲ್ಲಿ ಅಗ್ರಿಮೆಂಟ್ ಮಾಡಬೇಕಾದರೆ ಕೇಳುತ್ತಾರೆ. they see the positon of the K.E.B. ಕೆ.ಇ.ಬಿ.ಯವರ ಹತ್ತಿರ ಹಣ ಇಲ್ಲ. ನಾವೇನು ಮಾಡಬೇಕೆಂದು ಕೇಳುತ್ತಾರೆ. ಹಾಗಾಗಿ ಇನ್‌ಫ್ರಾಸ್ಟ್ರಕ್ಚರ್ ಜನರೇಟ್ ಮಾಡಬೇಕಾದರೆ, ಕೈಗಾರಿಕೆಗಳು ಬರಬೇಕು. ಅದಕ್ಕೆ ವಿದ್ಯುಚ್ಛಕ್ತಿ ಬೇಕು. ಹಾಗಾಗಿ, ಪವರ್ ಪ್ರಾಜೆಕ್ಟ್ ಕ್ಲಿಯರ್ ಮಾಡಿದ್ದೇವೆಂದು ಹೇಳಿದ್ದೇನೆಯೇ ವಿನಃ, ಸಚಿವ ಸಂಪುಟದಲ್ಲಿ ಚರ್ಚೆಯಾಗಿಲಿಲ್ಲ ಎಂದು ಹೇಳುವುದು ತಪ್ಪು. It was discussed in the Cabiner and we are all party to that and we are abiding by the decision of the Cabinet.

ಪತ್ರಿಕೆಯಲ್ಲಿ ಏನು ಬಂದಿದೆ.

(INTERRUPTIONS)

ಶ್ರೀ ಬಿ.ಎಸ್.ಯಡಿಯೂರಪ್ಪ:- ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾದರೆ, ಅವರಿಗೆ ಸಮರ್ಥನೆ ಮಾಡಿಕೊಳ್ಳತಕ್ಕ ಶಕ್ತಿ ಇದೆ. ಆ ತರಹ ಶಕ್ತಿ ಇಲ್ಲದೇ ಇರತಕ್ಕ ಮುಖ್ಯಮಂತ್ರಿಗಳು ಇಲ್ಲ. ಸಮಯ ಬಂದಾಗ, ಅವರ ಇಲಾಖೆ ಬಗ್ಗೆ ಉತ್ತರ ಕೊಡಲಿ 7 ಸಾವಿರ ಮೆಗಾವ್ಯಾಟ್ ಪವರ್ ಪ್ರಾಜೆಕ್ಟ್ ಕ್ಲಿಯರ್ ಮಾಡಿದ್ದೇವೆಂದು ಹೇಳಿದಿರಿ. ಈ ಕ್ಲಿಯರ್ ಮಾಡುವುದನ್ನು ನಾನು ಕೇಳುವುದಕ್ಕೆ ಶುರು ಮಾಡಿ 10 ವರ್ಷವಾಯಿತು. ಎಷ್ಟು ಉತ್ಪನ್ನವಾಗಿದೆ ಎನ್ನುವ ಪರಿಸ್ಥಿತಿ ಮೇಲೆ ಡಿಪೆಂಡ್ ಆಗುತ್ತದೆ.

ಶ್ರೀ ಹೆಚ್.ಎನ್.ನಂಜೇಗೌಡ:- ಕೆ.ಇ.ಬಿ.ಯಲ್ಲಿ ಲಾಸ್ ಏಕೆ ಆಗುತ್ತದೆ ಎನ್ನುವುದನ್ನು ಬೇರೆ ಚರ್ಚೆ ಮಾಡೋಣ. ನೀವೇನು ಪವರ್ ನಿಲುಗಡೆ ಮಾಡುತ್ತಿದ್ದೀರಿ, ಒಂದು ಫೀಲಿಂಗ್ ಇದೆ. ಅದಕ್ಕೆ ಬೇಕಾದರೆ ಆರ್ಗ್ಯು ಮಾಡೋಣ. ನೀವು ಏನೇ ಪ್ರಾಜೆಕ್ಟ್ ತಂದರೂ ಜನ ಒಪ್ಪಿಕೊಳ್ಳಬೇಕು. ಯಾವುದೇ ಪ್ರಾಜೆಕ್ಟ್ ಬರಲಿ, ಅವರೆಷ್ಟಾದರೂ ಕಮೀಷನ್ ಹೊಡೆದಿರಲಿ, ಏನಾದರೂ ಆಗಲಿ; ಪವರ್ ಜನರೇಷನ್ ಆಗಲಿ. ಜನ ಟೀಕೆ ಮಾಡಬಾರದು. ಅದೂ ಇದೆ. ಅದಕ್ಕೆ ಬೇಕಾದರೂ ಕೊಜೆಂಟ್ರಿಕ್ಸ್‌ನಿಂದ ಹಿಡಿದು, ಆಲಮಟ್ಟಿಯಿಂದ ಹಿಡಿದು, ಕಬನಿಯಿಂದ ಹಿಡಿದು, ಪ್ರತಿಯೊಂದಕ್ಕೂ ಅಂಕಿಅಂಶಗಳ

ಪ್ರಕಾರ ಚರ್ಚೆ ಮಾಡೋಣ.

★ಶ್ರೀ ಬಿ.ಎಸ್.ಯಡಿಯೂರಪ್ಪ:- ಮುಂದಿನ ಯಾವುದೇ ಕನಸಿನ ಲೋಕವನ್ನು ತೋರಿಸಬೇಡಿ. ಇಲ್ಲಿ ಕುಳಿತುಕೊಂಡು ನಾನು ನೋಡಿದ್ದೇನೆ. ಎಷ್ಟು ಬಾರಿ ಯಾವ ಯಾವ ಮುಖ್ಯಮಂತ್ರಿಗಳು, ಯಾವ ಯಾವ ಮಂತ್ರಿಗಳು ಈ ಪವರ್ ಪ್ರಾಜೆಕ್ಟ್ ಬಗ್ಗೆ, ಎಂ.ಒ.ಯು.ಗೆ ಸಹಿ ಮಾಡುವುದಕ್ಕೆ, ಒಪ್ಪಿಗೆ ಮಾಡುವುದಕ್ಕೆ ವಿದೇಶಕ್ಕೆ ಹೋಗಿಬಂದರು, ಏನೇನಾಯಿತು ಎಷ್ಟು ಪ್ರಗತಿಯಾತು. ಆ ಎಲ್ಲ ವಿವರಗಳಿಗೆ ನಾನು ಈಗ ಹೋಗುವುದಿಲ್ಲ. 7 ಸಾವಿರ ಮೆಗಾವ್ಯಾಟ್ ಪವರ್ ಕ್ಲಿಯರ್ ಮಾಡುವುದಕ್ಕೆ, ಹೊರಗಡೆಯವರಿಗೆ ಕ್ಲಿಯರೆನ್ಸ್ ಕೊಟ್ಟಿದ್ದೀರಿ. ಯಾರೂ ಇನ್ನೂ ಪ್ರಾರಂಭ ಮಾಡಿಲ್ಲ. ಅದರ ಹಿಂದುಗಡೆ ಅನೇಕ ವಿಷಯಗಳು ಇವೆ. ನಂಜೇಗೌಡರು ಸೂಕ್ಷ್ಮವಾಗಿ ಹೇಳಿದರು. ಈ ರಾಜ್ಯದಲ್ಲಿ ಕರ್ನಾಟಕ ಪವರ್ ಕಾರ್ಪೊರೇಷನ್ ಮುಚ್ಚಿಸುವುದಕ್ಕೆ, ಎಲ್ಲವನ್ನೂ ಮಾಡುವುದಕ್ಕೆ ಸಿದ್ಧವಿದ್ದಾರೆ. ಅವರು ಒಬ್ಬರು ಸಾಕು. ಈ ರಾಜ್ಯದಲ್ಲಿ ವಿದ್ಯುತ್ ಸಮಸ್ಯೆಯನ್ನು ಸರಿಪಡಿಸುವುದಕ್ಕೆ ಅವರಿಗೆ ಅವಕಾಶ ಕೊಡದೇ, ಸಿದ್ಧತೆ ಮಾಡಿ ಹೊರದೇಶದಿಂದ ಕರೆದುಕೊಂಡು ಬಂದು ಯಾವುಯಾವುದೋ ಕಾರಣಕ್ಕೋಸ್ಕರ, ಯಾರು ಯಾರನ್ನು ಕರೆದುಕೊಂಡು ಬಂದು, ಎಂ.ಒ.ಯು.ಗೆ ಸಹಿ ಮಾಡಿದಾಕ್ಷಣಕ್ಕೆ, ರಾಜ್ಯಕ್ಕೆ ಮಾಡಿದಂಥ ದೊಡ್ಡ ಉಪಕಾರ ಏನು? ಸನ್ಮಾನ್ಯ ಜೆ.ಹೆಚ್.ಪಟೇಲರು; ಉಪಮುಖ್ಯಮಂತ್ರಿಗಳಾಗಿ 18 ತಿಂಗಳ ಕಾಲ ಪವರ್ ಮಿನಿಸ್ಟರಾಗಿದ್ದರು. ಇವತ್ತು ಏನೇನಾಗಿದೆ ಅದರ ಬಗ್ಗೆ ಚರ್ಚೆ ಮಾಡೋಣ. ನಾನು ಆ ವಿಷಯಕ್ಕೆ ಬೇಕೆಂದೇ ಹೋಗುವುದಿಲ್ಲ. ನಾನು ಇವತ್ತು ಹೇಳುತ್ತೇನೆ. ಈ ರೀತಿ 43 ಪರ್ಸೆಂಟ್ ಹೇರುವುದಕ್ಕೆ ನಿಮಗೆ ಯಾವ ಸಂದರ್ಭ ಬಂತು? ವಿದ್ಯುತ್ ಇಲಾಖೆ ಲಾಸ್‌ನಲ್ಲಿ ನಡೆಯುತ್ತಿದೆ, ಏಕೆ? ಈ ದೇಶದಲ್ಲಿ ಅತ್ಯಂತ ಕಡಿಮೆ ಬೆಲೆಗೆ, ಜಲವಿದ್ಯುತ್ ಯೋಜನೆಯಿಂದ ಶೇಕಡ 71 ರಷ್ಟು ಕರ್ನಾಟಕ ರಾಜ್ಯದಲ್ಲಿ ಉತ್ಪನ್ನ ಮಾಡುವುದಕ್ಕೆ ಸಾಧ್ಯವಿದೆ. ಜಗತ್ತಿನ ಬೇರೆ ಯಾವುದೇ ರಾಜ್ಯದಲ್ಲಿ ಈ ಅನುಕೂಲ ಇಲ್ಲ. 45 ಪೈಸೆ ಯಿಂದ 65 ಪೈಸೆ ಆಗುವುದಿಲ್ಲ. ಇಷ್ಟು ಕಡಿಮೆ ಬೆಲೆಗೆ ವಿದ್ಯುತ್ ಉತ್ಪನ್ನ ಮಾಡಿದಮೇಲೂ ಸಹ, ಅವರು ಹೇಳುತ್ತಾರೆ. ನಾವೇ ನೇರವಾಗಿ ವಿದ್ಯುತ್ ಸರಬರಾಜು ಮಾಡುತ್ತೇನೆ. ಅವಕಾಶ ಮಾಡಿಕೊಡಿ ಎಂದು ಇನ್ನೂ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಅವರು ಸಿದ್ಧ ಇದ್ದಾರೆ. ಅವರ ಕೈ ಬಲ ಪಡಿಸುವುದಕ್ಕೆ ನೀವು ರೆಡಿ ಇಲ್ಲ. 65 ಪೈಸೆಗೆ ವಿದ್ಯುತ್ ಪಡೆದು, ವಾಪಸ್ ಅವರಿಗೆ ದುಡ್ಡು ಕೊಡುವುದಕ್ಕೆ ರೆಡಿ ಇಲ್ಲ. ಕೆ.ಇ.ಬಿ. ಬಳಿ ಆನೆಯಾಗಿದೆ ಲೂಟಿಯಾಗುತ್ತಾ ಇದೆ. ಅನೇಕ ವಿವರಗಳಿಗೆ ನಾನು ಬರುತ್ತೇನೆ. ನಾನು ಪೂರ್ಣ ಮಾತನಾಡುವವರೆಗೆ ನನಗೆ ಸಮಯ ಕೊಡಿ. ನೀವು ಸರಿಯಾಗಿ ಇಲಾಖೆಯನ್ನು ನಡೆಸುವುದಕ್ಕಾಗದೇ, ಎಲ್ಲಾ ರೀತಿಯ ಲೂಟಿಗಳು, ಟ್ರಾನ್ಸ್ ಮಿಷನ್ ಲಾಸ್ ಬರುವುದಕ್ಕೆ ಅವಕಾಶ ಮಾಡಿಕೊಟ್ಟು, ಥೆಫ್ಟ್‌ಗೆ ಅವಕಾಶ ಮಾಡಿಕೊಟ್ಟು, ಏನೂ ಬಿಗಿ ಮಾಡದೇ ಇದ್ದೀರಿ. ನಮ್ಮ ಮಾಜಿ ಮುಖ್ಯಮಂತ್ರಿಗಳು ಹಾಗೂ ಈಗಿನ ಪ್ರಧಾನಿಗಳು ಏನು ಹೇಳಿದರು. ಆ ವಿಷಯಕ್ಕೆ ನಾನು ಬರುತ್ತೇನೆ. ಅವರು ಮುಖ್ಯಮಂತ್ರಿಗಳಾಗಿ ಹಾಲಿ ಪ್ರಧಾನಿಗಳಾಗಿದ್ದಾರೆ. ಹಿಂದೆ ಅವರು ಹೇಳಿದ ಮಾತನ್ನು ನಾನು ಅಪ್ರಿಯೇಟ್ ಮಾಡುತ್ತೇನೆ. ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ, ಹಾಲಿ ಪ್ರಧಾನಿಯವರು ಕೆ.ಇ.ಬಿ. ಬಗ್ಗೆ ಏನೇನು ಹೇಳಿದ್ದಾರೆ. ಇದೇ ರೀತಿ ವಿದ್ಯುತ್ ಬೆಲೆಯನ್ನು ಜಾಸ್ತಿ ಮಾಡುತ್ತೇನೆಂದು ಜೆ.ಹೆಚ್.ಪಟೇಲರು ಹೇಳಿದಾಗ, ಯಾವುದೇ ಕಾರಣಕ್ಕೂ ಸಾಧ್ಯವಿಲ್ಲ. ಕೆ.ಇ.ಬಿ.ಯ ಅವ್ಯವಹಾರಕ್ಕೆ,

ಸಾಮಾನ್ಯ ಜನಗಳನ್ನು ಮೂಕಪಶುಗಳಾನ್ನಾಗಿ ಮಾಡುವುದಕ್ಕೆ, ಬಲಿಪಶುಗಳನ್ನಾಗಿ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ಅನೇಕ ವಿವರಗಳನ್ನು ಕೊಡುವವನಿದ್ದೇನೆ. ತಾವು ಸುಮ್ಮನೇ ಹೇಳಬೇಡಿ. ನಾನು ವಾಸ್ತವಿಕ ಸ್ಥಿತಿಯನ್ನು ಅರ್ಥಮಾಡಿಕೊಂಡು ಮಾತನಾಡುತ್ತಿದ್ದೇನೆ. ಅನಿವಾರ್ಯ ಏನಾಗಿದೆ, ಮಾನ್ಯಮುಖ್ಯಮಂತ್ರಿಗಳಾದ ಪಟೇಲರು ಸಿಟ್ಟುಮಾಡಿಕೊಳ್ಳದಿದ್ದರೆ ಒಂದು ಮಾತನ್ನು ಹೇಳುತ್ತೇನೆ. ತಾವು ಸಿಟ್ಟುಮಾಡಿಕೊಳ್ಳುವುದೇ ಇಲ್ಲ, ಎಲ್ಲದಕ್ಕೂ ಉತ್ತರ ಕೊಡುವ ಶಕ್ತಿ ನಿಮಗಿದೆ. ಪ್ರಶ್ನೆ ಏನಾಗಿದೆ ಎಂದರೆ, ಈ ಗೊಂದಲ ಏನು, ಇದನ್ನು ಸರಿಪಡಿಸಿಕೊಳ್ಳಿ ಎಂದು ಹೇಳುತ್ತೇನೆ. ಇಲ್ಲಿ ಏನಾಗಿದೆ, ಜನತಾ ದಳ (ಎ), ಜನತಾ ದಳ (ಬಿ) ಜನತಾ ದಳ (ಸಿ) ಎಂದು ಇರಬಹುದೇನೋ ಅನುಮಾನ, ಇದು ಜನಮಾತನಾಡುವುದು. ನೀವು ಇದನ್ನು ಸರಿಪಡಿಸಿಕೊಳ್ಳಿ, ನೀವು ಮುಖ್ಯಮಂತ್ರಿಗಳಾಗಿ ಇರಬೇಕೆಂಬದು ನಮ್ಮ ಆಸೆ. ಸಿದ್ಧರಾಮಯ್ಯನವರ ಜೊತೆಗೆ ''ಎ'', ಪಟೇಲರದು ''ಬಿ'' ಪಾರ್ಟಿ, ''ಸಿ'' ಯಾವುದು, ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಹಿಂದಿರುವ ಶಾಸಕರು. ಈ ಗೊಂದಲದಲ್ಲಿ, ನೀವು ಆಡಳಿತ ನಡೆಸುವುದಕ್ಕಾಗುತ್ತಾ ಇಲ್ಲ.

ಶ್ರೀ ಸಿ.ಬೈರೇಗೌಡ:- ತಾವು ಎ, ಬಿ, ಸಿ ಎಂದು ಹೇಳಿದಿರಿ. ಇದು ಯಾವ ವಿದ್ಯುತ್ ?

ಶ್ರೀ ಆರ್.ವಿ.ದೇಶಪಾಂಡೆ:- ಎ, ಬಿ, ಸಿ ಎಂದು ಏಕೆ ಮಾತನಾಡುತ್ತೀದ್ದೀರಿ. ತಾವು ಮಾತನಾಡುವ ಅಧಿಕಾರ ಇದೆ, ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ಮಾತನಾಡಿ. ನಮ್ಮ ಪಕ್ಷದ ಆಂತರಿಕ ವಿಚಾರಗಳ ಬಗ್ಗೆ ಏಕೆ ಹೇಳುತ್ತಿದ್ದೀರಿ. ? ಅದಕ್ಕೂ, ಇದಕ್ಕೂ ಏನು ಸಂಬಂಧ ಇದೆ. ? We are all united and our leader is the Chif minister sitting here and there is no doubt about.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಿಮ್ಮ ಮನೆಯ ವ್ಯವಹಾರವಾದರೆ, ನಾವು ದುಃಖ ಪಡುವುದಿಲ್ಲ. ಆಡಳಿತ ನಡೆಸುತ್ತಿರುವ ಒಂದು ಪಕ್ಷ ಈ ರೀತಿ ಒಬ್ಬೊಬ್ಬ ನಾಯಕರದೂ ಒಂದೊಂದು ಗುಂಪಾದರೆ, ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗುತ್ತದೆ. ಜನತೆಯ ಮುಂದೆ ಕ್ಷಮಾಪಣೆ ಕೇಳುತ್ತಿದ್ದೀರಿ. ದಯಮಾಡಿ ನಾನು ಹೇಳುತ್ತೇನೆ. ಈ ಎ, ಬಿ, ಸಿ ಹೋಗಿ, ''ಎ'' ಆಗಬೇಕೆಂದು ಹೇಳುತ್ತೇನೆ. ಇದುನನ್ನ ಆಸೆ. ಇನ್ನಾದರೂ ಪಟೇಲರಿಗೆ ಬೆಂಬಲ ಕೊಟ್ಟು, ನೀವು ಕಚ್ಚಾಡುವುದನ್ನು ಬಿಡಿ. ಇಲ್ಲದೇ ಹೋದರೆ ಜನ ಶಾಪ ಹಾಕುತ್ತಾರೆ. ಅದಾಗಬಾರದು ಎಂದು ನಾನು ಹೇಳುತ್ತೇನೆ. ಈ ಮಾತನ್ನು ಹೇಳಿದರೆ ತಾವು ಕೂಗಾಡುತ್ತೀರಿ. ಇಲ್ಲ ನಮ್ಮ ತಲೆಮೇಲೆ ನಾವು ಕಲ್ಲು ಹಾಕಿಕೊಳ್ಳುತ್ತೇವೆಂದು ಹೇಳಿದರೆ ಏನೂ ಮಾಡುವುದಕ್ಕಾಗುವುದಿಲ್ಲ. ನಾನು ಈ ರಾಜ್ಯದಲ್ಲಿ ಪ್ರವಾಸ ಹೋದಂಥ ಕಾಲದಲ್ಲಿ ಜನ ಮಾತನಾಡುತ್ತಿದ್ದಾರೆ. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಸದನದ ಸದಸ್ಯರಲ್ಲ. ಇವತ್ತು ಅವರ ಕಾರ್ಯಕ್ರಮಕ್ಕೆ ನಿಮ್ಮ ಶಾಸಕರು ಹೋಗಿದ್ದಾರೆ.

ಶ್ರೀ ಸಿ.ಬೈರೇಗೌಡ:- ನೀವು ಮಾತನಾಡುತ್ತಿರುವುದು ಯಾವ ವಿದ್ಯುತ್ತಿಗೆ ಸಂಬಂಧ ಪಡುತ್ತಿದೆ. ಯಾವ ವಿಷಯಕ್ಕೆ ಸಂಬಂಧಪಡುತ್ತಿದೆ ? ಅವರು ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಲಿ. ನೀವು ರೈತನ ಬಗ್ಗೆ ಮಾತನಾಡಿ, ಅದಕ್ಕೆ ನಾವು ಉತ್ತರ ಕೊಡುತ್ತೇವೆ.

ನನಗೆ ದುಃಖದ ಸಂಗತಿ ಜನತೆಯ ಶಾಪ ಇವತ್ತು ಕೆ.ಇ.ಬಿ.ಗೆ ತಟ್ಟಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು, ನೀವೆಲ್ಲಾ ಒಂದಾಗಿ ಎಂದು ಹೇಳುತ್ತೇನೆ. ನೀವು

ಒಂದಾಗುವುದಿಲ್ಲ, ಇದೇ ರೀತಿ ಕಚ್ಚಾಡುತ್ತೇವೆಂದು ಹೇಳಿದರೆ ಅದು ನಿಮಗೆ ಬಿಟ್ಟಿದ್ದು ಜನತೆಗೆ ನೀವು ಆಶ್ವಾಸನೆ ಕೊಟ್ಟಿರಿ. 1983, 1985 ರಲ್ಲಿ ಮಾಡಿದ ತಪ್ಪನ್ನು ನಾವು ಮತ್ತೆ ಮಾಡುವುದಿಲ್ಲ. ನಮ್ಮನ್ನು ಕ್ಷಮಿಸಿ, ಒಂದಾಗಿ ಈ ರಾಜ್ಯದ ಜನರು ಹೇಳುತ್ತಿರುವ ಮಾತನ್ನು ನಾವು ಹೇಳುತ್ತಿದ್ದೇವೆ. ಆದ್ದರಿಂದ ಈಗಲಾದರೂ ತಾವು ಬಡಿದಾಡಬೇಡಿ, ಜನತಾ ದಳದಲ್ಲಿ ಎ, ಬಿ, ಸಿ ಎಂದು ಗುಂಪುಗಳು ಬೇಡ ಒಂದೇ ಗುಂಪು, ಒಂದೇ ತತ್ವ ಎಂದು ಮಾಡಿಕೊಂಡು, ಪಟೇಲರು ಇರುವವರೆಗೆ ಒಳ್ಳೆಯ ಸಹಕಾರವನ್ನು ಕೊಟ್ಟು ರಾಜ್ಯದ ಹಿತವನ್ನು ಕಾಪಾಡುವ ಕಡೆ ಗಮನ ಕೊಡಿ. ಡೆಲ್ಲಿಗೆ ಸುತ್ತುವುದನ್ನು ಕಡಿಮೆ ಮಾಡಿ ಎನ್ನುವುದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಸಿ.ಬೈರೇಗೌಡ:- ಮಾನ್ಯ ಯಡಿಯೂರಪ್ಪನವರು ಅಹಮದಾಬಾದ್‌ಗೆ ಮತ್ತು ಗುಜರಾತ್‌ಗೆ ಹೋಗಿ ಬಂದು ಮಾತನಾಡಲಿ. ಅಲ್ಲಿಗೆ ಹೋಗಿ ಬಂದರೆ, ಅವರಿಗೆ ಗೊತ್ತಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇವತ್ತು ಈ ದೇಶದಲ್ಲಿ ಸಿಂಗಲ್ ಲಾರ್ಜೆಸ್ಟ್ ಪಾರ್ಟಿ, ಭಾರತೀಯ ಜನತಾ ಪಾರ್ಟಿ. ಜನ ಆಶೀರ್ವಾದ ಮಾಡಿದ್ದಾರೆ. ಬಹುಮತ ಸ್ವಲ್ಪ ಕಡಿಮೆಯಾಗಿರಬಹುದು. 40 ಜನ ಎಂ.ಪಿ. ಗಳು ಯಾವುದೋ ಕಾರಣಕ್ಕೆ ಕೇಂದ್ರ ಸರ್ಕಾರದಲ್ಲಿ ಸರ್ಕಾರ ರಚನೆ ಮಾಡಿದಿರಿ. ಇಲ್ಲಿ ಏಕೆ ಕೂಗಾಡುತ್ತೀರಿ .?

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ದೊಡ್ಡ ಸಾಧನೆ ಮಾಡಿದ್ದೇವೆಂದು ಮಾತನಾಡಿದರೆ ಹೇಗೆ ?

ಅಧ್ಯಕ್ಷರು:- ಮಾನ್ಯ ಯಡಿಯೂರಪ್ಪನವರೇ ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ ವಿಷಯದ ಬಗ್ಗೆ ಮಾತನಾಡಿದರೆ ಒಳ್ಳೆಯದು.

ಶ್ರೀ ಸಿ.ಬೈರೇಗೌಡ:- ಈ ವಿಷಯವನ್ನು ಮಾತನಾಡುವುದಕ್ಕೆ ಪ್ರಶ್ನೋತ್ತರ ವೇಳೆಯನ್ನು ಮುಂದೆ ಹಾಕಬೇಕಾಗಿತ್ತೋ ? . . . .

ಶ್ರೀ ಜಿ.ಬಸವಣ್ಣಪ್ಪ:- ಸನ್ಮಾನ್ಯ ಶ್ರೀ ಜೆ.ಎಚ್.ಪಟೇಲ್‌ರ ನಾಯಕತ್ವದಲ್ಲಿ ನಾವೆಲ್ಲ ಒಂದಾಗಿದ್ದೇವೆ. ಅದರಲ್ಲಿ ನಿಮಗೆ ಅನುಮಾನ ಬೇಡ.

★ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ ತಾವು ಅಪ್ಪಣೆ ಕೊಟ್ಟರೇ ನಾನು ಖಂಡಿತವಾಗಿ ಆ ಬಗ್ಗೆ ಒಂದು ಶಬ್ಧವನ್ನು ಸಹ ಮಾತನಾಡುವುದಿಲ್ಲ. ನಾನೇನು ಮಾತನಾಡುವುದಕ್ಕೆ ಹೊರಟಿದ್ದೇನೆ ಅಂದರೆ ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಜನತೆಯ ಮುಂದೆ ಕ್ಷಮಾಪಣೆಯನ್ನು ಕೇಳದೇ ಇದ್ದಿದ್ದರೆ ತಾವು ದಾವಣಗೆರೆಗೆ ರಾಜ್ಯದ ಮುಖ್ಯಮಂತ್ರಿಗಳಾಗಿ ಹೋಗಿದ್ದೀರಿ. ನಾವು ಈ ರೀತಿಯಲ್ಲಿ ಬಡಿದಾಡುತ್ತಿದ್ದರೆ ಜನರು ನಮ್ಮನ್ನು ಕಸದ ಬುಟ್ಟಿಗೆ ಹಾಕುತ್ತಾರೆಂದು ಹೇಳಿದ್ದುದು ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ ಬಂದಿದೆ. ನೀವು ಅಧಿಕಾರದಲ್ಲಿರುವಂತಹ ಜನ ಈ ರೀತಿಯಲ್ಲಿ ಕಚ್ಚಾಡಿ ಜನರ ಹಿತವನ್ನು ಮರೆಯಬೇಡಿ. ಜನರು ಸಾಯುತ್ತಿದ್ದಾರೆ. ಅನೇಕ ಸಂಕಷ್ಟಕ್ಕೆ ಸಿಕ್ಕಿ ತೊಳಲಾಡುತ್ತಿದ್ದಾರೆ. ಬರಗಾಲ ಬರುವಂತಹ ವಾತಾವರಣ ಇದೆ. ಜನರು ತಮ್ಮ ಹೊಲಗಳಲ್ಲಿ ಆನಂದದಿಂದ ಕುಣಿಯುವಂತಹ ಕಾಲದಲ್ಲಿ ಐ ಪಿ ಸೆಟ್‌ಗಳಿಗೆ ವಿದ್ಯುತ್ ಇಲ್ಲದೇ ಜನರಿಗೆ ನೀರು ಇಲ್ಲದೇ ಇರುವಂತಹ ಸಂದರ್ಭದಲ್ಲಿ ವಿದ್ಯುತ್ ಕಡಿತ ಮಾಡಬೇಕಾದೀತು ಎನ್ನುವಂತಹ ಮಾತು ಬಂದಿರುವಂತಹ ಕಾಲದಲ್ಲಿ ತಾವು ವಿದ್ಯುತ್ ಬೆಲೆಯನ್ನು ಏರಿಸುತ್ತೀರಿ ? ಈ ಪರಿಸ್ಥಿತಿ ಬಂದಿದೆ. ತಾವು ಬಡಿದಾಡಬೇಡಿ. ಜನರ

ಮುಂದೆ ಏನು ಹೇಳಿದ್ದೀರಿ ಕೊನೆಯ ಪಕ್ಷ ಆ ರೀತಿ ಆದರೂ ಮಾಡಿ ತಾವು ಅಧಿಕಾರದಲ್ಲಿ ಇರುವವರೆಗೂ ಆ ಮೇಲೆ ಬೇಕಾದರೂ ಏನಾದರೂ ಮಾಡಿಕೊಳ್ಳುವಿರಂತೆ. ಇದು ನಮ್ಮ ಮನೆ ವ್ಯವಹಾರ ಅಂದರೆ ಆಗುವುದಿಲ್ಲ. ಈ ರಾಜ್ಯದ ಮುಖ್ಯಮಂತ್ರಿಗಳ ಮತ್ತು ಆಡಳಿತ ಪಕ್ಷದ ಚಲನವಲನ ಪ್ರತಿಯೊಂದು ಘಟನೆ ಈ ರಾಜ್ಯದ ಜನತೆಯ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತದೆ. ಅದು ನನ್ನ ಚಿಂತೆ.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಅಧ್ಯಕ್ಷರೇ ತಮ್ಮ ಹಿತವಚನ ಎಷ್ಟು ಅಂತರದಿಂದ ಬಂದಿದೆ ಎನ್ನುವುದು ನನಗೆ ಗೊತ್ತಾಗುವುದಿಲ್ಲವೇ. ನಾನು ಬಹಳ ಹೊತ್ತಿನಿಂದ ನೋಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ಜಗಳ ಮಾಡಬಾರದು ಒಟ್ಟಾಗಿ ಹೋಗಬೇಕು ಎಂದು ಹೇಳುತ್ತಿದ್ದಾರೆ. ಅದನ್ನು ಸರ್ವೇಸಾಮಾನ್ಯವಾಗಿ ಎಲ್ಲರೂ ಒಪ್ಪುವ ಮಾತೆ.

ನೀವು ತಿಳಿದುಕೊಂಡಂತೆ, ನೀವು ಕಾಣುವಂತಹ ಭೂತ ಇಲ್ಲ ಅಲ್ಲಿ. You are seeing the Ghost which does not exist.

ಆ ಮೇಲೆ ಇನ್ನೂ ಒಂದು the heat is coverted into electricity. The electricity also can be converted into producting heat. However, the heat which you are generating will neither produce electricity nor political power.

★**ಶ್ರೀ ಬಿ.ಎಸ್.ಯಡಿಯೂರಪ್ಪ:-** ನೀವು ರಿಪ್ಲೈ ಮಾಡಬೇಕಾದರೆ ಗೊತ್ತಾಗುತ್ತಲ್ಲ. ಜನರಿಗೆ ಹೇಗೆ ಸತ್ಯವನ್ನು ಮರೆ ಮಾಚಿ ವಿದ್ಯುತ್ ದರವನ್ನು ಏರಿಸುವುದು ಸರಿ ಎಂದು ಸಾಬೀತು ಮಾಡುವುದಕ್ಕೆ ಅಸತ್ಯ ಸಂಗತಿಗಳನ್ನು ತಾವು ಹೇಳಿದ್ದೀರಾ ಅದನ್ನು ಹೇಳುತ್ತೇನೆ. ಈ ದೇಶದಲ್ಲಿ ಏನಾಗಿದೆ. ಬುದ್ಧಿಬವಂತರು ಜಾಸ್ತಿಯಾಗಿದ್ದಾರೆ. ಜೆ.ಹೆಚ್.ಪಟೇಲ್‌ರಂತಹವರು ಮುಖ್ಯಮಂತ್ರಿಯಾಗಿದ್ದಾಗ ಬಿಳಿಯನ್ನು ಕರಿ ಅಂತ ಒಪ್ಪಿಸುತ್ತೀರಿ ಕರಿಯನ್ನು ಬಿಳಿ ಅಂತ ಒಪ್ಪಿಸುತ್ತೀರಿ. ಆ ಶಕ್ತಿ ನಿಮಗೆ ಇದೆ ಎನ್ನುವುದರಲ್ಲಿ ನಮಗೆ ಏನೂ ಅನುಮಾನ ಇಲ್ಲ. ಆದರೆ ಮುಖ್ಯಮಂತ್ರಿಗಳಾಗಿ ಬಿಳಿಯನ್ನು ಬಿಳಿ ಅಂತ ಹೇಳಿ ಕರಿಯನ್ನು ಕರಿ ಅಂತ ಹೇಳಿ ಅದು ನನ್ನ ಪ್ರಾರ್ಥನೆ. ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯವರೇ ಅದರ ಬಗ್ಗೆ ನನಗೆ ಬಹಳ ಸಂತೋಷವಾಗಿದೆ. ಈ ಸದನದಲ್ಲಿ ಸತ್ಯ ಹೇಳಬೇಕಲ್ಲ. ನಾನು ಪತ್ರಿಕೆ ಓದಿದೆ ನೀವು ನಮ್ಮ ಜೊತೆಗೆ ಹೇಗೆ ತಮ್ಮ ಇಂಟಲಿಜನ್ಸ್‌ನವರನ್ನು ಕಳುಹಿಸಿಕೊಡುತ್ತೀರೋ ಹಾಗೆ ನಾವು ಕಾರ್ಯಕರ್ತರವನ್ನು ಕಳುಹಿಸಿದ್ದೆವು. ಏಕೆಂದರೆ ತಾವು ಒಂದು ಮಾತು ಹೇಳಿದ್ದೀರಿ. ದಾವಣಗೆರೆ ಸಮಾವೇಶದಲ್ಲಿ ನಾನು ವಿದ್ಯುತ್ ದರ ಏರಿಕೆ ಬಗ್ಗೆ ವಿವರಗಳನ್ನು ಒದಗಿಸುತ್ತೇನೆ. ಅದನ್ನು ಕನ್‌ವಿನ್ಸ್ ಮಾಡುವುದಕ್ಕೆ ಈ ಸಮಾವೇಶ ಎಂದು ಹೇಳಿದಿರಿ. ಅದು ರಾಜಕೀಯ ಸಮಾವೇಶ ಆಯಿತು. ನಿಮ್ಮದೇ ಅದ ಶಕ್ತಿ ಪ್ರದರ್ಶನಕ್ಕೆ ಅದನ್ನು ಮಾಡಿದಿರಿ. ನನ್ನ ಕುರ್ಚಿಯನ್ನು ಅಲ್ಲಾಡಿಸಿದರೆ ಹುಷಾರ್ ಎಂದು ಹೇಳಿ ವಿದ್ಯುತ್ ದರ ಏರಿಸಿದ್ದರ ಬಗ್ಗೆ ವಿವರ ಕೊಡಲು ಹೋದಿರಿ ಅದು ಸರಿಯಾಗಿ ಆಗಲಿಲ್ಲ. ಅದು ತಮಗೆ ಸಮಾಧಾನ ಆಯಿತೋ ಏನೋ ಅದು ನನಗೆ ಗೊತ್ತಿಲ್ಲ. ಆ ಸಭೆಯಲ್ಲಿ ಪ್ರಸ್ತಾಪ ಮಾಡಿದಿರಿ. ಅದಕ್ಕೆ ನಾವು ನೀವು ಏನು ಬೇಕಾದರೂ ಹೇಳಿ ಮುಚ್ಚಿಟ್ಟುಕೊಳ್ಳಬಹುದು. ಈ ಒಂದು ಪತ್ರಿಕಾ ರಂಗ ಇದೆಯಲ್ಲ ಪತ್ರಿಕಾ ರಂಗ ಅತ್ಯಂತ ಪ್ರಮುಖವಾದ

ರಂಗ ಅಂತ ಏನು ಇದೆಯಲ್ಲ ಇದು ನಮ್ಮೆಲ್ಲರ ಬಣ್ಣವನ್ನು ಬಯಲು ಮಾಡುವಂತಾದ್ದು ನ್ಯಾಯಾಂಗ ಮತ್ತು ಪತ್ರಿಕಾ ರಂಗ ಇವತ್ತು ಇಲ್ಲದೇ ಇದ್ದಿದ್ದರೆ ಯಾರು ಏನು ಬೇಕಾದರೂ ರಾಜಕೀಯ ಮಾಡಿಕೊಂಡು ನಮ್ಮ ತೀಟೆಯನ್ನು ತೀರಿಸಿಕೊಂಡು ಹೋಗಬಹುದಾಗಿತ್ತು. ಆದರೆ ಅಲ್ಲಿ ನಡೆದಿರುವುದು ಏನು ಯಾವ ಒಂದು ಉದ್ದೇಶವನ್ನು ಇಟ್ಟುಕೊಂಡು ಮುಖ್ಯಮಂತ್ರಿಗಳಾದ ತಾವು ಹೇಳಿದಿರೋ, ವಿದ್ಯುತ್ ದರ ಏರಿಕೆ ಬಗ್ಗೆ ಜನರನ್ನು ಕನ್‌ವಿನ್ಸ್ ಮಾಡುವುದಕ್ಕೋಸ್ಕರ ಎಂದು ಹೇಳಿದಿರಿ. ಅಲ್ಲಿಗೆ ಜನ ಬಂದಿರಲಿಲ್ಲ ಅಲ್ಲಿಗೆ ಬಂದಿದ್ದವರು ನಿಮ್ಮ ಸಪೋರ್ಟರ್ಸ್. ತಮ್ಮ ಹಿತೈಷಿಗಳು. ಜನತಾ ದಳದ ಕಾರ್ಯಕರ್ತರುಗಳು. ಅವರು ತಮ್ಮನ್ನು ಬೆಂಬಲಿಸಲು ಅಲ್ಲಿ. . . .

ಶ್ರೀ ಸಿ.ಬೈರೇಗೌಡ:- ನಿಮ್ಮನ್ನು ಕರೆದಿರಲಿಲ್ಲ ನೀವು ಏಕೆ ಬಂದಿರಿ. ?

★ ಶ್ರೀ ಬಿ.ಎಸ್.ಯಡಿಯೂರಪ್ಪ:- ನಮ್ಮನ್ನು ಕರೆದಿಲ್ಲ. ಆದರೆ ನೀವು ಬಾಡಿಗೆ ಜನರನ್ನು ಕರೆದುಕೊಂಡು ಬಂದಿದ್ದಿರಿ. ನೂರಾರು ಬಸ್ಸುಗಳಲ್ಲಿ ಜನರನ್ನು ಕರೆದುಕೊಂಡು ಬಂದಿದ್ದಿರಿ ಅದನ್ನು ನನ್ನ ಬಾಯಿಂದ ಹೇಳಬಾರದು ಎಂದು ಇದ್ದೆ ಹೇಳಿಸಿದಿರಿ ನನಗೆ ಒಂದು ಮಾತು ಬೇಕು ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ನನಗೆ ವಿಶ್ವಾಸ ಇದೆ. ಆ ಸಭೆಯಲ್ಲಿ ತಾವು ವಿದ್ಯುತ್ ದರ ಏರಿಕೆ ಬಗ್ಗೆ ಮಾತನಾಡುತ್ತಿದ್ದಂತೆ ಯೇ ಅಲ್ಲಿದ್ದಂತಹ ಸಭಿಕರು ವಿರೋಧ ಮಾಡಿದರು. ಪ್ರತಿಭಟನೆ ಮಾಡಿದರು. ಒಂದು ವಾಕ್ಯವನ್ನು ಸಹ ಮುಂದುವರಿಸುವುದಕ್ಕೆ ಆಗಲಿಲ್ಲ. ಆ ಕ್ಷಣದಲ್ಲಿಯೇ ತಾವು ರಾಜ್ಯದ ಜನತೆಯ ಮುಂದೆ ಕ್ಷಮಾಪಣೆ ಕೇಳಿ ತಮ್ಮ ಅಪ್ಪಣೆ ಎನಪ್ಪ ನಾನು ನನ್ನ ತಪ್ಪು ಗ್ರಹಿಕೆಯಿಂದ ವಿದ್ಯುತ್ ದರವನ್ನು ಏರಿಕೆ ಮಾಡಿದ್ದೇನೆ ವಾಪಸ್ಸು ತೆಗೆದುಕೊಳ್ಳುತ್ತೇನೆ ಸರಿಪಡಿಸುತೇನೆಂದು ಹೇಳಬೇಕಾಗಿತ್ತು ಹಾಗೆ ಹೇಳುವ ಮನಸ್ಸು ಇದೆ ಆದರೂ ತಾವು ಹೇಳುತ್ತಿಲ್ಲ. ಆ ಭೂತಪೂರ್ವವಾದ ಜನರ ಬೆಂಬಲವನ್ನು ತೆಗೆದುಕೊಂಡು ವಿದ್ಯುತ್ ದರದ ಬಗ್ಗೆ ಬಿ.ಜೆ.ಪಿ. ಬಂದ್‌ಗೆ ಕರೆ ಕೊಟ್ಟು ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣವಾಗಿ ಯಶಸ್ಸು ಆಯಿಲ್ಲ ಎನ್ನುವಂತಹ ಮುಜುಗರ ಎಲ್ಲೋ ಒಂದು ಕಡೆ ತಮ್ಮ ಮನಸ್ಸಿನಲ್ಲಿ ಇದೆ. ನಾನು ಒಂದು ಮಾತು ತಮಗೆ ಹೇಳುತ್ತೇನೆ. ಈ ಯಶಸ್ಸು ರಾಜ್ಯದ ಬಿ ಜೆ ಪಿ ದು ಅಲ್ಲ. ಈ ಯಶಸ್ಸು ರಾಜ್ಯದ ಜನತೆಯದ್ದು. ಸನ್ಮಾನ್ಯ ಅಧ್ಯಕ್ಷರೇ ಈ ವಿದ್ಯುತ್. ಏರಿಕೆ ಬಗ್ಗೆ ಯಾರು ಏನು ಮಾಡುತ್ತಾರೋ ಗೊತ್ತಿಲ್ಲ. ನಮ್ಮ ಎಲ್ಲಾ ಪದಾಧಿಕಾರಿಗಳು ರಾಜ್ಯದ ಉದ್ದಗಲಕ್ಕೂ ಎಲ್ಲಾ ಕಡೆ ಸಭೆಗಳನ್ನು ಮಾಡಿದರು. ಈ ಸಭೆಗಳಲ್ಲಿ ವಿದ್ಯುತ್ ದರಗಳನ್ನು ಏರಿಸುವಂತಹ ಸಂದರ್ಭ ಇರಲಿಲ್ಲ, ಏಕೆ, ಏರಿಸಿದರು ? ಇದರ ಹಿನ್ನಲೆ ಏನು ? ಇದಕ್ಕೆ ನಿಮ್ಮ ಒಪ್ಪಿಗೆ ಎನಪ್ಪ ಎಂದು ಕೇಳಿದಾಗ ನಮ್ಮ ಸಭೆಯಲ್ಲಿ ಎಲ್ಲಾ ಪಕ್ಷದವರು ಬರುತ್ತಾರೆ ವಿದ್ಯುತ್ ದರ ಏರಿಸಿರುವುದು ಸರಿ ಎನಪ್ಪ ಅಂತ ಕೇಳಿದರೆ ಯಾರೂ ಒಬ್ಬರೂ ಸಹ ಕೈ ಎತ್ತಲಿಲ್ಲ. ತಮಗೆ ಇಂಟಲಿಜನ್ಸ್ ರಿಪೋರ್ಟ್ ಬಂದಿರಬಹುದು. ಒಬ್ಬರೂ ಸಹ ಸಾರ್ವಜನಿಕ ಸಭೆಯಲ್ಲಿ ಬಿಜಾಪುರದಲ್ಲಿ ಸುಮಾರು 10-12 ಸಾವಿರ ಜನ ಸೇರಿದ್ದಂತಹ ಸಭೆ ಇರಬಹುದು ನಾನು ಇಲ್ಲ ಎಂದು ಹೇಳುವುದಿಲ್ಲ. ನಮ್ಮ ಹತ್ತಿರ ಎಲ್ಲಿದೇ ಸ್ವಾಮಿ ನಾನು ಜನರನ್ನು ತಂದು ಇಡಲು ಆಗುವುದಿಲ್ಲ ಅದು ಬೇರೆ ವಿಷಯ. ಅದನ್ನು ಅಪ್ರಿಷಿಯೇಟ್ ಮಾಡಬೇಕು ನೀವು. ಆ ಒಂದು ಸಭೆಯಲ್ಲಿ ವಿದ್ಯುತ್ ದರವನ್ನು ಏರಿಸಿದ್ದರ ಬಗ್ಗೆ ಪ್ರತಿಭಟಿಸುತ್ತಾರೆ. ತಾವು ನಮ್ಮ ಪ್ರತಿಪಕ್ಷದವರ ಮಾತು ಕೇಳಬೇಡಿ. ಆದರೆ ನೀವು ಕಳುಹಿಸಿ ಇಲ್ಲ ಅಂದರೆ ಈ ಸದನದ ಒಂದು ಸಮಿತಿ ಯನ್ನು ಮಾಡಿ ಕಳುಹಿಸಿ ಮಾನ್ಯ ಅಧ್ಯಕ್ಷರೇ ಇವತ್ತು ಜನ ಈ ವಿದ್ಯುತ್ ದರ ಏರಿಸಿದ್ದರ ಬಗ್ಗೆ ಏನು

ಮಾತನಾಡುತ್ತಿದ್ದಾರೆ. ಶ್ರೀ ಸಾಮಾನ್ಯನ ಮೇಲೆ ಏನು ಪರಿಣಾಮ ಆಗಿದೆ. ಇಂಡಸ್ಟ್ರೀಸ್ ಮೇಲೆ ಏನು ಪರಿಣಾಮ ಆಗಿದೆ ನೋಡಿ.

ಸ್ವಾಮಿ, ಛೆಂಬರ್ ಆಫ್ ಕಾಮರ್ಸ್ ಅಧ್ಯಕ್ಷರು ಏನು ಹೇಳುತ್ತಾರೆ ಅಂದ್ರೆ ನಾನು ಆ ಮೇಲೆ ವಿವರಕ್ಕೆ ಬರುತ್ತೇನೆ ಕಾರ್ಖಾನೆಗಳನ್ನು ಬೀಗ ಹಾಕಿ ನಾವು ಬೀಗದ ಕೈಗಳನ್ನು ಕೊಡುತ್ತೇವೆ ತಾವು ಬೇಕಾದರೆ ನಡೆಸಿಕೊಳ್ಳಿ. 15 ನೇ ತಾರೀಖು ನಂತರ ಕಾರ್ಖಾನೆಯ ಮಾಲೀಕರು ಕಾರ್ಮಿಕರನ್ನು ಜೈಲು ಭರ್ತಿ ಮಾಡಬೇಕಾಗುತ್ತದೆ. ಈ ಮಾತನ್ನು ಇತಿಹಾಸದಲ್ಲಿ ಛೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷರು ಪ್ರಥಮ ಭಾರಿಗೆ ಹೇಳುವಂತಹ ಪರಿಸ್ಥಿತಿ ಬಂದಿದೆ ಅಂತ ಯಾವ ರೀತಿಯಾದ ತೊಂದರೆ ರಾಜ್ಯದ ಜನತೆಗೆ ತಟ್ಟಿದೆ ಎನ್ನುವ ಅರಿವು ಸರ್ಕಾರಕ್ಕೆ ಇರಬೇಕಾಗುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ವಿದ್ಯುತ್ ದರ ಏರಿಕೆ ಮಾಡಿರುವ ರೀತಿಯನ್ನು ನೋಡಿದರೆ ಅದರಲ್ಲಿ ಪಾರದರ್ಶಕತೆ ಯಾವುದೂ ಇಲ್ಲ. ಈ ಎಲೆಕ್ಟ್ರಿಕಲ್ ವೈರಗಳಿಗೆ ಇನ್‌ಸಲೇಶನ್ ಮಾಡುತ್ತಾರಲ್ಲ ಹಾಗೆಯೇ ಒಳಗೆ ಏನೋ ನಡೆಯುತ್ತಿದೆ ಅಂತ ಜನರು ಮಾತನಾಡುತ್ತಿದ್ದಾರೆ ಹಾಗೆ ನಡೆಯುವುದಕ್ಕೆ ಕಾರಣ ಏನು ? ಯಾವ ಶಕ್ತಿಗಳು ತಮ್ಮ ಹಿಂದೆ ಇವೆ ಈ ವಿದ್ಯುತ್ ದರವನ್ನು ಜಾಸ್ತಿ ಮಾಡುವುದಕ್ಕೆ ಇದರಿಂದ ಯಾರಿಗೂ ಲಾಭ ಆಗುತ್ತದೆ ಎನ್ನುವುದರ ಬಗ್ಗೆ ಜನರಲ್ಲಿ ಒಂದು ಗುಮಾನಿ ಇದೆ. ಇನ್ಸ್ಯುಲೇಶನ್ ಮುಚ್ಚಿರುವ ರೀತಿಯಲ್ಲಿ ನಿಮ್ಮ ಸರ್ಕಾರ ಮುಚ್ಚಿರುವಂತೆ ಕಾಣುತ್ತದೆ. ಇದರ ಬಗ್ಗೆ ಜನ ಇವತ್ತು ಯೋಚನೆ ಮಾಡುತ್ತಿದ್ದಾರೆ. ಒಂದು ಸಿನಿಮಾ ಬಂದಿತ್ತು. '' ನೋಡಿಸ್ವಾಮಿ ನಾವು ಇರುವುದೇ ಹೀಗೆ'' ಅಂತ ಅದೇ ರೀತಿಯಲ್ಲಿ ಯಾರು ಏನೇ ಹೇಳಿಕೊಂಡರು ನಾವು ಇರುವುದೇ ಹೀಗೆ ನಾವು ಆಡಳಿತ ನಡೆಸುವುದೇ ಹೀಗೆ ಎಂದು ಏನಾದರೂ ತಾವು ಯೋಚನೆ ಮಾಡಿದ್ದರೆ ನಮ್ಮದೇನೂ ಅಭ್ಯಂತರ ಇಲ್ಲ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು)

ಅದ್ದರಿಂದ ತಾವು ಈಗಲಾದರೂ ಈ ಬಗ್ಗೆ ಯೋಚನೆ ಮಾಡಬೇಕೆಂದು ಆನನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ನಾನು ಪ್ರಾರಂಭದಲ್ಲಿಯೇ ಹೇಳಿದ ಕಳೆದ 18-20 ತಿಂಗಳಿಂದ ಈ ಒಂದು ಇಲಾಖೆಯನ್ನು ಸುಧಾರಣೆ ಮಾಡುವ ಬಗ್ಗೆ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ವಿದ್ಯುತ್ ಬರದಿಂದ ಜನ ಕಂಗಾಲಾಗಿರುವಂತಹ ಕಾಲದಲ್ಲಿ ರೈತನ ಪಂಪ್‌ಸೆಟ್‌ಗೆ ವಿದ್ಯುತ್ ಕೊಡಲಿಲ್ಲ ಇಂಡಸ್ಟ್ರೀಗಳಿಗೆ ವಿದ್ಯುತ್ ಕೊಡಲಿಲ್ಲ ಇದಕ್ಕೆ ನಾವು ನೀವು ಜವಾಬ್ದಾರು ಅಂತ ನಾನು ಹೇಳುತ್ತಿಲ್ಲ. ವಿದ್ಯುತ್ ಉತ್ಪಾದನೆ ಕಡೆ ಗಮನ ಕೊಡದೇ ಇದ್ದಾಗ ಇರುವಂತಹ ವಿದ್ಯುತ್ ಅನ್ನು ಹಂಚಿಕೆ ಮಾಡುವಂತಹ ಕಾಲದಲ್ಲಿ ಜಲಾಶಯಗಳಲ್ಲಿ ನೀರು ಇಲ್ಲದೇ ಇದ್ದಂತಹ ಕಾಲದಲ್ಲಿ ಜನ ವಿದ್ಯುತ್ ಮೇಲೆ ನಾವು ಡಿಪೆಂಡ್ ಆಗಿರುವಂತಹ ಕಾಲದಲ್ಲಿ ವಿದ್ಯುತ್ ಸಮಸ್ಯೆಯನ್ನು ನಾವು ಎದುರಿಸಿಸಬೇಕಾಗುತ್ತದೆ. ಅದನ್ನು ಸುಧಾರಣೆ ಮಾಡುವ ಬಗ್ಗೆ ತಾವು ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಎನ್ನುವಂತಹ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ ನಾನು ಹೇಳುತ್ತೇನೆ. ತಮಗೆ ರೈತರ ಬಗ್ಗೆ ಏಕೆ ಈ ಒಂದು ಆಕ್ರೋಶ ? ಕಳೆದ ಒಂದುವರೆ ಎರಡು ವರ್ಷಗಳಲ್ಲಿ ಯಾವ ಕಾಲದಲ್ಲಿಯೂ ಸಹ ತಾವು ಸರಿಯಾಗಿ ವಿದ್ಯುತ್ ಸರಬರಾಜು ಮಾಡಲಿಲ್ಲ. ದಿನಕ್ಕೆ 8, 12 ಗಂಟೆ 24 ಗಂಟೆ ಕಾಲ ವಿದ್ಯುತ್ ಕೊಡುತ್ತೇನೆಂದು

ಹೇಳಿದಂತಹವರು, ನೀವು ಆದರೆ ರೈತ ತನ್ನ ಐ ಪಿ ಸೆಟ್‌ಗಳನ್ನು ಉಪಯೋಗ ಮಾಡಲಿಲ್ಲ ತಾವು 10 ಲಕ್ಷ ಐ ಪಿ ಸೆಟ್‌ಗಳಿಗೆ ಸಹ ಸಿಗುವುದಿಲ್ಲ. ಇಂತಹ ಒಂದು ಸಂದರ್ಭದಲ್ಲಿ ಪರ್ ಹೆಚ್ ಪಿ 300 ರೂಪಾಯಿಗಳಿಗೆ ಏರಿಸಿರುವುದು ತಮಗೆ ಎಷ್ಟರ ಮಟ್ಟಿಗೆ ಸರಿ ಎಂದು ಎನ್ನಿಸುತ್ತದೆ ? ಕಳೆದ 5-6 ತಿಂಗಳಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಸಾವಿರಾರು ಟ್ರಾನ್ಸ್‌ಫಾರ್ಮರ್ಸ್ ಸುಟ್ಟು ಹೋಗಿವೆ. ಅವುಗಳು ರೀಪ್ಲೇಸ್ ಆಗಲಿಲ್ಲ. ತಮ್ಮ ಇಲಾಖೆಯಲ್ಲಿ ನೋಡಿ ತಾವು ಇನ್ನೂ ಜವಾಬ್ದಾರಿಯುತವಾದ ಸ್ಥಾನದಲ್ಲಿ ಕುಳಿತಿದ್ದೀರಿ. ಕೆ.ಇ.ಬಿ. ಯಲ್ಲಿ ನಡೆಯುತ್ತಿರುವಂತಹ ಅವ್ಯವಹಾರಗಳ ಬಗ್ಗೆ ದೊಡ್ಡ ಒಂದು ಪಟ್ಟಿಯನ್ನೇ ಕೊಡಬಹುದು. ಕೆ.ಇ.ಬಿ. ಯಿಂದ ಹೆಚ್ಚಿನ ವಿದ್ಯುತ್ ಸರಬರಾಜು ಮಾಡುವಂತಹ ಸ್ಥಿತಿ ಇಲ್ಲ ಎಂದು ಹೇಳಿದ್ದೀರಿ. ಪ್ರತಿ ಜಿಲ್ಲೆಯಲ್ಲಿಯೂ ಸಾವಿರಾರು ಜನ ರೈತರು ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಸಿಗುತ್ತದೆ ಅಂತ ಹೇಳಿ 50-60 ಸಾವಿರ ರೂಪಾಯಿಗಳು ಸಾಲ ಸಿಗುತ್ತದೆ ಅಂತ ಹೇಳಿ ಬೋರ್‌ವೆಲ್‌ಗಳನ್ನು ತೆಗೆದು ಆಗಿದೆ ಮೋಟಾರುಗಳನ್ನು ಇಳಿಸಿ ಆಗಿದೆ. ನೀವು ಕರೆಂಟ್ ಕೊಡುವುದಕ್ಕೆ ಆಗಿಲ್ಲ. ಇಂತಹ ಹದಗೆಟ್ಟು ಹೋಗಿರುವಂತಹ ಸಂದರ್ಭ ಇದೆ. ನಾನು ಪ್ರಾರಂಭದಲ್ಲಿಯೇ ಹೇಳಿರುದಂತೆ ತಾವು ಶೇಕಡ 43 ರಷ್ಟು ವಿದ್ಯುತ್ ದರ ಏರಿಸಿದ್ದೀರಿ. ಛೇಂಬರ್ ಆಫ್ ಕಾಮರ್ಸ್‌ನ ಫಿಲ್ಲಿಪ್ಸ್ ರೂಯಿಸ್ ಎನ್ನುವಂತಹವರು ಅದರ ಅಧ್ಯಕ್ಷರು ತಮ್ಮನ್ನು ಭೇಟಿ ಮಾಡಿರಬಹುದು, ಅವರು ಎಲ್ಲಾ ಸಂಗತಿಗಳನ್ನು ಹೇಳಿದ್ದಾರೆ.

ದಿನಾಂಕ: 15-7-1996ರ ನಂತರ ತೆರಿಗೆಯನ್ನು ನಾವು ಯಾವುದೇ ಕಾರಣಕ್ಕೂ ಕಟ್ಟುವುದಿಲ್ಲ. ಜೊತೆಗೆ ಪ್ರತಿಭಟನೆ ಮಾಡಿ ಜೇಲ್ ಭರೋ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆಂದು ಎಲ್ಲಾ ಕಾರ್ಖಾನೆಯ ಮತ್ತು ಕಾರ್ಮಿಕರ ಪರವಾಗಿ ಅವರ ಮುಖಂಡರು ಹೇಳಿದ್ದಾರೆ. ವಿದ್ಯುಚ್ಛಕ್ತಿ ದರ ಏರಿಕೆ ವಿರುದ್ಧ ಕರೆದಿದ್ದ ಕರ್ನಾಟಕ ಬಂದ್ ಯಶಸ್ವಿಯಾಗಿದೆಯೆಂದು ಹಿಂದೂ, ಇಂಡಿಯನ್ ಎಕ್ಸ್‌ಪ್ರೆಸ್, ಪ್ರಜಾವಾಣಿ, ಕನ್ನಡಪ್ರಭ ಪತ್ರಿಕೆಗಳಲ್ಲಿ ವರದಿಯಾಗಿದೆ. ಆದರೆ, ತಾವು ಅದೇ ದಿವಸ ತುರ್ತಾಗಿ ಮಂತ್ರಿ-ಮಂಡಲದ ಸಭೆಯನ್ನು ಕರೆದು ಕರ್ನಾಟಕ ಬಂದ್ ಯಶಸ್ವಿಯಾಗದೆ ಇರುವುದರಿಂದ ವಿದ್ಯುಚ್ಛಕ್ತಿ ದರವನ್ನು ಇಳಿಸುವಂಥ ಪ್ರಸಂಗ ಉದ್ಭವವಾಗುವುದಿಲ್ಲವೆಂದು ಮಂತ್ರಿ ಮಂಡಲದ ಸಭೆಯ ನಡೆಯುವ ಮಧ್ಯದಲ್ಲೇ ತಮ್ಮ ವಕ್ತಾರರು ಹೊರಗೆ ಬಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ. ಬಸ್‌ಗಳಿಗೆ ಬೆಂಕಿ ಹಚ್ಚಿ ಲಾ ಅಂಡ್ ಆರ್ಡ್‌ರ್ ಪ್ರಾಬ್ಲವರ್ ಬಂದರೆ ಮಾತ್ರ ಬಂದ್ ಯಶಸ್ವಿಯಾಯಿತೆಂದು ತಮ್ಮ ಅಭಿಪ್ರಾಯವೇ ? ಆ ದಿವಸ ಯಾರೋ ಒಂದಿಬ್ಬರು ಅಂಗಡಿ ಬಾಗಿಲುಗಳನ್ನು ತೆರೆದಿದ್ದಿರಬಹುದು. ಆದರೆ ಇಡೀ ರಾಜ್ಯದಲ್ಲಿ ಜನರು ವಾಲೇಟೀರ್ ಆಗಿ ಬಂದ್ ಆಚರಣೆ ಮಾಡಿದ್ದಾರೆ. ಇಂಥ ಯಶಸ್ವಿ ಬಂದ್ ಆಗಿರುವಂಥ ಸಂದರ್ಭದಲ್ಲಿ ಜನರ ಭಾವನೆಗಳನ್ನು ಅರ್ಥಮಾಡಿಕೊಂಡು ಚರ್ಚೆ ಮಾಡುತ್ತೇವೆಂದು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಮುಖ್ಯಮಂತ್ರಿಗಳು ಹೇಳಬೇಕಾಗಿತ್ತು. ಅದು ಬಿಟ್ಟು ಮಂತ್ರಿ ಮಂಡಲ ಸಭೆಯಲ್ಲಿ ಯಾವುದೇ ಕಾರಣಕ್ಕೂ ವಿದ್ಯುತ್ ದರವನ್ನು ಇಳಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿರುವುದು ಪ್ರಜಾ-ತಂತ್ರ ವ್ಯವಸ್ಥೆಗೆ ಮತ್ತು ಜನರ ಅಭಿಪ್ರಾಯಕ್ಕೆ ಮಾಡಿರುವ ಅಪಚಾರವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜನರ ಜೀವನದ ಜೊತೆ ಚೆಲ್ಲಾಟವಾಡುವುದಕ್ಕೆ ಯಾರಿಗೂ ಅಧಿಕಾರವಿಲ್ಲ. ಇಂಥಾ ಕಾರಣಕ್ಕಾಗಿ ವಿದ್ಯುಚ್ಛಕ್ತಿ ದರವನ್ನು ಜಾಸ್ತಿ ಮಾಡಲೇ ಬೇಕಾಗಿದೆ ಎಂದು ಯಾರ ಜೊತೆಯಲ್ಲೂ ಚರ್ಚೆ ಮಾಡದೆ ಸರ್ಕಾರ ಮನ ಬಂದಂತೆ

ದರವನ್ನು ಹೆಚ್ಚು ಮಾಡಿರುವುದಕ್ಕೆ ನೂರಕ್ಕೆ ನೂರರಷ್ಟು ಜನರೆ ಆಕ್ರೋಶಗೊಂಡು ವಿರೋಧ ಮಾಡುತ್ತಿದ್ದಾರೆ. ಜನರಿಗೆ ಏನು ಮಾಡಬೇಕೆಂದು ತೋಚುತ್ತಿಲ್ಲ. ರಾಜಕೀಯ ಪಕ್ಷಗಳು ವಿದ್ಯುಚ್ಛಕ್ತಿ ವಿರುದ್ಧ ಹೋರಾಟ ಮಾಡುತ್ತಿರುವ ಬಗ್ಗೆ ಜನರು ನಂಬಿಕೆಯನ್ನು ಇವತ್ತಿನ ದಿವಸ ಕಳೆದುಕೊಂಡಿದ್ದಾರೆ. ಯಾವುದೋ ಚಟಕ್ಕೆ ಮತ್ತು ರಾಜಕೀಯ ವ್ಯಕ್ತಿಗಳು ಬದುಕಿದ್ದಾರೆಂದು ತೋರಿಸುವುದಕ್ಕೆ ಬಂದ್ ಮಾಡುತ್ತಿದ್ದಾರೆ ಎನ್ನುವ ಭಾವನೆ ಜನರಲ್ಲಿ ಮೂಡುತ್ತಿದೆ. ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಪ್ರತಿ ಪಕ್ಷದ ಟೀಕೆ ಮಾಡಬೇಕೆಂದೇನೂ ಇಲ್ಲ. ಸರ್ಕಾರ ಮಾಡುವ ಒಳ್ಳೆಯ ಕೆಲಸಗಳನ್ನು ಜನರಿಗೆ ಸರಿಯಾಗಿ ತಲುಪಿಸುವಂಥ ಕೆಲಸವನ್ನು ನಾವು ಮಾಡುತ್ತೇವೆ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದಂಥ ಕಾಲದಲ್ಲಿ ರೈತರ ಸಮಸ್ಯೆ ಬಂದಾಗ ಒಂದು ವಾರ ಕಾಲ ಇದೇ ಸದನದಲ್ಲಿ ಧರಣಿ ಮಾಡಿದ್ದೆವು. ಮತ್ತು ಅನೇಕ ಜಾತಾಗಳನ್ನು ರಾಜ್ಯದಲ್ಲಿ ಮಾಡಿದ್ದೇವೆ. ಇದೇ ಸನ್ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಮುಂದೂಡಿದ್ದಾಗ ನಾವು ರಾಜ್ಯಾದ್ಯಂತ ಪಾದಯಾತ್ರೆ ಮಾಡಿ ಚುನಾವಣೆಗಳನ್ನು ಮಾಡುವ ಹಾಗೆ ಒತ್ತಾಯ ತಂದೆವು. ಆ ಚುನಾವಣೆಯಲ್ಲಿ ಜನರು ನಮಗೆ ವೋಟು ಕೊಟ್ರೇನು ? ನಿಮಗೆ ವೋಟು ಕೊಟ್ಟು ಅಧಿಕಾರಕ್ಕೆ ತಮ್ಮನ್ನೇ ತಂದರು. ಅಧಿವೇಶನ ನಡೆಯುವ ಮೊದಲು ಇಡೀ ರಾಜ್ಯದ್ಯಂತ ಯಶಸ್ವಿ ಬಂದ್ ಆಗಿದ್ದರೂ ವಿದ್ಯುಚ್ಛಕ್ತಿ ದರ ಇಳಿಸುವು ಬಗ್ಗೆ ತಾವು ಗಮನ ಕೊಡಲಿಲ್ಲ. ಮೊನ್ನೆ ದಿವಸ ಮುಖ್ಯಮಂತ್ರಿಗಳು ದಾವಣಗೆರೆಯಲ್ಲಿ ಕರೆದಿದ್ದ ಅವರ ಪಕ್ಷದ ಸಮಾವೇಶದಲ್ಲಿ ಸೇರಿದ್ದ 50-60 ಸಾವಿರ ಜನರು ಈ ವಿದ್ಯುತ್‌ಚ್ಛಕ್ತಿ ದರ ಏರಿಕೆ ವಿರುದ್ಧ ಪ್ರತಿಭಟನೆ ಮಾಡಿದರೂ ಸರ್ಕಾರಕ್ಕೆ ಸದ್ಬುದ್ಧಿ ಬಂದಿಲ್ಲ. ಸರ್ಕಾರದ ಆಡಳಿತ ವೈಖರಿ, ಝೇಕಾರ ಮತ್ತು ನಡವಳಿಕೆ ಇದೆಯಲ್ಲಾ ಅದು ಶೋಭೆ ತರುವಂಥದ್ದಲ್ಲವೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ವಿದ್ಯುತ್ ದರವನ್ನು ಏರಿಸಿದರೂ ಅಕ್ಕಪಕ್ಕದ ರಾಜ್ಯಗಳಿಗೆ ಹೋಲಿಸಿ ನಮ್ಮ ರಾಜ್ಯದ ವಿದ್ಯುತ್ ದರವನ್ನು ಕಡಿಮೆ ಇದೆಯೆಂದು ಎಲ್ಲರಿಗೂ ಸಮಜಾಯಿಷಿ ಕೊಡುವುದಕ್ಕೆ ಸರ್ಕಾರ ಹೊರಟಿದೆ. ಮತ್ತು ಕಳೆಧ ಮೂರ್‍ನಾಲು ವರ್ಷಗಳಿಂದ ವಿದ್ಯುತ್ ದರವನ್ನು ಏರಿಸಿಲ್ಲವಾದ್ದರಿಂದ ವರ್ಷಕ್ಕೆ 10 ಪರ್‌ಸೆಂಟ್‌ನಂತೆ ಈಗ ಸುಮಾರು 43 ಪರ್‌ಸೆಂಟ್‌ನಷ್ಟು ಏರಿಸಬೇಕಾಗಿದೆಯೆಂದು ಸರ್ಕಾರ ಹೇಳಿದೆ. ನಾನು ಕೇಳುತ್ತೇನೆ. ದಿನಾಂಕ: 1-8-1993 ರಲ್ಲಿ 235 ಕೋಟಿ ರೂಪಾಯಿಯಷ್ಟು ಹೆಚ್ಚು ದರವನ್ನು ಏರಿಸಿದ್ದುದ ನಿಜ ತಾನೆ ? ವಿದ್ಯುಚ್ಛಕ್ತಿ ದರ ಏರಿಸುವ ಹಿಂದಿನ ದಿನ ಅಂದರೆ ದಿನಾಂಕ : 31-7-1993 ರಂದು ವಿದ್ಯುಚ್ಛಕ್ತಿ ಮಂಡಳಿ ಅಧ್ಯಕ್ಷಕರಾಗಿದ್ದ ಮಾನ್ಯ ಇರ್ನಿ ರಾಯರವರು ಈ ಏರಿಕೆಯು ಇಂದಿನಿಂದ ಎರಡು ವರ್ಷಗಳವರೆಗೆ ಜಾರಿಯಲ್ಲಿರುತ್ತದೆಂದು ಹೇಳಿದ್ದರು. ಅಂದರೆ, ದಿನಾಂಕ: 31-7-1995ರವರೆಗೆ ಯಾವುದೇ ಕಾರಣಕ್ಕೂ ದರವನ್ನು ಏರಿಸುವ ಹಾಗಿಲ್ಲ. ಅಂದ ಮೇಲೆ 31-7-1995ರ ನಂತರ ದಿನಗಳನ್ನು ಮಾತ್ರ ನೀವು ಲೆಕ್ಕಕ್ಕೆ ತೆಗೆದುಕೊಳ್ಳುಬೇಕು. ಅಂದರೆ ಒಂದು ವರ್ಷಕ್ಕೆ 10 ಪರ್‌ಸೆಂಟ್ ಮಾತ್ರ ಜಾಸ್ತಿ ಮಾಡಬೇಕಾಗಿತ್ತು. ಐ ಪಿ ಸೆಟ್‌ಗಳಿಗೆ ಪುಕ್ಕಟೆಯಾಗಿ ಕೊಡುತ್ತಿದ್ದ ವಿದ್ಯುಚ್ಛಕ್ತಿ ಮೇಲೆ ಈಗ ದರವನ್ನು ನಿಗಧಿ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಸೋಷಿಯಲಿಸ್ಟ್ ತಳಹದಿಯ ಮೇಲೆ ಬಂದಿದ್ದಾರೆ. ಅವರು ಇಂಥಾ ಕೆಲಸವನ್ನು ಮಾಡಬಹುದಾ ? ನಮ್ಮ ದೇಶದಲ್ಲಿ

ಹೈಡ್ ಬೇಸ್‌ನಿಂದ ಹೆಚ್ಚು ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವ ರಾಜ್ಯ ಇದ್ದರೆ ಅದು ಕರ್ನಾಟಕ ಮಾತ್ರ. ನಾವು ಶೇಕಡ 71 ರಷ್ಟು ವಿದ್ಯುಚ್ಛಕ್ತಿಯನ್ನು ಹೈಡಲ್ ಬೇಸ್‌ನಿಂದ ಉತ್ಪಾದಿಸುತ್ತೇವೆ. ಗುಜರಾತ್‌ನವರು ಶೇಕಡ 10, ಮಹಾರಾಷ್ಟ್ರದವರು ಶೇಕಡ 35, ಆಂಧ್ರಪ್ರದೇಶ ಶೇಕಡ 40 ತಮಿಳುನಾಡು ಶೇಕಡ 30, ಕೇರಳಾ ರಾಜ್ಯ ಶೇಕಡ 70 ರಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಲಾಗುತ್ತಿದೆ. ಥರ್ಮಲ್ ಬೇಸನಿಂದ ಕರ್ನಾಟಕದಲ್ಲಿ 25 ಪರ್‌ಸೆಂಟ್ ಗುಜರಾತ್ 90 ಪರ್‌ಸೆಂಟ್, ಮಹಾರಾಷ್ಟ್ರ 60 ಪರೆಸೆಂಟ್, ಆಂಧ್ರ ಪ್ರದೇಶ 60 ಪರ್‌ಸೆಂಟ್, ತಮಿಳುನಾಡು 70 ಪರ್‌ಸೆಂಟ್, ಕೇರಳ 30 ಪರ್‌ಸೆಂಟ್ ವಿದ್ಯುಚ್ಛಕ್ತಿ ಉತ್ಪಾನೆಯಗುತ್ತಿದೆ. ನಮ್ಮ ಕರ್ನಾಟಕದಲ್ಲಿ ಒಟ್ಟು ಉತ್ಪಾನೆಯಾಗುವ 3355 ಮೆಗಾವ್ಯಾಟ್ ವಿದ್ಯುಚ್ಛಕ್ತಿಯಲ್ಲಿ 71 ಪರ್‌ಸೆಂಟ್‌ನಷ್ಟು ಅಂದರೆ 2387 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಹೈಡಲ್ ಪ್ರಾಜೆಕ್ಟ್‌ನಿದದಿ ಉತ್ಪತ್ತಿಯಾಗುತ್ತಿದೆ. ಇನ್ನು ಉಳಿದ 840 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಥರ್ಮಲ್ ಪ್ರಾಜೆಕ್ಟ್‌ನಿಂದ ಉತ್ಪಾದನೆ ಮಾಡಲಾಗುತ್ತಿದೆ. ಜಲ ವಿದ್ಯುತ್ ಯೋಜನೆಯಿಂದ ತಯಾರಾಗುವ ವಿದ್ಯುತ್ತಿನ ಒಂದು ಯೂನಿಟ್ 60 ಪೈಸೆ ಖರ್ಚು ಬರುತ್ತದೆ. ಅಂದರೆ ಕಡಿಮೆ ಹಣದಲ್ಲಿ ಉತ್ಪಾದನೆ ಮಾಡುತ್ತಿರುವುದರಿಂದ ಅಕ್ಕ ಪಕ್ಕ ರಾಜ್ಯಗಳಿಗೆ ನಮ್ಮ ರಾಜ್ಯದ ವಿದ್ಯುಚ್ಛಕ್ತಿ ದರವನ್ನು ಏಕೆ ಹೋಲಿಕೆ ಮಾಡಬೇಕು ? ಗೃಹ ಬಳಕೆ ವಿದ್ಯುತ್ತಿಗೆ ಬೇರೆ ಬೇರೆ ರಾಜ್ಯದಲ್ಲಿ ಯಾವ ದರ ವಿಧಿಸುತ್ತಾರೆಂದು ನೋಡಿದರೆ ಆಂಧ್ರಪ್ರದೇಶದಲ್ಲಿ 70 ಪೈಸೆಯಿಂದ 215 ಪೈಸೆ, ತಮಿಳುನಾಡಿನಲ್ಲಿ 65 ಪೈಸೆಯಿಂದ 225 ಪೈಸೆ, ಮಹಾರಾಷ್ಟ್ರದಲ್ಲಿ 80 ಪೈಸೆಯಿಂದ 295 ಪೈಸೆ, ಗುಜರಾತ್‌ನಲ್ಲಿ 30 ಪೈಸೆಯಿಂದ 100 ಪೈಸೆ, ನಮ್ಮ ಕರ್ನಾಟಕದಲ್ಲಿ 80 ಪೈಸೆಯಿಂದ 150 ಪೈಸೆಯವರೆಗೆ ವಿಧಿಸಲಾಗುತ್ತಿದೆ. ಆಲ್ ಎಲೆಕ್ಟ್ರಿಕಲ್ ಹೋಷಗೆ ಆಂಧ್ರ ಪ್ರದೇಶದಲ್ಲಿ 70 ರಿಂದ 215 ಪೈಸೆ, ತಮಿಳುನಾಡಿನಲ್ಲಿ 65 ಪೈಸೆಯಿಂದ 225 ಪೈಸೆ, ಮಹಾರಾಷ್ಟ್ರದಲ್ಲಿ 60 ಪೈಸೆಯಿಂದ 295 ಪೈಸೆ, ಗುಜರಾತ್‌ನಲ್ಲಿ 30 ರಿಂದ 50 ಪೈಸೆ, ಕರ್ನಾಟಕದಲ್ಲಿ 150 ಪೈಸೆಯಿಂದ 325 ಪೈಸೆ, ಈ ರಾಷ್ಟ್ರದಲ್ಲಿ ಎ ಇ ಹೆಚ್‌ಗೆ ಹೆಚ್ಚು ಚಾರ್ಜ್ ಮಾಡುವಂಥ ಧರ್ಮರಾಯನ ರಾಜ್ಯ ಇದ್ದರೆ ಅದು ಸನ್ಮಾನ್ಯ ಜೆ.ಹೆಚ್.ಪಟೇಲರು ಮುಖ್ಯಮಂತ್ರಿಯಾಗಿರತಕ್ಕಂಥ ಕರ್ನಾಟಕ ರಾಜ್ಯ ಮಾತ್ರ ಇನ್ನು ವಾಣಿಜ್ಯಕ್ಕೆ ಸಂಬಂಧಪಟ್ಟಂತೆ ಸಣ್ಣ ಪುಟ್ಟ ಅಂಗಡಿಗಳಿಗೆ ಕರೆಂಟ್ ಚಾರ್ಜ್ ಮಾಡುವ ಬಗ್ಗೆ ಹೇಳುವುದಾದರೆ, ಆಂಧ್ರ ಪ್ರದೇಶದಲ್ಲಿ 225 ಪೈಸೆಯಿಂದ 250 ಪೈಸೆ, ತಮಿಳುನಾಡಿನಲ್ಲಿ 225 ಪೈಸೆಯಿಂದ 235 ಪೈಸೆ, ಮಹಾರಾಷ್ಟ್ರದಲ್ಲಿ 208 ಪೈಸೆಯಿಂದ 421 ಪೈಸೆ, ಗುಜರಾತ್‌ನಲ್ಲಿ 220 ಪೈಸೆ, ಕರ್ನಾಟಕದಲ್ಲಿ 425 ಪೈಸೆಯಿಂದ 450 ಪೈಸೆ, ಇದು ಸಹಾ ಜಗತ್ತಿನಲ್ಲೇ ಜಾಸ್ತಿ ಇದೆ. ಎ ಇ ಹೆಚ್ ನಲ್ಲಿ ದೇಶಕ್ಕೆ ನೀವು ಮೊದಲು ವಾಣಿಜ್ಯ ಲೈಟಿಂಗ್‌ಗೆ ದೇಶದಲ್ಲಿಯೇ ಮೊದಲು ಇದ್ದೀರಿ. ಎಲ್ ಟಿ ಕೈಗಾರಿಕೆಗಳಿಗೆ ಆಂಧ್ರಪ್ರದೇಶದಲ್ಲಿ 215 ಪೈಸೆಯಿಂದ 245 ಪೈಸೆ, ತಮಿಳುನಾಡು 230 ಪೈಸೆಯಿಂದ 280 ಪೈಸೆ, ಮಹಾರಾಷ್ಟ್ರದಲ್ಲಿ 166 ಪೈಸೆಯಿಂದ 385 ಪೈಸೆ, ಗುಜರಾತ್ 95 ಪೈಸೆಯಿಂದ 133 ಪೈಸೆ, ಕರ್ನಾಟಕ 175 ಪೈಸೆಯಿಂದ 225 ಪೈಸೆ ಮತ್ತೆ ಪ್ರತಿಯೊಂದು ಹೆಚ್‌ಪಿಗೆ 100 ಹೆಚ್‌ಪಿಗಿಂತ ಜಾಸ್ತಿಯಾದರೆ 100 ರೂಪಾಯಿ ಪ್ರತಿ ತಿಂಗಳು ಸೇರುತ್ತಾ ಹೋಗುತ್ತದೆ. ಅಂದರೆ ಇಡೀ ಕರ್ನಾಟಕ ರಾಜ್ಯದಲ್ಲಿ ಜಲವಿದ್ಯುತ್‌ನ್ನು ಶೇಕಡ 71 ರಷ್ಟು ಉತ್ಪಾದನೆ ಮಾಡಿದರೂ ಸಹ ಈ ರೀತಿ ಮನ ಬಂದಂತೆ ರೇಟ್ ಫಿಕ್ಸ್ ಮಾಡುವುದಾದರೆ ಅದಕ್ಕೆ ಅರ್ಥವೇನಿದೆ? ಮತ್ತೆ ಇದು ಯಾರಿಗೂ

ಗೊತ್ತಿಲ್ಲ. ನೀವು ಜನತೆಯೊಂದಿಗೆ ಯಾವ ರೀತಿ ಕಣ್ಣುಮುಚ್ಚಾಲೆ ಆಡುತ್ತಿದ್ದೀರಿ ಅಂದರೆ ಕೈಗಾರಿಕೆಗಳಿಗೆ 100 ಹೆಚ್‌ಪಿಗಿಂತ ಹೆಚ್ಚಿಗೆ ಇರುವವರು 50 ಹೆಚ್‌ಪಿಗಿಂತ ಮೇಲೆ ಇರುವವರು ಡಿಪಾಸಿಟ್ ರೂಪದಲ್ಲಿ ಪ್ರತಿ ತಿಂಗಳು 100 ರೂಪಾಯಿ ಕೊಡುತ್ತಾ ಹೋಗಬೇಕು. ಅದರ ದುಷ್ಪರಿಣಾಮ ಏನಾಗುತ್ತದೆ? ಯಾವ ಕಾರ್ಖಾನೆಯನ್ನು ನಡೆಸುವುದಕ್ಕೆ ಸಾಧ್ಯವಿದೆ? ಪ್ರತಿ ತಿಂಗಳು ಅದರ ಮೇಲೆ ವಿದ್ಯುತ್ ದರವನ್ನು ಕೊಟ್ಟು ಅವನು ಉದ್ಧಾರವಾಗುವುದಕ್ಕೆ ಹೇಗೆ ಸಾಧ್ಯ? ಇನ್ನು ರೈತರ ವಿದ್ಯುತ್ ಐ ಪಿ ಸೆಟ್‌ಗಳ ಬಗ್ಗೆ ಏನು ಸ್ವಾಮಿ ತಮಿಳುನಾಡಿನಲ್ಲಿ ಫ್ರಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಕೇಳಿಸಿಕೊಳ್ಳುತ್ತಿದ್ದಾರೆಂದು ತಿಳಿದುಕೊಂಡಿದ್ದೇನೆ. ದಯಮಾಡಿ ಕ್ಷಮಿಸಿ. ಇದು ರೈತರ ಗೋಳು, ತಮಗೆ ಮನವರಿಕೆ ಮಾಡಲಿಕ್ಕೆ ಸಾಧ್ಯವಾದರೆ ಅದರಿಂದ ಲಾಭವಾದೀತೇನೋ ಎಂದು ಚರ್ಚೆ ಮಾಡುತ್ತಿದ್ದೇನೆ. ಸದನದಲ್ಲಿ ನಾವು ಕಾರ್ಯಕಲಾಪ ಮಾಡುವುದಕ್ಕೆ ಬದಲು ನಾವು ಬರೀ ಇಲ್ಲಿ ನಿಮ್ಮ ವಿರುದ್ಧ ಸರ್ಕಾರದ ವಿರುದ್ಧ ರಸ್ತೆಯಲ್ಲಿ ಸುತ್ತವಂತಹ ಪರಿಸ್ಥಿತಿ ಬರಬಾರದೆಂದು ತಮ್ಮ ಗಮನಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಅಷ್ಟೇ. ರೈತರ ಐ ಪಿ ಸೆಟ್ ಬಗ್ಗೆ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ದಯಮಾಡಿ ಹೇಳಿ ಇನ್ನು ಮುಂದೆ ಸರ್ಕಾರ . . . .

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಾದ ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್‌ರವರು ಮುಖ್ಯಮಂತ್ರಿಗಳಿಗೆ ರಿಪೋರ್ಟ್ ಕೊಡುತ್ತಿದ್ದಾರೆ. ಹೆಗಡೆಯವರ ಮೀಟಿಂಗ್‌ಗೆ ಬಿಜಾಪುರಕ್ಕೆ ಎಷ್ಟು ಜನ ಹೋಗಿದ್ದರು ಧಾರವಾಡಕ್ಕೆ ಎಷ್ಟು ಹೋಗಿದ್ದರು ಯಾರ‍್ಯಾರು ಏನು ಮಾಡಿದರು ಅದನ್ನೆಲ್ಲ ಅವರು ಹೇಳುತ್ತಿದ್ದಾರೆ. ಅದನ್ನು ಅವರು ಬಹಳ ಆಳವಾಗಿ ಕೇಳುತ್ತಿದ್ದರು.

ಶ್ರೀ ಬಿ.ಎಸ್ ಯಡಿಯೂರಪ್ಪ: ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ಒಬ್ಬ ಮುಖ್ಯಮಂತ್ರಿಗಳಾಗಿ ಅವರು ಅದನ್ನೆಲ್ಲ ಕೇಳಬೇಕಾಗುತ್ತದೆ.

ಅಧ್ಯಕ್ಷರು: ತಾವು ಇಲ್ಲಿ ಕುಳಿತುಕೊಂಡಿದ್ದೀರಿ ಅವರು ಏನು ಮಾತನಾಡಿಕೊಳ್ಳುತ್ತಾರೆಂದು ನಿಮಗೆ ಗೊತ್ತಾವುದಿಲ್ಲ. ಅದು ಅವರಿಗೆ ಗೊತ್ತಾಗುತ್ತದೆ.

ಶ್ರೀ ಹೆಚ್ ಎನ್ ನಂಜೇಗೌಡ: ಅವರು ಮಾಡುವ ಕೆಲಸ ನಿಮಗೆ ಹೇಗೆ ಗೊತ್ತಾಗುತ್ತದೆ? ಅದು ಅವರಿಗೆ ಗೊತ್ತಾಗುತ್ತದೆ.

★**ಶ್ರೀ ಬಿ.ಎಸ್.ಯಡಿಯೂರಪ್ಪ :** ನೀವು ಒಂದು ಕೆಲಸ ಮಾಡಿ, ಇನ್ನು ಮುಂದೆ ರಾಜ್ಯದ ಜನರ ಮುಂದೆ ರೈತರ ಪರ ಸರ್ಕಾರ ಮಣ್ಣಿನ ಮಕ್ಕಳ ಸರ್ಕಾರ ಎಂದು ಹೇಳಬೇಡಿ. ನಾವು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳ ಪರವಾಗಿರತಕ್ಕ ಸರ್ಕಾರ. ವಿದೇಶಗಳಿಂದ ಬರತಕ್ಕ ದೊಡ್ಡ ದೊಡ್ಡ ಮಾಲೀಕರ ಪರವಾಗಿರತಕ್ಕ ಸರ್ಕಾರವೆಂದು ಹೇಳಿದರೆ ನಾವು ಇಲ್ಲಿ ಚರ್ಚೆಯನ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಜನರ ಮುಂದೆ ಹೋಗುತ್ತೇವೆ. ಮಣ್ಣಿನ ಮಕ್ಕಳ ಸರ್ಕಾರ, ರೈತರ ಸರ್ಕಾರವೆಂದು ನೀವು ಹೇಳುವವರು ನೀವು ಹೇಗಿರಬೇಕು ? ನಾನು ನಿಮ್ಮಲ್ಲಿ ಒಂದು ಡಿಮಾಂಡ್ ಮಾಡುತ್ತೇನೆ. ಹೆಮ್ಮೆ ತರುವಂತಹ ಸಂಗತಿ ನಮ್ಮ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು ನಮ್ಮ ದೇಶದ ಪ್ರಧಾನಿಮಂತ್ರಿಯಾಗಿದ್ದಾರೆ. ಕರ್ನಾಟಕ ಅನೇಕ ವಿಷಯಗಳನ್ನು ಅವರು ಅಲ್ಲಿ ಪ್ರಸ್ತಾಪ ಮಾಡುತ್ತಾರೆ. ಎಂತಹ ಇಕ್ಕಟ್ಟಿನ ಪರಿಸ್ಥಿತಿಗೆ ತಂದಿದ್ದೀರಿ ನಮ್ಮ ಪ್ರಧಾನಮಂತ್ರಿಗಳನ್ನು ಅಂದರೆ ಲೋಕಸಭೆಯಲ್ಲಿ ಮೊದಲನೆಯ ಅಧಿವೇಶನ ವಿಶ್ವಾಸಮತಗಳಿಸಿದ ಮೇಲೆ ಕರ್ನಾಟಕವನ್ನು ಒಂದು ಮಾದರಿ

ರಾಜ್ಯವನ್ನಾಗಿ ಮಾಡಿದ ಹಾಗೆ ಹಾಗೂ ಕರ್ನಾಟಕದಲ್ಲಿರುವ ಕಾರ್ಯಕ್ರಮಗಳನ್ನು ಇಡೀ ದೇಶದಲ್ಲಿ ತರಬೇಕೆಂದು ಇದ್ದೇನೆಂದು ವಿಶ್ವಾಸಮತವನ್ನು ಯಾಚನೆ ಮಾಡುವಂತಹ ಸಂದರ್ಭದಲ್ಲಿ ಈ ದೇಶದ ಪ್ರಧಾನಮಂತ್ರಿಗಳು ಕರ್ನಾಟಕದ ಹೆಮ್ಮೆ ಪುತ್ರ ಆ ಒಂದು ಮಾತನ್ನು ಹೇಳಿದ್ದಾರೆ. ಅವರ ಮಾತಿಗೆ ಧಕ್ಕೆ ಬರುವಹಾಗೆ ನಡೆದುಕೊಳ್ಳುತ್ತಿದ್ದೀರಿ. ಅವರ ಪಕ್ಷದ ಸರ್ಕಾರವೇ ಕರ್ನಾಟಕದಲ್ಲಿದೆ. ನಾಳೆ ಲೋಕಸಭೆಯಲ್ಲಿ ಇಡೀ ದೇಶದಲ್ಲಿ ಎಲ್ಲೂ ಇಲ್ಲದಿರುವಂತಹ ಒಂದು ಗಿನ್ನಿಸ್ ದಾಖಲೆಗೆ ಸೇರುವಂತಹ 43 ಪರ್‌ಸೆಂಟ್ ವಿದ್ಯುತ್ ದರವನ್ನು ಏರಿಸಿ ನಮ್ಮ ಪ್ರಧಾನಮಂತ್ರಿಗಳಿಗೆ ಕಳಂಕ ತರುವಂತ ಕೆಲಸವನ್ನು ಮಾಡುತ್ತಿದ್ದೀರಿ ಅದರ ಬಗ್ಗೆ ನಾನು ವಿವರಣೆ ಕೊಡುತ್ತಿದ್ದೆ. ಅದರೆ ಲೋಕಸಭೆಯಲ್ಲಿ ನಿಂತುಕೊಂಡು ಕರ್ನಾಟಕದ ಪರವಾಗಿ ಮತನಾಡುವುದಕ್ಕೆ ಆಗದಿರುವಂತಹ ಒಂದು ಉಸಿರು ಕಟ್ಟುವಂತಹ ಪರಿಸ್ಥಿತಿಯನ್ನು ನೀವು ನಿರ್ಮಾಣ ಮಾಡುತ್ತಿದ್ದೀರಿ. ಇದರಲ್ಲಿ ಏನಾದರೂ ತಂತ್ರವಿದೆಯೇ? ಇದು ನನಗೆ ಅನುಮಾನ ಬರುತ್ತಿದೆ. ಜನರು ಇದನ್ನು ಮಾತನಾಡುತ್ತಿದ್ದಾರೆ. ಅದಕ್ಕಾಗಿ ನಾನು ನಿಮಗೆ ಹೇಳುತ್ತಿದ್ದೇನೆ. ಈ ಚರ್ಚೆ ಪ್ರಾರಂಭವಾಗುವುದಕ್ಕೆ ಮೊದಲೇ ನೀವು ಈ ಬಗ್ಗೆ ಶ್ವೇತಪತ್ರವನ್ನು ಹೊರಡಿಸಬೇಕಾಗಿತ್ತು. ಚರ್ಚೆಗೆ ಮುಂಚೆ ನೀವು ಅಲ್ಲದೆ ಇನ್ನಾರು ಶ್ವೇತಪತ್ರವನ್ನು ಹೊರಡಿಸಬೇಕು ? ಕಳೆದ ಎರಡು ಮೂರು ವರ್ಷಗಳಲ್ಲಿ ಜನತಾ ದಳದ ಅಧಿಕಾರಕ್ಕೆ ಬಂದಮೇಲೆ ಕೆಇಬಿಯಲ್ಲಿ ಕೆಪಿಸಿಯಲ್ಲಿ ಏನೇನು ಅಭಿವೃದ್ಧಿಯಾಗಿದೆ ಏನೇನು ನೀವು ಮಾಡಿದ್ದೀರಿ. ವಿದ್ಯುತ್ ಉತ್ಪಾದನೆ ದೃಷ್ಟಿಯಿಂದ ಅದನ್ನು ವಿತರಣೆ ಮಾಡುವ ದೃಷ್ಟಿಯಿಂದ ಬೇರೆ ಬೇರೆ ದೃಷ್ಟಿಯಿಂದ ತಾವು ಏನು ಮಾಡಿದ್ದೀರಿ ಅದನ್ನೆಲ್ಲ ನೀವು ಹೇಳಬೇಕಾಗಿತ್ತು . ಒಂದು ವೈಟ್‌ಪೇಪರ್ ಇಟ್ಟಿದ್ದರೆ ಅದನ್ನು ಆಧಾರವಾಗಿಟ್ಟುಕೊಂಡು ನಾವು ಚರ್ಚೆ ಮಾಡಬಹುದಾಗಿತ್ತಲ್ಲ! ರೈತರ ಪರವಾಗಿರತಕ್ಕ ಸರ್ಕಾರವೆಂದು ಹೇಳಿದಮೇಲೆ ಇಡೀ ದೇಶದಲ್ಲಿಯೇ ಇದು ಒಂದು ಮೇಲ್ಪಂಕ್ತಿಯಾಗಿರಬೇಕಲ್ಲ! ಕೇರಳ ರಾಜ್ಯದಲ್ಲಿ ರೈತರ ಐ ಪಿ ಸೆಟ್‌ಗಳಿಗೆ ಫ್ರಿ ಆಗಿ ವಿದ್ಯುತ್ ಕೊಡುತ್ತಿದ್ದಾರೆ. ಇದು ಮಾನ್ಯ ಬೈರೇಗೌಡರಿಗೆ ಗೊತ್ತಿದೆಯೆಂದು ನಾನು ಅಂದುಕೊಂಡಿದ್ದೇನೆ. ಅದಕ್ಕಿಂತ ನಿಮಗೆ ಕಷ್ಟ ಬಂದಿದೆಯೆ? ರೈತರು ನಿಮಗೆ ವೋಟು ಕೊಡಲಿಲ್ಲ ? ರೈತರಿಗೆ ನೀವು ಹಳೆಯದನ್ನೆಲ್ಲಾ ಕ್ಷಮಿಸಿಯೆಂದು ಹೇಳಿದಿರಿ. ನಮ್ಮನ್ನು ನಂಬಲಿಕ್ಕೆ ಆಗಲಿಲ್ಲ. ನಂಬುವ ಪರಿಸ್ಥಿತಿ ಇದ್ದರೂ ನಮಗೆ ಅವರು ಓಟು ಹಾಕುತ್ತಿದ್ದರೋ ನಮ್ಮನ್ನು ಅಧಿಕಾರಕ್ಕೆ ತರುತ್ತಾರೆಂದು ಮಾನ್ಯ ಸಿಂಧ್ಯಾರವರು ಅಲ್ಲಿ ಕುಳಿತಿದ್ದಾಗ ಬಹಳ ಸಾರಿ ಹೇಳುತ್ತಿದ್ದರು. ನೀವು ಒಂದು ಸಾರಿ ಮುಖ್ಯಮಂತ್ರಿಗಳಾಗುತ್ತೀರಿ ನೋಡೋಣ ನಿಮ್ಮ ಸರ್ಕಾರ ಹೇಗಿರುತ್ತದೆಂದು ಹೇಳುತ್ತಿದ್ದರು. ನಿಮ್ಮ ಸರ್ಕಾರ ಬರಲಿಯೆಂದು ಅನ್ನುತ್ತಿದ್ದರು. ಆದರೆ ಜನ ಒಪ್ಪಲಿಲ್ಲ. ಏಕೆಂದರೆ ನಾವು ಆ ರೀತಿ ಜನರಲ್ಲಿ ವಿಶ್ವಾಸ ಮೂಡಿಸಲಿಕ್ಕೆ ಆಗಲಿಲ್ಲ. ಸಮಯ ಹಿಡಿಯುತ್ತದೆ. ಅದನ್ನು ನಾನು ಪ್ರಾಮಾಣಿಕವಾಗಿ ರೈತರನ್ನು ಉದ್ಧಾರ ಮಾಡುವವರು ಎಂದು ಹೇಳಿ ಆ ರೀತಿ ನುಡಿಯುವಂತೆ ನಡೆಯುವ ಸರ್ಕಾರವೆಂದು ಹೇಳಿ ನಂಬಿಕೊಂಡು ನಿಮ್ಮನ್ನು ಅಧಿಕಾರಕ್ಕೆ ಜನತೆ ತಂದರು. ಆ ರೈತರ ತಲೆಯ ಮೇಲೆ ನೀವು ಕಲ್ಲು ಚಪ್ಪಡಿ ಎಳೆದುಬಿಟ್ಟಿರಲ್ಲ. ಕೇರಳದಲ್ಲಿ ರೈತರ ಐ ಪಿ ಸೆಟ್‌ಗಳಿಗೆ ಫ್ರಿ ಇದೆ. ಆಂಧ್ರಪ್ರದೇಶದಲ್ಲಿ ಒಂದು ಹೆಚ್ ಪಿಗೆ 50 ರೂಪಾಯಿ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ವಿರೋಧಪಕ್ಷದ ನಾಯಕರು ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ಹೇಗಿದೆಯೆಂದು ಹೇಳಬೇಕು ?

ಶ್ರೀ ಬಿ.ಎಸ್.ಯಡಿಯೂರಪ್ಪ: ಹೇಳುತ್ತೇನೆ. ಅದಕ್ಕೂ ಬರುತ್ತೇನೆ. ಏಕೆಂದರೆ ಏನಾಗುತ್ತದೆಂದರೆ ಇವತ್ತು ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನೀನು ಅಲ್ಲಿ ಏನು ಮಾಡಿದ್ದೀಯಾ ಇಲ್ಲಿ ಏನು ಮಾಡಿದ್ದೀಯಾ ಎಂದು ಕೇಳುತ್ತಾರೆ ಅದು ನನಗೆ ಗೊತ್ತಿದೆ. ಈ ಸ್ಥಾನದಲ್ಲಿದ್ದುನಾನು ಮಾತನಾಡಬೇಕಾದರೆ ಈಗ ನಮ್ಮ ಪಾರ್ಟಿ ಎಲ್ಲಿಗೆ ಬಂದಿದೆಯೆಂದರೆ ಕೆಲವು ರಾಜ್ಯಗಳಲ್ಲಿ ನಾವು ಅಧಿಕಾರ ನಡೆಸುತ್ತಿದ್ದೇವೆ. ಕೇಂದ್ರದಲ್ಲಿಅಧಿಕೃತ ವಿರೋಧ ಪಕ್ಷವಾಗಿ ಸಿಂಗಲ್ ಲಾರ್ಜೆಸ್ಟ್ ಪಾರ್ಟಿಯಾಗಿ ಇವತ್ತು ನಾವು ಇದ್ದೇವೆ. ನಾಳೆ ದಿವಸ ಇಲ್ಲಿ ನಾನೇನಾದರೂ ಮಾತನಾಡಬೇಕಾದರೆ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಕೇವಲ ವಿದ್ಯುತ್ ದರ ಏರಿಸಿದರು ಜನರಿಂದ ತಿರುಗುಬಾಣವಾಗಿ ಗೊಂದಲವುಂಟಾಗಿ, ಜನರ ಜೀವನಕ್ಕೆ ತೊಂದರೆಯಾದರೆ ನಾನೇನು ಸಾಧನೆ ಮಾಡಿದಂತಾಗುತ್ತದೆ ? ನಾನೇನು ಹೇಳುವುದಕ್ಕೆ ಹೊರಟಿದ್ದೇನೆ ಕೊನೆಯ ಪಕ್ಷ ರೈತರ ಒಂದು ಸರ್ಕಾರವೆಂದು ಇರತಕ್ಕದ್ದು ಆ ರೀತಿ ಹೇಳಿಕೊಳ್ಳುವ ನೀವು ಕನಿಷ್ಟ ಪಕ್ಷ ರೈತರ ಬಗ್ಗೆ ಒಂದು ಕನ್ಸೇಷನ್ ಕೊಡುತ್ತಿರುವ ಬಗ್ಗೆ ನಿಮಗೆ ಹೊಟ್ಟೆಹುರಿ ಬಂತಲ್ಲ. ಅವರ ಮೇಲೆ ನಿಮ್ಮ ಕೆಂಗಣ್ಣು ಬಿತ್ತಲ್ಲ. 300 ರೂಪಾಯಿ ಒಂದು ಹೆಚ್ ಪಿಗೆ ಮಾಡುತ್ತೀರಿ. ಸನ್ಮಾನ್ಯ ಸಚಿವರಾದ ಬೈರೇಗೌಡರಿಗೆ ಕೇಳುತ್ತೆನೆ. ನೀವು ಕೋಲಾರದಿಂದ ಬಂದವರು. ನಿಮ್ಮನ್ನು ಕೋಲಾರ ಜಿಲ್ಲೆಗೆ ಹೋಗುವುದಕ್ಕೆ ಜನರು ಬಿಡುತ್ತಾರೆಯೇ ? ಐ ಪಿ ಜಿ ಸೆಟ್‌ಗಳನ್ನು ಹೆಚ್ಚು ಉಪಯೋಗಿಸಿಕೊಂಡು ಕೋಲಾರ ಜಿಲ್ಲೆಯಲ್ಲಿ ರೈತರು ಬದುಕುತ್ತಿದ್ದಾರೆ. 300 ರೂಪಾಯಿ ಒಂದು ಹೆಚ್ ಪಿಗೆ ಊರಿನ ಒಳಗಡೆ ಹೇಗೆ ಸೇರಿಸುತ್ತಾರೆ ? ನಾನಿನ್ನು ಕೋಲಾರ ಜಿಲ್ಲೆಗೆ ಪ್ರವಾಸ ಬಂದಿಲ್ಲ ನಾನು ಬರುತ್ತೇನೆ.

ಶ್ರೀ ಸಿ.ಬೈರೇಗೌಡ: ನೀವು ಬಂದರೆ ಏನೋ ಆಗಿಹೋಗಿಬಿಡುತ್ತದೆಂದು ಹೇಳುತ್ತಿದ್ದೀರಿ ಅಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಎಷ್ಟೊಂದು ಇವರ ಪ್ರಭುತ್ವ ಅಂದರೆ ರಾಜಮಹಾರಾಜರ ಕಾಲದಲ್ಲೂ ಇವರಷ್ಟು ಕಪಿಮುಷ್ಠಿಯಲ್ಲಿ ಆ ಜನರನ್ನು ಹಿಡಿದುಕೊಂಡಿರಲಿಲ್ಲ. ಆ ಶಕ್ತಿ ಇವರಿಗೆ ಇದೆ. ಮಾನ್ಯ ಬೈರೆ ಗೌಡರು, ಮಾನ್ಯ ವಾಟಾಳ್‌ನಾಗರಾಜ್‌ರವರು ನಾವು ಅವರು ಎಲ್ಲಾ ಒಟ್ಟಿಗೆ ಇದ್ದೆವು. ನಿಮ್ಮ ಶಕ್ತಿಯ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ. ಆದರೆ ತಿರುಗುಮುರುಗುವಾಗುವಂತಹ ಕಾಲ ಬಹಳ ಹತ್ತಿರ ಬರುತ್ತಿದೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರಿಗೆ ರೈತರ ವಿಚಾರದಲ್ಲಿ ಮಾತನಾಡುವುದಕ್ಕೆ ಹಕ್ಕು ಇಲ್ಲವೇ ಇಲ್ಲ. ದಯವಿಟ್ಟು ನೀವು ನಡೆದು ಬಂದಿರತಕ್ಕ ದಾರಿಯನ್ನು ಸ್ವಷ್ಟ ಅವಲೋಕನೆ ಮಾಡಿ. ಗೊಬ್ಬರದ ಬೆಲೆಯನ್ನು ಏರಿಸಿಲ್ಲ ಸ್ವಾಮಿ 1992 ನೇ ಇಸವಿಯಲ್ಲಿ ಗೊಬ್ಬರದ ಬೆಲೆಯನ್ನು ಏರಿಸಿದಾಗ ಇಡೀ ದೇಶದ ರೈತರ ತಲೆಯ ಮೇಲೆ ಬಂಡೆಯನ್ನು ಎಳೆಯತಕ್ಕ ಕೆಲಸವಾಯಿತಲ್ಲ ಆಗ ನೀವು ಲೋಕಸಭೆಯಲ್ಲಿ ಏನು ಮಾಡಿದಿರಿ ? ಏನು ಮಾಡಿದ್ದೀರಿ ಹೇಳಿ ಸ್ವಾಮಿ ? ಒಂದೆರಡು ದಿವಸ ಸುಧಾರಿಸಿ ಏನಾಗುತ್ತದೆನ್ನುವುದು ನಿಮಗೆ ಗೊತ್ತಾಗುತ್ತದೆ. ಏನು ಮಾಡಿದ್ದೀರಿ ಎನ್ನತಕ್ಕದ್ದನ್ನು ನೀವು ಜ್ಞಾನಪಕ ಇಟ್ಟುಕೊಂಡು ಮಾತನಾಡಿ. ನೀವು ಲೋಕಸಭೆಯಿಂದ ಹೊರಗಡ್ಡೆ ಹೋದಿರಿ. ಕಟ್‌ಮೋಷನ್ ಬಂದಾಗ ನೀವು ಇರಲಿಲ್ಲ. ಅದರ ಪರವಾಗಿ ನೀವು ನಿಲ್ಲಲಿಲ್ಲ. ಹೊರಗಡೆ ಹೋದಿರಿ ನೀವು. ಅವೊತ್ತಿನ ದಿವಸ ನೀವು ರೈತರ ಪರವಾಗಿ ಕೂಗು ಹಾಕಿದ್ದಿದ್ದರೆ, ರೈತರ ಪರವಾಗಿ ಕೈ

ಎತ್ತಿದ್ದರೆ ನೀವು ಹೇಳತಕ್ಕ ಮಾತಿಗೆ ಅರ್ಥವಿತ್ತು. ಅವೊತ್ತು ನೀವು ಆ ಕೆಲಸ ಮಾಡಲಿಲ್ಲ. ಇವತ್ತಿನ ದಿವಸ ರೈತರ ಬಗ್ಗೆ ಕಣ್ಣೀರು ಸುರಿಸುತ್ತಿದ್ದೀರಿ. ದಯವಿಟ್ಟು ನಿಲ್ಲಿಸಿಬಿಡಿ ಸಾಕು. ನೀವು ಕಣ್ಣೀರು ಸುರಿಸಿರತಕ್ಕದ್ದು ಸಾಕು ದಯವಿಟ್ಟು ನಿಲ್ಲಿಸಿಬಿಡಿ.

★**ಶ್ರೀ ಬಿ.ಎಸ್.ಯಡಿಯೂರಪ್ಪ:** ಮಾನ್ಯ ಬೈರೇಗೌಡರು ಸಚಿವರಿದ್ದಾರೆ. ತಾವು ಜವಾಬ್ದಾರಿ ಸ್ಥಾನದಲ್ಲಿದ್ದೀರಿ. ನಾನು ದಾಖಲೆಯನ್ನು ಕೊಡುತ್ತೇನೆ. ಆಮೇಲೆ ತಾವು ನಿಮ್ಮ ಮಾತನ್ನು ವಾಪಸು ತೆಗೆದುಕೊಳ್ಳಿ. ಫರ್ಟಿಲೈಸರ್ ವಿಷಯ ಬಂತು. ಪಾರ್ಲಿಮೆಂಟ್‌ನಲ್ಲಿ ಒಂದು ಸಬ್ ಕಮಿಟಿ ಮಾಡಿದರು. ಸನ್ಮಾನ್ಯ ಹಾಲಿ ಪ್ರಧಾನಮಂತ್ರಿಗಳು ದೇವೇಗೌಡರು ಆ ಸಮಿತಿಯ ಸದಸ್ಯರಿದ್ದರು. ಭಾರತೀಯ ಜನತಾ ಪಕ್ಷದಿಂದ ಒಬ್ಬರು ಸದಸ್ಯರು ಇದ್ದರು. ಪಾರ್ಲಿಮೆಂಟ್‌ನಲ್ಲಿ ಚರ್ಚೆ ಮಾಡುತ್ತಾ ಆ ಸಮಿತಿಯಲ್ಲಿ ಭಾರತೀಯ ಜನತಾಪಾರ್ಟಿಯ ಸದಸ್ಯರು ಕಟ್ಟು ನಿಟ್ಟಾಗಿ ಡಿಸೆಂಟ್ ನೋಟನ್ನು ಬರೆದು ಆ ಸಮಿತಿಯಲ್ಲಿ ಫರ್ಟಿಲೈಸರ್ ಬಗ್ಗೆ ಸಬ್ಸಿಡಿಯನ್ನು ಕೊಡಬೇಕೆಂದು ಹೇಳಿದಂತಹ ಸಂದರ್ಭವಿರಬಹುದು ಕಟ್ ಮೋಷನ್ ಬಂದಂತಹ ಸಂದರ್ಭವಿರಬಹುದು ನಾವು ಏನು ಹೇಳಿದ್ದೇವೆ ಅದು ರೆಕಾರ್ಡ್‌ನಲ್ಲಿದೆ ನೋಡಿ.

ನಾನು ಹೇಳುತ್ತೇನೆ: ಹಿಂದಿನ ಮಾಜಿ ಪ್ರಧಾನಿಗಳ ಅಧಿಕಾರದ ಪ್ರಶ್ನೆ ಬಂದಾಗ ಈ ಕಡೆಯಿಂದ ಆ ಕಡೆಗೆ ಹೋಗಿ ಬೆಂಬಲ ಕೊಡುವಂತಹ ಕೆಲಸ ನಾವು ಮಾಡಲಿಲ್ಲ. ಯಾರು ಮಾಡಿದರು ಏನು ಎಂದು ನಿಮ್ಮ ಪ್ರಶ್ನೆಗೆ ಉತ್ತರ ಕೊಡಬೇಕಾಗುತ್ತದೆ ನಿಮ್ಮ ಹಾಲಿ ಮುಖಂಡರು. ಪಾರ್ಲಿಮೆಂಟ್‌ನಲ್ಲಿ ನಾವು ಜವಾಬ್ದಾರಿಯಿಂದ ನಡೆದುಕೊಂಡಿದ್ದಕ್ಕೆ ಭಾರತೀಯ ಜನತಾಪಕ್ಷ 4 ಇದ್ದುದು 40 ಕ್ಕೆ ಹೋಗಿ ಇವತ್ತು ಸಿಂಗಲ್ ಲಾರ್ಜೆಸ್ಟ್ ಪಾರ್ಟಿಯಾಗಿ ಯಾರದೋ ಬೆಂಬಲದೊಂದಿಗೆ ಒಂದು ಸರ್ಕಾರ ನಡೆಸಿ ಹೆಂಗೋ ಏನೋ ಅದೆಲ್ಲ ಭಗವಂತನಿಚ್ಛೆ. ನಿಮ್ಮ ಕೊನೆಯ ಜೀವನದ ಆಸೆ. ಒಬ್ಬ ಮುಖ್ಯಮಂತ್ರಿಯಾಗಬೇಕೆಂದು ಇತ್ತು ಆಗಿದ್ದೀರಿ ಸೋಷಿಯಲಿಸ್ಟ್ ಪಾರ್ಟಿಯಲ್ಲಿ ದುಡಿದ್ದೀರಿ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಭಗವಂತನಿಚ್ಛೆ ಅಂತ ಹೇಳುತ್ತಿದ್ದಾರೆ ಹಾಗಾದರೆ ಜನರ ಇಚ್ಛೆಯಿಂದ ಪ್ರಯೋಜನವಿಲ್ಲವೇ ?

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವರು ಪ್ರತಿಯೊಂದಕ್ಕೂ ಭಗವಂತನಿಚ್ಛೆ ಎಂದುಹೇಳುತ್ತಾ ಹೋದರೆ ಏನಾಗುತ್ತದೆ ಅಧ್ಯಕ್ಷರೆ, ಸಂತ ತುಕರಾಂ ಒಂದು ಮಾತು ಹೇಳುತ್ತಾನೆ.

ಶ್ರೀ ಎಚ್.ಎನ್.ನಂಜೇಗೌಡ: ನಾನು ಯಡಿಯೂರಪ್ಪ ನವರ ಮಾತು ಒಪ್ಪುವುದಿಲ್ಲ ಏಕೆಂದರೆ ಇದೆಲ್ಲ ಕಾಂಗ್ರೆಸಿಚ್ಛೆ.

(ನಗು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಮ್ಮ ದೇಶದ ಪ್ರಧಾನಮಂತ್ರಿಗಳು ಕೂಡ ನಾನಿಲ್ಲಿ ಬಂದದ್ದು ದೈವದಿಚ್ಛೆ ಅಂತ ಹೇಳುತ್ತಾರೆ. ಇವರೂ ಭಗವಂತನಿಚ್ಛೆ ಅಂತಾರೆ ನಮ್ಮ ಕಷ್ಟ ಏನೆಂದರೆ ಸಂತ ತುಕರಾಂ ಒಂದು ಮಾತು ಹೇಳುತ್ತಾರೆ.

ಲಗ್ನ ಆಗುವುದರಿಂದ ಮಕ್ಕಳು ಹುಟುತ್ತವೆ ಎಂದರೆ ಗಂಡು ಹೆಣ್ಣು ಲಗ್ನ ಮಾಡಿಕೊಳ್ಳುತ್ತಿರಲಿಲ್ಲ, ಜನತ್ತಿನೊಳಗೆ ಅಂತ ಅದಕ್ಕಾಗಿ ಪ್ರತಿಯೊಂದಕ್ಕೂ ಅದನ್ನೇ ಹೇಳಬೇಡಿ. ಜನ ಕೂಡ ಇದ್ದಾರೆ ಜನರ ಸಪೋರ್ಟ್ ಇಲ್ಲದೆ ಯಾವುದೂ ಆಗುವುದಿಲ್ಲ.

ಶ್ರೀಬಿ.ಎಸ್.ಯಡಿಯೂರಪ್ಪ: ನಾನು ದೇವರು ಅಂತ ಹೇಳುವಾಗ ನನ್ನ ನಿಜವಾದ ದೇವರು ಅಂದರೆ ಈ ದೇಶದ ಈ ರಾಜ್ಯದ ಜನ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎಲ್ಲ ದೇವಚ್ಛೆ ಅಂತ ಹೇಳಿ ಬಿಟ್ಟರೆ ಓಟು ಕೊಟ್ಟವರ ಪರಿಸ್ಥಿತಿ ಏನು ಸ್ವಾಮಿ ?

ಅಧ್ಯಕ್ಷರು : ಬೇರೆ ವರ್ಗದ ಜನರಿಗೆ ಬೇರೆ ಅಭಿಪ್ರಾಯಗಳಿರುತ್ತವೆ, ನೀವು ಕಮ್ಯುನಿಸ್ಟರು ನಿಮಗೆ ದೇವರಲ್ಲಿ ನಂಬಿಕೆ ಇಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ದೇವರಲ್ಲಿ ನಂಬಿಕೆ ಇರುವುದು ಬೇರೆ ವೋಟ್ ಕೊಡುವುದು ಬೇರೆ. ಪ್ರಜಾಪ್ರಭುತ್ವದಲ್ಲಿ ಜನ ಅಂತಿಮವಾಗಿ ವೋಟ್‌ಕೊಟ್ಟು ಇವರಿಗೆ ಅಧಿಕಾರಕ್ಕೆ ಕೂಡಿಸಿರುವಾಗ ದೇವರ ಹೆಸರು ಹೇಳಿ ಅವನಿಂದ ನಾವು ಬಂದೆವು ಎಂದರೆ ಹೇಗೆ ? ನೋಡಿ ಪಾಪ ಇವರಿಗೆ ವಾಜಪೇಯಿಯವರು ದೇವರು ಏನು ಮಾಡುವುದು ?

(ಗೊಂದಲ)

ಪಾಪ ಇವರಿಗೆ ನರಸಿಂಹರಾಯರೇ ದೇವರಾಗುತ್ತಿದ್ದರು, ಅವರು ಸಪೋರ್ಟ್ ಕೊಡಲಿಲ್ಲ ಅದಕ್ಕೆ ಅವರು ದೇವರಾಗಲಿಲ್ಲ.

(ನಗು)

ನಿಮಗೆ ನೈತಿಕ ಹಕ್ಕಿಲ್ಲ, ಅಧಿಕಾರ ನಮಗೆ ಕೊಟ್ಟರೂ ನಮಗೆ ಬೇಡ ಎಂದು ಹೇಳಿದರು ನಾವು.

(ಗೊಂದಲ)

ಯಾರ ಜೊತೆ ಯಾರು ಸೇರಿಕೊಂಡಿದ್ದಾರೆ ಅಂತ ಜನ ಹೇಳಿಬಿಟಿದ್ದಾರೆ ಅದನ್ನು ನೀವು ಹೇಳುವ ಅವಶ್ಯಕತೆ ಇಲ್ಲ. ನೈತಿಕ ಮೌಲ್ಯಗಳ ಬಗ್ಗೆ ಮಾತನಾಡುವುದಕ್ಕೆ ಇವರಿಗೆ ಯಾರೂ ಗುತ್ತಿಗೆ ಕೊಟ್ಟಿಲ್ಲ. ಇವರ ಇತಿಹಾಸ ಬಿಟ್ಟುಬಿಟ್ಟರೆ ಗೊತ್ತಾಗುತ್ತದೆ ಯಾರಿಗೆ ನೈತಿಕ ಹಕ್ಕು ಇದೆ ಅಂತ.

(ಗೊಂದಲ)

ಶ್ರೀ ಬಿ.ಬಿ.ಶಿವಪ್ಪ: ಈ ದೇಶ ಸಂಕಟದ ಪರಿಸ್ಥಿತಿಗೆ ಸಿಕ್ಕಿದಾಗ ದೇಶಕ್ಕೆ ವಿರೋಧರಾಗಿ ನಿಂತ ಈ ಜನಕ್ಕೆ ನೈತಿಕತೆ ಬಗ್ಗೆ ಮಾತನಾಡಲು ಸ್ವಲ್ಪವೂ ಕೂಡ ಹಕ್ಕಿಲ್ಲವೆಂದು ಹೇಳುತ್ತೇನೆ.

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ . ಈಗ ಚರ್ಚೆ ಮುಂದುವರೆಯಲಿ. ಪ್ರಿಲಿಮಿನರಿ ಸಬ್‌ಮಿಶನ್ ಮಾಡುತ್ತಿದ್ದೀರಿ ಟೈಂ ಸಾಕಷ್ಟು ತೆಗೆದುಕೊಂಡಿದ್ದೀರಿ ಇವತ್ತು ನಮ್ಮ ಅಜೆಂಡದಲ್ಲಿ ಉಪಾಧ್ಯಕ್ಷ ಚುನಾವಣೆ ಇಟ್ಟುಕೊಂಡಿದ್ದೇನೆ, ಸಹಿ ಹಾಕಿರುವ ಇನ್ನೂ ಅನೇಕ ಮುಖಂಡರಿದ್ದಾರೆ ಯಾವ ವಿಷಯ ಯೋಗ್ಯವೋ ಅದನ್ನು ಪ್ರಸ್ತಾಪ ಮಾಡಿ ನೀವು.

★ಶ್ರೀ ಬಿ.ಎಸ್. ಯಡಿಯೂರಪ್ಪ : ಬೈರೇಗೌಡರೇ ನಾನು ನಿಮ್ಮ ಬಗ್ಗೆ ಮಾತನಾಡುತ್ತೇನೆ.

ನೀವು ಏಕೆ ಹಾಗೆ ಎದ್ದುನಿಂತಿರೋ ಗೊತ್ತಿಲ್ಲ, ನಾನು ತಮ್ಮ ಕೋಲಾರ ಜಿಲ್ಲೆ ಬಗ್ಗೆ ಪ್ರಸ್ತಾಪಿಸುತ್ತಿದ್ದೆ.

ಇಡೀ ರಾಜ್ಯದಲ್ಲೇ ಅತ್ಯಂತ ಹೆಚ್ಚು ಐಸಿ ಸೆಟ್ಸ್ ಇರುವ ಜಿಲ್ಲೆ ಅದು. ಹಿಂದೆ ನಾನು ನೀವೂ ವಾಟಾಳ್‌ರು ಎಲ್ಲ ಈ ಕಡೆ ಇದ್ದಾಗ ಆಗಿದ್ದು ಬೈರೇಗೌಡರೇ ಇವತ್ತಿಗೂ ನೀವು ಎಂದು ನಾನು ತಿಳಿದುಕೊಂಡಿದ್ದೇನೆ. ಸಚಿವರಾದ ಮೇಲೆ ಬದಲಾವಣೆ ಆದರೆ ನನ್ನದೇನೂ ಅಭ್ಯಂತರ ಇಲ್ಲ. ಜನ ಅದನ್ನು ತೀರ್ಮಾನ ಮಾಡಲಿ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಹಿಂದೆ ಜಂಟಿ ಸಲಹಾ ಸಮಿತಿ ಇದ್ದಾಗ ನಾಗರಾಜು ಅವರು ಅಧ್ಯಕ್ಷರಾಗಿದ್ದರು, ಆದರಲ್ಲಿ ನಾನಿದ್ದೆ ತಂಗಾ ಇದ್ದರು ತಾವು ಇದ್ದಿರಿ ಜನತಾದಳದ ಅನೇಕ ಮುಖಂಡರಿದ್ದರು ಅಲ್ಲಿ ಏನು ತೀರ್ಮಾನವಾಯಿತು ಸ್ವಾಮಿ? ನಾನು ಏನು ಹೇಳುತ್ತಿದ್ದೆ, ತಮಿಳುನಾಡಿನಲ್ಲಿ ಫ್ರಿ ಇದೆ, ಆಂಧ್ರದಲ್ಲಿ ಒನ್ ಎಚ್‌ಪಿಗೆ 50 ರೂ ಇದೆ. 31.3.94 ರಲ್ಲಿ ನಾಗರಾಜು ಅವರ ಅಧ್ಯಕ್ಷತೆಯ ಜಂಟಿ ಸಮಿತಿ ಒಂದು ವರದಿ ಕೊಟ್ಟಿದೆ. ಅದರಲ್ಲಿ ಕೇಂದ್ರದಲ್ಲಿ ಇಂದು ಸಚಿವಾರಾಗಿರುವ ಆರ್.ಎಲ್. ಜಾಲಪ್ಪನವರಿದ್ದರು. ರೈತರ ಬಗ್ಗೆ ಕಳಕಳಿ ಇರುವ ಒಬ್ಬ ಹಿರಿಯ ವ್ಯಕ್ತಿ ಅವರ ಬಗ್ಗೆ ನಮಗೆ ಗೌರವ ಇದೆ. ಮಾನ್ಯ ಬೈರೇಗೌಡರಿದ್ದರು. ನಿಮ್ಮ ಬಗ್ಗೆ ಗೌರವ ಇಟ್ಟು ಕೊಂಡಿದ್ದೆವು, ನೋಡೋಣ ನಿಮ್ಮಲ್ಲಿ ವ್ಯತ್ಯಾಸವಾಗಿದ್ದರೆ, ರೈತರ ದೃಷ್ಟಿಯಿಂದ ಬೇರೆ ದೃಷ್ಟಿಯಿಂದಲ್ಲ. ಟಿ.ಎ. ರಂಗಯ್ಯನವರು ನಿಮ್ಮ ಪಕ್ಷದವರೇ ಇದ್ದರು, ಮಾಧುಸ್ವಾಮಿ ಇದ್ದರು. ಅದರಲ್ಲಿ ಏನು ತೀರ್ಮಾನ ಮಾಡಿದ್ದರೆಂದರೆ ಯಾವುದೇ ಕಾರಣಕ್ಕೆ ಕೃಷಿ ಪಂಪ್‌ಸೆಟ್‌ಗೆ 100 ರೂ ಮಾತ್ರ ನಿಗಧಿ ಮಾಡಬೇಕು 16 ಗಂಟೆ ನಿರಂತರವಾಗಿ ವಿದ್ಯುತ್‌ನ್ನು ಸರಬರಾಜು ಮಾಡಬೇಕು ಎಂದು ಈ ತರಹದ ಷರತ್ತು ಇತ್ತು. ಎರಡನೆಯದು ದಿನಕ್ಕೆ 16 ಗಂಟೆ ವಿದ್ಯುತ್ ಸರಬರಾಜು ಮಾಡಬೇಕು. ಇವತ್ತು ಅವರು ಸಚಿವರಾಗಿದ್ದಾರೆ. ಸಚಿವಸಂಪುಟದಲ್ಲಿ ಇದು ಚರ್ಚೆಯಾಗಿದೆ, ಅವರೇ ಸಮಿತಿಯಲ್ಲಿದ್ದು ಕೊಟ್ಟ ವರದಿಗೆ ವಿರುದ್ಧವಾಗಿ ಆಡಳಿತಕ್ಕೆ ಬಂದ ಸರ್ಕಾರ ತನ್ನ ನೀತಿಯಲ್ಲಿ ಬದಲಾವಣೆ ಮಾಡಿಕೊಳ್ಳತ್ತದೆ. ಅಂದರೆ ಅದು ರೈತನಿಗೆ ಮಾಡುವಂತಹ ದ್ರೋಹವಲ್ಲವೇ ? ಎಲ್ಲರ ಬಾಯಲ್ಲಿ ಇವತ್ತು ರೈತರ ಬಗ್ಗೆ ಒಂದೇ ಮಾತು. ಸಾಮಾನ್ಯವಾಗಿ ಗೊತ್ತಿಲ್ಲದೇ ಇರುವಂತಹ ಅನೇಕ ಜನ ವಿದ್ಯಾವಂತರು ಕಂಡಾಗ ರೈತನಿಗೇಕೆ ಫ್ರೀಯಾಗಿ ಕೊಡಬೇಕು ಎಂದು ಹೇಳುತ್ತಾರೆ. ನಾನು ಹೇಳುತ್ತೇನೆ. ರೈತನ ಹತ್ತಿರ ಇವತ್ತು ಲೆವಿ ಪಡೆಯದಿದ್ದರೆ ರೈತರ ಮುಲಾಜಿನಲ್ಲಿ ಕೇಂದ್ರ ರಾಜ್ಯ ಸರಕಾರಗಳು ಇಲ್ಲದೇ ಇದ್ದರೆ ಸುಗ್ಗಿಯಲ್ಲಿ ರೈತನಿಂದ ರೈಸ್‌ಮಿಲ್‌ನಿಂದ ಲೆವಿಯನ್ನು ಪಡೆಯದಿದ್ದರೆ ಪಡಿತರ ವ್ಯವಸ್ಥೆಯಲ್ಲಿ ಬಡವರಿಗೆ ಅಕ್ಕಿ ಕೊಡುತ್ತಿದ್ದಿರೋ ? ಇದು ಕೇಂದ್ರ ಸರ್ಕಾರದ ನೀತಿಯೇ ? ರೈತರ ಯೋಜನೆ . ರೈತ ಈ ಸಮಾಜಕ್ಕೆ ಋಣ ತೀರಿಸುತ್ತಿರುವಂಥಾದ್ದು ಇದು. ಒಂದು ಟನ್ ಕಬ್ಬಿಗೆ 700- 800 ರೂಪಾಯಿ ಆಗುತ್ತದೆ. ಮೊಲ್ಯಾಸಸ್‌ನಿಂದ ಎಷ್ಟು ಲಾಭ ಬರುತ್ತದೆ ಎಂಬುದಕ್ಕೆ ನಾನು ಹೋಗವುದಿಲ್ಲ. ಒಂದು ಟನ್‌ನಲ್ಲಿ ಒಂದು ಕ್ವಿಂಟಾಲ್ ಸಕ್ಕರೆ ಆಗುತ್ತದೆ. ಮಾರ್ಕೆಟ್ಟಿನಲ್ಲಿ ಇವತ್ತು 1400- 1500 ರೂಪಾಯಿ ಇದೆ. ಯಾರ ಋಣ ? ರೈತರ ಋಣ ತಾನೇ. ಯಾವ ರೈತನಿಂದ ಈ ಋಣವನ್ನು ಪಡೆಯುತ್ತಿದ್ದೇವೋ ಈ ಅನುಕೂಲವನ್ನು ನಾವು ಮಾಡಿಕೊಳ್ಳುತ್ತಿದ್ದೆವೋ ಆ ರೈತ ಸಮುದಾಯಕ್ಕೆ ಅನುಕೂಲವಾಗುವಂತೆ ಕೃಷಿಯನ್ನು ಇಂದು ನಾವು ಕೈಗಾರಿಕೆ ಎಂದು ಪರಿಗಣಿಸುತ್ತಿಲ್ಲ. ಕೈಗಾರಿಕೆಗಳಿಗೆ ಸಿಗುವಂತಹ ಸೌಲಭ್ಯಗಳು ಸಿಗಲಿಲ್ಲ. ಪಕ್ಕದ ರಾಜ್ಯಗಳಾದ ಕೇರಳದಲ್ಲಿ ಫ್ರೀಯಾಗಿ ಕೊಡುತ್ತಿರುವ ಕಾಲದಲ್ಲಿ ಆಂಧ್ರದಲ್ಲಿ ಹೆಚ್.ಪಿ.ಗೆ 50 ರೂಪಾಯಿ ಇರುವಂತಹ ಕಾಲದಲ್ಲಿ ರೈತರ ಸರಕಾರವೆಂದು ಹೇಳುವಂಹತ ನೀವು

300 ರೂಪಾಯಿ ಎಂದು ನಿಗಧಿ ಮಾಡಿದ್ದರೆ ನಿಮಗೆ ನೈತಿಕ ಹಕ್ಕು ಏನು ಇದೆ. ಜಂಟಿ ಸಲಹಾ ಸಮಿತಿಯಲ್ಲಿ ನಿಮ್ಮ ಸಚಿವ ಸಂಪುಟದ ಸದಸ್ಯರು ಕೊಟ್ಟಂತಹ ವಿಚಾರಕ್ಕೆ ವಿರುದ್ಧವಾಗಿ ನೀವು ಹೇಗೆ ತೀರ್ಮಾನ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ನಾನು ತಮ್ಮನ್ನು ಅಂದರೆ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. 300 ರೂಪಾಯಿ ಎಂದು ನಿಗಧಿ ಮಾಡಿದ್ದೀರಿ ಏನು ಮಾಡುತ್ತೀರೋ ಮಾಡಿ. ನೋಡೋಣ. ಈ ತರಹ ಅಲ್ಲ. ನಿಮಗೆ ಗೊತ್ತಿದೆ. ಈಗಾಗಲೇ ಜಲಾಶಯಗಳಲ್ಲಿ ನೀರು ಇಲ್ಲ ವಿದ್ಯುತ್ ಕಟ್ ಮಾಡುವ ಪರಿಸ್ಥಿತಿ ಬಂದಿದೆ. ಹತ್ತು ಲಕ್ಷ ವಿದ್ಯುತ್ ಪಂಪ್‌ಸೆಟ್‌ಗಳು ಇದ್ದರೆ 5 ಲಕ್ಷ ಅದರಲ್ಲಿ ಕೆಲಸ ಮಾಡುತ್ತಿಲ್ಲ. ನಾಳೆಯಿಂದ ವಿದ್ಯುತ್ ಕಟ್ ಆಗುತ್ತಿರುವ ಕಾಲದಲ್ಲಿ ಬೇರೆ ಎಲ್ಲ ಮೀಟರುಗಳು ಇರುವ ಕಡೆ ಎಷ್ಟು ಉಪಯೋಗಿಸುತ್ತಾರೆ ಅದನ್ನು ನೋಡಿಕೊಂಡು ಕೊಡುತ್ತಾರೆ ಈಗಾಗಲೇ ರೈತ ಹೋದ ವರ್ಷದಿಂದ ಸತ್ತಿದ್ದಾನೆ. ನೀವು ಒಂದು ಸರ್ವೆ ಮಾಡಿಸಿ. ವರದಿಯನ್ನು ಸದನದ ಮುಂದಿಡಿ. ಹೋದ ವರ್ಷ 95-96 ರಲ್ಲಿ ಎಷ್ಟು ಲಕ್ಷ ಐ.ಪಿ.ಸೆಟ್ ಇತ್ತು ಎಷ್ಟಕ್ಕೆ ವಿದ್ಯುತ್ ಕೊಟ್ಟಿದ್ದೀರಿ ? ಎಷ್ಟು ಬೆಳೆ ಬೆಳೆದಿದ್ದಾರೆ ಎಂಬ ಮಾಹಿತಿ ತರಿಸಿ. ಶೇಕಡ 40 ಪರ್ಸೆಂಟ್ ವಿದ್ಯುತ್ ಉಪಯೋಗ ಮಾಡಿ ಅದರಿಂದ ನೀರನ್ನು ಎತ್ತಿ ಬೆಳೆ ಬೆಳೆದಿಲ್ಲ. ನಾಳೆ ನೀವು ಇದನ್ನು 300 ರೂಪಾಯಿಗೆ ಏರಿಸಿದ ಮೇಲೆ ರೈತ ಪಂಪ್‌ಸೆಟ್ ಓಡಿಸಲಿ ಬಿಡಲಿ ನಿಮ್ಮ ಪ್ರಕಾರ ಹತ್ತು ಲಕ್ಷ ಪಂಪ್‌ಸೆಟ್‌ಗಳ ಲೆಕ್ಕವೇನು ಇದೆ ಅದರ ಪ್ರಕಾರ ಅವನ ತಲೆ ಬೋಳಿಸಿಕೊಂಡು ಹೋಗುತ್ತದೆ. ಅವನು ಈ ದುಡ್ಡನ್ನು ಕಟ್ಟಬೇಕಾಗುತ್ತದೆ. ನೀವು ವಿದ್ಯುತ್ ಕೊಡಿ ಬಿಡಿ ಇದರ ಪರಿಣಾಮವೇನು ? ಅವನು ಮನೆ ಮಠ ಮಾರಿ ಕೊಳ್ಳಬೇಕಾಗುತ್ತದೆ. ರೈತ ಬೀದಿಪಾಲಾಗುತ್ತಾನೆ. ಈ ಪರಿಸ್ಥಿತಿಗೆ ಜನತೆಯನ್ನು ನಿಮ್ಮ ಸರಕಾರ ತಂದಿದೆ. ಈ ನಾಡಿನ ಜನರಿಗೆ ಎಷ್ಟರ ಮಟ್ಟಿಗೆ ಅನುಕೂಲ ಮಾಡಿಕೊಡುತ್ತೀರೋ, ನ್ಯಾಯ ದೊರಕಿಸಿಕೊಡುತ್ತೀರೋ ಎಂಬ ಶಂಕೆ ಇದೆ. ಎಲ್ಲದರ ಮೇಲೆ ತೆರಿಗೆ ಹಾಕಿದ್ದೀರಿ. ನಾನು ಏ.ಇ.ಹೆಚ್. ಅಂಗಡಿಗಳ ಮೇಲೆ ಹಾಕಿರುವುದರ ಬಗ್ಗೆ ಸಹ ಹೇಳಿದ್ದೇನೆ. ಬೀದಿ ದೀಪಗಳ ಮೇಲೆ ಕೂಡ ನಿಮ್ಮ ಕೆಟ್ಟ ಕಣ್ಣು ಬಿದ್ದಿದೆ. 150 ರೂಪಾಯಿ ಕಿಲೋ ವ್ಯಾಟ್‌ಗೆ ವಸೂಲು ಮಾಡುತ್ತಿದ್ದೀರಿ ಈಗ 250 ರೂಪಾಯಿ ಮಾಡಿದ್ದೀರಿ. ನಾನು ನಿಮ್ಮನ್ನು ಕೇಳುತ್ತೇನೆ. ಒಂದು ಪುರಸಭೆ, ನಗರಸಭೆ ಪಂಚಾಯಿತಿ ಇರಲಿ, ಎಲ್ಲೆಲ್ಲಿ ಬೀದಿ ದೀಪಗಳು ಇವೆ. ಆ ಹಣವನ್ನು ಕಟ್ಟಲಿಕ್ಕೆ ಆಗದೆ ಅವರು ಸಾಯುತ್ತಿದ್ದಾರೆ. ಆ ಹಣವನ್ನು ಆಕ್ಟ್ರಾಯ್ ಗ್ರ್ಯಾಂಟ್ ಮತ್ತೊಂದು ಎಂದು ಹೇಳಿ ಡಿಡಕ್ಟ್ ಮಾಡಿಕೊಳ್ಳುತ್ತಿದ್ದೀರಿ. ಹೀಗಾದರೆ ಪಂಚಾಯತಿ ವ್ಯವಸ್ಥೆ ಪುರಸಭೆ ನಗರಸಭೆಗಳು ಬಾಗಿಲು ಹಾಕಬೇಕಾಗುತ್ತದೆ. 250 ರೂಪಾಯಿ ವಸೂಲು ಮಾಡುತ್ತಿದ್ದೀರಿ. ಕಟ್ಟುನಿಟ್ಟಿನ ತೆರಿಗೆಯನ್ನು ಮನೆ ಮೇಲೆ ಹಾಕುತ್ತೀರಿ ಅದನ್ನು ಆ ಊರಿನಲ್ಲಿ ವಾಸ ಮಾಡುವ ಜನ 40 ಪರ್ಸೆಂಟ್ ವಿದ್ಯುತ್ ದರದ ಏರಿಕೆ ಅಲ್ಲದೇ ಬೀದಿ ದೀಪಕ್ಕೂ ಜಾಸ್ತಿ ಮಾಡಿದ್ದೀರಿ ಆದರ ದುಷ್ಪರಿಣಾಮ ಕೂಡ ಅವನ ಮೇಲೇ ಆಗುತ್ತದೆ. ಅವನ ಮೇಲೆ ತೆರಿಗೆ ನೀವು ಹಾಕುತ್ತೀರಿ. ಇನ್ನು ಕುಡಿಯುವ ನೀರಿನ ಹಾಹಾಕಾರ ಇದೆ. 75 ರೂಪಾಯಿ ಕಿಲೋ ವ್ಯಾಟ್‌ಗೆ ಹಾಕುತ್ತಿದ್ದರು ಈಗ ಅದನ್ನು ಪೈಸೆಗೆ ಏರಿಸಿದ್ದೀರಿ, 100 ರೂಪಾಯಿ ಕಿಲೋ ವ್ಯಾಟ್‌ಗೆ ಎಕ್ಸ್‌ಟ್ರಾ ಹಾಕುತ್ತೀರಿ. ಕುಡಿಯುವ ನೀರನ್ನು ಉಪಯೋಗಿಸುವವರೂ ಕೂಡ ದುಬಾರಿ ತೆರಿಗೆ ಕೊಡಬೇಕಾಗುತ್ತದೆ. ಇದರ ಬಗ್ಗೆ ನಾನು ವರ್ಕ್‌ಔಟ್ ಮಾಡಿದ್ದೇನೆ. ನನ್ನ ಲೆಕ್ಕದ ಪ್ರಕಾರ ಈ ವಿದ್ಯುತ್ ದರ ಏರಿಕೆಯಿಂದ ಒಬ್ಬ ಸಾಮಾನ್ಯ ಸರಕಾರಿ ನೌಕರ 2500 ದಿಂದ 3500 ರೂಪಾಯಿ ಸಂಬಳ

ತೆಗೆದುಕೊಳ್ಳುವ ಮಾಸ್ತರು, ಮಧ್ಯಮ ವರ್ಗದ ಜನ, ಇನ್ನು ಮುಂದೆ ಕನಿಷ್ಠ 350 ರೂಪಾಯಿನಿಂದ 400 ರೂಪಾಯಿ ಹೆಚ್ಚು ವಿದ್ಯುತ್ ದರದ ಭಾರವನ್ನು ಹೊರಬೇಕಾಗುತ್ತದೆ. 1120 ಎಂದು ವರ್ಷಕ್ಕೆ. ಒಟ್ಟು ವಿದ್ಯುತ್ ದರ ಎಂದು ಮಾಡುತ್ತೀರಿ ಇದನ್ನು ನಾಲ್ಕೂವರೆ ಕೋಟಿ ಜನ ಅದನ್ನು ಭರಿಸಬೇಕಾಗುತ್ತದೆ. ನಾಲ್ಕೂವರೆ ಕೋಟಿ ಜನ ಅಂದರೆ ಈಗ ಹುಟ್ಟಿರುವ ಮಗು ಮೇಲೂ 200- 300 ರೂಪಾಯಿ ತೆರಿಗೆ ಹಾಕಿದ್ದೀರಿ. ಈ ರೀತಿಯಾದರೆ ಅವರು ಕುಟುಂಬ ನಡೆಸುವುದು ಹೇಗೆ ? ಸರಕಾರದಲ್ಲಿ ತಾವು ಜವಾಬ್ದಾರಿಯುತ ಸ್ಥಾನದಲ್ಲಿ ತಂದೆ ಸ್ಥಾನದಲ್ಲಿ ತಾವು ಕುಳಿತಿದ್ದೀರಿ, ಈ ಕುಟುಂಬ ಮನೆತನ ಈ ವ್ಯವಸ್ಥೆ ಹೀಗೆ ಮುಂದುವರಿಯಬೇಕು ? ನನ್ನ ಜೊತೆ ತಾವು ಬನ್ನಿ. ತಾವೂ ಕೂಡ ಹಳ್ಳಿಯಿಂದ ಬಂದವರು ನಾನು ಕೂಡ ಹಳ್ಳಿಯಿಂದ ಬಂದಿದ್ದೇನೆ. ಒಬ್ಬ ಸಾಮಾನ್ಯ ಬಡವ ಒಂದು ತಿಂಗಳಿಗೆ 20- 30 ಕೆ.ಜಿ. ರಾಗಿ ಉಪಯೋಗಿಸುತ್ತಾನೆ ಅವನು ಹಲ್ಲರ್ ಮಿಲ್‌ಗೆ ಹೋಗಿ ಎಷ್ಟು ಕೊಡುತ್ತಿದ್ದಾನೆ. ಬೆಂಗಳೂರಿನಲ್ಲಿ ಜಾಸ್ತಿ ಇದೆ ಆದರೆ ಹಳ್ಳಿಯಲ್ಲಿ 1 ಕೆ.ಜಿ. ಹಿಟ್ಟನ್ನು ಹಲ್ಲರ್ ಮಾಡಲಿಕ್ಕೆ 1 ರೂಪಾಯಿ ಇದೆ. 20 ಕೆ.ಜಿ. ಇದ್ದರೆ 20 ರೂಪಾಯಿ ಕೊಡುತ್ತಿದ್ದ ನಾಳೆಯಿಂದ ಅವನು 10- 15 ರೂಪಾಯಿ ಜಾಸ್ತಿ ಕೊಡಬೇಕಾಗುತ್ತದೆ. ಒಬ್ಬ ಸಾಮಾನ್ಯ ಬಡವ ರೈತ ಹಿಟ್ಟು ಮಾಡಿಸುವಂತಹ ರೈತ ಮುದ್ದೆ ರೊಟ್ಟಿ ಮಾಡುವ ರೈತ 15 ರೂಪಾಯಿ ತಿಂಗಳಿಗೆ ಹೆಚ್ಚು ಕೊಡಬೇಕಾಗುತ್ತದೆ. ಬಡ ಕುಟುಂಬದ ಗತಿ ಏನು ? ತಾವು ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ಬಡ್ಜೆಟ್ ಮಂಡನೆ ಮಾಡಿದ್ದೇವೆ. ಪ್ರತಿ ವರ್ಷ ಎಲ್ಲಾ ಬಾಬ್ತುಗಳಲ್ಲಿ ಚಿಂತನೆ ತಾವು ಮಾಡಿ. ಹಣಕಾಸು ಇಲಾಖೆಯ ಜೊತೆ ಚಿಂತನೆ ಮಾಡಿ ತೆರಿಗೆಯನ್ನು ಹಾಕುವ ಪರಿ ಪಾಠ ಇದೆ. ಕಳೆದ ಹತ್ತು ವರ್ಷಗಳ ಅಂಕಿ ಅಂಶವನ್ನು ನಾನು ತಮಗೆ ಕೊಡುತ್ತೇನೆ. ಅದರಲ್ಲಿ ಸೇಲ್ಸ್ ಟ್ಯಾಕ್ಸ್, ಎಂಟ್ರಿ ತೆರಿಗೆ ಸ್ಟ್ಯಾಂಪ್ ಡ್ಯೂಟಿ ಹೀಗೆ ಎಲ್ಲ ರೀತಿ ತೆರಿಗೆಯನ್ನು ಹಾಕುತ್ತೀರಿ. ಅದು ಜನರಿಗೆ ಒಂದು ಶಾಪ ಇರಬಹುದು. ನಿಜವಾಗಲೂ ಈ ಸರಕಾರದ ಸ್ಥಿತಿ ಮಾನ್ಯ ಮಂತ್ರಿಗಳ ಸ್ಥಿತಿ, ರೈತನ ದೃಷ್ಟಿಯಿಂದ ಕತ್ತಲೆ ಸ್ವಂತ ದೃಷ್ಟಿಯಿಂದ ಬೆಳಕಿನ ಬಗ್ಗೆ ಚಿಂತನೆ ಇದು ಇವರ ಗುರುತು ಎಂದು ನಾನು ಅಂದು ಕೊಂಡಿದ್ದೇಂಎ.

1986-87 ರಿಂದ 95-96 ರವರೆಗೆ 10 ವರ್ಷಗಳಲ್ಲಿ, ಈ ವರ್ಷದಲ್ಲಿ ಓಟ್ ಆನ್ ಅಕೌಂಟ್ ಆಗಿದೆ ‘ ಈಗ ಮುಂದೆ ಆಗಬೇಕಾಗಿದೆ. ಒಟ್ಟು 10 ವರ್ಷಗಳಲ್ಲಿ ಹಾಕಿರುವ ತೆರಿಗೆ 848 ಕೋಟಿ 20 ಲಕ್ಷ. ಇದು ಹತ್ತು ವರ್ಷಕ್ಕೆ ಹಾಕಿರುವ ತೆರಿಗೆ. ಆದರೆ ಒಂದೇ ಬಾರಿಗೆ 9 ತಿಂಗಳಿಗೆ 875 ಕೋಟಿ ನೀವು ತೆರಿಗೆ ಹಾಕಿದ್ದೀರಿ . ಮಾನ್ಯ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಾಗ 40 ಕೋಟಿ 41 ಲಕ್ಷ ತೆರಿಗೆ ಹಾಕಿದ್ದರು. 1987-88 ರಲ್ಲಿ ಹೆಗಡೆಯವರೇ ಮುಖ್ಯಮಂತ್ರಿಗಳಾಗಿದ್ದಾಗ 145 ಕೋಟಿ 54 ಲಕ್ಷ ಆಯಿತು. 1988-89 ರಲ್ಲಿ 28 ಕೋಟಿ 68 ಲಕ್ಷ 1989-90 ರಲ್ಲಿ 30 ಕೋಟಿ 1990-91 ರಲ್ಲಿ ಮಾನ್ಯ ಬಂಗಾರಪ್ಪನವರಿದ್ದಾಗ ಅತ್ಯಂತ ಕಡಿಮೆ 10 ಕೋಟಿ 16 ಲಕ್ಷ ಹಾಕಿದ್ದಾರೆ ಇನ್ನೊಮ್ಮೆ ಅತಿ ಹೆಚ್ಚು ಮಾಡಿದರು. 92-93 ರಲ್ಲಿ 244 ಕೋಟಿ 84 ಲಕ್ಷ ಹಾಕಿದರು. ಮಾನ್ಯ ಮೊಯಿಲಿಯವರು ಮುಖ್ಯ ಮಂತ್ರಿಗಳಾಗಿದ್ದಾಗ 1992-93 ರಲ್ಲಿ 43 ಕೋಟಿ 63 ಲಕ್ಷ ಹಾಕಿದರು. 1993-94 ರಲ್ಲಿ 60 ಕೋಟಿ 13 ಲಕ್ಷ ಹಾಕಿದರು. 1994-95 ರಲ್ಲಿ ಮಾನ್ಯ ಸಿದ್ಧರಾಮಯ್ಯನವರು ಹಣಕಾಸು ಸಚಿವರಾಗಿದ್ದಾಗ 244 ಕೋಟಿ 85 ಲಕ್ಷ ಹಾಕಿದರು. ಒಟ್ಟು ಹತ್ತು ವರ್ಷಕ್ಕೆ ಆಗಿರುವ ತೆರಿಗೆ ಸೇಲ್ಸ್ ಟ್ಯಾಕ್ಸ್, ಸ್ಟ್ಯಾಂಪ್ ಡ್ಯೂಟಿ ಎಂಟ್ರಿ ತೆರಿಗೆ ಎಲ್ಲಾ ಸೇರಿ ಬರೀ 848 ಕೋಟಿ 28 ಲಕ್ಷ ಆದರೆ ಈಗಿನ ಮಾನ್ಯ ಮಂತ್ರಿಗಳು 9 ತಿಂಗಳಲ್ಲಿ

ಒಂದೇ ಬಾಬಿನಲ್ಲಿ 875 ಕೋಟಿ ತೆರಿಗೆ ಹಾಕಿದ್ದಾರೆ. ಇದನ್ನು ದೇಶದ ಇತಿಹಾಸದಲ್ಲಿ ಬರೆಯಬೇಕಾಗುತ್ತದೆ. ಗಿನ್ನಿಸ್ ಪುಸ್ತಕದಲ್ಲಿ ಇದನ್ನು ದಾಖಲೆಗೆ ಸೇರಿಸಬೇಕಾಗುತ್ತದೆ. ದೇಶದ ಇತಿಹಾಸದಲ್ಲಿ ನಿಮ್ಮ ಹೆಸರನ್ನು ಬರೆಯಬೇಕಾಗುತ್ತದೆ. ಈ ರೀತಿ ವಿದ್ಯುತ್ ದರವನ್ನು ಏರಿಸುವ ಪ್ರಯತ್ನ ಮಾಡಿದ್ದೀರಿ. ನಾನು ಪ್ರಾರಂಭದಲ್ಲೇ ಹೇಳಿದೆ. ಮಾಜಿ ಮುಖ್ಯ ಮಂತ್ರಿಗಳು ನಾನು ಅವರ ಹೆಸರನ್ನು ಇಲ್ಲಿ ಹೇಳಲು ಹೋಗುವುದಿಲ್ಲ. ಅವರು ಹೇಗೆ ನಡೆದುಕೊಂಡರು ಇದೇ ಮುಖ್ಯ ಮಂತ್ರಿಗಳು ಆಗ ಉಪ ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ವಿದ್ಯುತ್ ದರವನ್ನು ಏರಿಸುವ ಸಂದರ್ಭ ಬಂದಾಗ ಅವರೇನು ಹೇಳಿದ್ದರು ಎಂದು ಹೇಳುತ್ತೇನೆ.

'' ಕೆ.ಇ.ಬಿ.ಯ ಖಾಸಗೀಕರಣ- ದೇವೇಗೌಡರ ಎಚ್ಚರಿಕೆ '' ಬೆಂಗಳೂರು ಮೇ 9 ಇದು ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ. ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್, ಹಿಂದೂ ಎಲ್ಲದರಲ್ಲಿ ಬಂದಿದೆ. ''ರಾಜ್ಯದಲ್ಲಿ ವಾರ್ಷಿಕ 500 ಮೆಗಾವ್ಯಾಟಿಗೆ ಕಡಿಮೆ ಇಲ್ಲದಷ್ಟು ವಿದ್ಯುತ್ ಕಳವಾಗುತ್ತಿದೆ ಎಂಬ ಆತಂಕಕಾರಿ ಅಂಶವನ್ನು ಬಹಿರಂಗಪಡಿಸಿದ ಮುಖ್ಯಮಂತ್ರಿ ದೇವೇಗೌಡರು ಇದಕ್ಕೆ ಕಾರಣವಾಗಿರುವ ವಿದ್ಯುತ್ ಮಂಡಲಿಯ ಕಾರ್ಯಶೈಲಿಯನ್ನು ಸುಧಾರಿಸದೇ ಹೋದರೆ ಅದನ್ನು ಖಾಸಗೀಕರಣಗೊಳಿಸುವುದು ಅನಿವಾರ್ಯವಾದೀತು ಎಂದು ಎಚ್ಚರಿಸಿದರು.'' ''ಕೆಲವು ಕೈಗಾರಿಕೋದ್ಯಮಿಗಳು ಕೆಲವು ಪ್ರಭಾವಶಾಲಿಗಳು ಕೆ.ಇ.ಬಿ. ಅಧಿಕಾರಿಗಳು ಮತ್ತು ಇತರೆ ನೌಕರರ ಶಾಮೀಲಿನೊಂದಿಗೆ ಈ ಆಚಾರ ವಿದ್ಯುತ್ ಅನ್ನು ಕಳುವು ಮಾಡುತ್ತಿದ್ದಾರೆಂಬುದು ನನ್ನ ಗಮನಕ್ಕೆ ಬಂದಿದ್ದು ದಿಗ್ಭ್ರಮೆ ಉಂಟು ಮಾಡಿದೆ ಎಂದು ಅವರು ದೆಹಲಿಯಿಂದ ಹಿಂತಿರುಗಿ ಬಂದ ತಕ್ಷಣ ಹೇಳಿದರು.'' ಎಂದು ಹೇಳಿ ಬಂದಿದೆ. ಎಲ್ಲವನ್ನು ನಾನು ಓದುವುದಿಲ್ಲ. ''ಯಾವುದಕ್ಕೂ ಮಿತಿ ಇದೆ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಅವರು ವಿದ್ಯುತ್ ಕಳುವಿಗೆ ಕಾರಣವಾಗಿರುವ ಅಧಿಕಾರಿಗಳು ಮತ್ತು ಉದ್ಯಮಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವುದು ಸಾಧ್ಯವೇ ಎನ್ನುವುದನ್ನು ಕಾನೂನು ಪೂರ್ವ ಪರದ ಹಿನ್ನೆಲೆಯಲ್ಲಿ ಪರಿಶೀಲಿಸುವುದಕ್ಕೆ ಕೆ.ಇ.ಬಿ. ಅಧ್ಯಕ್ಷರಾದ ಶ್ರೀ ಇರ್ನಿರಾಯರಿಗೆ ತಿಳಿಸಿದ್ದೇನೆಂದು ಹೇಳಿದರು. ಕೆ.ಇ.ಬಿ.ಯ ತಪ್ಪು ಮತ್ತು ದೋಷಕ್ಕಾಗಿ ಜನಸಾಮಾನ್ಯರನ್ನು ಬಲಿ ಪಶು ಮಾಡಲು ನಾನಂತೂ ಸಿದ್ಧನಿಲ್ಲ. '' ಇದಕ್ಕಿಂತ ಇನ್ನೇನು ಬೇಕು. ? ಬಹಳ ಸ್ಪಷ್ಟವಾಗಿ ಕರ್ನಾಟಕದಲ್ಲಿ 500 ಮೆಗಾವ್ಯಾಟ್ ವಿದ್ಯುತ್‌ನ್ನು ಉನ್ನತ ಕೆ.ಇ.ಬಿ. ಅಧಿಕಾರಿಗಳು ದೊಡ್ಡ ಕಾರ್ಖಾನೆ ಮಾಲೀಕರು ಶಾಮೀಲಾಗಿ ಲೂಟಿಯಗುತ್ತಿದೆ ಎಂದು ಹೇಳಿದರೆ ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ನಿಮ್ಮ ಇವತ್ತಿನ ವೆಚ್ಚ, ಅಂದಾಜಿನ ಪ್ರಕಾರ ಎರಡು ಸಾವಿರ ಕೋಟಿಯಾಯಿತು. ಬೇಡ ಒಂದು ಸಾವಿರಕೋಟಿಯನ್ನೇ ಇಟ್ಟುಕೊಳ್ಳಿ. ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಾಲಿ ಪ್ರಧಾನಿಗಳು ಸ್ಪಷ್ಟವಾಗಿ ಕೆ.ಇ.ಬಿ.ಯನ್ನು ಏತಕ್ಕೆ ಕಟ್ಟಿಕೊಂಡಿದ್ದೀರಿ ? ನಾನೊಂದು ಉದಾರಣೆಯನ್ನು ಕೊಡುತ್ತೇನೆ. ಬೆಂಗಳೂರು ನಗರ, ಅಥವಾ ಹುಬ್ಬಳ್ಳಿ, ಅಥವಾ ಬೆಳಗಾಂ ಆಯ್ಕೆ ಮಾಡಿಕೊಳ್ಳಿ ನಿಮಗೆ ಲೆಕ್ಕ ಸಿಗುತ್ತದೆ. ಎಷ್ಟು ವಿದ್ಯುತ್ ಬರುತ್ತದೆ ಎನ್ನುವುದಕ್ಕೆ ರೆಕಾರ್ಡ್ ನೋಡಿ ಡಿಸ್ಟ್ರಿಬ್ಯೂಷನ್ ಎಷ್ಟು ಆಗುತ್ತದೆ ಎಂದು ಯೋಚನೆ ಮಾಡಿ. ಎಷ್ಟು ಕಳುವು ಆಗುತ್ತದೆ ಎಂದು ನಿಮಗೆ ಅರ್ಥವಾಗುತ್ತದೆ. ಒಂದೇ ದಿವಸದಲ್ಲಿ ಎಷ್ಟು ವಿದ್ಯುತ್ ಕಳುವು ಆಗಿದೆ ಎನ್ನುವುದನ್ನು ಹುಡುಕುವುದಕ್ಕೆ ಹೋದಾಗ ಎಷ್ಟು ಪ್ರಮಾಣದಲ್ಲಿ ಲೂಟಿಯಾಗಿರುವುದು ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು :- ಮಾನ್ಯ ಯಡಿಯೂರಪ್ಪನವರೇ, ಪ್ರಿಲಿಮಿನರಿ ಸಬ್‌ಮಿಷನ್ ಮಾಡಿಬಿಡಿ. ಡಿಟೇಲ್ಸ್ ಎಲ್ಲಾ ಆಮೇಲೆ ನೋಡೋಣ.

★ಶ್ರೀ ಬಿ.ಎಸ್.ಯಡಿಯೂರಪ್ಪ:- ತಮ್ಮ ಮೇಲೆ ವಿಶ್ವಾಸ ಇದೆ. ದೀರ್ಘ ಚರ್ಚೆಗೆ ಅವಕಾಶ ಕೊಟ್ಟರೆ ಆಮೇಲೆ ಬರುತ್ತೇನೆ. ಮುಗಿಸಿಬಿಡುತ್ತೇನೆ. ತಾವು ಸಾಕಷ್ಟು ಸಮಯವನ್ನು ಕೊಟ್ಟಿದ್ದೀರಿ, ಮುಗಿಸುತ್ತೇನೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಸನ್ಮಾನ್ಯ ಮಾಜಿ ಮುಖ್ಯ ಮಂತ್ರಿಗಳು ಹಾಲಿ ಪ್ರಧಾನಿಯವರು ಬಹಳ ನೊಂದು ಕೆ.ಇ.ಬಿ.ಯಲ್ಲಿ ಅವ್ಯವಹಾರ ನಡೆಯುತ್ತಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. you please come out with details. ನೀವು ರಿಪ್ಲೈ ಕೊಡುವ ಕಾಲದಲ್ಲಿ ಎಲ್ಲೋ ಒಂದೆರಡು ಕಡೆ ರೆಡ್ ಮಾಡಿದ್ದೀರಿ. '' ವಿದ್ಯುತ್ ದರದ ಹೆಚ್ಚಳ ಕುರಿತು ಇನ್ನೆರೆಡು ವಾರದಲ್ಲಿ ತೀರ್ಮಾನ ತೆಗೆದುಕೊಳ್ಳುವ ಇಂಗಿತವನ್ನು ಅವರು ಈ ಸಂದರ್ಭದಲ್ಲಿ ವ್ಯಕ್ತಪಡಿಸಿದರು. ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುನ್ನ ಸರ್ವಪಕ್ಷಗಳ ಸಭೆಯನ್ನು ಕರೆದು ಸಮಾಲೋಚನೆ ನಡೆಸಲಾಗುವುದು. ಗೃಹ ಬಳಕೆ ವಿದ್ಯುತ್ ದರವನ್ನು ಹೆಚ್ಚಿಸುವುದಾದರೂ ಅದರಿಂದ ಜನಸಾಮಾನ್ಯರಿಗೆ ಹೆಚ್ಚಿನ ಹೊರೆಯಾಗದಂತೆ ನೋಡಿಕೊಳ್ಳಲಾಗುವುದು. ಕೃಷಿ ನೀರಾವರಿ ಪಂಪುಸೆಟ್ಟುಗಳ ಮೇಲೆ ಸಾಂಕೇತಿಕವಾಗಿ ದರ ವಿಧಿಸುವುದನ್ನು ಸರ್ಕಾರ ಪರಿಶೀಲಿಸುತ್ತದೆ. '' ಒಬ್ಬರು ಜವಾಬ್ದಾರಿ ಸ್ಥಾನದಲ್ಲಿ ಇದ್ದಂಥವರು ರಾಜ್ಯದ ಒಬ್ಬ ಪ್ರತಿನಿಧಿ ದೇಶದ ಪ್ರಧಾನಿಯಾಗಿರುವಂಥ ಕಾಲದಲ್ಲಿ ಅವರು ಏನು ಹೇಳಿದರು ಈ ರಾಜ್ಯದಲ್ಲಿ, ಏನು ಕಳುವು ಆಗುತ್ತಿತ್ತು, ಏನು ಅವ್ಯವಹಾರ ನಡೆಯುತ್ತಿತ್ತು, ಏತಕ್ಕೆ ಈ ಕೆ.ಇ.ಬಿ. ಬಗ್ಗೆ ನಿಮಗೆ ವ್ಯಾಮೋಹ? ಏತಕ್ಕೆ ಲೂಟಿ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ? ಇದರ ಬಗ್ಗೆ ಸಹ ತಾವು ಸೀರಿಯಸ್ ಆಗಿ ಯೋಚನೆ ಮಾಡಬೇಕಾಗಿದೆ. ಎಷ್ಟು ನೀಡಿದಿರಿ? ಎಷ್ಟು ನಿಮಗೆ ಜಾಸ್ತಿಯಾಯಿತು? ಇಷ್ಟೊಂದು ರೀತಿಯಲ್ಲಿ ಕೆಇಬಿ ಲುಕ್ಸಾನು ಆಗುತ್ತದೆ ಎನುವುದಕ್ಕೆ ಕಾರಣವೇನು? ಕಡಿಮೆ ದರದಲ್ಲಿ ಕರ್ನಾಟಕ ಪವರ್ ಕಾರ್ಪೊರೇಷನ್ ವಿದ್ಯುತ್‌ನ್ನು ಪಡೆದು ಅದು ಲಾಸ್‌ನಲ್ಲಿ ನಡೆಯುತ್ತದೆ ಎನ್ನುವುದಾದರೆ ಎಲ್ಲೋ ತಪ್ಪಿ ನಡೆಯುತ್ತಿರಬೇಕು, ಎಲ್ಲೋ ಲೂಟಿ ಆಗುತ್ತಿರಬೇಕಲ್ಲ ಅದನ್ನು ಪತ್ತೆ ಹಚ್ಚಬೇಕೆಂದು ನಿಮ್ಮ ಕಡೆ ಏನು ಪ್ರಾಮಾಣಿಕ ಪ್ರಯತ್ನ ಇದೆ? ಕೆಪಿಸಿ ಯವರು ಹೇಳುತ್ತಿದ್ದಾರೆ. ನಾವೇ ವಿದ್ಯುತ್ ಸರಬರಾಜು ಮಾಡುತ್ತೇವೆ ಎಂದು ಕೊಡಿ ಅವರಿಗೆ. ಅಥವಾ ಎರಡು-ಮೂರು ಜಿಲ್ಲೆಗಳನ್ನಾದರೂ ಖಾಸಗಿಯವರಿಗೆ ಕೊಡಿ. ವಿದ್ಯುತ್ ವಿದ್ಯುತ್ ಇಷ್ಟು ಬರುತ್ತದೆ. ವಿತರಣೆ ಮಾಡುವ ಜವಾಬ್ದಾರಿ ಎಂದು ಹೇಳಿ ಕೊಡಿ. ಗೊತ್ತಾಗುತ್ತದೆ. ನಿಮಗೆ ಲೆಕ್ಕ ಸಿಗುತ್ತದೆ. ಒಂದು ವರ್ಷದ ಮಟ್ಟಿಗೆ ಎರಡು ವರ್ಷದ ಮಟ್ಟಿಗೆ ಇದನ್ನು ಎಕ್ಸಿಪೆರಿಮೆಂಟ್ ಮಾಡಿ. ಅಥವಾ ನಿಮಗೇನಾದರೂ ವಿಶ್ವಾಸವಿದ್ದರೆ ನಿಮಗೊಂದು ಹೇಳುತ್ತೇನೆ. ಅನುಭವದ ಮೇಲೆ ಹೇಳುತ್ತೇನೆ. ಎಲ್ಲರ ಜೊತೆ ಚರ್ಚೆ ಮಾಡಿ ಹೇಳುತ್ತೇನೆ. ಸ್ವಾಮಿ ನನಗೆ ಗೊತ್ತಿದೆ, ಈ ಇಲಾಖೆಯನ್ನು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಸರಿ ಮಾಡಲಿಕ್ಕೆ ಆಗದೇ ಇರುವ ಕೆಲಸ ಎಂದು ನೀವು ಮಾಡುವುದಕ್ಕೆ ಸಾಧ್ಯವೇ? ಒಂದು ವರ್ಷ ಈ ಕಡೆ ಇರುವ ವಿರೋಧ ಪಕ್ಷದವರಿಗೆ ವಹಿಸಿಕೊಡಿ ನಿಮ್ಮ ಕೆಇಬಿ ಮತ್ತು ಪವರ್ ಕಾರ್ಪೊರೇಷನ್‌ನ್ನು ಹತ್ತು ಪರ್‌ಸೆಂಟ್ ಏರಿಸಿ ವಿತ್‌ಔಟ್ ಎನಿ ಲಾಸ್, ಪ್ರಾಫಿಟ್ ಇಲ್ಲದಂತೆ ಎಲ್ಲಾ ಸರಿಸಮಾನವಾಗಿ ಸರಬರಾಜು ಮಾಡುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ ಬಿಡುತ್ತೀರಾ? ನಿಮಗೆ ಆಗುವುದಿಲ್ಲ. ನಾವು ಮಾಡಿ ತೋರಿಸುತ್ತೇವೆ. ಹತ್ತು ಪರ್‌ಸೆಂಟ್

ಮಾತ್ರ ವಿದ್ಯುತ್ ದರ ಏರಿಸಿ ರೈತನ ಐಪಿ ಸೆಟ್‌ಗಳಿಗೆ ಕೇವಲ ನೂರು ರೂಪಾಯಿಯನ್ನು ಹಾಕಿ ಇನ್ನಾವುದೇ ರೀತಿ ಪರ್ ಹೆಚ್ ಪಿ ಗೆ ಹೆಚ್ಚಿನ ದರವನ್ನು ಹಾಕದೆ ನಾವು ಲಾಭದಾಯಕವಾಗಿ ಮಾಡಿ ತೋರಿಸುತ್ತೇವೆ. ಸೋರಿ ಹೋಗುವುದನ್ನು ನಾವು ನಿಮ್ಮ ಹತ್ತಿರ ಕುಳಿತು ಚರ್ಚೆ ಮಾಡೋಣ ಎಲ್ಲೆಲ್ಲಿ ಹೋಗುತ್ತದೆ ಎಂದು ಹೇಳುತ್ತೇವೆ. ಇಲ್ಲಿಯೇ ಇದೆಯಲ್ಲ ಉದಾಹರಣೆ. ಇದಕ್ಕಿಂತ ನಿಮಗೆ ಇನ್ನೇನು ಬೇಕು ? ವಿದ್ಯುತ್ ಕಳುವು ಪತ್ತೆ ಹತ್ತು ಕೋಟಿ ಅಧಿಕ ಆದಾಯ ನಿರೀಕ್ಷೆ. '' ಜಾಗೃತ ದಳದ ಕ್ರಮಗಳಿಂದಾಗಿ ಸಪ್ಟೆಂಬರ್ ತಿಂಗಳಲ್ಲಿ ಬೆಂಗಳೂರು ವೃತ್ತ ಒಂದರಲ್ಲೇ ವಿದ್ಯುತ್ ಮಂಡಲಿಗೆ 9 ಕೋಟಿ ಹತ್ತು ಲಕ್ಷ ರೂಪಾಯಿಗಳ ಹೆಚ್ಚಿನ ಆದಾಯ ಬಂದಿದೆ ಎಂದು ಕೆಇಬಿ ಜಾಗೃತ ದಳದ ಮುಖ್ಯಸ್ಥ ವೈ.ಆರ್.ಪಾಟೀಲ್ ಹೇಳಿದರು. '' '' ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು ಜಾಗೃತ ದಳವು ನವೆಂಬರ್ ತಿಂಗಳಲ್ಲಿ 50 ಲಕ್ಷ ಯೂನಿಟ್ ವಿದ್ಯುತ್ ಕಳುವು ಆಗುತ್ತಿದ್ದುದನ್ನು ಪತ್ತೆ ಹಚ್ಚಿದೆ. ವಿದ್ಯುತ್ ಕಳುವನ್ನು ತಪ್ಪಿಸಲು ಕೆಲವು ಕ್ರಮಗಳನ್ನು ತೆಗೆದುಕೊಂಡಿರುವುದರಿಂದ ಮುಂದೆ ಪ್ರತಿ ತಿಂಗಳು ಮಂಡಲಿಗೆ ಹತ್ತು ಕೋಟಿ ರೂಪಾಯಿ ಹೆಚ್ಚಿನ ಆದಾಯ ಬರಲಿದೆ ನವೆಂಬರ್ ತಿಂಗಳಲ್ಲಿ ದಳವು 32 ದೊಡ್ಡ ಪ್ರಮಾಣದ ಕೈಗಾರಿಕೆಗಳನ್ನು ಹಾಗೂ 1997 ಇನ್ನಿತರ ಬಳಕೆದಾರರನ್ನು ಪರೀಕ್ಷಿಸಿ 342 ಪ್ರಕರಣಗಳನ್ನು ದಾಖಲು ಮಾಡಿಕೊಂಡಿದೆ. ಈ ಅವಧಿಯಲ್ಲಿ 78 ಲಕ್ಷ ರೂಪಾಯಿಗಳ ದಂಡವನ್ನು ವಸೂಲು ಮಾಡಲಾಗಿದೆ.'' ''ಕೇವಲ 300 ರೂಪಾಯಿಗೆ ಕಾಮಾಕ್ಷಿಪಾಳ್ಯದಲ್ಲಿರುವ ಕಾರ್ಖಾನೆಯೊಂದರ ವಿದ್ಯುತ್ ಮೀಟರ್ ಹಿಂದೆ ತಿರುಗಿಸುವ ಕಾರ್ಯ ಮಾಡುತ್ತಿದ್ದ ಮಂಡಲಿಯ ನೌಕರರನ್ನು ಸಸ್ಪೆಂಡ್ ಮಾಡಲಾಗಿದೆ.'' ಇಲ್ಲಿ ಪೇಪರ್ ಕಟಿಂಗ್ ಇದೆ. ಪೀಣ್ಯದಲ್ಲಿ ಅಧಿಕಾರಿಗಳು ಆ ಪುಸ್ತಕವನ್ನೇ ಬೆಂಕಿ ಹಾಕಿ ಸುಟ್ಟು ಹರಿದು ಹಾಕಿದ್ದಾರೆ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಗೊತ್ತಿಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ವಿದ್ಯುತ್ ಕಳವು ಆಗುತ್ತಿದೆ ಅದನ್ನು ತಪ್ಪಿಸುವುದಕ್ಕೆ ನೀವೇನೂ ಪ್ರಯತ್ನ ಮಾಡಲಿಲ್ಲ. ವಿಧಾನಮಂಡಲದಿಂದ ಉತ್ತರವನ್ನು ನೀವು ಕೊಟ್ಟಿದ್ದೀರಿ. ನಿಮ್ಮದೇ ಉತ್ತರ.'' 10 ಲಕ್ಷರೂಪಾಯಿಗಳಿಗಿಂತ ಹೆಚ್ಚಿನ ಬಾಕಿ ಹೊಂದಿರುವವರ ಬಗ್ಗೆ ವಿವರ ನೀಡುವುದು. 21.8.95 ಸನ್ಮಾನ್ಯ ಯುಬಿ ಬಣಕಾರ್‌ರವರ ಪ್ರಶ್ನೆ. 676 ಕೋಟಿ ರೂಪಾಯಿಗಳು 31.3.95ಕ್ಕೆ ನಿಮಗೆ ಬಾಕಿ ಬರಬೇಕು. ಹತ್ತು ಲಕ್ಷಕ್ಕಿಂತ ಮೇಲ್ಪಟ್ಟವರು. ಅಂದರೆ ಈ 500 ಮೆಗಾವ್ಯಾಟ್ ವಿದ್ಯುತ್ ಕಳ್ಳತನ ಆಗುವುದನ್ನು ತಪ್ಪಿಸಿ, ವಿದ್ಯುತ್ ಇಲಾಖೆಯಲ್ಲಿ ನೀವು ಕೊಟ್ಟಿರುವುದನ್ನು, 676 ಕೋಟಿ ಕೊಟ್ಟಿರುವುದನ್ನು ವಾಪಸ್ ವಸೂಲು ಮಾಡಿ ಬಿಗಿ ಕ್ರಮ ತೆಗೆದುಕೊಂಡರೆ ನಿಮ್ಮ ಕೆಇಬಿ ಲಾಸ್‌ನಲ್ಲಿ ನಡೆಯದಂತೆ. ಅದನ್ನು ಸರಿಪಡಿಸುವುದಕ್ಕೆ ನಿಮಗೆ ಸಾಧ್ಯ ಇದೆ. ಆ ದಿಕ್ಕಿನಲ್ಲಿ ನಿಮ್ಮಿಂದ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಇಲ್ಲ. ಇಲ್ಲಿಯೇ ಹೇಳಿದ್ದೀರಿ. '' ವಿದ್ಯುತ್ ಉತ್ಪಾದಕ ಸಂಸ್ಥೆಗಳಾದ ಕೆಪಿಸಿಎಲ್, ಎನ್‌ಎಲ್‌ಸಿ ಮುಂತಾದವರಿಗೆ ಸಲ್ಲಬೇಕಾದ ಹಣವನ್ನು ಪಾವತಿ ಮಾಡುವ ಸಲುವಾಗಿ ಸಾಕಷ್ಟು ಆದಾಯ ಉತ್ಪತ್ತಿ ಮಾಡಲು ಕರ್ನಾಟಕ ವಿದ್ಯುತ್ ಮಂಡಲಿಗೆ ಸಾಧ್ಯವಾಗುತ್ತಿಲ್ಲ. ಬಾಕಿ ಮೊತ್ತ 900 ಕೋಟಿ ರೂಪಾಯಿ ಮೀರಿದೆ. ಏಕೆ ಸ್ವಾಮಿ ? ಕರ್ನಾಟಕ ಪವರ್ ಕಾರ್ಪೊರೇಷನ್‌ನವರು ವಿದ್ಯುತ್ ಉತ್ಪನ್ನ ಮಾಡಿದ ಮೇಲೆ ಇಷ್ಟು ಕಡಿಮೆ ಬೆಲೆಗೆ 4 ಪೈಸೆಯಿಂದ 68 ಪೈಸೆಗೆ ಜಲವಿದ್ಯುತ್ ಯೋಜನೆಗೆ ವಿದ್ಯುತ್ ಕೊಟ್ಟಾಗ ಅವರಿಗೆ ಆ ಹೆಚ್ಚಿನ ದರಕ್ಕೆ ಮಾರುವಂಥವರು ತಕ್ಷಣ ವಿದ್ಯುತ್ ಹಣವನ್ನು ಪಾವತಿ ಮಾಡದೆಯೇ ಈ

ರೀತಿ ಇಷ್ಟು ದೊಡ್ಡ ಮೊತ್ತ ಉಳಿಸಿಕೊಳ್ಳುವುದಕ್ಕೆ ಕಾರಣವೇನು ? ಏತಕ್ಕೆ ಉಳಿಸಿಕೊಳ್ಳುತ್ತಿದ್ದೀರಿ ? ನಿಮ್ಮ ಹತ್ತಿರ ಉತ್ತರ ಇದೆಯೇ ? ಜಲವಿದ್ಯುತ್‌ನ್ನು ಕೇವಲ 60 ಪೈಸೆಯಿಂದ ಖರೀದಿಸಿ ಥರ್ಮಲ್ ವಿದ್ಯುತ್‌ಗೆ ಕೇವಲ 128 ಪೈಸೆ ನಿಮಗೆ ಬರುತ್ತದೆ. ಮಾರಾಟ ಮಾಡಬೇಕಾದರೆ ಹೆಚ್ಚಿನ ದರಕ್ಕೆ ನೀವು ಮಾರುತ್ತೀರಿ. ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರ ವರದಿಯಲ್ಲಿ ಆದಾಯ ಪ್ರತಿ ಕಿಲೋವ್ಯಾಟ್‌ಗೆ 92-93 ರಲ್ಲಿ 98.61 ಪೈಸೆ ಲಾಭ. 93-94ರಲ್ಲಿ 112 ಪೈಸೆ 94-95ರಲ್ಲಿ 11 ಪೈಸೆ ವೆಚ್ಚ ಪ್ರತಿಕಿಲೋವ್ಯಾಟ್‌ಗೆ 92-93ರಲ್ಲಿ 89.11. 93-94ರಲ್ಲಿ 100 ಪೈಸೆ. 94-95 ರಲ್ಲಿ 101 ಪೈಸೆ ವೆಚ್ಚ. ಲಾಭ ಪ್ರತಿ ಕಿಲೋವ್ಯಾಟ್‌ಗೆ 92-93 ರಲ್ಲಿ ಒಂಭತ್ತೂವರೆ ಪೈಸೆ 9.5 ಪೈಸೆ. 93-94ರಲ್ಲಿ 12 ಪೈಸೆ ನಿಮಗೆ ಈಭ ಬಂದಿದೆ ಪರ್ ಕಿಲೋವ್ಯಾಟ್‌ಗೆ 94-95 ರಲ್ಲಿ ನಿಮಗೆ 10 ಪೈಸೆ ಈಭ ಬಂದಿದೆ. ಇಷ್ಟೆಲ್ಲಾ ಲಾಭದಾಯಕವಾಗಿ ನಿಮಗೆ ಬಂದಮೇಲೂ ಸಹಾ ಇವತ್ತು 900 ಕೋಟಿ ರೂಪಾಯಿಗಳನ್ನು ನೀವು ಬಾಕಿ ಕೊಡಬೇಕು ಕೆಪಿಸಿಎಲ್‌ಗೆ ಮತ್ತು ಎನ್‌ಎಲ್‌ಸಿಗೆ ಎಂದರೆ ಇದಕ್ಕೇನಾದರೂ ಕಾರಣವಿದೆಯೋ ? 1995-96 ಇಂಧನ ಇಲಾಖೆ ತನ್ನ ವಾರ್ಷಿಕ ವರದಿಯಲ್ಲಿ ಕೆಇಬಿಗೆ 710 ಕೋಟಿ ರೂಪಾಯಿಗಳ ಕೊರತೆ ಉಂಟಾಗುತ್ತದೆ ಎಂದು ಹೇಳಿದ್ದೀರಿ. ಈಗ ಅದು 900 ಕೋಟಿ ರೂಪಾಯಿ ಎಂದು ತಾವು ಹೇಳಿದ್ದೀರಿ. ನಾನೇ ಈಗ ನಿಮಗೆ ಕೊಟ್ಟಿರುವ ಅಂಕಿಅಂಶದ ಪ್ರಕಾರ ಕೆಇಬಿಗೆ ಬರಬೇಕಾಗಿರುವ ಬಾಕಿ ಕೊಡಬೇಕಾದಂಥವರು 98 ಸಂಸ್ಥೆಗಳಿಂದ ಬರಬೇಕಾಗಿರುವುದು 180 ಕೋಟಿ 18 ಲಕ್ಷ ರೂಪಾಯಿಗಳು. ವಿದ್ಯುತ್ ಟ್ರಾನ್ಸ್‌ಮಿಷನ್ ಲಾಸ್ 93-94 ರಲ್ಲಿ ಒಂದೇ ವರ್ಷದಲ್ಲಿ 342 ಕೋಟಿ 56 ಲಕ್ಷ ರೂಪಾಯಿ ಆಗಿದೆ ಕಳ್ಳತನ ಸುಮಾರು 500 ಮೆಗಾವ್ಯಾಟ್ ಆಗುತ್ತಿದೆ ಎಂದು ಹಿಂದಿನ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದರ ಮೊತ್ತ ನೀವು 500 ಕೋಟಿ ಇಟ್ಟುಕೊಳ್ಳಿ. ನಾನು ಎರಡು ಸಾವಿರ ಕೋಟಿ ರೂಪಾಯಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಮತ್ತೆ ನೀವು ಮೀಟರನ್ನು ಅಳವಡಿಸದೇ ಇರುವ ಪ್ರಕರಣಗಳು ಒಂದು ಲಕ್ಷದ ನಲವತ್ತು ಸಾವಿರ ಕೆಇಬಿಯಲ್ಲಿ 40 ಸಾವಿರ ಸಿಬ್ಬಂದಿಗೆ ತಲಾ 200 ಯೂನಿಟ್ ಆಗುತ್ತೆ. ಇದೆಲ್ಲದರ ವರಮಾನವನ್ನು ನೀವು ಲೆಕ್ಕ ಹಾಕಿ. ನಾನು ನಿಮಗೆ ಹೇಳುವುದು ಕರ್ನಾಟಕ ರಾಜ್ಯದಲ್ಲಿ ಶೇಕಡ 45 ಭಾಗ ಘೂತ್ರ ನೀವು ಮೀಟರನ್ನು ಅಳವಡಿಸದೆಯೇ ರೈತರಿಗೆ ಸುಮಾರು 40 ಪರ್‌ಸೆಂಟ್‌ಕ್ಕಿಂತ ಹೆಚ್ಚಿಗೆ ವಿದ್ಯುತ್‌ನ್ನು ನಾವು ಕೊಡುತ್ತಿದ್ದೇವೆ ಎಂದು ಹೇಳುತ್ತೀರಲ್ಲ ಅದಕ್ಕೇನು ಆಧಾರ ನಿಮಗೆ. ? ಹೇಗೆ ಹೇಳುತ್ತೀರಿ ಅದನ್ನು ? ಕೆಇಬಿ ಇಲಾಖೆಯಲ್ಲಿ ಆರ್ಥಿಕ ನಿರ್ವಹಣೆ ಸರಿಯಾಗಿ ಇಲ್ಲ ಎನ್ನುವಂತಹದು ಮನೆ ಮಾತಾಗಿರುವಂತಹ ಸಂಗತಿ. ಮತ್ತೆ ಖಾಸಗಿ ಬಂಡವಾಳಗಾರರು ಈ ಕೆಇಬಿಯಲ್ಲಿ ಬಂಡವಾಳ ಹೊಡುವುದಕ್ಕೆ ಬರದೇ ಇರಲು ಅದಕ್ಕೆ ಕೆಇಬಿ ಕಾರಣ ಅದರ ಮಿಸ್ ಮ್ಯಾನೇಜ್‌ಮೆಂಟ್ ಕಾರಣ. ಖಾಸಗಿಯವರು ಬರುವುದಕ್ಕೂ ಇದಕ್ಕೂ ಏನು ಸಂಬಂಧ ಇದೆ ? ಕೆಇಬಿಯಲ್ಲಿ ಲಾಭದಾಯಕವಾಗಿ ನಡೆಯಲು ಅಲ್ಲಿರುವಂತಹ ಸೋರಿಕೆಯನ್ನು ಸರಿಪಡಿಸಿ ಸರಿಯಾದಂತಹ ರೀತಿಯಲ್ಲಿ ಇಲಾಖೆಯನ್ನು ನಡೆಸಲು ನಿಮಗೆ ಏನು ತೊಂದರೆ ಇದೆ. ? ಮತ್ತೆ ಇದುವರೆಗೆ ನಿಮ್ಮ ಕೆಇಬಿಯಲ್ಲಿ ನಿಮ್ಮ ಹಿರಿಯ ಅಧಿಕಾರಿ ಇದ್ದರೂ ಸಹ 1994-95, 1995-96 ಕ್ಕೆ ಆಡಿಟ್ ಆಗಿಲ್ಲ. ಇದು ಶೋಭೆ ತರುವಂತಹದ್ದೇ ? ಏಕೆ ಆಡಿಟ್ ಮಾಡಿಸಿಲ್ಲ ? ಹುಳುಕು ಹೊರಗೆ ಬರುತ್ತದೆ ಎನ್ನುವ ಕಾರಣಕ್ಕೇನು ಇದರ ಬಗ್ಗೆ ಆಡಿಟ್ ಆಗದೇ ಇರುವುದರಿಂದ, ಶೇಕಡ 55 ರಷ್ಟು ವಿದ್ಯುತ್‌ಗೆ ಲೆಕ್ಕವನ್ನೇ ಇಡದೇ ಇರುವುದರಿಂದ ಕೆಇಬಿ

ಹೇಗೆ ಉದ್ದಾರ ಆಗುತ್ತದೆ ? ಇವತ್ತು ನಿಮ್ಮ ಹತ್ತಿರ ಲೆಕ್ಕ ಸಿಗುವುದು ಎಷ್ಟು ? ಶೇಕಡ 45 ರಷ್ಟು ವಿದ್ಯುಚ್ಛಕ್ತಿಗೆ ಮಾತ್ರ ಲೆಕ್ಕ ಸಿಗುತ್ತದೆ. ಇನ್ನು ಉಳಿದಂತಹ 45 ಪರ್ಸೆಂಟ್ ವಿದ್ಯುತ್‌ಗೆ ಲೆಕ್ಕವೇ ಸಿಗುವುದಿಲ್ಲ. ಹಂತ ಹಂತವಾಗಿ ನೀವು ಮೀಟರ್ ಅಳವಡಿಸುವಂತಹ ಕಡೆಗೆ ಏನಾದರೂ ವಿಶೇಷ ಗಮನಕೊಟ್ಟರೇನು ? ಕೆಇಬಿ ಅಧಿಕಾರಿಗಳು ರಿಸ್ಕ್ ತೆಗೆದುಕೊಳ್ಳುತ್ತಾರೆ. ನೀವು ಉಚಿತವಾಗಿ ವಿದ್ಯುತ್ ಕೊಡಿ, ಖಂಡಿತ ನನ್ನ ಬೆಂಬಲ ಇದೆ. ನನ್ನ ವಿರೋಧ ಇಲ್ಲ. ಮೀಟರ್ ಹಾಕಿ ಎಂದು ಹೇಳುತ್ತೇನೆ. ಅದು ಐ ಪಿ ಸೆಟ್ ಇರಬಹುದು ನೀವು ಮೀಟರ್ ಹಾಕಿ. ವಾಸ್ತವಿಕವಾಗಿ ನೀವು ಯಾರ್‍ಯಾರೋ ಮಾಡಿದಂತಹ ಲೂಟಿಯನ್ನು ರೈತರ ತಲೆಯ ಮೇಲೆ ಹಾಕುವಂತಹ ಪ್ರವೃತ್ತಿ ಏನು ಇದೆ ಇದನ್ನು ಯಾವುದೇ ಕಾರಣಕ್ಕೆ ಒಪ್ಪಲು ಸಾಧ್ಯವಿಲ್ಲ. ಇವತ್ತು 1994-95ರಲ್ಲಿ 71 ಸಾರ್ವಜನಿಕ ಸಂಸ್ಥೆಗಳಿದ್ದು ಐದು ಸಂಸ್ಥೆಗಳು ಮಾತ್ರ ಲಾಭದಾಯಕವಾಗಿದ್ದೇವೆ. ಸ್ವಾಮಿ ಕೆಪಿಸಿ ಬಗ್ಗೆ ನೀವು ಹೇಳುತ್ತೀರಿ. ಅದು 48 ಕೋಟಿ 93 ಲಕ್ಷ ಲಾಭ ಪಡೆದಿದೆ. ಕೆಇಬಿ ಸಹ 46 ಕೋಟಿ 32 ಲಕ್ಷ ಲಾಭ ಪಡೆದಿದೆ. ಆದ್ದರಿಂದ ನೀವು ಕೆಇಬಿ ಅಥವಾ ಕೆಪಿಸಿ ಲುಕ್ಸಾನದಲ್ಲಿ ನಡೆಯುತ್ತಿದೆ ಎನ್ನುವುದನ್ನು ಏಕೆ ಹೇಳುತ್ತೀರಿ ? ಅದನ್ನು ಮುಚ್ಚುವಂತಹ ಪರಿಸ್ಥಿತಿ ಬರುತ್ತದೆ ಎಂದರೆ ನಿಮ್ಮ ಉದ್ದೇಶ ಕರ್ನಾಟಕ ಪವರ್ ಕಾರ್ಪೊರೇಷನ್ ಅನ್ನು ಮುಚ್ಚಿಸಿ ಲಾಭ ಮಾಡಿಕೊಳ್ಳುವಂತಹ ಏನಾದರೂ ಸಂಚು ನಡೆಸುತ್ತಿದೆಯೇನೋ ಎಂದು ಜನರು ಮಾತನಾಡಿಕೊಳ್ಳುವಂತಹ ಪರಿಸ್ಥಿತಿ ಬರುತ್ತದೆ. ಕೆಪಿಸಿ ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ದಾಖಲೆ ಇದೆ ಅವರು ಹೇಳಿದ್ದಾರೆ ಈ ವಿದ್ಯುತ್ ನಮಗೆ ಏನು ದರದಲ್ಲಿ ಬೀಳುತ್ತದೆ ವಿದ್ಯುತ್ ಸರಬರಾಜು ಮಾಡುವಂತಹ ಜವಾಬ್ದಾರಿಯನ್ನು ನಮಗೆ ವಹಿಸಿ ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ . ಅದಕ್ಕೋಸ್ಕರ ದಯಾಮಾಡಿ ತಾವು ಈ ಕಡೆಗೆ ವಿಶೇಷವಾದಂತಹ ಗಮನವನ್ನು ಕೊಡಬೇಕು. ಸ್ವಾಮಿ ಈ ಕೆಇಬಿ ಕೆಪಿಸಿಗೆ ವಿದ್ಯುತ್ ಖರೀದಿಗೆ 1993-94 ರಲ್ಲಿ ನೀಡುತ್ತಿದ್ದಂತಹ ವಿದ್ಯುತ್‌ಗೆ ಒಂದು ರೂಪಾಯಿ ದರ ನೀಡುತ್ತಿದ್ದೀರಿ. ಅಂದರೆ ಸರಾಸರಿ ಖರೀದಿ ಬೆಲೆ ಒಂದು ಯೂನಿಟ್‌ಗೆ 70 ಪೈಸೆ ಮಾತ್ರ ಬೀಳುತ್ತದೆ. ಆದರೆ ಕೆಇಬಿ ತನ್ನ ಸರಾಸರಿ 94 ಪೈಸೆಗೆ ಖರೀದಿಸಿದ ವಿದ್ಯುತ್ತನ್ನು 1 ರೂಪಾಯಿ 12 ಪೈಸೆಗೆ ಮಾರಿದ ಮೇಲೂ ಸಹ ಲುಕ್ಸಾನು ನಡೆಯುತ್ತದೆ ಎನ್ನುವುದಕ್ಕೆ ಆಧಾರ ಏನು ಇದೆ ? ವಿದ್ಯುತ್ ಕಳ್ಳತನ ಆಗದೆ, ಲೂಟಿ ಆಗದೇ ಬೇರೆ ಏನಾದರೂ ಇದಕ್ಕೆ ಕಾರಣ ಇದೆಯೇ ?

ಅಧ್ಯಕ್ಷರು: ಏನೂ ಇಲ್ಲ ತಿದ್ದುಕೊಂಡು ಬಿಟ್ಟರು. ನನಗೆ ಹೊಸ ಸರ್ಕಾರದಲ್ಲಿ ಮಂತ್ರಿಗಳೆಲ್ಲಾ ಮುಖ ತೋರಿಸುತ್ತಿಲ್ಲ. ಹಿಂದುಗಡೆ ತಿರುಗಿಕೊಂಡು ಬಿಡುತ್ತಿದ್ದಾರೆ.

★ಶ್ರೀ ಬಿ.ಎಸ್.ಯಡಿಯೂರಪ್ಪ:- ಇತರ ಅನೇಕ ವಿವರಗಳು ಇದೆ. ನಾನು ಅಂಕಿಅಂಶಕ್ಕೆ ವಿವರಕ್ಕೆ ಹೋಗುವುದಿಲ್ಲ. ಸಾಕಷ್ಟು ಸಮಯವನ್ನು ತಾವು ಕೊಟ್ಟಿದ್ದೀರಿ; ನಾನು ಈ ಸರ್ಕಾರಕ್ಕೆ ಒತ್ತಾಯ ಮಾಡುವುದು ಇಷ್ಟೇ. ದಯಮಾಡಿ ಯಾವುದೋ ಒಂದು ಒತ್ತಡಕ್ಕೆ ಸಿಕ್ಕಿ ಯಾವುದೋ ಒಂದು ಕಾರಣಕ್ಕೋಸ್ಕರ ನೀವು ಮಾಡಿರಬಹುದು ಅಥವಾ ಇದರ ಬಗ್ಗೆ ಕುಳಿತು ಯೋಚನೆ ಮಾಡುವುದಕ್ಕೆ ನಿಮಗೆ ಒತ್ತಾಯ ಮಾಡುವಂತಹದ್ದು ಕೆಪಿಸಿ ಯವರು ಸರಿಯಾದ ರೀತಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಆದಾಯವನ್ನು ತರುತ್ತಿದ್ದಾರೆ. ಆ ಕೆಪಿಸಿ ಹೆಚ್ಚು ಜನ ವಿದ್ಯುತ್ ಅನ್ನು ಉತ್ಪನ್ನ ಮಾಡುವುದಕ್ಕೆ ಹೊರ ದೇಶದಿಂದ ಯಾರನ್ನೋ ಕರೆದುಕೊಂಡು ಬಂದು ಅವರ ಜೊತೆ ಮಾತುಕತೆ

ನಡೆಸಿಕೊಂಡು ರಾಜ್ಯದ ಹಿತವನ್ನು ಬಲಿ ಮಾಡುವಂತಹ ಕೆಲಸವನ್ನು ನೀವು ದಯಮಾಡಿ ಮಾಡಬೇಡಿ. ಕೆಪಿಸಿಗೆ ತುಂಬಾ ಒಳ್ಳೆಯ ಹೆಸರು ಇದೆ. ಒಳ್ಳೆಯ ತಜ್ಞರು ಇದ್ದಾರೆ. ಪೂರ್ಣ ಸ್ವಾತಂತ್ರ್ಯ ಕೊಟ್ಟರೆ ನಿಮ್ಮ ಈ ಇಲಾಖೆ ಗೌರವದಿಂದ ನಡೆಯುತ್ತದೆ. ನೀವು ಮಾಡಬೇಕಾದಂತಹ ಕೆಲಸ ಜನರ ಮೇಲೆ ತೆರಿಗೆ ಹಾಕುವುದಿಲ್ಲ. ಯಾರು ಕೆಇಬಿಯಲ್ಲಿ ಲೂಟಿ ಮಾಡುತ್ತಿದ್ದಾರೆ. ಟ್ರಾನ್ಸ್‌ಮಿಷನ್ ಲಾಸ್ ಮತ್ತೊಂದು ಮಗದೊಂದು ಮಾಡಿಕೊಂಡು ಸುಳ್ಳು ದಾಖಲೆಗಳನ್ನು ಮಾಡಿಕೊಂಡು ಮೀಟರನ್ನೇ ಅಳವಡಿಸದೇ ಅದನ್ನು ಬಿಗಿ ಮಾಡುವಂತಹ ಒಂದು ಪ್ರಯತ್ನ ಮಾಡಿ ಲೂಪ್‌ಹೋಲ್ಸನ್ನು ಸರಿ ಮಿ ಥೆಫ್ಟ್‌ನ್ನು ಸರಿ ಮಾಡಿ. ಎಲ್ಲದಕ್ಕೂ ಮೀಟರ್ ಹಾಕುವಂತಹ ಪ್ರಯತ್ನ ಮಾಡಿ ಯಾವುದೇ ಕಾರಣಕ್ಕೆ ವಿದ್ಯುತ್ ದರವನ್ನು ಶೇಕಡ 10 ಕ್ಕಿಂತ ಹೆಚ್ಚು ಮಾಡಬಾರದು. ಸನ್ಮಾನ್ಯ ದೇವೇಗೌಡರು ಹಾಲಿ ಮಾನ್ಯ ಪ್ರಧಾನಿಯವರು ಇಲ್ಲಿ ಮುಖ್ಯಮಂತ್ರಿ ಯಾಗಿದ್ದಾಗ ಏನು ಹೇಳಿದರು. ಅದನ್ನು ಮೀರುವಂತಹ ಕೆಲಸವನ್ನು ದಯಮಾಡಿ ಮಾಡಬೇಡಿ. 10 ಕ್ಕಿಂತ ತೆರಿಗೆಯನ್ನು ಹಾಕಕೂಡದು ಐ ಪಿ ಸೆಟ್‌ಗೆ ಅದೇ ಒಂದು ಸಮಿತಿ ಅದು ಅವತ್ತು ಒಂದು ಪೈಸೆ ವಿದ್ಯುತ್ ದರ ಏರಿಸಕೂಡದು ಒಂದು ತಂಗಾರವರು ನಾನು ಹೇಳಿದ್ದೇವೆ ಇವತ್ತು ಸಹ ವಿದ್ಯುತ್ತನ್ನು ಸರಿಯಾಗಿ ಸರಬರಾಜು ಮಾಡುತ್ತೇವೆ ಎನ್ನುವಂಥ ಆಧಾರದ ಮೇಲೆ ಒಂದು ನೂರುರೂಪಾಯಿ ಏರಿಸುವುದರ ಬಗ್ಗೆ ನಾವು ನಿಮಗೆ ಖಂಡಿತವಾಗಿ ಸಹಕಾರ ಕೊಡುತ್ತೇವೆ. ನೀವು ''ವಿನಾಶ ಕಾಲೇ ವಿಪರೀತ ಬುದ್ಧಿ '' ಎಂದು ಹೇಳಿದ ಮೇಲೂ ಕರ್ನಾಟಕದ ಒಂದನ್ನು ನೋಡಿದ ಮೇಲೂ ಸಹ ದಾವಣಗೆರೆಯಲ್ಲಿ ನಿಮ್ಮ ಸಮಾವೇಶದಲ್ಲಿ ಜನ ತಿರುಗಿ ಬಿದ್ದ ಮೇಲೂ ಸಹ ಅದೇ ಮೊಂಡುತನದಲ್ಲಿ ತಾವು ಮುಂದುವರಿದರೆ, ಬಹುಶಃ ಇಡೀ ಕರ್ನಾಟಕ ರಾಜ್ಯ ಜೈಲು ಆಗಬಹುದು. ಎಲ್ಲ ಜೈಲನ್ನು ಭರ್ತಿ ಮಾಡುವಂತಹ ಸಾಹಸಕ್ಕೆ ನಾವು ಇಳಿಯಬೇಕಾಗಬಹುದು. ಸದನದ ಕಾರ್ಯಕಲಾಪದ ಅಗತ್ಯ ಇಲ್ಲವೆಂದು ಹೇಳಿ ಬೀದಿಗೆ ಇಳಿದು ಜನ ಹೋರಾಟಕ್ಕೆ ಇಳಿಯುವಂತ ದುಸ್ಥಿತಿ ಗಂಭೀರವಾದಂತಹ ಪರಿಸ್ಥಿತಿ ರಾಜ್ಯದಲ್ಲಿ ಇವತ್ತು ಇದೆ. ದಯಮಾಡಿ ಪ್ರತಿಪಕ್ಷದವರು ಹೇಳುತ್ತಿದ್ದಾರೆ ಎಂದು ನಾನು ಈ ಮಾತನ್ನು ಹೇಳುತ್ತಿಲ್ಲ. ಇಲ್ಲ ಎಂದರೆ ವಿದ್ಯುತ್ ದರವನ್ನು ಏರಿಸಿರುವುದನ್ನು ಸಂಪೂರ್ಣವಾಗಿ ವಾಪಸ್ ತೆಗೆದುಕೊಳ್ಳಿ, ಎರಡೂ ಕಡೆ ಸಾಕಷ್ಟು ಅನುಭವ ಇರುವಂತಹವರು ಇದ್ದಾರೆ. ಮತ್ತು ಸದನದ ಸಮಿತಿ ಮಾಡಿ. ನಿಮ್ಮ ಇಲಾಖೆ ಲಾಭದಾಯಕವಾಗಿ ನಡೆಯಬೇಕು ಲುಕ್ಸಾನು ಇದ್ದರೆ ಯಾವುದೇ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ ಸರಿಪಡಿಸೋಣ ನಾವು ಸಲಹೆ ಕೊಡುತ್ತೇವೆ. ಅದರ ಆಧಾರ ಮೇಲೆ ನಿಗಧಿ ಮಾಡಿ. ವಿದ್ಯುತ್ ದರವನ್ನು ವಾಪಸ್ ತೆಗೆದುಕೊಳ್ಳಿ, ಒಂದು ಸದನದ ಸಮಿತಿ ಮಾಡಿ. ಇಲ್ಲ ಸಾಧ್ಯವೇ ಇಲ್ಲ ಎಂದರೆ ಶೇಕಡಾ 10 ರಷ್ಟು ಮಾತ್ರ ಏರಿಸಬೇಕು. ಹೆಚ್‌ಪಿಗೆ 100 ರೂಪಾಯಿ ಹಾಕಬೇಕು. ಮತ್ತು ಕಾರ್ಖಾನೆ ಮಾಲೀಕರಿಗೆ ಹೊಸದಾಗಿ ಡಪಾಸಿಟ್ ಎಂದು ಹೇಳಿ ಹೊರಿಸುವುದಕ್ಕೆ ಹೊರಟಿದ್ದೀರಿ. ಇದು ದೇಶದಲ್ಲಿ ಎಲ್ಲೂ ಇರದಂತಹ ಭಾರವನ್ನು ಕಾರ್ಖಾನೆ ಹೊರುವುದಕ್ಕೆ ಆಗುವುದಿಲ್ಲ. ಅದನ್ನು ವಾಪಸ್ ತೆಗೆದುಕೊಳ್ಳಬೇಕು ಎನ್ನುವಂತಹ ಒತ್ತಾಯವನ್ನು ಮಾಡುವುದರ ಮೂಲಕ ಈ ನಿಲುವಳಿ ಸೂಚನೆ ಯನ್ನು ಮಂಡಿಸುತ್ತೇನೆ. ಬಹುಶಃ ಅಧ್ಯಕ್ಷರು ಕನ್‌ವಿನ್ಸ್ ಆಗಿದ್ದರೆ ನಮ್ಮ ಇತರೆ ಎಲ್ಲಾ ಹಿರಿಯ ಸದಸ್ಯರು ಮಾತನಾಡಿದ ಮೇಲೆ ನನಗೆ ತಾವು ಅವಕಾಶವನ್ನು ಕೊಟ್ಟರೆ ಎಲ್ಲಾ ಅಂಕಿಂಅಶಗಳನ್ನು ಒಳಗೊಂಡಂತೆ ಯಾವ ರೀತಿ ಯಾವ್ಯಾವ ಸಂದರ್ಭದಲ್ಲಿ ಕೆಇಬಿಯಲ್ಲಿ ಲೂಟಿ ನಡೆದಿದೆ. ಯಾವ ರೀತಿ ಸಾಮಗ್ರಿಗಳನ್ನು ಅನಗತ್ಯವಾಗಿ ಕೊಂಡು ಕೊಂಡು ಅಲ್ಲಿ

ಲೂಟಿ ಮಾಡುವಂತಹ ಕೆಲಸ ಮಾಡಿದ್ದಾರೆ . ಕೆಪಿಸಿ ಯಾವ ರೀತಿ ಕೆಲಸ ಮಾಡುತ್ತಿದೆ ನೀವು ಯಾವ ರೀತಿಯಲ್ಲಿ ಕಿರುಕುಳ ಕೊಡುತ್ತಿದ್ದೀರಿ ಕೆಪಿಸಿ ಒಂದು ಹೆಜ್ಜೆ ಮುಂದೆ ಹೋಗದ ರೀತಿಯಲ್ಲಿ ನಾನಲ್ಲಿ ಮೇನೆಕಾ ಗಾಂಧಿಯಂತಹವರೇ ನಿಮ್ಮ ಕೊಜೆಂಟ್ರಿಕ್ಸ್ ಬಗ್ಗೆ ವಿರೋಧ ಮಾಡಿದ್ದಾರೆ. ದೊಡ್ಡ ಇತಿಹಾಸ ಇದೆ ದೊಡ್ಡ ಕಥೆ ಇದೆ ಆದ್ದರಿಂದ ಇವತ್ತು ಈ ರೀತಿ ದುಸ್ಸಾಹಸ ಅಪರೂಪಕ್ಕೆ ಸಿಕ್ಕಂತಹ ಸ್ಥಾನವನ್ನು ಉಳಿಸಿಕೊಂಡು ರಾಜ್ಯದ ಹಿತವನ್ನು ಕಾಪಾಡಬೇಕು ಒಂದು ಗೋಪಾಲಗೌಡರ ಶಿಷ್ಯರಿಗೆ ಗೌರವ ತರುವಂತಹ ಸಂಗತಿ ಅಲ್ಲ ಇದೊಂದು ಪಾಪದ ಕೆಲಸ ಮಾಡಿದ್ದೀರಿ. ದಯಮಾಡಿ ಈಗಲಾದರೂ ಸರಿಯಾದ ರೀತಿ ತಾವು ಅರ್ಥಕ್ಕೊಂದು ಇದನ್ನು ಬದಲಾವಣೆ ಮಾಡಿ, ನಮ್ಮ ಒತ್ತಾಯ ರಾಜ್ಯದ ಪರವಾಗಿ ಏನು ಇದೆ ಅದಕ್ಕೆ ತಾವು ಮನ್ನಣೆ ಕೊಡಬೇಕು ಇಲ್ಲ ಎಂದರೆ ನಿಲುವಳಿ ಸೂಚನೆಗೆ ಮಾನ್ಯ ಅಧ್ಯಕ್ಷರು ಒಪ್ಪಿಗೆ ಕೊಟ್ಟ ಮೇಲೆ ವಿವರವಾದಂತಹ ಚರ್ಚೆಗೆ ಸಾಗಲು ಅಡ್ಡಿ ಏನು ಇದೆ ? ನಾಲ್ಕು ದಿವಸ ಐದು ದಿವಸ ಚರ್ಚೆ ಆಗಲಿ ಎಲ್ಲ ವಿವರಗಳನ್ನು ಕೊಡುತ್ತೇವೆ. ಇದು ಎಲ್ಲದರ ಮೇಲೆ ದುಷ್ಪರಿಣಾಮ ಆಗುವುದರಿಂದ ಇದನ್ನು ಬಿಟ್ಟು ಬೇರೆ ಇನ್ನೇನನ್ನು ಚರ್ಚೆ ಮಾಡಲು ಸಾಧ್ಯ ಇದೆ ? ಪೆಟ್ರೋಲಿಯಂ ದರ ಏರಿತು 25 ಪರ್ಸೆಂಟ್ ಆಯಿತು. ಸಾಮಾನ್ಯ ಜನ ಬದುಕುಚುದು ಹೇಗೆ ? ಗಿಂಬಳ ಬರುವವರು ಹೇಗೋ ನಡೆಯಬಹುದು, ಬರೇ ಸಂಬಳ ತೆಗೆದುಕೊಂಡವರು ಬದುಕುವುದು ಹೇಗೆ ? ಇವತ್ತು ಹೊಲ ಗದ್ದೆಗಳಲ್ಲಿ ದುಡಿಯುವ ರೈತ ಬದುಕುವುದು ಹೇಗೆ ? ಜನರ ಜೀವನದ ಜೊತೆಗೆ ಚೆಲ್ಲಾಟ ಮಾಡುವಂತಹ ಒಂದು ಪರಿಸ್ಥಿತಿಗೆ ನೀವು ತಂದಿದ್ದೀರಿ. ದಯಮಾಡಿ ಈಗಲಾದರೂ ನಮ್ಮ ಜನತಾ ದಳದ ಶಾಸಕರಲ್ಲಿ ನಾನು ವಿನಂತಿ ಮಾಡುತ್ತೇನೆ. ದಯಮಾಡಿ ನಿಮ್ಮದೊಂದು ಸಭೆಸೇರಿ, ಮಧ್ಯದಲ್ಲಿ ಸೇರಿ ಅಧ್ಯಕ್ಷರು ಒಪ್ಪಿಕೊಳ್ಳುವುದಾದರೆ ಬೇಕಾದರೆ ಸದನವನ್ನು ಎರಡು ದಿನ ಮುಂದೂಡೋಣ. ಚರ್ಚೆ ಮಾಡಿ ನಿಮ್ಮ ಮುಖ್ಯಮಂತ್ರಿಗಳಿಗೆ ವಾಸ್ತವ ಸಂಗತಿಯನ್ನು ತಿಳಿಸಿ ವಿರೋಧ ಪಕ್ಷದವರ ಮಾತನ್ನು ಅವರು ಕೇಳುವುದಿಲ್ಲ. ನೀವಾದರೂ ಅವರ ಮನವನ್ನು ಒಲಿಸಿ ಇವತ್ತು ನಮ್ಮ ಒಂದು ಒತ್ತಾಯ ಏನು ಇದೆ ರಾಜ್ಯದ ಜನರ ಪರವಾಗಿ ಆ ಒತ್ತಾಯಕ್ಕೆ ತಾವು ಸಹಕಾರ ಕೊಡಿ. ಇದು ಯಾವುದೋ ಒಂದು ಪ್ರೆಸ್ಟೇಜ್ ವಿಷಯ ಎಂದು ತೆಗೆದುಕೊಳ್ಳದೆ ನಮ್ಮ ಒತ್ತಾಯಕ್ಕೆ ತಾವು ಒಪ್ಪಿಗೆ ಕೊಡಬೇಕು. ಇಲ್ಲದಿದ್ದರೆ ಸನ್ಮಾನ್ಯ ಅಧ್ಯಕ್ಷರು ನಿಲುವಳಿ ಸೂಚನೆಗೆ ಅವಕಾಶ ಕೊಟ್ಟ ಮೇಲೆ, ದಯಮಾಡಿ ಮಾಡಿಕೊಡಿ. ಇದು ನಿಮಗೆ ಮನವರಿಕೆ ಆಗಿದೆ ಎಂದು ತಿಳಿದುಕೊಂಡಿದ್ದೇನೆ. ಬೇರೆ ನಮ್ಮ ಸದಸ್ಯರು ಮಾತನಾಡುವುದಕ್ಕೆ ಮುಂಚೆ ನಿಲುವಳಿ ಸೂಚನೆಯಲ್ಲಿ ನಾನು ಕೊಟ್ಟಂತಹ ಮಾಹಿತಿ ಬಗ್ಗೆ ಮನವರಿಕೆ ಆಗಿದ್ದರೆ ನಿಲುವಳಿ ಸೂಚನೆ ಮೂಲಕ ವಿವರವಾದಂತಹ ಚರ್ಚೆ ಮಾಡಲು ತಾವು ಅವಕಾಶವನ್ನು ಮಾಡಿಕೊಡಬೇಕು ಎಂದು ವಿನಂತಿ ತಾವು ಇದರ ಬಗ್ಗೆ ಬಹಳ ಪ್ರಾಮುಖ್ಯತೆ ಕೊಟ್ಟು ಇದನ್ನು ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದಾಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:-ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಏಕಾ ಏಕಿ ವಿದ್ಯುತ್ ದರವನ್ನು ಏರಿಸಿರುವುದರ ಬಗ್ಗೆ ಮತ್ತು ವಿಶೇಷವಾಗಿ ರೈತರ ಮೇಲೆ, ಗ್ರಾಹಕರ ಮೇಲೆ, ಸಣ್ಣ ಕೈಗಾರಿಕೆಗಳ ಮೇಲೆ ವಿಧಿಸಿದಂತಹ ದರ ಏನು ಇದೆ ಇದು ಏಕಾ ಏಕಿ ಮತ್ತು ಏಕಾಕ್ಷೀಯವಾಗಿ ಸರ್ಕಾರ ನಿರ್ಣಯವನ್ನು ತೆಗೆದುಕೊಂಡು ಮಾಡಿದ್ದಕ್ಕಾಗಿ ರಾಜ್ಯದ ರೈತರಲ್ಲಿ ಜನರಲ್ಲಿ ಹಾಗೂ ಕೈಗಾರಿಕೋದ್ಯಮಿಗಳಲ್ಲಿ ಒಂದು ದೊಡ್ಡ ಗೊಂದಲವನ್ನು ಉಂಟು ಮಾಡಿದೆ. ಮತ್ತು ಜನರಿಗೆ ಈ

ಒಂದು ನಿರ್ಣಯದಿಂದ ನಿರಾಶೆ ಆಗಿದೆ. ಅದಕ್ಕಾಗಿ ಈ ವಿಷಯದ ಮಹತ್ವವನ್ನು ಅರಿತುಕೊಂಡೇ ನಾವು ನಿಲುವಳಿ ಸೂಚನೆಯನ್ನು ಮಂಡಿಸಿದ್ದುದು. ಅದಕ್ಕಾಗಿ ನಾವು ಪ್ರಶ್ನೋತ್ತರ ಕಾಲವನ್ನು ಮುಂದೂಡಬೇಕು ಈ ವಿಷಯವನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ಸ್ವಲ್ಪ ಹಠವನ್ನು ಹಿಡಿದೆವು. ಆದರೆ ಅದರಲ್ಲಿನಾವು ಯಶಸ್ವಿ ಆಗಿಲ್ಲ. ಕೊನೆಗೂ ಕೂಡ ಸರ್ಕಾರ ಇದು ಪ್ರಶ್ನೋತ್ತರ ವೇಳೆ ಆದ ಮೇಲೆ ತೆಗೆದುಕೊಳ್ಳಬೇಕು ಎನ್ನತಕ್ಕಂಥ ನಿಲುವಿಗೆ ಅವರು ಬಂದ ಮೇಲೆ ಪುನಃ ಅನಿವಾರ್ಯವಾಗಿ ನಾವು ಪ್ರಸ್ತಾಪ ಮಾಡಲಿಕ್ಕೆ ಒಂದು ಸಂದರ್ಭ ಬಂತು.

ಅಧ್ಯಕ್ಷರು: ಸರ್ಕಾರ ಏನಲ್ಲ, ನಾನೇ ಹೇಳಿದೆ.

★ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ನಾವು ಹೇಳುವುದು ಏನು ಅಂದರೆ ಅವರು ಒಪ್ಪಿದರೆ ನೀವು ತಕ್ಷಣ ಹೂ ಎಂದು ಹೇಳುತ್ತೀರಿ. ಅದಕ್ಕೆ ನಿಮ್ಮ ಮೇಲೆ ನಾವು ದೋಷಾರೋಪಣೆ ಅವರು ಏನು ಹೇಳಿದರೆಂದರೆ, ಈಗ ಪ್ರಶ್ನೋತ್ತರ ಕಾಲವಾಗಿರುವುದರಿಂದ, ಮೊದಲು ಪ್ರಶ್ನೆಗಳಿಗೆ ಉತ್ತರ ಕೊಡುತ್ತೇವೆ. ಅನಂತರ ನೀವು ಹೇಳುವುದು ಹೇಳಿ ನಾವು ಮಾಡುವುದು ಮಾಡುತ್ತೇವೆ ಎನ್ನುವಂತಹ ಆ ತರಹ ಧಾಟಿ ಇತ್ತು. ಅದಕ್ಕಾಗಿ ಆಗ ನಮಗೆ ಅವಕಾಶ ಮಾಡಿಕೊಡಲಿಲ್ಲ. ಆದರೆ, ಈಗ ಪುನಃ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಇದರ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಈ ಸರ್ಕಾರ ಏರಿಸಿರುವಂಥ ವಿದ್ಯುತ್ ದರವೇನಿದೆ, ನಿಜವಾಗಿಯೂ ಇದನ್ನು ಯಾರೂ ಕೂಡ ಒಪ್ಪತಕ್ಕಂಥಾದ್ದಲ್ಲ. ಏಕೆಂದರೆ ತಾವೂ ಕೂಡ ಆಡಳಿತ ಮಾಡಿ ಅನುಭವವಿರತಕ್ಕವರು, ಹಿಂದಿನ ಸರ್ಕಾರದಲ್ಲೂ ಇದೇ ಇಲಾಖೆಯ ಖಾತೆಯನ್ನೇ ವಹಿಸಿಕೊಂಡಿದ್ದಿರಿ. ಅಲ್ಲದೆ ಈ ಸರ್ಕಾರದಲ್ಲೂ ಕೂಡ ಅದೇ ಇಲಾಖೆಯನ್ನು ವಹಿಸಿಕೊಂಡಿದ್ದೀರಿ. ಒಟ್ಟಾರೆ ಎಂಟು ವರ್ಷಗಳ ತಮ್ಮ ಮಂತ್ರಿ ಮಂಡಲದ ಜೀವನದಲ್ಲಿ ಬಹುಶಃ 3-4ವರ್ಷಗಳ ಕಾಲವಾದರೂ ಈ ಒಂದು ಇಲಾಖೆಯ ಅಧಿಕಾರವ ನ್ನು ವಹಿಸಿಕೊಂಡಿದ್ದೀರಿ. ಅದರೂ ಕೂಡ ಇವೊತ್ತಿನದಿವನಸ ಇಂಥ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ತಾವು ಏಕಾಏಕಿ ಈ ನಿರ್ಣಯವನ್ನು ಏಕೆ ತೆಗೆದುಕೊಂಡಿರಿ ? ಅದಕ್ಕೇನು ಕಾರಣ ? ಒಂದು ಕಡೆ ತಮಗೆ ಗೊತ್ತಿರುವಂತೆ ಈ ಸದನದಲ್ಲಿ ಇಂತಹ ವಿಷಯಗಳನ್ನು ಪ್ರಸ್ತಾಪಿಸುವಾಗ ಇಲ್ಲವೇ ಚರ್ಚೆಗೆ ಬಂದಾಗ ತಮ್ಮ ಮಂತ್ರಿ ಮಂಡಲದಲ್ಲಿರತಕ್ಕ ಅನೇಕ ಸದಸ್ಯರುಗಳು ಕೂಡ ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಳಿಯ ಸಮಸ್ಯೆಯನ್ನು ಸುಧಾರಿಸುವ ಹಿನ್ನೆಲೆಯಲ್ಲಿ ಹಿಂದೆ ಶ್ರೀಮಾನ್ ನಾಗರಾಜ್‌ರವರ ಅಧ್ಯಕ್ಷತೆಯಲ್ಲಿ ಒಂದು ಜಂಟಿ ಸದನ ಸಮಿತಿಯನ್ನೂ ನೇಮಿಸಲಾಗಿತ್ತು ಆ ಸಮಿತಿಯಲ್ಲಿದ್ದ ಮೇಲ್ಮನೆಯ ಸದಸ್ಯರು, ಕೆಳಮನೆಯ ಅನೇಕ ಪ್ರಮುಖ ವಿರೋಧ ಪಕ್ಷದ ನಾಯಕರುಗಳೆಲ್ಲರೂ ಸೇರಿ ಇಡೀ ಕರ್ನಾಟಕ ರಾಜ್ಯಾದ್ಯಂತ ಸುತ್ತಾಡಿ ಒಂದು ವರದಿಯನ್ನು ತಯಾರಿಸಿಕೊಟ್ಟಿದ್ದರು. ಆ ಸಮಿತಿಯ ವರದಿ ಇದ್ದರೂ ಸಹ ಅದರ ಬಗ್ಗೆ ಸ್ವಲ್ಪವೂ ಚರ್ಚಿಸದೆ, ಅದರ ಕಡೆ ಗಮನಹರಿಸದೆ ಮತ್ತು ವರದಿಯಲ್ಲಿ ಏನು ತಿಳಿಸಿದೆ ಎಂಬುದನ್ನು ನೋಡತಕ್ಕಂಥ ಸೌಜನ್ಯ ಕೂಡ ತಾವು ತೋರಿಸದೆ, ನಾವು ಯಾವ ರೀತಿ ಈ ವಿದ್ಯುತ್ ದರವನ್ನು ಏರಿಸಬೇಕು ಅಥವಾ ಎಷ್ಟರಮಟ್ಟಿಗೆ ವಿದ್ಯುತ್ ದರವನ್ನು ಏರಿಸಬೇಕು ಎನ್ನುವುದರ ಬಗ್ಗೆ ಕೂಡ ವಿರೋಧ ಪಕ್ಷದವರ ಜೊತೆಯಲ್ಲಾಗಲಿ, ರೈತರ ಮುಖಂಡರ ಜೊತೆಯಲ್ಲಾಗಲಿ, ಉದ್ದಿಮೆದಾರರ ಜೊತೆಯಲ್ಲಾಗಲಿ, ಅಥವಾ ಯಾವ ಪ್ರತಿನಿಧಿಗಳ ಜೊತೆಯಲ್ಲೂ ಸಹ ತಾವು ಚರ್ಚಿಸಲಿಲ್ಲ. ಈ ಸದನದಲ್ಲಿ ಅನೇಕ ಸಲ

ಸಣ್ಣ-ಪುಟ್ಟ ವಿಷಯಗಳು ಪ್ರಸ್ತಾಪವಾದಂಥ ಸಂದರ್ಭದಲ್ಲಿ ಅದರಿಂದ ಸದನದ ಕಲಾಪ ನಡೆಯುವುದಿಲ್ಲವೆಂದಾಗ ಅಧ್ಯಕ್ಷರು ಸಂಬಂಧಪಟ್ಟವರನ್ನು ತಮ್ಮ ಕೊಠಡಿಗೆ ಕರೆದು ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸುತ್ತಾರೆ. ವಿದ್ಯುತ್ ದರ ಏರಿಸುವುದರಿಂದ ನೇರವಾಗಿ ಈ ರಾಜ್ಯದ ಐದು ಕೋಟಿ ಜನತೆಯ ಜೀವನಕ್ಕೆ ತೊಂದರೆ ಯಾಗುತ್ತದೆಂಬ ಅಂಶ ಗೊತ್ತಿದ್ದರೂ ಸಹ, ಈ ವಿಷಯ ತಮಗೆ ತಿಳಿದ್ದಿದ್ದರೂ ಕೂಡ ಇವೊತ್ತಿನ ದಿವಸ ಇದರ ಬಗ್ಗೆ ತಾವು ಬಹಳ ನಿಶ್ಯಬ್ಧವಾಗಿ ನೀವು-ನೀವೇ ಮಾತನಾಡಿಕೊಂಡು ಏಕಪಕ್ಷೀಯವಾಗಿ, ಆರ್ಬಿಟರಿಯಾಗಿ ಶೇಕಡ 25 ರಿಂದ 45 ರವರೆಗೆ ವಿದ್ಯುತ್ ದರವನ್ನು ಏರಿಸತಕ್ಕಂಥ ಕೆಲಸ ಮಾಡಿದ್ದೀರಿ, ಏಕೆ? ಅಂದರೆ, ಬಹುಶಃ ನೀವೇ ತಿಳಿದುಕೊಂಡಿರಬಹುದು. ಏನೆಂದರೆ , ಯಾರು ಏನು ಮಾಡುತ್ತಾರೆ, ಸುಮ್ಮನೆ ನಾಲ್ಕು ದಿವಸ ಒದರುತ್ತಾರೆ, ಹೇಳುತ್ತಾರೆ ಅನಂತರ ಹೋಗುತ್ತಾರೆ. ನಾವು ಇದನ್ನು ಮಾಡಿ ತೋರಿಸೋಣವೆಂದು ಮಾಡಿದ್ದೀರೋ ? ಅಥವಾ ಜನರು ಹೇಗೂ ಜಿಲ್ಲಾ ಪಂಚಾಯತ್ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ನಮ್ಮನ್ನು ಗೆಲ್ಲಿಸಿದ್ದಾರೆ. ಅಲ್ಲದೆ ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲೂ ನಮಗೆ ಬಹುಮತ ಸಿಕ್ಕಿದೆ, ಆದಕ್ಕೋಸ್ಕರ ನಾವೇನೇ ಮಾಡಿದರೂ ನಡೆಯುತ್ತದೆನ್ನುವ ಅಭಿಪ್ರಾಯಕ್ಕೆ ಬಂದಿದ್ದೀರೋ ಹೇಗೆ? ಏಕೆಂದರೆ, ಚುನಾವಣೆಗಳಾದ ನಂತರವೇ ಇದು ನಡೆಯುತ್ತದೆ. ಮೊನ್ನೇ ನಡೆದ ಲೋಕಸಭಾ ಚುನಾವಣೆ ಜರುಗುವ ಒಂದು ತಿಂಗಳ ಮುಂಚೆ ರಾಜ್ಯದಲ್ಲಿ ವಿದ್ಯುತ್ ವೋಲ್ಟೇಜ್ ಚೆನ್ನಾಗಿತ್ತು. ಬೀದಿ ದೀಪಗಳೆಲ್ಲವೂ ಚೆನ್ನಾಗಿ ಉರಿಯುತ್ತಿದ್ದವು, ಎಲ್ಲಾ ಕಡೆಯೂ ವಿದ್ಯುಚ್ಛಕ್ತಿ ಪೂರೈಕೆ ಇತ್ತು, ಹಗಲಲ್ಲೂ ಕೂಡ ಲೈಟ್ ಹಾಕಿರುತ್ತಿದ್ದರು. ಆದರೆ ಚುನಾವಣೆ ಮುಗಿದ ನಂತರ ವೋಲ್ಟೇಜ್ ಡ್ರಾಪ್ ಆಯಿತು. ಇದರ ಪರಿಣಾಮ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟುಹೋದವು. ಈ ರಾಜ್ಯದ ಜನತೆ ನಿಮಗೆ ಬೆಂಬಲ ಕೊಟ್ಟಿದ್ದಕ್ಕಾಗಿ , ಸಹಾಯ ಮಾಡಿದ್ದಕ್ಕಾಗಿ, ಅವರು ನಿಮ್ಮನ್ನು ನಂಬಿದ್ದಕ್ಕಾಗಿ ನೀವು ಉತ್ತಮ ಕೊಡುಗೆ ಕೊಡುವ ಮೂಲಕ ಜನರಿಗೆ ದ್ರೋಹವೆಸಗಿದ್ದು ಏನೆಂದರೆ , ಹಿಂದಿನ ಸರ್ಕಾರ ರೈತರು ಹಾಕಿಸಿರುವ ಹತ್ತು ಹೆಚ್ ಪಿ ಪಂಪುಸೆಟ್ಟುಗಳಿಗೆ ಒದಗಿಸುವ ಸೌಲಭ್ಯವನ್ನು ಹಿಂತೆಗೆದುಕೊಂಡು .ಪ್ರತಿ ಹೆಚ್ ಪಿ ಪಂಪುಸೆಟ್ಟುಗಳಿಗೆ ಮುನ್ನೂರು ರೂಪಾಯಿಗಳ ತೆರಿಗೆ ವಿಧಿಸಿದ್ದೀರಿ. ಅದೇ ರೀತಿ ಗೃಹ ಬಳಕೆದಾರರ ಮೇಲಾಗಲಿ, ಸಣ್ಣ-ಪುಟ್ಟ ಉದ್ದಿಮೆದಾರರ ಮೇಲಾಗಲಿ ಯಾರ ಮೇಲೂ ತೆರಿಗೆ ಹಾಕಿಲ್ಲ, ಇದರ ದೊಡ್ಡ ಪಟ್ಟಿಯನ್ನೇ ಕೊಟ್ಟಿದ್ದೀರಿ. ಅಂದರೆ ಇವೊತ್ತು ಸುಮಾರು 878-879 ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಹಾಕಿ ಯಾವ ಜನರು ನಿಮಗೆ ಬೆಂಬಲ ಕೊಟ್ಟರೋ ಅವರಿಗೆ ತೆರಿಗೆ ವಿಧಿಸುವ ಮೂಲಕ ತೊಂದರೆ ಕೊಟ್ಟು ದ್ರೋಹವೆಸಗುವ ಕೆಲಸ ಮಾಡಿದ್ದೀರಿ. ನೀವು ಈ ರೀತಿಯಾಗಿ ಹೇಳಬಹುದು. ನಾವು ಕೆ.ಇ.ಬಿ. ಯನ್ನು ನಷ್ಟದಲ್ಲಿ ನಡೆಸಬೇಕೇ? ಇಲ್ಲಿ ನೀವೇ ನಮ್ಮ ಜಾಗದಲ್ಲಿದ್ದಿದ್ದರೆ ನೀವೇನು ಮಾಡುತ್ತಿದ್ದಿರಿ? ಎನ್ನುವ ಪ್ರಶ್ನೆಯನ್ನು ಕೇಳಬಹುದು. ನಾನು ಒಂದು ಮಾತು ಕೇಳುತ್ತೇನೆ. ನೀವು ಒಂದು ತಿಂಗಳ ಕಾಲ ಉಪವಾಸ ಸತ್ಯಾಗ್ರಹ ಕುಳಿತುಕೊಂಡು ತದನಂತರ ಒಂದು ತಿಂಗಳ ಕಾಲ ಊಟ ಮಾಡಿಲ್ಲವೆಂದು ಒಂದೇ ದಿವಸದಲ್ಲಿ ಒಂದು ತಿಗಳ ಊಟವನ್ನು ಮಾಡುವುದಕ್ಕಾಗುವುದಿಲ್ಲ. ಹಾಗೇಯೇ ಇವೊತ್ತು ನೀವು ದರ ಏರಿಸದೆ . . . . ಯಾವುದೇ ಸರ್ಕಾರ ತೆರಿಗೆ ಇಲ್ಲದೆ

ನಡೆಯುವುದಿಲ್ಲ, ತೆರಿಗೆ ವಿಧಿಸದೆ ಸರ್ಕಾರ ನಡೆಸಿ ಎಂದು ಯಾರೂ ಕೂಡ ಹೇಳುವುದಿಲ್ಲ. ಆ ರೀತಿ ಹೇಳುವಂತಹ ಮೂರ್ಖರೂ ಕೂಡ ನಾವಲ್ಲ. ಆದರೆ ನೀವು ಮಾಡಿದ್ದೇನು ? ಯಾರನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಸರ್ಕಾರಕ್ಕೆ ಸಲ್ಲಿಸಿರುವ ವರದಿ ಪ್ರಕಾರ ಎಲ್ಲೆಲ್ಲಿ ಲೀಕೇಜ್‌ಗಳಿವೆ, ತೊಂದರೆಗಳಿವೆ ಅವುಗಳನ್ನು ಕಂಡು ಹಿಡಿದು ನಿವಾರಣೆ ಮಾಡದೆ, ಮತ್ತು ಅತ್ತ ಕಡೆ ಗಮನಹರಿಸದೆ ನೇರವಾಗಿ ಒಂದೇ ದಿವಸದಲ್ಲಿ ದಿಢೀರನೇ ನಿರ್ಣಯ ತೆಗೆದುಕೊಂಡು ಸುಮಾರು 857 ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ಇವೊತ್ತು ರಾಜ್ಯ ಜನತೆ ಮೇಲೆ ವಿಧಿಸಿ ಅವರಿಗೆ ಏನು ಹೇಳುತ್ತಿದ್ದಿರೆಂದರೆ ಜನರ, ರೈತರ ಉದ್ಧಾರಕ್ಕಾಗಿ ನಾವು ಈ ಕೆಲಸ ಮಾಡಿದ್ದೇವೆಂದು ಹೇಳುತ್ತಿದ್ದೀರಿ. ಅದರಲ್ಲೂ ಮಾನ್ಯ ಸಚಿವರಾದ ಬೈರೇಗೌಡರು ಏನು ಹೇಳಿದರೆಂದರೆ ನಿಮಗೆ ರೈತರ ಬಗ್ಗೆ ಮಾತನಾಡತಕ್ಕಂಥ ಹಕ್ಕಿಲ್ಲ, ಆದರೆ ನಮಗೆ ಆ ಹಕ್ಕು ಇದೆ. ಏಕೆಂದರೆ ಸುಮಾರು 857 ಕೋಟಿ ರೂಪಾಯಿಗಳಷ್ಟು ತೆರಿಗೆ ಹಣ ವಿಧಿಸಿದ್ದೇವೆ, ವಿದ್ಯುತ್ ದರ ಏರಿಸಿ ಪಂಪ್‌ಸೆಟ್‌ನ ಪ್ರತಿ ಹೆಚ್.ಪಿ. ಮೇಲೆ 300 ರೂಪಾಯಿಗಳನ್ನು ವಿಧಿಸಿರುವುದರಿಂದ ಇದರ ಬಗ್ಗೆ ಮಾತನಾಡಲು ನಮಗೆ ಹಕ್ಕು ಇದೆಯೇ ಹೊರತು ನಿಮಗೆ ಹಕ್ಕಿಲ್ಲವೆಂದು ಹೇಳುತ್ತಿದ್ದಾರೆ. ಅಲ್ಲದೆ, ಜಂಟಿ ಸದನ ಸಮಿತಿ ತನ್ನ ವರದಿಯಲ್ಲಿ ಪ್ರತಿ ಹೆಚ್.ಪಿ. ಪಂಪ್‌ಸೆಟ್‌ಗಳನ್ನು ವಿಧಿಸಬೇಕೆಂದು ಶಿಫಾರಸ್ಸು ಮಾಡಿದ್ದರೂ ಕೂಡ ನನ್ನ ಸರ್ಕಾರ ಬಂದ ನಂತರ ಅದನ್ನು ಮುನ್ನೂರು ರೂಪಾಯಿಗಳಿಗೆ ಏರಿಸಿದ್ದೇನೆ ಅದಕ್ಕಾಗಿ ನನಗೆ ಶಹಭಾಷ್‌ಗಿರಿ ಕೊಡಬೇಕೆಂದು ಅವರ ವಾದವಾಗಿದೆ. ಅಂದರೆ ನಾವು ಎಷ್ಟರಮಟ್ಟಿಗೆ ಅವರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆಂಬುದು ಇದರಿಂದ ಗೊತ್ತಾಗುತ್ತದೆ. ನಿಮ್ಮ ಕೈಯಲ್ಲಿ ಅಧಿಕಾರವಿಲ್ಲದಿದ್ದಾಗ ಹೇಳುವುದೊಂದು ನಿಮ್ಮ ಕೈಗೆ ಅಧಿಕಾರ ಬಂದಾಗ ಮಾಡುವುದು ಇನ್ನೊಂದು ಕನಿಷ್ಠ ಪಕ್ಷ ಜಂಟಿ ಸದನ ಸಮಿತಿಯಲ್ಲಿ ಯಾವ್ಯಾವ ಸದಸ್ಯರುಗಳಿದ್ದರೋ ಅವರನ್ನು ಕರೆಯಿಸಿ ನೋಡಿ ಪರಿಸ್ಥಿತಿ ಹೀಗಿದೆ ಇವೊತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಸುಮಾರು 1,500 ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿದೆ. ಇದನ್ನು ಕಾಂಪನ್‌ಸೇಟ್ ಮಾಡಬೇಕಾಗಿರುವುದರಿಂದ ಬೇರೆ ಕಡೆಯಿಂದ ಸಾಲ-ಸೌಲಭ್ಯಗಳನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಇದರ ಬಗ್ಗೆ ನೀವುಗಳು ಕೊಟ್ಟಂಥ ಸಲಹೆಗಳನ್ನಾದರೂ ಕೂಡ ಕೇಳತಕ್ಕಂಥ ಸೌಜನ್ಯವನ್ನು ತೋರಿಸಿದ್ದೀರೋ ವರದಿಯಲ್ಲಿ ಏನು ತಿಳಿಸಲಾಗಿದೆಯೆಂದು ಅದನ್ನಾದರೂ ನೋಡಿಕೊಂಡು ನೀವು ಕ್ರಮ ಕೈಗೊಂಡಿದ್ದೀರೋ ಅದೂ ಕೂಡ ಇಲ್ಲ. ಇವೊತ್ತು ಏನು ಮಾಡಿದ್ದೀರೆಂದರೆ, ಅಕ್ಕ ಪಕ್ಕದ ರಾಜ್ಯಗಳನ್ನು ನೋಡಿಕೊಂಡು ನಾವು ಮಾಡಿದ್ದೇವೆಂದು, ತಮಿಳುನಾಡಿನಲ್ಲಾಗಲಿ, ಕೇರಳದಲ್ಲಾಗಲಿ, ಮಹಾರಾಷ್ಟ್ರದಲ್ಲಾಗಲಿ, ಆಂಧ್ರಪ್ರದೇಶದಲ್ಲಾಗಲಿ ಅಲ್ಲಿ ಏನು ವಿದ್ಯುತ್‌ದರ ಇದೆ, ಆ ದರಕ್ಕೆ ನಮ್ಮ ರಾಜ್ಯದ ದರವನ್ನು ಹೋಲಿಸಿ ನೋಡಿದಾಗ ಇನ್ನೂ ಕಡಿಮೆ ಇದೆಯೆಂದು ಇಲ್ಲವೇ ಅದಕ್ಕೆ ಸರಿಸಮನಾಗಿ ಮಾಡಿದ್ದೇವೆಂಬ ವಾದವನ್ನು ಇಟ್ಟಿದ್ದೀರಿ. ಇದೇ ಮಾತನ್ನು ಇವೊತ್ತು ನೀವು ಜನರಿಗೆ ಹೇಳುತ್ತಿದ್ದೀರಿ ಮತ್ತು ಸದನದಲ್ಲಿ ಪುನಃ ಪ್ರತಿಪಾದಿಸುವವರಿದ್ದೀರಿ. ಆದರೆ ನೀವು ಕೊಟ್ಟಿರುವ ವರದಿಯಲ್ಲಿ ಕಂಪ್ಯಾರಿಟಿವ್ ಫಿಗರ್ಸ್ ನೋಡಿದರೆ ಎಲ್ಲಾ ರಾಜ್ಯಗಳಲ್ಲಿರುವ ದರಗಳು ಪರಸ್ಪರ ಹೋಲಿಕೆಯಾಗುವ ರೀತಿಯಲ್ಲಿಲ್ಲ. ತಮಿಳುನಾಡಿನಲ್ಲಿರುವ ದರ ಮಾತ್ರ ನಮ್ಮ ರಾಜ್ಯದ

ದರಕ್ಕೆ ಹೋಲಿಕೆಯಾಗುವ ರೀತಿಯಲ್ಲಿರುವುದನ್ನು ಕಂಡು ನೀವು ಅದರ ಬಗ್ಗೆ ಸಲಹೆ ಮಾಡುತ್ತಿದ್ದೀರೋ? ಈಗಾಗಲೇ ಗುಜರಾತ್ ರಾಜ್ಯ ಬಗ್ಗೆ ಹೇಳಿದ್ದಿರಿ. ಗುಜರಾತ್‌ನಲ್ಲೂ ಪರ್ ಹಾರ್ಸ್ ಪವರ್ ಮುನ್ನೂರೇ ಮಾಡಿದ್ದುದು. ಆದರೆ ಗುಜರಾತ್‌ನಲ್ಲಿನಮಗಿಂತ ವಿದ್ಯುಚ್ಛಕ್ತಿ ಜಾಸ್ತಿ ಉತ್ಪಾದನೆಯಾಗುತ್ತದೆ. ಅಲ್ಲಿ ವಿದ್ಯುತ್ ಬಳಕೆಯೂ ಸರಿಯಾಗಿದೆ. ತಮ್ಮ ವರದಿಯಲ್ಲಿ ಅನೇಕ ಕಡೆ ಗುಜರಾತ್ ಪದ್ಧತಿಯನ್ನು ಅನುಸರಿಸಬೇಕೆಂದು ಹೇಳಿದ್ದೀರಿ. ಟ್ರಾನ್ಸ್‌ಫಾರ್ಮರ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸಸ್ ಏನಿದೆ ಅದನ್ನು ಗುಜರಾತ್ ರಾಜ್ಯದ ಮಾದರಿಯಲ್ಲಿ ಮಾಡಬೇಕು ಲೋಡ್‌ಶೆಡ್ಡಿಂಗನ್ನು ಗುಜರಾತ್‌ನವರು ಏನು ಮಾಡಿದ್ದಾರೆ ಅದರ ಪ್ರಕಾರ ಮಾಡಬೇಕು. ಪೀಕ್ ಹವರ್ ಲೋಡ್ ಶೆಡ್ಡಿಂಗ್ ಏನಿದೆ ಅದು ಗುಜರಾತ್‌ನವರು ಕೈಗಾರಿಕೆಗಳಲ್ಲಿ ಯಾವ ರೀತಿ ಮಾಡಿದ್ದಾರೆ ಆ ರೀತಿ ಮಾಡಬೇಕು ಎನ್ನತಕ್ಕ ಮಾತಗಳನ್ನು ತಮ್ಮ ವರದಿಯಲ್ಲಿ ಹೇಳಿದ್ದೀರಿ. ಆ ರೀತಿ ಹೇಳಿಯೂ ಅವೆಲ್ಲವನ್ನು ಬದಿಗಿತ್ತು ನಿಮಗೆ ಯಾವ ರೀತಿ ಬೇಕೋ ಆ ರೀತಿಯಲ್ಲಿ ಬೆಲೆಯನ್ನು ಏರಿಸಿದ್ದೀರಿ. ಎಷ್ಟು ದರವನ್ನು ಏರಿಸಿದ್ದೀರೆಂದರೆ, ಗೃಹಬಳಕೆಯಲ್ಲಿ 55 ಪೈಸೆಯಿಂದ 75 ಪೈಸೆ ಇದ್ದದ್ದನ್ನು 1 ರೂ. 50 ಪೈಸೆಗೆ ಏರಿಸಿದ್ದೀರಿ. ಅಂದರೆ ಎಷ್ಟು ತಾರತಮ್ಯವಿದೆ ಎಂಬುದನ್ನು ನೋಡಬಹುದು. ಯಾವ ಸರ್ಕಾರವೂ 30, 50 ಪರ್‌ಸೆಂಟ್‌ನಷ್ಟು ತರಾತುರಿಯಲ್ಲಿ ಬೆಲೆಯನ್ನು ಏರಿಸುವುದು ಸರಿಯಲ್ಲ. ಅದಕ್ಕೆ ಒಂದು ಮಿತಿ ಇರುತ್ತದೆ. ಪ್ರತಿಯೊಂದು ಇಲಾಖೆಯು ಚೆನ್ನಾಗಿ ನಡೆಯಬೇಕು ಅಲ್ಲಿರತಕ್ಕ ನಷ್ಟವನ್ನು ಕಡಿಮೆ ಮಾಡಬೇಕಾದುದು ನಮ್ಮೆಲ್ಲರ ಕರ್ತವ್ಯ. ಆದರೆ ದಿಢೀರನೆ ಇಷ್ಟೊಂದು ಬೆಲೆ ಏರಿಸಿರುವುದು ಸರಿಯಲ್ಲ. ಹಾಗೆಯೇ ವಾಣಿಜ್ಯ ಉದ್ದಿಮೆಗಳಿಗೆ 3 ರೂ 50 ಪೈಸೆ ಇದ್ದದನ್ನು ಇರಿದು 4 ರೂ 50 ಪೈಸೆಗೆ ಏರಿಸಿದ್ದೀರಿ ನೀರಾವರಿ ಪಂಪುಸೆಟ್ಟುಗಳಿಗೆ ಮೊದಲು ಉಚಿತವಾಗಿದ್ದನ್ನು ಇವತ್ತು 300 ರೂಪಾಯಿಗಳಿಗೆ ಮಾಡಿದ್ದೀರಿ. ಅದೇ ರೀತಿ ಪಟ್ಟಣ ಮತ್ತು ಗ್ರಾಮ ಪಂಚಾಯಿತಿಗಳಿಗೆ ನೀರನ್ನು ಸರಬರಾಜು ಮಾಡುವ ವಿದ್ಯುತ್‌ಗೆ 65 ಪೈಸೆ ಇದ್ದದನ್ನು 1 ರೂಪಾಯಿ ಮಾಡಿದ್ದೀರಿ. ತಮಗೆ ಗೊತ್ತಿರಬಹುದು ಹಿಂದೆ ಅನೇಕ ಪಟ್ಟಣ ಮತ್ತು ಮುನಿಸಿಪಾಲಿಟಿಯವರು ನೀರನ್ನು ಸರಬರಾಜು ಮಾಡಲು ಉಪಯೋಗ ಮಾಡಿದ್ದ ವಿದ್ಯುತ್‌ಗೆ ಹಣವನ್ನು ಪಾವತಿ ಮಾಡಿಲ್ಲವೆಂದು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿತ್ತು. ಆಗ ಸರ್ಕಾರದವರು ಸುಮಾರು ನೂರು ಕೋಟಿ ರೂಪಾಯಿಗಳನ್ನು ಹಂತ ಹಂತವಾಗಿ ಕೆ.ಇ.ಬಿ. ಗೆ ತುಂಬಿ ಸಮಸ್ಯೆಯನ್ನು ಬಗೆಹರಿಸಿದ್ದರು. ತಾಲ್ಲೂಕು ಬೋರ್ಡ್‌ಗಳಲ್ಲಿದ್ದಂಥ ಆಡಳಿತದಿಂದ ಹಿಡಿದು 1989-90ರವರೆಗೆ ಏನು ಬಾಕಿ ಇತ್ತು ಅದನ್ನು ಹಂತ ಹಂತವಾಗಿ ಸರ್ಕಾರ ಭರಿಸಿ ಕೆ.ಇ.ಬಿ. ಗೆ ಆಗಿದ್ದಂಥ ನಷ್ಟವನ್ನು ಸ್ವಲ್ಪ ಪ್ರಮಾಣದಲ್ಲಿ ಕಡಿಮೆ ಮಾಡತಕ್ಕ ವ್ಯವಸ್ಥೆಯನ್ನು ಹಿಂದಿನ ಸರ್ಕಾರ ಮಾಡಿತ್ತು. ಅಂದರೆ ಇವತ್ತು ಮುನಿಸಿಪಾಲಿಟಿಗಳಗಾಗಲಿ ,ಪಟ್ಟಣ ಪಂಚಾಯಿತಿಗಾಗಲಿ, ಮಂಡಲ ಪಂಚಾಯಿತಿಗಾಗಲಿ ಏರಿಸಿರುವ ಬೆಲೆಯಲ್ಲಿ ಹಣವನ್ನು ಕೊಡುವ ಶಕ್ತಿ ಇಲ್ಲ. ಹಿಂದೆ 65 ಪೈಸೆ ಪರ್ ಯೂನಿಟ್ ಇದ್ದಾಗಲೇ ಅವರುಗಳಿಗೆ ಹಣವನ್ನು ಕೊಡಲು ಆಗುತ್ತಿರಲಿಲ್ಲ ಇನ್ನು ಒಂದು ರೂಪಾಯಿಗೆ ಏರಿಸಿದ ಮೇಲೆ ಸುಮಾರು 35 ಪೈಸೆ ಹೆಚ್ಚು ಮಾಡಿದ ಮೇಲೆ, 50 ಪರ್‌ಸೆಂಟ್ ಜಾಸ್ತಿ ಮಾಡಿದ ಮೇಲೆ ಅವರಿಗೆ ಹಣವನ್ನು ಕೊಡಲು ಶಕ್ತಿ ಬರುತ್ತದೆಯೇ? ಇವತ್ತು ಅವರುಗಳ ಆದಾಯದಲ್ಲೇನಾದರೂ ಜಾಸ್ತಿ ಆಗಿದೆಯೇ? ಅವರು ಆದಾಯವನ್ನು ಜಾಸ್ತಿ ಮಾಡಿಕೊಳ್ಳಲ್ಲೇನಾದರೂ ಆಗ್‌ಮೆನ್‌ಟೇಷನ್ ಮಾಡಿದ್ದೀರೋ? ಸರ್ಕಾರದಿಂದ ಅವರಿಗೆ ಹೆಚ್ಚಿಗೆ ಹಣವನ್ನೇನಾದರು ಕೊಟ್ಟಿದ್ದೀರೋ? ಯಾವುದೂ

ಇಲ್ಲ. ಆ ರೀತಿ ಯಾವುದೂ ಇಲ್ಲದೆ, ಅವರಿಗೆ ಹಣವನ್ನು ಕೊಡುವ ಶಕ್ತಿ ಇಲ್ಲದೆಯೇ ನೀರನ್ನು ಸರಬರಾಜು ಮಾಡದಿದ್ದಾಗ, ನೀರಿನ ಕೊರತೆ ಜಾಸ್ತಿಯಾಯಿತೆಂದು ಎಲ್ಲಾ ಕಡೆಗಳಲ್ಲಿ ಗಲಾಟೆಯಾದಾಗ ಸರ್ಕಾರವೇ ಹಣವನ್ನು ಕಟ್ಟಬೇಕು ಸರ್ಕಾರ ಮತ್ತೆ ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ಇದು ಅತ್ಯಾವಶ್ಯಕ ಜನರು ಗಲಾಟೆ ಮಾಡುತ್ತಾರೆ. ಎಲ್ಲಾರಿಗೂ ನೀರನ್ನು ಕೊಡಬೇಕು ಎಂದು ವಿವರುಗಳಿಗೆ ವಿದ್ಯುತ್‌ನ್ನು ಸರಬರಾಜು ಮಾಡುವ ನಿರ್ಣಯವನ್ನು ತೆಗೆದುಕೊಳ್ಳಲು ತಾವು ಪ್ರಯತ್ನ ಮಾಡುತ್ತೀರಿ. ಈ ಪದ್ಧತಿ ಹಿಂದೆಯೂ ನಡೆದುಕೊಂಡು ಬಂದಿದೆ ಈಗಲೂ ಆಗುತ್ತದೆ. ಆದರೆ ಯಾವುದೇ ಸರ್ಕಾರವು ಏಕಕಾಲಕ್ಕೆ 25 ರಿಂದ 45 ಪರ್‌ಸೆಂಟ್ ಬೆಲೆಯನ್ನು ಏರಿಸಿರಲಿಲ್ಲ. ನೀವು ಮಣ್ಣಿನ ಮಕ್ಕಳು, ರೈತರ ಮಕ್ಕಳುಗಳೆಂದು ಹೇಳಿ ಸುಮಾರು ಹತ್ತು ಲಕ್ಷ ಪಂಪುಸೆಟ್ಟುಗಳನ್ನಿಟ್ಟುಕೊಂಡಂಥ ಜನರು 65 ಲಕ್ಷ ರೈತ ಕುಟುಂಬಗಳಲ್ಲಿ ಸುಮಾರು ಹತ್ತು ಲಕ್ಷ ಕುಟುಂಬದವರು ಅಂತರ್ ಜಲದ ಮೇಲೆ ಅವಲಂಬಿಸಿರುವವರಿಗೆ ಭಾರಿ ಪೆಂಪುಸೆಟ್ಟು ಬೀಳುತ್ತದೆಂದು ತಮಗೆ ಗೊತ್ತಿದ್ದರೂ ತಾವು ಏಕೆ ಪಂಪುಸೆಟ್ಟುಗಳಿಗೆ 300 ರೂಪಾಯಿ ಮಾಡಿದಿರಿ ? ನಾವೆಲ್ಲಾ ಟೀಕೆ ಮಾಡಬೇಕು. ಜನರು ರೊಚ್ಚಿಗೆ ಏಳಬೇಕು. ವಿಧಾನಸೌಧದಲ್ಲಿ ಗಲಾಟೆಯಾಗಬೇಕು. ಪೇಪರ್‌ನಲ್ಲಿ ಬರಬೇಕು ಅನಂತರ ಅದನ್ನೆಲ್ಲಾ ನೋಡಿ ಏನಾದರೂ ಏರ್ಪಾಡು ಮಾಡೋಣವೆಂದು ಈ ರೀತಿ ಮಾಡಿದಿರಿ ? ಅಥವಾ ಕೊನೆಯ ಪಕ್ಷ ಇದರ ಬಗ್ಗೆ ನಿಮಗೆ ಕಾಳಜಿ ಇದ್ದರೆ ನಿಮ್ಮ ವರದಿಯಲ್ಲಿ ಇದರ ಬಗ್ಗೆ ನಾನೇ ಹೇಳಿದ್ದೇನೆ. ನಾನೇ ಕ್ಯಾಬಿನೇಟ್‌ನಲ್ಲಿ ಸದಸ್ಯನಾಗಿದ್ದೆ ಅನೇಕ ಸದಸ್ಯರುಗಳು ಕ್ಯಾಬಿನೇಟ್‌ನಲ್ಲಿದ್ದಾರೆ ಕನಿಷ್ಠಪಕ್ಷ ಈ ವರ್ಷ ಪಂಪುಸೆಟ್ಟಿಗೆ ನೂರು ರೂಪಾಯಿಗಳಿಗೆ ನಿಲ್ಲಿಸೋಣವೆಂದಾದರೂ ಹೇಳಿದ್ದೀರೋ ? ಅದೂ ತಮ್ಮ ವರದಿಯಲ್ಲಿ ಇಲ್ಲ. ನನಗೆ ತಿಳಿದಮಟ್ಟಿಗೆ ಇದರ ಬಗ್ಗೆ ಕ್ಯಾಬಿನೇಟ್‌ನಲ್ಲಿ ಸವಿಸ್ತಾರವಾಗದ ಚರ್ಚೆಯಾಗಿಲ್ಲ. ತರಾತುರಿಯಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೀರಿ. ಬಹುಶಃ ಸಂಬಂಧಪಟ್ಟ ಸಚಿವರು ಮತ್ತು ಕೆ.ಇ.ಬಿ.ಯ ಅಧಿಕಾರಿಗಳೆಲ್ಲರೂ ಸೇರಿ ತಮ್ಮದೇ ಆದಂಥ ನಿರ್ಣಯವನ್ನು ತೆಗೆದುಕೊಂಡು ಜನರ ಮುಂದಿಟ್ಟಿದ್ದಾರೆ. ನಾನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ಈ ದೇಶದಲ್ಲಿ ಯಾರು ಆಹಾರ ಬೆಳೆಗಳನ್ನು ಬೆಳೆಯತಕ್ಕ ರೈತರಿದ್ದಾರೆ. ಅವರುಗಳ ಬಗ್ಗೆ ಯಾರಾದರೂ ಅನುಕಂಪವನ್ನಿಟ್ಟುಕೊಂಡು ಪಂಪುಸೆಟ್ಟುಗಳ ಮೇಲೆ ವಿಧಿಸಿರುವ ದರವನ್ನು ತೆಗೆದು ಹಾಕಿ. ಹಿಂದೆ ಈ ಸದನದಲ್ಲಿ ಇದರ ಬಗ್ಗೆ ಅನೇಕ ಜನರು ಸಲಹೆಗಳನ್ನು ಮಾಡಿದಮೇಲೆ ಆಗ ಇದ್ದಂಥ ಕಾಂಗ್ರೆಸ್ ಸರ್ಕಾರ ಪಂಪುಸೆಟ್ಟುಗಳಿಗೆ ವಿಧಿಸುವ ಪದ್ದತಿಯನ್ನು ತೆಗೆದು ಹಾಕಿ ಉಚಿತವಾಗಿ ಕೊಡಲು ತೀರ್ಮಾನ ತೆಗೆದುಕೊಂಡಿತ್ತು ಒಂದು ಕಡೆ ಗೊಬ್ಬರದ ಸಬ್ಸಿಡಿ ಬಗ್ಗೆಮಾತನಾಡುತ್ತೀರಿ. ಪಿ.ಎಲ್.ಡಿ. ಬ್ಯಾಂಕ್‌ನಿಂದ ಕೊಟ್ಟ ಸಹಕಾರಿ ಸಾಲದ ಬಡ್ಡಿಯ ಮನ್ನಾದ ಬಗ್ಗೆ ಮಾತನಾಡಿದ್ದೀರಿ. ತಾವು ಚುನಾವಣೆಯಲ್ಲಿ ಗೆಲ್ಲುವ ಮೊದಲು ಯಾವ ನೀತಿಯನ್ನು ಇಟ್ಟುಕೊಂಡಿರುತ್ತೀರೋ, ಆದರೆ ಚುನಾವಣೆಯಲ್ಲಿ ಗೆದ್ದು ಬಂದಮೇಲೆ ಜನರ ಸವಾರಿ ಮಾಡುತ್ತಿರಿ ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಒಂದು ವೇಳೆ ತಮಗೆ ಆ ವರ್ಗದ ಮೇಲೆ ಕಾಳಜಿ ಇದ್ದಿದ್ದರೆ ನೀವು ಈ ರೀತಿ ಮಾಡುತ್ತಿರಲಿಲ್ಲ. ಹಿಂದಿನ ಸರ್ಕಾರದವರು ಉಚಿತವಾಗಿ ಕೊಟ್ಟಿದ್ದಕ್ಕೆ ಇವತ್ತು 300 ರೂಪಾಯಿ ಮಾಡತಕ್ಕ ಅವಶ್ಯಕತೆ ಏನಿತ್ತು?

★ (ಶ್ರೀ ಚಂದ್ರಕಾಂತ ಬೆಲ್ಲದ್‌ರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇದರ ಬಗ್ಗೆ ತಾವು ಸ್ಪಷ್ಟಪಡಿಸಬೇಕಾಗುತ್ತದೆ. ಬೆಲೆ ಏರಿಸುವ ಬಗ್ಗೆ ಜೆ.ಹೆಚ್.ಪಟೇಲ್‌ರವರೂ ಮತ್ತು ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ದೇವೇಗೌಡರು ಇಬ್ಬರೂ ಮಾತನಾಡಿಕೊಂಡು ಈ ರೀತಿ ಮಾಡಿದ್ದಾರೆಂದು ನನಗನ್ನಿಸುತ್ತಿದೆ. ನಾನು ಕೇಂದ್ರದಲ್ಲಿ ಪೆಟ್ರೋಲ್, ಡೀಸೆಲ್, ಎಲ್.ಪಿ.ಜಿ.ಗಳ ಬೆಲೆಯನ್ನು ಜಾಸ್ತಿ ಮಾಡುತ್ತೇನೆ ನೀವು ಕರ್ನಾಟಕದಲ್ಲಿ ವಿದ್ಯುಚ್ಛಕ್ತಿ ಬೆಲೆಯನ್ನು ಜಾಸ್ತಿ ಮಾಡಿಬಿಡಿ, ಅನಂತರ ಆಗುವುದನ್ನು ಇಬ್ಬರೂ ನೋಡಿಕೊಳ್ಳೋಣವೆಂದು ಮಾತನಾಡಿಕೊಂಡು ಬಹುಶಃ ಜಾಸ್ತಿ ಮಾಡಿರಬೇಕೆಂದು ನನಗನ್ನಿಸುತ್ತಿದೆ. ಇವರು ಇಲ್ಲಿ 50 ಪರ್‌ಸೆಂಟಿನಿಂದ 100 ಪರ್‌ಸೆಂಟ್‌ವರೆಗೆ ಬೆಲೆ ಜಾಸ್ತಿ ಮಾಡಿದರೆ ಅಲ್ಲಿ ಅವರು 50 ಪರ್‌ಸೆಂಟ್‌ನಿಂದ 300 ಪರ್‌ಸೆಂಟ್‌ವರೆಗೆ ಏರಿಸಿದ್ದಾರೆ. ರೂ.20 ಇದ್ದ ಪೆಟ್ರೋಲನ್ನು 25 ರೂಪಾಯಿಗೆ ಒಂದೇ ಕಾಲಕ್ಕೆ 5 ರೂಪಾಯಿಗಳನ್ನು ಹೆಚ್ಚು ಮಾಡಿದ್ದಾರೆ. ಅಷ್ಟೊಂದು ಹೆಚ್ಚಳವನ್ನು ಒಂದೇ ಕಾಲಕ್ಕೆ ಯಾರೂ ಮಾಡಿರಲಿಲ್ಲ. ಅದೇ ರೀತಿ ರೈತರಿಗೆ ಉಚಿತವಾಗಿ ಪಂಪುಸೆಟ್ಟುಗಳಿಗೆ ವಿದ್ಯುತ್ ಕೊಟ್ಟದ್ದನ್ನು 300 ರೂಪಾಯಿ ನಿಗದಿ ಮಾಡಿದ್ದಾರೆ ಅಂದರೆ 300 ಪರ್‌ಸೆಂಟ್ ಹೆಚ್ಚು ಮಾಡಿದಂತಾಗುತ್ತದೆ. ಅಂದರೆ ಆಡಳಿತದ ಬಗ್ಗೆಯಾಗಲಿ, ಜನರ ಮತ್ತು ರೈತರ ಬಗ್ಗೆಯಾಗಲಿ ಇವರಿಗೆ ಎಷ್ಟು ಕಾಳಜಿ ಇದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಹೆಚ್.ಎನ್.ನಂಜೇಗೌಡ:- ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಲ್ಲಿ ವಿನಂತಿಯೇನೆಂದರೆ, ಇಂಥ ಜನವಿರೋಧಿ ನೀತಿಯನ್ನು ಅನುಸರಿಸುತ್ತಿರುವ ಕೇಂದ್ರ ಸರ್ಕಾರಕ್ಕೆ ನರಸಿಂಹರಾವ್‌ರವರ ಕಾಂಗ್ರೆಸ್ ಸರ್ಕಾರ ನೀಡಿರತಕ್ಕ ಬೆಂಬಲವನ್ನು ವಾಪಸ್ ತೆಗೆದುಕೊಳ್ಳಲು ಹೇಳಿ. ಜನವಿರೋಧಿ ಸರ್ಕಾರ ಕೇಂದ್ರದಲ್ಲಿರತಕ್ಕದ್ದು ಸೂಕ್ತವಲ್ಲ, ಈ ಸರ್ಕಾರ ಹೋಗಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕಾವೇರಿ ಜಲವಿವಾದವಾದಾಗ ಸಲಹೆ ನೀಡಲು ಬನ್ನಿ ಎಂದು ಇವರನ್ನು ಕರೆದುಕೊಂಡು ಹೋಗಿದ್ದೆ. ಅದೇ ರೀತಿ ಈ ಬಾರಿ ಇದರ ಬಗ್ಗೆ ಮಾತನಾಡಲು ನಂಜೇಗೌಡರನ್ನೇ ಖಂಡಿತವಾಗಿ ಕರೆದುಕೊಂಡು ಹೋಗುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಗೌಪ್ಯವಾಗಿ ನಡೆದಿರತಕ್ಕ ವಿಚಾರಗಳು ಇಲ್ಲಿ ಬಹಿರಂಗವಾಗಬಾರದು.

★ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಆದ್ದರಿಂದ ಪೆಟ್ರೋಲಿಯಂ, ಎಲ್.ಪಿ.ಜಿ. ಮತ್ತು ಡೀಸೆಲ್ ಬಗ್ಗೆ ಮಾತನಾಡಬೇಕಾದರೆ ಇವರನ್ನೇ ಕರೆದುಕೊಂಡು ಹೋಗುತ್ತೇನೆ. ದೇಶದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ, ನಾಗರೀಕರ ಹಿತದೃಷ್ಟಿಯಿಂದ ಅವಶ್ಯಕತೆ ಇದ್ದರೆ ಮಾನ್ಯ ನಂಜೇಗೌಡರನ್ನು ಕರೆದುಕೊಂಡು ಹೋಗಿ ಈ ರೀತಿ ಬೆಲೆ ಜಾಸ್ತಿ ಮಾಡಿರುವುದು ಸರಿಯಲ್ಲವೆಂದು ಹೇಳುತ್ತೇನೆ. ಮತ್ತು ನಾವು ನಮ್ಮ ಪಕ್ಷದ ವತಿಯಿಂದ ಈಗಾಗಲೇ ಒಂದು ರೆಸಲ್ಯೂಷನನ್ನು ಮಾಡಿ ಕಳಿಸಿಕೊಟ್ಟಿದ್ದೇವೆ. ನಾವುಗಳು ಇಲ್ಲಿ ವಿರೋಧ ಪಕ್ಷದವರಾಗಿ ಕುಳಿತುಕೊಂಡು ಕೆಲಸ ಮಾಡಲು ಬಂದಿದ್ದೇವೆಯೇ ಹೊರತು ಯಾವುದೇ ರೀತಿಯಾದ ಏಜೆಂಟ್ ಆಗಿ, ನಮ್ಮ ಪಕ್ಷ ಯಾರಿಗೇ ಗುತ್ತಿಗಯಾಗಿಯಾಗಲೀ, ಮಾರ್ಟಗೇಜ್ ಆಗಿ, ಕೆಲಸ ಮಾಡಿಲ್ಲ ಎನ್ನತಕ್ಕ ಮಾತನ್ನು ಸ್ಪಷ್ಟ ಮಾಡುತ್ತೇನೆ. ಆದ್ದರಿಂದ ತಾವು ಇದರ ಬಗ್ಗೆ ಪದೇ ಪದೇ ಚುಚ್ಚಿ ಮಾತನಾಡಬಾರದೆಂದು ಹೇಳಬಯಸುತ್ತೇನೆ. ತಾವು 1979, 1983, 1989ರಲ್ಲಿ ಏನೇನು ಮಾಡಿದ್ದೀರೆಂದು ನಾನು ಹೇಳಬಲ್ಲೆ. ಸಂದರ್ಭ ಬಂದಾಗ ಒಂದೊಂದು ತತ್ವದ ಮೇಲೆ, ಒಂದೊಂದು ಕಾರ್ಯಕ್ರಮದ ಮೇಲೆ ಅದು ಆಗಿರಬಹುದು, ಆದರೆ

ತಾವು ರೈತರನ್ನು ಶೋಷಣೆ ಮಾಡಿದರೆ, ರೈತರನ್ನು ತುಳಿದರೆ, ರೈತರನ್ನು ಎಕ್ಸ್‌ಪ್ಲಾಯ್ಟ್ ಮಾಡಿದರೆ ನಾವುಗಳೆಲ್ಲರು ಸುಮ್ಮನೆ ಕುಳಿತುಕೊಂಡಿರುತ್ತೇವೆ ಎನ್ನತಕ್ಕ ಭಾವನೆ ತಮ್ಮಲ್ಲಿ ಯಾರಲ್ಲಿಯಾದರೂ ಇದ್ದರೆ ಅದನ್ನು ತೆಗೆದುಹಾಕಬೇಕೆಂದು ಈ ಸದನದ ಮೂಲಕ ನಮ್ಮ ಪಕ್ಷದ ವತಿಯಿಂದ ರಾಷ್ಟ್ರದ ಜನರಿಗೆ ಸಂದೇಶವನ್ನು ಕೊಡುತ್ತೇನೆ. ಎಲ್ಲಿ ಅವರು ಅನ್ಯಾಯ ಮಾಡುತ್ತಾರೋ, ಎಲ್ಲೆಲ್ಲಿ ಈ ರೀತಿಯಾದಂಥ ಜನ ವಿರೋಧಿ ನೀತಿಯನ್ನು ತಾಳುತ್ತಾರೋ, ಅಲ್ಲೆಲ್ಲಾ ನಾವು ಅದನ್ನು ಪ್ರತಿಭಟನೆ ಮಾಡುತ್ತೇವೆ, ವಿರೋಧ ಮಾಡುತ್ತೇವೆ, ಚಳುವಳಿ ಮಾಡುತ್ತೇವೆ ಎನ್ನತಕ್ಕ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಮುಖ್ಯ ಮಂತ್ರಿಗಳೇ ಒಂದಂತೂ ಬಹಳ ಸ್ಪಷ್ಟವಾಯಿತು. ನಮಗೆ ಮತ್ತು ಜನತೆಗೆ ಏನು ಅಗತ್ಯ ಇತ್ತೋ, ಆ ಅನುಮಾನವನ್ನು ಮಾನ್ಯ ಖರ್ಗೆಯವರು ಅವರದೇ ಆದಂತಹ ಸ್ಪಷ್ಟೀಕರಣವನ್ನು ನೀಡಿ ನಿವಾರಣೆ ಮಾಡಿದ್ದಾರೆ. ಈ ಹಿನ್ನಲೆಯಲ್ಲಿ, ಈ ವಿಷಯದಲ್ಲಿ ನಮ್ಮಲ್ಲಿ......, ನಿಮ್ಮ ಮನಸ್ಸಿನಲ್ಲಿ ಏನೋ ಇರಬಹುದು, ಬಿ.ಜೆ.ಪಿ. ಯವರು ಮತ್ತು ಇತರರು, ಯಾವುದೋ ಕಾರಣಕ್ಕೋಸ್ಕರ ಅಲ್ಲಿ ಕಾಂಗ್ರೆಸ್ ಬೆಂಬಲ ಕೊಟ್ಟಿದ್ದರೂ ಇಲ್ಲಿ ಏನೋ ವಿರೋಧಿ ಪಕ್ಷಗಳು ಕಚ್ಚಾಡಬಹುದು, ನಾವು ಅದರ ಲಾಭ ಮಾಡಿಕೊಳ್ಳಬಹುದು ಎಂಬ ಭ್ರಮೆಯಲ್ಲಿ ನೀವು ಇದ್ದಂತೆ ಕಾಣುತ್ತದೆ. ಈಗ ನೀವು ತಕ್ಷಣ ಎದ್ದು ನಿಂತುಕೊಂಡು ನಿಲುವಳಿ ಸೂಚನೆಗೆ ಒಪ್ಪಿಕೊಂಡು ಅಥವಾ ಅದರ ಚರ್ಚೆ ಆಗತ್ಯ ಇಲ್ಲ, ನಾನು ನೀವು ಏನು ಹೇಳುತ್ತೀರೋ ಅಷ್ಟಕ್ಕೆ ಬೆಲೆ ಇಳಿಸುತ್ತೇನೆ ಎಂದು ಹೇಳದಿದ್ದರೆ, ಇವತ್ತು ನಾವು ವೋಟಿಗೆ ಪ್ರೆಸ್ ಮಾಡಿದರೆ, ನಾಳೆ ಬೆಳಿಗ್ಗೆ ನಿಮ್ಮ ಸರ್ಕಾರ ನಿಶ್ಚಿತವಾಗಿಯೂ ಇರುವುದಿಲ್ಲ. ಕಾಂಗ್ರೆಸ್, ಬಿ.ಜೆ.ಪಿ. ಮತ್ತು ಇತರ ವಿರೋಧ ಪಕ್ಷಗಳು ಇವತ್ತು ಒಂದಾಗಿ ನಿಲುವಳಿ ಸೂಚನೆ ಏನು ಮಂಡಿಸಿದ್ದೇವೆ, ಅದೇ ರೀತಿ ನಾವು ಒಂದಾದರೆ ನಿಮ್ಮ ಸರ್ಕಾರ ಇರುವುದಿಲ್ಲ. ನೀವು ನಾಳೆ ಮತ್ತೆ ಮುಖ್ಯ ಮಂತ್ರಿಗಳಾಗಿ ಸದನಕ್ಕೆ ಬರಬೇಕು ಅಂತಿದ್ದರೆ ನೀವು ಇವತ್ತೇ ಇದರ ಬಗ್ಗೆ ನಿಮ್ಮ ಸ್ಪಷ್ಟೀಕರಣ ಕೊಡಬೇಕಾಗುತ್ತದೆ.

ಶ್ರೀ ಜೆ.ಹೆಚ್.ಪಟೇಲ್:- ಬಿ.ಜೆ.ಪಿ.ಯವರು ಮತ್ತು ಕಾಂಗ್ರೆಸ್ ಇಬ್ಬರೂ ಒಂದಾಗಿ ಬಿಟ್ಟರೆ ಸಾಕಲ್ಲ, ನಾನೂ ನೋಡುತ್ತೇನೆ. ಜನರ ಹತ್ತಿರ ಹೋಗೋಣ. ಮೊದಲು ನೀವಿಬ್ಬರೂ ಒಂದಾಗಿ ಬನ್ನಿ.

ಶ್ರೀ ಕೆ.ಎಸ್.ಈಶ್ವರಪ್ಪ:- ವಿದ್ಯುತ್ ದರ ಏರಿಕೆಯನ್ನು ವಿರೋಧಿಸಲು ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಯವರಿಬ್ಬರೂ ಒಂದಾಗಿದ್ದೇವೆ. ಅದರಲ್ಲಿ ಏನೂ ಅನುಮಾನ ಇಲ್ಲ.

★ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಅನೇಕ ಸಾರಿ ಜನ ವಿರೋಧಿ ನೀತಿಯನ್ನು ತಾವು ಅನುಸರಿಸಿದಾಗ ನಾವು ಎಲ್ಲಾ ಪಕ್ಷಗಳೂ ಒಂದಾಗಿ ಹೋರಾಟ ಮಾಡಬೇಕಾಗುತ್ತದೆ. ನೀವು ಮಾಡಿದಂತಹ ಅನ್ಯಾಯವನ್ನು ಸಹಿಸಿಕೊಂಡು ಹೋಗುವುದಕ್ಕೆ ನಾವಿಲ್ಲಿ ಬಂದಿದ್ದೇವೆಯೇ? ಜನ ಅದಕ್ಕಾಗಿ ನಿಮ್ಮನ್ನು ಆರಿಸಿ ಕಳುಹಿಸಿದ್ದಾರೆಯೇ? ಆ ದೃಷ್ಟಿಯಿಂದ ನೀವು ನೋಡಬೇಕು. ಅದನ್ನು ಬಿಟ್ಟು ಬಿ.ಜೆ.ಪಿ., ಕಾಂಗ್ರೆಸ್ ಒಂದಾಗಿದ್ದಾರೆ ಅದಕ್ಕೆ ನಾನು ಹೇಳಿಕೊಂಡೆ ಎಂದರೆ ಸರಿಯಾಗುವುದಿಲ್ಲ. ನೀವು ಮಾಡುವುದೆಲ್ಲಾ ಮಾಡಿ, ಅದಕ್ಕೆಲ್ಲಾ ಅಪ್ರೂವ್ ಕೊಡಿ, ನಾನು ಹಾಗೆಯೇ ನಡೆಸಿಕೊಂಡು ಹೋಗುತ್ತೇನೆ ಎಂದರೆ ಹೇಗೆ? ಪಂಪ್‌ಸೆಟ್‌ಗಳ ಮೇಲೆ 300 ರೂ. ಟ್ಯಾಕ್ಸ್ ಹಾಕುತ್ತೇವೆ, ಕುಡಿಯುವ ನೀರಿನ ಮೇಲೆ ಟ್ಯಾಕ್ಸ್ ಹಾಕುತ್ತೇವೆ, ರಸ್ತೆ ದೀಪದ ಮೇಲೆ ಟ್ಯಾಕ್ಸ್

ಹಾಕುತ್ತೇವೆ, ಹೀಗೆ ಪ್ರತಿಯೊಂದಕ್ಕೂ ಟ್ಯಾಕ್ಸ್ ಏರಿಸಿಕೊಳ್ಳುತ್ತಾ ಹೋಗುತ್ತೇವೆ, ನೀವು ಸಹಿಸಿಕೊಂಡು ಹೋಗಿ ಎಂದು ಹೇಳಿ ಏನಾದರೂ ಜನ ನಿಮಗೆ ಆದೇಶ ಕೊಟ್ಟಿದ್ದಾರೆಯೇ? ಅದೇನೂ ಅಲ್ಲವಲ್ಲ. ಆ ವಿಚಾರ ನಿಮ್ಮ ಮನಸ್ಸಿನಲ್ಲಿ ಹೇಗೆ ಬಂತು? ಯಾವ ಕಾರಣಕ್ಕಾಗಿ ನೀವು ರಸ್ತೆ ದೀಪ, ಹೆಚ್.ಪಿ. ಬಳಕೆದಾರರು, ನೀರು ಸರಬರಾಜು ಮಾಡುವುದು, ಸಣ್ಣ ಪುಟ್ಟ ಕೈಗಾರಿಕೆಗಳಿಗೆ, ಖಾಸಗಿ ತೋಟಗಾರಿಕಾ ನರ್ಸರಿಗಳಿಗೆ ಹೆಚ್ಚುವರಿ ದರ ತೆರುವಂತೆ ಮಾಡಿದ್ದೀರಿ? ಖಾಸಗಿ ತೋಟಗಾರಿಕಾ ನರ್ಸಿಂಗ್ ಬಗ್ಗೆ ನಿಮಗೆ ಗೊತ್ತಿದೆ. ಬೆಂಗಳೂರು ಸಿಟಿಯಲ್ಲಿ ಹೆಚ್ಚಾಗಿ ಈ ನರ್ಸರಿ ಮಾಡುತ್ತಿದ್ದಾರೆ. ಇದರಿಂದ ಫಾರಿನ್ ಎಕ್ಸ್‌ಚೇಂಜ್ ಕೂಡ ಹೆಚ್ಚಾಗಿ ಬರುತ್ತಿದೆ. ಅಂತಹವರಿಗೆ ಕೆಲವು ಕಡೆ ಪ್ರೋತ್ಸಾಹ ಕೊಡುತ್ತಿದ್ದೇವೆ. 5 ಗುಂಟೆ, 20 ಗುಂಟೆ, ಒಂದು ಎಕರೆ ವಿಸ್ತಾರವಾದಂತಹ ಪ್ರದೇಶಗಳಲ್ಲಿ ನರ್ಸರಿಗಳನ್ನು ಮಾಡತಕ್ಕವರು ಇದ್ದಾರೆ. ಯಾರೋ ಒಂದಿಬ್ಬರು ನಗರದಲ್ಲಿ ಈ ರೀತಿ ನರ್ಸರಿ ಮಾಡಿಕೊಂಡಿದ್ದರೆ ಅವರ ಮೇಲೂ ಟ್ಯಾಕ್ಸ್ ಹೇರಿದ್ದೀರಿ. ನೀವು ಯಾರನ್ನು ಬಿಟ್ಟಿದ್ದೀರಿ? ಒಬ್ಬರನ್ನೂ ಬಿಟ್ಟಿಲ್ಲ. ನಮ್ಮ ಹಳ್ಳಿಯ ರೈತರಿಂದ ಹಿಡಿದು ಸಣ್ಣ ಪುಟ್ಟ ನರ್ಸರಿ ಮಾಡತಕ್ಕವರಿಗೂ ಕೂಡ ನೀವು ಬಿಟ್ಟಿಲ್ಲ. ಕೇಂದ್ರ ಸರ್ಕಾರದವರೂ ಕೂಡ ಗೃಹ ಬಳಕೆಗೆ ಉಪಯೋಗಿಸುವಂತಹ ಎಲ್.ಪಿ.ಜಿ. ಮತ್ತು ಪೆಟ್ರೋಲಿಯಂ ದರ ಹೆಚ್ಚಿಸಿದ್ದಾರೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನೀವು 2-3 ಬಾರಿ ದೆಹಲಿಗೆ ಹೋಗಿ ಬಂದಿದ್ದು, ಇದೇ ವಿಷಯದ ಬಗ್ಗೆ ಚರ್ಚೆ ನಡೆಸಲಿಕ್ಕಾಗಿ ಎಂದು ನನಗನಿಸುತ್ತದೆ. 857 ಕೋಟಿ ರೂ.ಗಳಷ್ಟು ಹಣ ಹೆಚ್ಚಿಸಲು ಏಕಕಾಲದಲ್ಲಿ ಇಷ್ಟೊಂದು ದರ ಏರಿಸಬೇಕಾದ ಅವಶ್ಯಕತೆ ಇರಲಿಲ್ಲ. ನೀವು 5-10 ಪರ್ಸೆಂಟ್ ಮಾತ್ರ ಬೆಲೆ ಹೆಚ್ಚಿಸಿದ್ದರೆ, ಅದಕ್ಕೆ ಟೀಕೆ ಟಿಪ್ಪಣಿಗಳು ಬರುತ್ತಿದ್ದವು, ನೀವೂ ಕೂಡ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಅವಕಾಶವಿತ್ತು. ಆದರೆ ಈಗ ಮಾಡಿರುವ ದರ ಹೆಚ್ಚಳವನ್ನು ಸಮರ್ಥನೆ ಮಾಡಿಕೊಳ್ಳತಕ್ಕ ಶಕ್ತಿ ನಿಮಗೆ ಇಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ. ನೀವೇನಾದರೂ ಹಠ ಹಿಡಿದು, ಒಂದು ಸಾರಿ ದರ ಏರಿಕೆ ಮಾಡಿದ್ದೇ ಕೊನೆಯವರೆಗೂ ಇರುವುದು, ಇದು ನನ್ನ ಕ್ಯಾಬಿನೆಟ್ ನಿರ್ಣಯ ಎಂದರೆ ಹೇಗೆ? ಅದರಲ್ಲೂ ತಾವು ಮುಖ್ಯ ಮಂತ್ರಿಗಳಾದ ಮೇಲೆ ತೆಗೆದುಕೊಂಡ ಮೊದಲನೇ ನಿರ್ಣಯವೇ ಇದು. ತಾವು ಮುಖ್ಯ ಮಂತ್ರಿಗಳಾಗಿ ಒಂದೆರಡು ತಿಂಗಳಾದ ಮೇಲೆ ಸಂಬಂಧಪಟ್ಟವರೊಡನೆ ಚರ್ಚಿಸಿ ಈ ನಿರ್ಣಯವನ್ನು ತೆಗೆದುಕೊಂಡಿದ್ದೀರೋ ಎಂದರೆ ಅದೂ ಇಲ್ಲ. ನೀವು ಮುಖ್ಯ ಮಂತ್ರಿಗಳಾಗಿ ತೆಗೆದುಕೊಂಡ ಮೊದಲ ನಿರ್ಣಯದಲ್ಲೇ ತಾವು ರೈತರ ಮೇಲೆ, ಬಡವರ ಮೇಲೆ ಈ ಒಂದು ಪವರ್ ಟ್ಯಾರಿಫ್ ಹೈಕ್ ಮಾಡತಕ್ಕ ಕೆಲಸ ಮಾಡಿ ಜನ ವಿರೋಧಿ ಧೋರಣೆಯನ್ನು ತಾಳಿದ್ದೀರಿ. ಮತ್ತೊಂದು ಹೇಳಬೇಕಾದ ವಿಚಾರ ಏನೆಂದರೆ, Joint Committee of Karnataka Legislature on the working of Karnataka Electricity Board and Karnataka Power Corporation Limited ಅವರು ದಿನಾಂಕ 31.3.1994ರಂದು ಸರ್ಕಾರಕ್ಕೆ ತಮ್ಮ ವರದಿ ಕೊಟ್ಟಿದ್ದಾರೆ. ಅದರಲ್ಲಿಯೂ ಕೂಡ ಈಗಾಗಲೇ ನಾನು ಹೇಳಿದಂತೆ ಅನೇಕ ಹಿರಿಯ ಸದಸ್ಯರು ಇದ್ದರು. ನಮ್ಮ ಪವರ್ ಪ್ರೊಡಕ್ಷನ್ ಏನು? ನಮ್ಮ ಕನ್‌ಸಮ್‌ಷನ್ ಏನು? ನಮ್ಮ ಲೀಕೇಜಸ್ ಏನು? ಡಿಸ್ಟ್ರಿಬ್ಯೂಷನ್ ಲಾಸಸ್ ಎಷ್ಟು? ಟ್ರಾನ್ಸ್‌ಮಿಷನ್ ಲಾಸಸ್ ಎಷ್ಟು? ಲೋಡ್ ಶೆಡ್ಡಿಂಗ್ ಮಾಡುವಾಗ ಹೇಗೆ ಮಾಡಬೇಕು? ಮತ್ತು ಯಾವ ಯಾವ ಇಂಡಸ್ಟ್ರೀಸ್‌ಗಳ ಮೇಲೆ ಸರ್ಕಾರವು ಎಷ್ಟೆಷ್ಟು ದರವನ್ನು ವಿಧಿಸಬೇಕು? ಟ್ಯಾಕ್ಸ್ ಹಾಕಬೇಕೆಂಬುದರ

ಬಗ್ಗೆ ಎಲ್ಲಾ ಮಾಹಿತಿಗಳು ಇದರಲ್ಲಿ ಸಮಿತಿಯವರು ಕೊಟ್ಟಿದ್ದಾರೆ. ಅದಾಗ್ಯೂ ನೀವು ಈ ಅಂಶಗಳನ್ನು ಗಮನದಲ್ಲಿ ತೆಗೆದುಕೊಳ್ಳಲಿಲ್ಲ. ಕೆಲವೊಂದು ದೊಡ್ಡ ದೊಡ್ಡ ಇಂಡಸ್ಟ್ರೀಸ್‌ಗಳು ರಾಜ್ಯದಲ್ಲಿವೆ. ಉದಾಹರಣೆಗೆ ಅಲ್ಯೂಮಿನಿಯಂ ಇಂಡಸ್ಟ್ರೀಸ್ ಇತ್ಯಾದಿ. ಇವುಗಳಿಗೆ ಹಿಂದೆ ಯಾವ ಕಾಲದಲ್ಲಿ ಕನ್ಸೆಷನ್ ಕೊಟ್ಟಿದ್ದರೋ ಗೊತ್ತಿಲ್ಲ. ಈಗ ನೀವು ರೈತರಿಗೆ ಕನ್ಸೆಷನ್ ಕೊಟ್ಟಿದ್ದನ್ನು ವಾಪಸ್ ತೆಗೆದುಕೊಳ್ಳುತ್ತಿದ್ದೀರಿ. ಈ ಇಂಡಸ್ಟ್ರೀಸ್‌ಗಳ ಎಲೆಕ್ಟ್ರಿಸಿಟಿ ಕನ್ಸಮ್‌ಷನ್ ಎಷ್ಟಿದೆ ಎಂಬುದನ್ನು ಸದರಿ ವರದಿಯ ಪುಟ 24ರಲ್ಲಿನ "Scope of reduction in energy consumption in energy intensive industries" ಶೀರ್ಷಿಕೆಯಡಿಯಲ್ಲಿ ಕೊಟ್ಟಿದ್ದಾರೆ. ಅಲ್ಯೂಮಿನಿಯಂ ಫ್ಯಾಕ್ಟರಿಗಳ ಎಲೆಕ್ಟ್ರಿಸಿಟಿ ಕನ್‌ಸಮ್‌ಷನ್ 387.92 ಮಿಲಿಯನ್ ಯೂನಿಟ್ಸ್, ರಾ ಸ್ಟೀಲ್ 156.14 ಮಿಲಿಯನ್ ಯೂನಿಟ್ಸ್, ಸ್ಕ್ರ್ಯಾಪ್ ರಾ ಸ್ಟೀಲ್ 41.22 ಮಿಲಿಯನ್ ಯೂನಿಟ್ಸ್, ನ್ಯೂಸ್ ಪ್ರಿಂಟ್ 164.13 ಮಿಲಿಯನ್ ಯೂನಿಟ್ಸ್, ರೈಟಿಂಗ್ ಅಂಡ್ ಪ್ರಿಂಟಿಂಗ್ ಪೇಪರ್ಸ್ 98.19 ಮಿಲಿಯನ್ ಯೂನಿಟ್ಸ್, ಅಮೋನಿಯಾ 222.22 ಮಿಲಿಯನ್ ಯೂನಿಟ್ಸ್, ಸಿಮೆಂಟ್ ಫ್ಯಾಕ್ಟರಿ 226.89 ಮಿಲಿಯನ್ ಯೂನಿಟ್ಸ್, ಕಾಸ್ಟಿಕ್ ಸೋಡಾ 93.35 ಮಿಲಿಯನ್ ಯೂನಿಟ್ಸ್. ಇವೆಲ್ಲಾ ಹೈ ಎನರ್ಜಿ ಕನ್‌ಸ್ಯೂಮ್ ಮಾಡತಕ್ಕ ಇಂಡಸ್ಟ್ರೀಸ್‌ಗಳಾಗಿವೆ. ಈ ಇಂಡಸ್ಟ್ರೀಸ್‌ಗಳ ಮೇಲೆ ವಿದ್ಯುತ್ ಬಳಕೆಯ ಮೇಲೆ ನಿರ್ಬಂಧ ಮಾಡಬೇಕೆಂದು ಈ ವರದಿಯಲ್ಲಿ ಇದೆ. ಈ ಇಂಡಸ್ಟ್ರೀಸ್ ಇಷ್ಟೊಂದು ಎಲೆಕ್ಟ್ರಿಸಿಟಿಯನ್ನು ಕನ್‌ಸ್ಯೂಮ್ ಮಾಡುತ್ತವೆ, ಆದ್ದರಿಂದ ಇವುಗಳು ಬಳಸುವ ವಿದ್ಯುತ್ ಅನ್ನು ಸೇವಿಂಗ್ ಮಾಡಬೇಕು ಮತ್ತು ವಿದ್ಯುತ್ ಬಳಕೆಯಲ್ಲಿ ರಿಡಕ್ಷನ್ ಮಾಡಬೇಕೆಂದು, ಎನರ್ಜಿ ಕನ್‌ಸಮ್‌ಷನ್ ಕಡಿಮೆ ಮಾಡಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಆದರೆ ಅಲ್ಯೂಮಿನಿಯಂ ಇಂಡಸ್ಟ್ರೀಸ್, ರಾ ಸ್ಟೀಲ್ ಇಂಡಸ್ಟ್ರೀಸ್, ಸ್ಕ್ರ್ಯಾಪ್ ರಾ ಸ್ಟೀಲ್, ನ್ಯೂಸ್ ಪ್ರಿಂಟ್, ರೈಟಿಂಗ್ ಅಂಡ್ ಪ್ರಿಂಟಿಂಗ್, ಅಮೋನಿಯಾ, ಸಿಮೆಂಟ್ ಇತ್ಯಾದಿ ಇಂಡಸ್ಟ್ರೀಸ್‌ಗಳಲ್ಲಿ ಯಾವುದಕ್ಕೂ ನೀವು ರೆಡ್ಯೂಸ್ ಮಾಡಲಿಲ್ಲ. ಇವುಗಳಿಗೆ ಹಾಗೆ ಬಿಟ್ಟು, ತಮ್ಮ ಗದ್ದೆಗಳಿಗೆ ನೀರನ್ನು ಹಾಯಿಸಲು ರೈತರು ಉಪಯೋಗ ಮಾಡತಕ್ಕ ಪಂಪ್‌ಸೆಟ್‌ಗಳ ಮೇಲೆ ನೀವು 300.ರೂ. ದರ ವಿಧಿಸಿದ್ದೀರಿ. 100 ರೂ. ದರ ವಿಧಿಸಲು ಶಿಫಾರಸ್ಸು ಮಾಡಿದರೆ ನೀವು 300 ರೂ. ದರ ನಿಗದಿಪಡಿಸುತ್ತೀರಿ. ಶಿಫಾರಸ್ಸು ಮಾಡಿದ್ದಕ್ಕಿಂತಲೂ ಹೆಚ್ಚು ಪಟ್ಟು ದರವನ್ನು ವಿಧಿಸಿದ್ದೀರಿ. ಯಾವುದೇ ಅಂಶವನ್ನೂ ನೀವು ದರ ಏರಿಸುವಲ್ಲಿ ಗಣನೆಗೆ ತೆಗೆದುಕೊಂಡಿಲ್ಲ. ಒಂದು ಕಡೆ ನೀವು ರೈತರ ಬಗ್ಗೆ ಕಣ್ಣೀರು ಸುರಿಸುತ್ತೀರಿ, ಮತ್ತೊಂದು ಕಡೆ ದೊಡ್ಡ ದೊಡ್ಡ ಇಂಡಸ್ಟ್ರೀಸ್‌ಗಳಿಗೆ ಹಿಂದೇನು ಕನ್ಸೆಷನ್ ಕೊಡುತ್ತಿದ್ದಿರಿ, ಅದನ್ನು ಕಂಟಿನ್ಯೂ ಮಾಡಿದ್ದೀರಿ. ಈ ರೀತಿ ಏಕೆ ಮಾಡಿದಿರಿ? ಏಕೆಂದರೆ ರೈತರಿಗೆ ನೀವು ಫ್ರೀಯಾಗಿ ವಿದ್ಯುತ್ ಕೊಡುತ್ತಿದ್ದಿರಿ, ಅವರೊಂದಿಗೆ ಸರ್ಕಾರದ ಯಾವುದೇ ಅಗ್ರಿಮೆಂಟ್ ಇಲ್ಲ. ಆದರೆ ಇಂಡಸ್ಟ್ರೀಸ್‌ಗಳೊಂದಿಗೆ ಸರ್ಕಾರವು ಅಗ್ರಿಮೆಂಟ್ ಮಾಡಿಕೊಂಡಿರುವುದನ್ನೇ ನೆಪ ಮಾಡಿಕೊಂಡು ಕೋಟಿಗಟ್ಟಲೆ ಹಣವನ್ನು ಇಂಡಸ್ಟ್ರೀಸ್‌ಗಳಿಗೆ ಪುಕ್ಕಟೆಯಾಗಿ ಬಿಡುತ್ತಿದ್ದಿರಿ.

ಆ ರೀತಿ ರೈತರ ಪರವಾಗಿ ಇದೆಯೇ? ಬೆಳಗಾಂನ ಹಿಂಡಾಲ್‌ನಲ್ಲಿ ಲಕ್ಷಾಂತರ ಜನ ಕೆಲಸ ಮಾಡುತ್ತಿದ್ದಾರೋ, ಸಾವಿರಾರು ಜನ ಕೆಲಸ ಮಾಡುತ್ತಿದ್ದಾರೋ? ಬಿ.ಇ.ಎಲ್. ಮತ್ತು ಹೆಚ್.ಎಂ.ಟಿ. ಯಲ್ಲಿ ಮಾಡುವಷ್ಟು ಜನ ಆದರೂ ಅಲ್ಲಿ ಕೆಲಸ ಮಾಡುತ್ತಿದ್ದಾರೋ? ಅದೂ ಇಲ್ಲ,

ಅಥವಾ 10 ಲಕ್ಷ ರೈತರಿಗೆ ನೀವು ನಿರಾಶೆ ಮಾಡಿ ಟ್ಯಾಕ್ಸ್ ಹಾಕಬಹುದು, ಒಬ್ಬ ಇಂಡಸ್ಟ್ರೀಯಲಿಸ್ಟ್‌ಗೆ ನಿರಾಶೆ ಮಾಡುವುದಕ್ಕಾಗುವುದಿಲ್ಲ ನಿಮಗೆ? ಈ ಎಲ್ಲಾ ಸ್ಟೀಲ್ ಇಂಡಸ್ಟ್ರೀಸ್, ಪೇಪರ್ ಇಂಡಸ್ಟ್ರೀಸ್, ಸೋಡ ಇಂಡಸ್ಟ್ರೀಸ್, ಅಲ್ಯುಮಿನಿಯಂ ಇಂಡಸ್ಟ್ರೀಸ್ ಇವೆಲ್ಲಾ ಬೆರಳಿನ ಮೇಲೆ ಎಣಿಸತಕ್ಕಂತಹವರು 100 ಜನ ಇರಬಹುದು, ಆ 100 ಜನರಿಗೆ ನೀವು ನಿರಾಶೆ ಮಾಡಲಿಲ್ಲ, ಆದರೆ ರೈತರಿಗೆ, ಜನರಿಗೆ ಮತ್ತು ಬಡವರಿಗೆ ನಿರಾಶೆ ಮಾಡಿ ಅವರ ಮೇಲೆ ಟ್ಯಾಕ್ಸ್‌ಗಳನ್ನು ಹೇರುತ್ತಿದ್ದೀರಿ, ಎನ್‌ಹ್ಯಾನ್ಸ್ ಮಾಡುತ್ತಿದ್ದೀರಿ, ಇದು ಯಾವ ನೀತಿ? ಯಾವ ಧೋರಣೆ ಎಂದು ಕೇಳುತ್ತಿದ್ದೇನೆ. ಇದೂ ಒಂದು. ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು. ಈ ಎಲ್ಲಾ ಇಂಡಸ್ಟ್ರೀಗಳಿಗೆ ಹಿಂದೆ ಏನು ಅಗ್ರಿಮೆಂಟ್ ಆಗಿತ್ತು ಅದನ್ನು ರಿವೈವ್ ಮಾಡಿ ಆ ಟ್ಯಾಕ್ಸನ್ನು ಏನಾದರೂ ರಿವೈವ್ ಮಾಡಿದ್ದಾರೋ ಹೇಗೆ ಮತ್ತು ಹಿಂದಿನ ಅಗ್ರಿಮೆಂಟ್ ಇದೆ ಎಂದು ಹೇಳಿ ಅದೇ ರೀತಿಯಾಗಿ ಅಲ್ಯುಮಿನಿಯಂ ಫ್ಯಾಕ್ಟರೀಸ್‌ಗೆ ಕನ್‌ಸೆಷನ್ ಕೊಡುತ್ತಿದ್ದೀರಿ ಹೇಗೆ? ಅದು ಪಾಲಿಫೈಬರ್ ಇರಬಹುದು, ಅಲ್ಯುಮಿನಿಯಂ ಇಂಡಸ್ಟ್ರೀ ಇರಬಹುದು, ಸ್ಟೀಲ್ ಇಂಡಸ್ಟ್ರೀ ಇರಬಹುದು, ಕಾಸ್ಟಿಕ್ ಸೋಡಾ ಇಂಡಸ್ಟ್ರೀ ಇರಬಹುದು, ಅದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು. ಈಗಿನ ರೇಟಿನ ಮೇಲೆ ಮತ್ತು ಹಿಂದೆ ಅಗ್ರಿಮೆಂಟ್ ಯಾವ ಕಾಲದಲ್ಲಿ ಪ್ರಾರಂಭವಾದಾಗ ಏನು ಅಗ್ರಿಮೆಂಟ್‌ಆಗಿತ್ತು, ಅದಕ್ಕೆ ಹೋಲಿಸಿ ನೋಡಿದಾಗ ಎಷ್ಟೋ ಕೋಟಿ ರೂಪಾಯಿ ಲಾಸ್ ಆಗುತ್ತದೆ ಎನ್ನತಕ್ಕಂಥದ್ದು ಕೂಡ ತಾವು ಈ ಸದನದಲ್ಲಿ ಸ್ಪಷ್ಟಪಡಿಸಬೇಕು. ಇದು ಒಂದು. ಎರಡನೆಯದು ಐ. ಪಿ. ಸೆಟ್ ಬಗ್ಗೆ ಕೂಡ ಹೇಳಿದಿರಿ, ಈಗಾಗಲೇ ನಾನು ಹೇಳಿದ್ದೇನೆ, ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ತಾವು ಕೇಳಿದಿರಿ, ಗುಜರಾತಿನಲ್ಲಿ ಏನು ಇದೆ, ಅಲ್ಲಿ ಏನು ಇದೆ ನೋಡಿ ಎಂದು. ಅದನ್ನು ನೋಡೋಣ ಇನ್ನು ಈಗಾಗಲೇ ಅದರ ಬಗ್ಗೆ ಹೇಳಿದೆ, ಅಲ್ಲಿ ನಿಮಗಿಂತ ಜಾಸ್ತಿ ಹಾಕಿದ್ದಾರೆಂದರೆ ಏನೂ ಇಲ್ಲ, ನೀವು ಇಷ್ಟಕ್ಕೆ ಶಹಬಾಸ್‌ಗಿರಿ ಪಡೆದುಕೊಳ್ಳಬಹುದು, ನೀವು ಅವರಿಗೆ ಸರಿಸಮವಾಗಿ ಹಾಕಿದ್ದೇವೆಂದು ಹೇಳಿಕೊಳ್ಳಬಹುದು, ಆದರೆ ಪಕ್ಕದಲ್ಲಿ ತಮಿಳುನಾಡು ನೋಡಿ ನಮ್ಮಲ್ಲಿ ಇರತಕ್ಕಂತಹ 10 ಲಕ್ಷ ಪಂಪುಸೆಟ್ಟು ಇದ್ದರೆ, ಅವರ ಬಳಿ ಸುಮಾರು 16-17 ಲಕ್ಷ ಪಂಪ್‌ಸೆಟ್‌ಗಳಿವೆ. ಮಹಾರಾಷ್ಟ್ರದಲ್ಲಿ ಒಂದು ಕೋಟಿ 70 ಲಕ್ಷ ಪಂಪ್ ಸೆಟ್‌ಗಳಿವೆ. ಹೈಯಸ್ಟ್ ಮಹಾರಾಷ್ಟ್ರದಲ್ಲಿ ಪಂಪ್‌ಸೆಟ್‌ಗಳು ಇರತಕ್ಕಂಥದ್ದು, ನೀವು ಕೊಟ್ಟಿರತಕ್ಕಂತಹ ಅಂಕಿ ಸಂಖ್ಯೆಯ ಪ್ರಕಾರ ನಿಮ್ಮ ರಿಪೋರ್ಟ್ ತಪ್ಪು ಇದ್ದರೆ ಕ್ಷಮಿಸಬೇಕು.

ಶ್ರೀ ಸಿ. ಬೈರೇಗೌಡ:- ಮಾನ್ಯ ವೀರಪ್ಪ ಮೊಯಿಲಿಯವರು ಸಹ ಇಲ್ಲೇ ಇದ್ದಾರೆ ಅವರು ಮುಖ್ಯ ಮಂತ್ರಿಯಾಗಿದ್ದಾಗ ಇದರ ಬಗ್ಗೆ ಒಂದು ಸದನ ಸಮಿತಿಯನ್ನು ರಚನೆ ಮಾಡಿ ಎಂದು ನಾನು ಸಹ ಪ್ರಸ್ತಾಪ ಮಾಡಿದ್ದೆ, ಆ ರೀತಿಯ ಸಮಿತಿ ಆಗಬೇಕೆಂದು ಹೇಳಿದ್ದು ಸಹ ನಾನೇ, ಅದರಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿರುವವನೂ ನಾನೇ, ಅದರಲ್ಲಿ ಏನೂ ಸಂಶಯವಿಲ್ಲ. ಕೆಲವು ಮಾನ್ಯ ಸದಸ್ಯರೆಲ್ಲ ಸೇರಿ ನಾವು 100 ರೂಪಾಯಿಯವರೆಗೆ ಹಾಕಬಹುದು, ನೀವು ಹೇಳಿದ ಹಾಗೆ 16 ಗಂಟೆ ಕಾಲ ಸತತವಾಗಿ ವಿದ್ಯುತ್ ಸರಬರಾಜು ಮಾಡಬೇಕೆಂದು ಹೇಳತಕ್ಕಂಥದ್ದು ನಿಜ. ಅದರ ಜೊತೆಯಲ್ಲಿ ಬರತಕ್ಕಂತಹ ಹಣ ಏನು ಇದೆ, 100 ರೂಪಾಯಿ ಹಾಕಿದರೆ, ಇದನ್ನು ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೆ ಈ ವಿದ್ಯುತ್ ವ್ಯವಸಾಯಕ್ಕೆ ಎಲ್ಲಿ ವಿದ್ಯುತ್ ಹೆಚ್ಚಿಗೆ ಬಳಕೆಯಾಗುತ್ತಿದೆ, ಅಂತಹ ಕಡೆ ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೆ ಆದ್ಯತೆಯ ಮೇಲೆ ಆ ಹಣ ಬಳಕೆ ಆಗಬೇಕೆಂದು ಶಿಫಾರಸ್ಸು ಮಾಡಿರತಕ್ಕಂಥದ್ದು

ಇದೆಲ್ಲಾ ಕೂಡ ನಿಜ. ಅದು ಯಾವಾಗ ಆಯಿತು ಎಂದು ನೋಡಿ, ಅಲ್ಲಿಂದ ಈಚೆಗೆ ಏನೇನು ಆಗಿದೆ, ರಾಜ್ಯದಲ್ಲಿ ಏನಾಗಿದೆ, ದೇಶದಲ್ಲಿ ಏನಾಗಿದೆ, ಯಾವ ರೀತಿಯಾಗಿ ಬೆಳವಣಿಗೆಯಾಗಿದೆ?

ಶ್ರೀ ಬಿ.ಎಸ್.ಯಡಿಯೂರಪ್ಪ:- ದೇಶದಲ್ಲಿ ಏನೇನು ಅನ್ಯಾಯವಾಗಿದೆ, ಅನಾಹುತವಾಗಿದೆ.......

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಬೈರೇಗೌಡರು ಪ್ರಾಮಾಣಿಕವಾಗಿ ಮಾತನಾಡಬೇಕು ಮಂತ್ರಿಗಳಾಗಿ ಮಾತನಾಡಬೇಡಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ನಮ್ಮ ದುರ್ದೈವ ನೀವು ಮಂತ್ರಿಗಳಾಗಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ನಿಮ್ಮ ಹತ್ತಿರ ಒಂದು ಒಳ್ಳೆಯ ಅಭಿಪ್ರಾಯ ಇದೆ ಎಂದು ನಾವು ತಿಳಿದುಕೊಂಡಿದ್ದೇವೆ. ನೀವು ಪ್ರಾಮಾಣಿಕತೆಯಿಂದ ಹೇಳಿ. ಢೋಂಗಿನ ಆಟ ಆಡುತ್ತಿದ್ದೀರಿ.

ಶ್ರೀ ಸಿ.ಬೈರೇಗೌಡ:- ನಾನು ಇಲ್ಲಿ ಅಪ್ರಾಮಾಣಿಕವಾಗಿ ಒಂದು ಅಕ್ಷರ ಕೂಡ ಮಾತನಾಡಲಿಲ್ಲ, ಪ್ರಾಮಾಣಿಕವಾಗಿಯೇ ಮಾತನಾಡುತ್ತಿದ್ದೇನೆ. ತಾವು ರೈತರ ಬಗ್ಗೆ ಬಹಳ ಮಾತನಾಡುತ್ತಿದ್ದೀರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾನೂ ಏನೂ ಆಡಿಷನ್ನೂ ಮಾಡಲಿಲ್ಲ, ನೀವು ಹೇಳಿದ್ದುದು ಡಿಲಿಷನ್ನೂ ಮಾಡಲಿಲ್ಲ.

ಶ್ರೀ ಸಿ.ಬೈರೇಗೌಡ:- ಹೌದು ಹೇಳಿದ್ದೇವೆ. ನಾವು ಕೂಡ ಆ ರೀತಿಯಾದಂಥ ಒಂದು ಶಿಫಾರಸ್ಸು ಮಾಡಬೇಕಾದರೆ ನಾವು ಸಹ ರಾಜ್ಯದಾದ್ಯಂತ ಪ್ರವಾಸ ಮಾಡಿ ಅನೇಕ ರೈತರನ್ನು ಭೇಟಿಯಾಗಿ ಅವರ ಅಭಿಪ್ರಾಯವನ್ನೂ ಕೂಡ ಪಡೆದಿದ್ದೇವೆ. ರೈತರಿಗೆ ಒಂದು ಮಾತು ಏನೆಂದರೆ ಅವರಿಗೆ 100 ರೂ. ಹಾಕುತ್ತೀರೋ, 200 ರೂಪಾಯಿ ಹಾಕುತ್ತೀರೋ, 300 ರೂ. ಹಾಕುತ್ತೀರೋ, ಅದು ಅಲ್ಲ ಮುಖ್ಯ, ಪ್ರಾಮುಖ್ಯತೆ ಅವರಿಗೆ ಸಮರ್ಪಕವಾದ ಗುಣ ಮಟ್ಟದ ವಿದ್ಯುತ್ ಬಳಕೆಗೆ ಬೇಕು, ಅದು ಮುಖ್ಯ. ನೀವು ಯಾವುದೇ ರೈತನನ್ನು ಇವತ್ತಿನ ದಿವಸ ಕೇಳಿ 300 ರೂಪಾಯಿ ಹಾಕಿದರೂ ಸಹ, ಮುನ್ನೂರು ರೂಪಾಯಿ ಕೊಡುವುದಕ್ಕೆ ರೈತ ತಯಾರಿದ್ದಾನೆ. ನಾನು ಒಬ್ಬ ಬಳಕೆದಾರನಾಗಿ ಹೇಳುತ್ತಿದ್ದೇನೆ. ನನಗೆ ರೈತರ ಸಂಪರ್ಕ ಎಲ್ಲರಿಗಿಂತ ಜಾಸ್ತಿ ಇದೆ ಎಂದು ನಾನು ಹೇಳುತ್ತಿಲ್ಲ, ನನಗೂ ಕೂಡ ರೈತರ ಸಂಪರ್ಕ ಹೆಚ್ಚಿಗೆ ಇದೆ. ರೈತರು ಹೇಳತಕ್ಕಂಥದ್ದು, ನಮಗೆ ಒಳ್ಳೆಯ ಗುಣಮಟ್ಟ ಇರತಕ್ಕಂಥ ವಿದ್ಯುತ್ತನ್ನು ನಿಗದಿತ ವೇಳೆಗೆ ಸರಬರಾಜು ಮಾಡತಕ್ಕಂಥದ್ದು ಮುಖ್ಯ, ಬೆಲೆ ಅಲ್ಲ. ಅದು ಆಗುತ್ತಿಲ್ಲ. ಅದು ಆಗದೆ ಇರುವುದಕ್ಕೆ ಕಾರಣಗಳಿವೆ. ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸುತ್ತಾರೆ. ಇವತ್ತು ಬಹಳ ಹೇಳುತ್ತಿದ್ದೀರಿ, ನೀವೇ ಅಲ್ಲ ರೈತರ ಹತ್ತಿರ ಹೋಗುವವರು, ನಾವು ಕೂಡ ಹೋಗುತ್ತಿದ್ದೇವೆ. ಈಗಲೇ ಹೋಗುತ್ತೀರೋ, ನಡೀರಿ ಹೋಗೋಣ ಎಲ್ಲಿಗೆ ನಿಮ್ಮ ಜಿಲ್ಲೆಗೆ ಬರಬೇಕಾ, ಯಾವ ಜಿಲ್ಲೆಗೆ ಬರಬೇಕು ನಾನು ಬರುತ್ತೇನೆ. ನೀವು ನಡೀರಿ ಹೋಗೋಣ.

ಶ್ರೀ ಸಿ.ಆರ್.ಸಗೀರ್ ಅಹಮದ್:- ದಾವಣಗೆರೆಯಲ್ಲಿ ಹೇಳಿದಿರಲ್ಲ........

ಶ್ರೀ ಸಿ.ಬೈರೇಗೌಡ:- ನೀವು ದಾವಣಗೆರೆಗೆ ಬಾರದೆ ಇಷ್ಟು ಹೇಳುತ್ತಿದ್ದೀರಿ.

ಶ್ರೀ ಸಿ.ಆರ್.ಸಗೀರ್ ಅಹಮದ್:- ನಿಮ್ಮ ಜೊತೆ ಬಾರದೆ ಇಷ್ಟು ಅನುಭವಿಸುತ್ತಿದ್ದೇವೆ, ಸಾಲದೆ ಮತ್ತೆ ಏಕೆ ನಮಗೆ ಅಲ್ಲಿಗೆ ಕರೆಯುತ್ತಿದ್ದೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ಸರಿಯಾದ ಸಂಗತಿ ಹೇಳಿದ್ದಿರಿ. ತಾವು ಹೇಳಿದ ಹಾಗೆ ಐ.ಪಿ. ಸೆಟ್‌ಗಳಿಗೆ ದಿನಕ್ಕೆ 16 ಘಂಟೆಗೆ, 12 ಗಂಟೆ ನಿಗದಿತವಾಗಿ ವಿದ್ಯುತ್ ಕೊಟ್ಟು ಅವನಿಗೆ ಅನುಕೂಲ ಮಾಡಿ ಕೊಟ್ಟು ಈ ಸಾರಿ 100 ರೂ. ಹಾಕುತ್ತೇವೆ, ನಾಳೆ 200 ಹಾಕೋಣ, ಇಲಾಖೆ ನಡೆಸುವುದಕ್ಕೆ ಆಗುವುದಿಲ್ಲ ಎಂದರೆ ಖಂಡಿತವಾಗಿಯೂ ನಾನು ನಿಮ್ಮ ಜೊತೆ ಒಪ್ಪುತ್ತೇನೆ. ಸರ್ಕಾರದ ಜೊತೆ ನನಗೆ ಸಹಮತ ಇದೆ. ಹೋದ ವರ್ಷ ಯಾವುದೇ ಒಂದು ದಿವಸದಲ್ಲಿ ಒಂದೆರಡು ಗಂಟೆ ವಿದ್ಯುತ್ ಕೊಡದೆ ಒಬ್ಬ ಐ.ಪಿ. ಸೆಟ್ ಸ್ಟಾರ್ಟ್ ಮಾಡದೇ ಬೆಳೆ ಸಂಪೂರ್ಣವಾಗಿ ನಾಶ ಆಗಿರುವಂಥ ಕಾಲದಲ್ಲಿ ಅವನಿಗೆ ನೀವು ಬೆಲೆಯನ್ನು ಹೆಚ್ಚಿಸಿರುವಂಥದ್ದರ ಬಗ್ಗೆ ನನ್ನ ಅಭಿಪ್ರಾಯ ಕೇಳಬೇಡಿ ಜನರ ಅಭಿಪ್ರಾಯ ಕೇಳಿ. ನಾಳೆ ನೀವು ಇದನ್ನು ಪಾಸ್ ಮಾಡುವುದಕ್ಕಿಂತ ಮುಂಚೆ ನಿಮ್ಮ ಹೆಂಡತಿ ಮಕ್ಕಳನ್ನು ಕೇಳಿಕೊಂಡು ಬನ್ನಿ ಅವರು ಇದಕ್ಕೆ ಒಪ್ಪಿಗೆ ಕೊಡುತ್ತಾರೋ? ನಿಮ್ಮ ಮನೆಯವರೇ ಸೇರಿಸುವುದಿಲ್ಲ, ಇಲ್ಲಿ ಏನಾದರೂ ನೀವು ವಿದ್ಯುತ್ ದರ ಏರಿಸಿರುವುದಕ್ಕೆ ನೀವು ಕೈ ಎತ್ತಿದರೆ ನಿಮ್ಮ ಹೆಣ್ಣು ಮಕ್ಕಳು ಮನೆಗೆ ಸೇರಿಸುವುದಿಲ್ಲ, ಆ ಹಳ್ಳಿ ಜನರ ಪರಿಸ್ಥಿತಿ ಇರಲಿ, ನಿಮ್ಮ ಮನೆಯ ಪರಿಸ್ಥಿತಿಯ ಬಗ್ಗೆ ನೀವು ಅರ್ಥ ಮಾಡಿಕೊಳ್ಳಿ.

ಶ್ರೀ ಸಿ.ಬೈರೇಗೌಡ:- ನಮ್ಮ ಮನೆಯ ವ್ಯವಹಾರವನ್ನು ನಮ್ಮ ಹೆಂಡತಿಯವರೇ ಮಾಡುವುದು. ಒಂದು ದಿವಸ ಸ್ವಲ್ಪ ವೋಲ್ಟೇಜ್ ವ್ಯತ್ಯಾಸವಾದರೂ ಇವತ್ತಿನ ದಿವಸ ವೋಲ್ಟೇಜ್ ಇಲ್ಲ ಎಂದು ರಾತ್ರಿ ನನಗೆ ತಾಕೀತು ಮಾಡುತ್ತಿರುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಬೇರೆ ಕಡೆಗೆ ಕೊಡುವ ವಿದ್ಯುತ್ತನ್ನು ನಿಮ್ಮ ಕೋಲಾರಕ್ಕೆ ಹೆಚ್ಚು ವಿದ್ಯುತ್ ತೆಗೆದುಕೊಳ್ಳುತ್ತಿರಬಹುದು ಅದು ನಮಗೆ ಗೊತ್ತಿಲ್ಲ. ನೀವು ಮಂತ್ರಿಗಳು ಆದಮೇಲೆ ಇನ್‌ಫ್ಲೂಯನ್ಸ್ ಆಗಿದ್ದರೆ ಒಪ್ಪಿಕೊಳ್ಳಬಹುದು. ಆದರೆ ಇಡೀ ರಾಜ್ಯದ ರೈತ ಕಣ್ಣೀರು ಹಾಕುತ್ತಿದ್ದಾನೆ. ಇಷ್ಟು ಮಾತ್ರ ಹೇಳಬಲ್ಲೆ.

ಶ್ರೀ ಸಿ.ಬೈರೇಗೌಡ:- ಎಲ್ಲರಿಗೂ ಇರತಕ್ಕಂತಹ ವ್ಯವಸ್ಥೆ ನಮಗೂ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕೋಲಾರ ಬೆಂಗಳೂರಿಗೆ ಸ್ವಲ್ಪ ಸಮೀಪ ಇರುವುದರಿಂದ ಈ ಕಂಡಕ್ಟರ್ಸ್ ವೈರ್ ಮತ್ತು ಟ್ರಾನ್ಸ್‌ಫಾರ್ಮರ್ಸ್ ಬೇಗನೆ ಹೋಗುತ್ತವೆ. ಗುಲ್ಬರ್ಗಾ, ಬೀದರ್, ಬಿಜಾಪುರ ಮತ್ತು ರಾಯಚೂರಿಗೆ ಅದು ತಲುಪಬೇಕಾದರೆ ಮೂರು ದಿವಸ ಬೇಕಾಗುತ್ತದೆ. ಅದಕ್ಕೆ ಸ್ವಲ್ಪ ಏನಾದರೂ ಆದರೆ ಬೇಗನೆ ರಿಪೇರಿಯಾಗುತ್ತದೆ.

ಶ್ರೀ ಸಿ.ಬೈರೇಗೌಡ:- ಅದು ಒಪ್ಪುತ್ತೇನೆ.

★ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅದು ಒಪ್ಪಬೇಕು. ಅಧ್ಯಕ್ಷರೆ ಕ್ಷಮಿಸಬೇಕು, ನಾನು ಮಹರಾಷ್ಟ್ರದ್ದು ಹೇಳುವಾಗ ಸ್ವಲ್ಪ ತಪ್ಪು ಅಂಕೆ ಸಂಖ್ಯೆ ಬಂದಿತ್ತು. ಕರೆಕ್ಟ್ ಮಾಡಿಕೊಳ್ಳಬೇಕು. ಆಂಧ್ರ ಪ್ರದೇಶದ ಒಟ್ಟು ಐ.ಪಿ. ಸೆಟ್ 13 ಲಕ್ಷ 98, ಮಹರಾಷ್ಟ್ರದಲ್ಲಿ 17 ಲಕ್ಷ 18 ಸಾವಿರ, ಪಂಜಾಬಿನಲ್ಲಿ ಆರು ಲಕ್ಷ 57 ಸಾವಿರ ಮತ್ತು ಕರ್ನಾಟಕದಲ್ಲಿ ಅಂದಿನ ಅಂಕಿ ಸಂಖ್ಯೆಯ ಪ್ರಕಾರ 8 ಲಕ್ಷ 50 ಸಾವಿರ ಅಂದರೆ ಈ ವರ್ಷದ್ದು 50 ಸಾವಿರ, 60 ಸಾವಿರ ಲೆಕ್ಕ ಹಾಕಿದರೂ 10 ಲಕ್ಷ ಸಮೀಪ ಇದೆ. ಮುಖ್ಯ

ಮಂತ್ರಿಗಳ ಸ್ಟೇಟ್‌ಮೆಂಟ್ ಕೂಡ ಇದೆ. ಹೀಗೆ 10 ಲಕ್ಷ ನಾನು ಏಕೆ ಮಾತನ್ನು ಹೇಳುತ್ತೇನೆಂದರೆ, ಎಂದು ನೀವು ಸ್ವಲ್ಪ ಗಂಭೀರವಾಗಿ ಆಲೋಚನೆ ಮಾಡಬೇಕು. ನಮ್ಮ ಹಿಡುವಳಿದಾರರು ಏನಿದ್ದಾರೆ, ಕರ್ನಾಟಕ ರಾಜ್ಯದಲ್ಲಿ ಸುಮಾರು 65 ಲಕ್ಷ ದಿಂದ 70 - 72 ಲಕ್ಷದವರೆಗೂ ಇದ್ದಾರೆ. ಅದರಲ್ಲಿ ಸುಮಾರು 10 ಲಕ್ಷ ಜನ ಇದ್ದಾರೆ. ಇವರ ಎಕಾನಮಿ ಮೇಲೆ ಎಷ್ಟು ಪರಿಣಾಮ ಬೀರುತ್ತದೆ, ಎಷ್ಟು ಜನರಿಗೆ ಇದು ನೇರವಾಗಿ ಅಫೆಕ್ಟ್ ಆಗುತ್ತದೆ ಎನ್ನತಕ್ಕಂತಹ ಮಾತನ್ನು ಹೇಳುತ್ತಿದ್ದೇನೆ. ಅಂದರೆ ಒಂದು ಕುಟುಂಬದಲ್ಲಿ ಕನಿಷ್ಟಪಕ್ಷ 5 - 6 ಜನರ ಲೆಕ್ಕಕ್ಕೆ ತೆಗೆದುಕೊಂಡರೂ ಕೂಡ ಸಮೀಪ, 60 ರಿಂದ 70 ಲಕ್ಷ ಜನರಿಗೆ ನೇರವಾಗಿ ಅವರ ಜೀವನದ ಮೇಲೆ ಒಂದು ಪ್ರಹಾರ, 10 ಲಕ್ಷ ಪಂಪ್‌ಸೆಟ್‌ಗಳಿಗೆ ಎಂದರೆ ಒಂದು ಕುಟುಂಬದಲ್ಲಿ ಐದು ಜನ ಇದ್ದಾರೆ ಎಂದು ಹೆಚ್ಚು ಕಡಿಮೆ ಲೆಕ್ಕ ಇಟ್ಟುಕೊಂಡರೂ ಕೂಡ ಇವತ್ತು 50 ರಿಂದ 60 ಲಕ್ಷ ಜನರಿಗೆ ನೇರವಾಗಿ ನೀವು ತೊಂದರೆ ಮಾಡಿದ್ದೀರಿ ಎನ್ನತಕ್ಕಂತಹ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಆದರೆ ಅದೇ ರೀತಿಯಾಗಿ ದೊಡ್ಡ ದೊಡ್ಡ ಇಂಡಸ್ಟ್ರೀಗಳಿಗೆ ಹಿಂದೆ ಇರತಕ್ಕಂಥ ಅಗ್ರಿಮೆಂಟ್‌ಗಳನ್ನು ತಾವೇನಾದರೂ ರಿವೋಕ್ ಮಾಡಿದ್ದೀರಾ, ಕ್ಯಾನ್ಸಲ್ ಮಾಡಿದ್ದೀರಾ? ಇದೇ ರೇಟನ್ನು ಅವರಿಗೆ ಹಾಕಿದ್ದೀರಾ? ಒಂದು ವೇಳೆ ಹಾಕಿದ್ದರೆ ಅದರಲ್ಲಿ ಎಷ್ಟು ಹಣ ಬಂತು? ಈಗಾಗಲೇ ನೀವು ಹೇಳಿರುವ ಹಾಗೆ ಕೆ.ಇ.ಬಿ. ಗೆ 1159 ಕೋಟಿ ರೂ.ಗಳ ನಷ್ಟ ಅನುಭವಿಸುತ್ತಿದೆ ಎಂದು ಏನು ಹೇಳಿದ್ದೀರಿ ಅದನ್ನು ಮೇಕ್‌ಅಪ್ ಮಾಡುವುದಕ್ಕೆ ಅನೇಕ ಸಲಹೆಗಳನ್ನು ಕೊಟ್ಟರೆ ಮತ್ತು ಅವುಗಳನ್ನು ಆಚರಣೆಗೆ ತಂದಮೇಲೂ ಕೂಡ ಇನ್ನೂ ದರ ಕಡಿಮೆಯಾಗುತ್ತದೆ ಎಂದು ಗೊತ್ತಾದ ಮೇಲೆ ತದನಂತರ ಟ್ಯಾಕ್ಸನ್ನು ಹಾಕಿದರೆ ಅದನ್ನು ಕೆಲವು ಜನರು ಒಪ್ಪಬಹುದು, ಏಕೆಂದರೆ ಎಂಥೆಂಥ ಪ್ರಯತ್ನಗಳನ್ನು ಮಾಡಿ ಸದನದ ಸದಸ್ಯರುಗಳನ್ನು ಒಳಗೊಂಡ ಸಮಿತಿಯನ್ನು ಮಾಡಿ ಆ ಸಮಿತಿಯ ಸದಸ್ಯರುಗಳು ಕೊಟ್ಟಂಥ ಎಲ್ಲಾ ಸಲಹೆಗಳನ್ನು ತೆಗೆದುಕೊಂಡ ಮೇಲೂ ಕೂಡ ಇನ್ನೂ ಲಾಸನ್ನು ಸುಧಾರಣೆ ಮಾಡುವುದಕ್ಕೆ ಆಗುತ್ತಿಲ್ಲ, ಅದಕ್ಕಾಗಿ Inevitable ಇದನ್ನು ಮಾಡಬೇಕು, ಇದು ಅನಿವಾರ್ಯವಾಗಿದೆ ಎನ್ನತಕ್ಕಂಥ ಮಾತು ಏನಾದರೂ ಬಂದಿದ್ದರೆ, ಅದಕ್ಕೆ ಚಿಂತನೆಯನ್ನು ಮಾಡತಕ್ಕಂಥದ್ದು, ಯೋಜನೆಯನ್ನು ಮಾಡತಕ್ಕಂಥದ್ದು ಅವಶ್ಯಕವಾಗಿರುತ್ತಿತ್ತು. ಆದರೆ ಅದನ್ನೂ ಕೂಡ ನೀವು ಮಾಡಲಿಲ್ಲ. ಅಧ್ಯಕ್ಷರೇ, ಉದಾಹರಣೆಗಾಗಿ ನಾನು ಹೇಳುತ್ತೇನೆ, ಈಗ ನಿಮಗೆ ಅವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಏನೆಂದರೆ " To improve the financial viability of the K.E.B., the Committee strongly recommends the following: The State Government shall pay the entire arrears due to K.E.B., by Municipalities, Panchayats, Water Board, State owned Corporations directly out of the Government grants or assistance and the funds allocated/earmarked for the above institutions and organisations." ಇದನ್ನು ಮಾಡಿದ್ದೀರೋ? ಕೊಟ್ಟಿದ್ದರೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಸರ್ಕಾರದ ವತಿಯಿಂದ, ಕೆ.ಇ.ಬಿ.ಗೆ ಈಗಾಗಲೇ ನೀವು ಹೇಳಿರುವ ಹಾಗೆ 1159 ಕೋಟಿ ರೂ.ಗಳ ನಷ್ಟವಾಗಿದೆ ಎಂದು ಹೇಳಿರುವುದರಲ್ಲಿ ಅದನ್ನು ತುಂಬಲಿಕ್ಕೆ ಏನು ಬಾಕಿ ಇವೊತ್ತು ಮುನಿಸಿಪಾಲಿಟಿಯಿಂದ, ಪಂಚಾಯತಿಯಿಂದ,

ಕಾರ್ಪೋರೇಶನ್‌ನಿಂದ ಅಥವಾ ಪಬ್ಲಿಕ್ ಸೆಕ್ಟರ್‌ನಿಂದ ಅಥವಾ ಗೌರ್ನಮೆಂಟ್‌ನವರೇ ಕೊಡಬೇಕಾಗಿರುವುದು ಏನಿದೆ ಅಂಥ ಬಾಕಿ ಹಣವನ್ನು ತಾವೇನಾದರೂ ಪಾವತಿ ಮಾಡಿದ್ದೀರೋ? ಅದಕ್ಕೇನಾದರೂ ಗ್ರ್ಯಾಂಟ್ ಬಿಡುಗಡೆ ಮಾಡಿದ್ದೀರೋ? ಇಲ್ಲ. ಅದನ್ನೂ ಮಾಡಿಲ್ಲ. ಆಮೇಲೆ ನಿಮ್ಮ ಕೆ.ಇ.ಬಿ. ಸರ್ವೀಸ್ ಆರ್ಗನೈಸೇಶನ್, ಏನೆಂದರೆ ಇದು ವೀಕರ್ ಸೆಕ್ಷನ್ಸ್‌ಗಳಿಗೆ, ಭಾಗ್ಯಜ್ಯೋತಿಗೆ ಕುಟೀರ ಯೋಜನೆಗೆ, ಇವುಗಳಿಗೆ ನಾವು ಕನ್ಸೆಶನ್ ಕೊಡುತ್ತೇವೆಂದು ಹೇಳಿದ್ದೀರಿ, ಇದು ಹಿಂದೆಯೂ ಇತ್ತು, ಈಗಲೂ ಇದೆ. ಆದರೆ 53 ಸಾವಿರ ಉದ್ಯೋಗಿಗಳು ಕೆ.ಇ.ಬಿ.ಯಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಅವರುಗಳು ಕುಟೀರ ಯೋಜನೆ ಕೆಳಗಡೆ ಬರುತ್ತಾರೆಯೇ? ಭಾಗ್ಯಜ್ಯೋತಿ ಯೋಜನೆ ಕೆಳಗಡೆ ಬರುತ್ತಾರೆಯೇ? ಏಕೆಂದರೆ ಅವರು ಕನ್‌ಸ್ಯೂಮ್ ಮಾಡತಕ್ಕಂಥದ್ದು 200 ಮಿ.ಯೂನಿಟ್‌ಗಳು. ಅಂದರೆ ಸರ್ವೇ ಸಾಧಾರಣ ಸುಮಾರು 10 ರಿಂದ 12 ಕೋಟಿ ರೂ.ಗಳು ಅದನ್ನು ಈಗಿನ ರೇಟ್ ಪ್ರಕಾರ ಲೆಕ್ಕಕ್ಕೆ ತೆಗೆದುಕೊಂಡರೆ ಸುಮಾರು 18 ಕೋಟಿ ರೂ.ಗಳು ಬರುತ್ತಿತ್ತು. ನೀವು 18 ಕೋಟಿ ರೂ.ಗಳನ್ನು ಅವರಿಗೆ ಬಿಡಬಹುದು, ಆದರೆ ರೈತರಿಗೆ ಮಾತ್ರ ಬಿಡುವುದಕ್ಕೆ ತಯಾರಿಲ್ಲ. ಅದನ್ನು ನಮ್ಮ ಮುಖ್ಯ ಮಂತ್ರಿಗಳು ಸಮರ್ಥನೆ ಮಾಡಿಕೊಂಡಿದ್ದಾರೆ, ಹೇಗೆಂದರೆ ಎಂಪ್ಲಾಯೀಸ್‌ಗೆ ಕೊಡುವ ವಿದ್ಯುತ್ ನೆಗ್ಲಿಜಿಬಲ್ ಇದೆ ಬಿಡಿ, ಇದರ ಬಗ್ಗೆ ನಮ್ಮ ಪತ್ರಿಕಾ ಮಿತ್ರರು ಮುಖ್ಯ ಮಂತ್ರಿಗಳನ್ನು ಪ್ರಶ್ನಿಸಿ ಕೆ.ಇ.ಬಿ. ಉದ್ಯೋಗಿಗಳಿಗೆ ಕೊಡುತ್ತಿರುವ 200 ಯೂನಿಟ್ ಪುಕ್ಕಟೆ ವಿದ್ಯುತ್ತನ್ನು ಕೊಡುತ್ತಿದ್ದೀರಲ್ಲಾ ಅದನ್ನು ತೆಗೆಯುತ್ತೀರೋ ಎಂದು ಕೇಳಿದಾಗ ಮುಖ್ಯ ಮಂತ್ರಿಗಳು ಉತ್ತರಿಸಿ ಅದು ಸ್ವಲ್ಪ ಇದೆ, ನೆಗ್ಲಿಜಿಬಲ್ ಎಂದಿದ್ದಾರೆ. ಅಂದರೇನು 18 ಕೋಟಿ ರೂ.ಗಳ ಆದಾಯ ಬರತಕ್ಕಂಥದ್ದು ಇವರಿಗೆ ಸ್ವಲ್ಪ ಹಣ ಆದರೆ ರೈತರಿಗೆ ಕೊಟ್ಟರೆ ಇವರಿಗೆ ಭಾರಿಯಾಗುತ್ತದೆ. ಅಲ್ಯೂಮಿನಿಯಮ್‌ಗೆ ಕೊಟ್ಟ ಕೋಟ್ಯಾಂತರ ರೂ.ಗಳ ಕನ್ಸೆಷನ್ ಸ್ವಲ್ಪ ಆಯಿತು ಇವರ ಪ್ರಕಾರ, ಅಂದರೆ ಬಲ್ಕ್ ಇಂಡಸ್ಟ್ರೀಸ್‌ಗೆ. ಇದನ್ನೆಲ್ಲಾ ನೀವು ಯೋಚನೆ ಮಾಡಬೇಕಾಗಿತ್ತು. ಇವೆಲ್ಲವನ್ನೂ ನೀವೆ ಕೊಟ್ಟಿದ್ದೀರಿ ಎಂದು ನಾನು ಹೇಳುತ್ತಿಲ್ಲ, ಹಿಂದಿನ ಸರ್ಕಾರದವರು ಕೊಟ್ಟರೂ ಕೂಡ ಅಂದರೆ ಆ ಸರ್ಕಾರ ಕಾಂಗ್ರೆಸ್ ಸರ್ಕಾರವಿರಬಹುದು, ನಿಜಲಿಂಗಪ್ಪನವರ ಸರ್ಕಾರ ಇರಬಹುದು, ಯಾರದೇ ಇರಬಹುದು, ಆದರೆ ಈಗ ಹಣಕಾಸಿನ ಪರಿಸ್ಥಿತಿ ಈ ರೀತಿ ಇದೆ ಎಂದು ಯೋಚನೆ ಮಾಡಿದಾಗ ನೀವು ಏಕೆ ಇವುಗಳನ್ನು ಗಣನೆಗೆ ತೆಗೆದುಕೊಂಡಿಲ್ಲ? ಕೊಟ್ಟಂಥ ಸಲಹೆಗಳ ಬಗ್ಗೆ ನೀವು ಏಕೆ ಚರ್ಚೆಯನ್ನು ಮಾಡಲಿಲ್ಲ? ಮತ್ತು ಈ ಎಲ್ಲಾ ವಿಷಯಗಳನ್ನು ಅವಲೋಕನ ಮಾಡಿಕೊಂಡು ಅವುಗಳನ್ನು ಜಾರಿಯಲ್ಲಿ ತಂದಮೇಲೆ ಏನಾದರೂ ನ್ಯೂನತೆಗಳು ಇದ್ದರೆ ಅವುಗಳನ್ನು ಸರಿಪಡಿಸಿಕೊಂಡ ಮೇಲೆ ನೀವೇನಾದರೂ ಈ ವಿಷಯದಲ್ಲಿ ಕೈ ಹಾಕಿದ್ದರೆ ಜನರ ಜೇಬಿಗೆ, ಆಗ ಜನರು ತಿಳಿದುಕೊಳ್ಳುತ್ತಿದ್ದರು ಸರ್ಕಾರದವರು ಮಾಡಬೇಕಾದ ಎಲ್ಲಾ ಪ್ರಯತ್ನಗಳನ್ನು ಮಾಡಿದರೂ ಸಹ ಸರಿಹೋಗಲಿಲ್ಲವಾದ ಕಾರಣ ಇನ್ನೆವಿಟಬಲ್ ಇದ್ದುದ್ದರಿಂದ ದರವನ್ನು ಹೆಚ್ಚು ಮಾಡಿದ್ದಾರೆ ಎಂದು ತಿಳಿದುಕೊಳ್ಳುತ್ತಿದ್ದರು. ಆದರೆ ಅದನ್ನು ಯಾವುದನ್ನೂ ಕೂಡ ನೀವು ಮಾಡಲಿಲ್ಲ.

ಶ್ರೀ ಸಿ.ಬೈರೇಗೌಡ:- ತಮ್ಮ ಸರ್ಕಾರ ಇದ್ದಾಗ ಮತ್ತು ತಾವು ಮಂತ್ರಿಗಳಾಗಿದ್ದಾಗ ಇದೇ ವಿಷಯ ಬಂದಿತ್ತು. ಇದರ ಬಗ್ಗೆ ಆಗ ನೀವು ಏನು ಕ್ರಮ ತೆಗೆದುಕೊಂಡಿರಿ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಆಗ ನಾವು ವಿದ್ಯುತ್ ದರವನ್ನು ಏರಿಸಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಏನು ಕ್ರಮ ತೆಗೆದುಕೊಂಡರು ಎಂದರೆ ಆಗ ಅವರು ವಿದ್ಯುತ್ ದರವನ್ನೇ ಏರಿಸಲಿಲ್ಲ. ಆದರೆ ಈಗ ನಿಮಗೆ ಆ ಯೋಚನೆ ಇಲ್ಲ. ಆಗ ಅವರು ಪ್ರಶ್ನೆಯನ್ನು ಹೇಗೋ ಮೇನೇಜ್ ಮಾಡಿದರು, ಆಗ ನಿಮ್ಮ ಹಾಗೆ ಸಿಕ್ಕಾಪಟ್ಟೆ ವಿದ್ಯುತ್ ದರವನ್ನು ಏರಿಸಲಿಲ್ಲ. ಇದಕ್ಕೆ ನೀವು ಉತ್ತರ ಕೊಡಿ, ನೀವು ಇಲ್ಲಿಗೆ ಬರುತ್ತಿದ್ದ ಹಾಗೆ ಮನ ಬಂದ ಹಾಗೆ ವಿದ್ಯುತ್ ದರವನ್ನು ಏರಿಸಿ ಇಲ್ಲಿಗೆ ಕಳುಹಿಸಿದರೇನು?

★**ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:-** ಅಮೇಲೆ ಟ್ರಾನ್ಸ್‌ಮಿಷನ್ ಲಾಸ್ ಮತ್ತು ಈ ಡಿಸ್ಟ್ರಿಬ್ಯೂಶನ್ ಲಾಸ್‌ನಲ್ಲಿ ನಮಗೆ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ 18.40 ಎಂದು ಇದೆ, ಅದು ಹೋದ ವರ್ಷ 18.60 ಇದೆ. ನಾವು ಇದರ ಪ್ರಕಾರ ಲೆಕ್ಕ ಹಾಕಿದರೆ 76-77ರಲ್ಲಿ 15 ಪರ್ಸೆಂಟ್ ಇತ್ತು, ಅದನ್ನು ಬಿಡಿ, ನಾನು ಹೇಳತಕ್ಕಂಥದ್ದೇನೆಂದರೆ ಕನಿಷ್ಟ ಪಕ್ಷ ಇದು 15 ಪರ್ಸೆಂಟ್‌ಗೆ ಇರಬೇಕು. ಏಕೆಂದರೆ ಆಲ್ ಇಂಡಿಯಾ ಆವರೇಜ್ 19.78 ಇದೆ. ಅದಕ್ಕೋಸ್ಕರ ರಾಜ್ಯದಲ್ಲಿ ಏನು 18.60 ಟ್ರಾನ್ಸ್‌ಮಿಷನ್ ಲಾಸ್ ಇದೆ ಅದನ್ನು ಕನಿಷ್ಟ ಪಕ್ಷ 15 ಪರ್ಸೆಂಟ್‌ಗೆ ಇಳಿಸಿದರೆ ಸಾಕಷ್ಟು ಉಳಿತಾಯ ಇದರಲ್ಲೂ ಕೂಡ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇವೆ. ಅದರ ಬಗ್ಗೆ ನೀವೇನಾದರೂ ಪ್ರಯತ್ನಗಳನ್ನು ಮಾಡಿದ್ದೀರೋ? 15 ಪರ್‌ಸೆಂಟ್‌ಗೆ ತರತಕ್ಕಂಥ ಸಾಧ್ಯತೆಯನ್ನು ಮಾಡಿದ್ದೀರಾ? ಹೀಗೆ ಯಾವುದರಲ್ಲೂ ಮಾನೀಟರಿಂಗ್ ಇಲ್ಲ, ಕಳ್ಳತನ ಆಗತಕ್ಕಂಥದ್ದನ್ನು ತಪ್ಪಿಸಲಿಲ್ಲ, ದೊಡ್ಡ ದೊಡ್ಡ ಇಂಡಸ್ಟ್ರೀಸ್‌ಗಳವರು ಕಳ್ಳತನ ಮಾಡಿಕೊಂಡು ವಿದ್ಯುತ್ತನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಅದನ್ನು ನಿಲ್ಲಿಸಲಿಲ್ಲ. ಹೀಗೆ ಯಾವುದೇ ರೀತಿಯಿಂದ ನೋಡಿದರೂ ಕೂಡ ಮೇಲಿನ ಎಲ್ಲಾ ಪ್ರಯತ್ನಗಳನ್ನೂ ಮಾಡದೇ ದಿಢೀರ್ ಆಗಿ ವಿದ್ಯುತ್ ದರವನ್ನು ಏರಿಸಿರುವುದು ಏನಿದೆ ಅದು ನಿಜವಾಗಿಯೂ ಕೂಡ ಜನತೆಗೆ ವಿರುದ್ಧವಾಗಿದೆ. ಆದಕಾರಣ ನೀವು ಜನವಿರೋಧಿ ಧೋರಣೆಯನ್ನು ತಾವು ತಾಳಿದ್ದೀರಿ ಎನ್ನತಕ್ಕಂಥ ಮಾತನ್ನು ಇವೊತ್ತಿನ ದಿವಸ ನಾನು ಹೇಳಬೇಕಾಗಿದೆ. ಇನ್ನು ನಾಲ್ಕನೆಯದಾಗಿ ನಿಮ್ಮವರು ಗುಜರಾತ್ ಎಲೆಕ್ಟ್ರಿಸಿಟಿ ಬೋರ್ಡ್ ಬಗ್ಗೆ ಬಹಳಷ್ಟು ಹೊಗಳಿಕೆ ಮಾತುಗಳನ್ನು ಸಮಿತಿಯ ಮುಂದೆ ಹೇಳಿದ್ದಾರೆ. ಆದರೆ ಅದರ ಬಗ್ಗೆ ಕಾಳಜಿಯನ್ನೇನಾದರೂ ವಹಿಸಿದ್ದೀರೋ? ಇದರಲ್ಲಿ ಪುಟ ಸಂಖ್ಯೆ 119ರಲ್ಲಿ ಇರುವ ವಿಷಯಗಳ ಬಗ್ಗೆ ನಾನು ಪೂರ್ತಿ ಹೇಳುವುದಕ್ಕೆ ಈಗ ಹೋಗುವುದಿಲ್ಲ. ಮುಂದೆ ಇದರ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಟ್ಟಾಗ ಮಾತ್ರ ಪೂರ್ತಿ ಹೇಳುತ್ತೇನೆ. ಆದರೆ ಇದರಲ್ಲಿ ಒಂದನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಇದರಲ್ಲಿ ತಾವು ಏನು ಹೇಳಿದ್ದೀರೆಂದರೆ,

" It is well known fact that the H.T.Consumers which are located in the urban area are having better infrastructure facilities for supply of Electricity when compared to the Consumers located in the rural areas. The H.T.Consumers in the Urban areas are generally fed by seperate Feeders from the nearby 66 KV/132 KV sub-stations and the system distributiions are also the least. On account of the addi-

tional capital plan in meeting the load in urban areas, the Gujrat Electricity Board has decided to levy additional charges of Rs.2/- per KVA/per month for the payment of charges".

ಅವರು ಹೀಗೆ ಮಾಡಿದ್ದಾರೆ, ಅದೇ ರೀತಿ ನೀವು ಮಾಡಬೇಕು ಎಂದು ಹೇಳಿದ್ದೀರಿ, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಹಳ್ಳಿಗಳಲ್ಲಿ ಇಂಡಸ್ಟ್ರೀಗಳು ಪ್ರಾರಂಭವಾಗಬೇಕು ಬೆಂಗಳೂರನ್ನು ಬಿಟ್ಟು ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ ಕೈಗಾರಿಕೆಗಳು ಪ್ರಾರಂಭವಾಗಬೇಕು ಎಂದು ನೀವು ಹೇಳುತ್ತಿರುವಾಗ ಅಲ್ಲಿ ನೀವು ಟ್ರಾನ್ಸ್‌ಫಾರ್ಮರ್ ಮತ್ತು ಲೈನ್‌ಗಳನ್ನು ಸುಧಾರಣೆ ಮಾಡದೇ ಮತ್ತು ಯಾವುದೇ ರೀತಿಯಾಗಿ ಹೆಚ್.ಪಿ. ಕನ್‌ಸ್ಯೂಮರ್ಸ್‌ಗೆ ಫೆಸಿಲಿಟೀಸ್ ಕೊಡದೇ ಇರುವಾಗ ಹೇಗೆ ಅಲ್ಲಿ ಇಂಡಸ್ಟ್ರೀಸ್‌ಗಳು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ? ಈ ರೀತಿಯಲ್ಲಿ ಹತ್ತಾರು ಸಲಹೆಗಳು ಇದರಲ್ಲಿ ಇದೆ, ಈ ಸಲಹೆಗಳಾವುದನ್ನೂ ಕೂಡ ನೀವು ಗಮನಕ್ಕೆ ತೆಗೆದುಕೊಂಡಿಲ್ಲ. ತರಾತುರಿಯಲ್ಲಿ ಇವೊತ್ತಿನ ದಿವಸ ವಿದ್ಯುತ್ ದರವನ್ನು ಏರಿಸಿ ಸಾಮಾನ್ಯ ಜನರಿಗೆ ತೊಂದರೆಯನ್ನು ಕೊಡತಕ್ಕಂಥ ಪ್ರಯತ್ನವನ್ನು ತಾವು ಮಾಡಿದ್ದೀರಿ. ಇದರಿಂದ ಏನು ಗೊತ್ತಾಗುತ್ತದೆಂದರೆ ಈ ರಾಜ್ಯದ ಜನರ ಬಗ್ಗೆ ಮತ್ತು ರೈತರ ಬಗ್ಗೆ ತಮಗೆ ಕಾಳಜಿ ಇಲ್ಲ, ವಿಶೇಷವಾಗಿ ರೈತರ ಬಗ್ಗೆ ತಾವು ಏನು ಹೇಳಿಕೊಂಡಿದ್ದಿರೋ ಅದರ ವಿರುದ್ಧವಾಗಿ ರೈತರಿಗೆ ಶೋಷಣೆಯನ್ನು ಮಾಡತಕ್ಕಂಥ ಕೆಲಸವನ್ನು ತಾವು ಮಾಡಿದ್ದೀರಿ. ಇದಲ್ಲದೇ ಇವೊತ್ತು ಹೊಸದಾಗಿ ಫೈನಾನ್ಸಿಯಲ್ ವೈಯಬಿಲಿಟಿಯಲ್ಲಿ ವಿದ್ಯುತ್ ತಯಾರು ಮಾಡತಕ್ಕಂಥ ಯುನಿಟ್‌ಗಳಿಗೆ ನಾವು ಪರ್ಮಿಷನ್ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಆದರೆ ಇದರಲ್ಲಿ ಕೆಲಸವೇನೋ ಕ್ಲಿಯರ್ ಆಗಿದೆ ಎನ್ನತಕ್ಕಂಥ ಮಾತುಗಳು ಬಂದಿದೆ. ಅದರ ಮೇಲೂ ಕೂಡ ಒಂದು ಕಾಮೆಂಟ್ ಬಂದಿದೆ. ಅದು ಏಕೆ ಬಂತು? ಹೇಗೆ ಬಂತು ಎಂದು ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಏಕೆಂದರೆ ತಮ್ಮ ಪಕ್ಷದವರೇ ಎನ್‌ವಿರಾನ್‌ಮೆಂಟಲಿಸ್ಟ್ ಎಂದು ಹೇಳಿಕೊಂಡು ಸಾಕಷ್ಟು ಪ್ರಚಾರವನ್ನು ಪಡೆದಂತಹ ಶ್ರೀಮತಿ ಮೇನಕಾ ಗಾಂಧಿಯವರು ಕೂಡ ಹೇಳಿದ್ದಾರೆ. ಕೊಜೆಂಟ್ರಿಕ್ಸ್ ಕಂಪನಿಗೆ ಏನು ಪರ್ಮಿಷನ್ ಕೊಟ್ಟಿದ್ದಾರೆ ಅದರಲ್ಲಿ ಸಾಕಷ್ಟು ಕೈಚಳಕ ನಡೆದಿದೆ ಎನ್ನುವ ಮಾತು ಅಥವಾ ಅದರಲ್ಲಿ ಕರಪ್‌ಷನ್ ಆಗಿದೆ ಎನ್ನುವಂತಹ ಮಾತೂ ಕೂಡ ಹೇಳಿದ್ದಾರೆ. ಅದು ಹೇಗೆ? ಏಕೆಂದರೆ ಇಂತಹ ಮಾತುಗಳು ಹೇಳಿದ್ದರೆ ಜನರಿಗೆ ಸಂಶಯ ಬರುತ್ತದೆ. ಕರ್ನಾಟಕ ರಾಜ್ಯಕ್ಕೆ ಅದು ಇವತ್ತೇ ಬಂದಂತಹದ್ದಲ್ಲ. ಅದು ಸುಮಾರು 4-5 ವರ್ಷಗಳಿಂದ ಪ್ರೊಸೆಸ್ ಆಗಿ ಆಗಿ ಇವತ್ತು ಒಂದು ಹಂತಕ್ಕೆ ಈಗ ಬಂದಿದೆ.

ಅಧ್ಯಕ್ಷರು:- ನಿಮ್ಮ ನಿಲುವಳಿ ಸೂಚನೆಗೂ ಇದಕ್ಕೂ ಏನು ಸಂಬಂಧ?

★ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕೊಜೆಂಟ್ರಿಕ್ಸ್ ಎಂದರೆ ಎಲೆಕ್ಟ್ರಿಸಿಟಿ ಬಗ್ಗೆ ಬರುತ್ತದೆ, ಏಕೆಂದರೆ ಕೊಜೆಂಟ್ರಿಕ್ಸ್ ಕಂಪನಿಗೆ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ನೀವು ಅನುಮತಿ ಕೊಟ್ಟಮೇಲೆ ಗುರುತರವಾದ ಆಪಾದನೆ ನಮ್ಮ ಪ್ರಧಾನ ಮಂತ್ರಿ ಅಥವಾ ಹಿಂದಿನ ಮುಖ್ಯ ಮಂತ್ರಿಗಳ ಮೇಲೆ ಮಾಡಿದ್ದಾರೆ. ಇಲ್ಲೇ ಪ್ರಶ್ನೆ ಬರುತ್ತದೆ ನೋಡಿ. ಹಿಂದಿನ ಮುಖ್ಯ ಮಂತ್ರಿಗಳು ಎಂದರೆ ಅವರು ಈ ಸದನದಲ್ಲಿ ಇದ್ದಂತಹವರು. ಅದಕ್ಕೆ ಹೇಳಬೇಕಾಗುತ್ತದೆ. ಈಗ ಅವರು ಪ್ರಧಾನ ಮಂತ್ರಿಗಳಾಗಿದ್ದಾರೆ. ಆದುದರಿಂದ ಈ ಲೈನ್ ಹೇಗೆ ಡೀಮಾರ್ಕೆಟ್ ಮಾಡಬೇಕೋ ಗೊತ್ತಾಗಲಿಲ್ಲ. ಅದಕ್ಕೆ ಸ್ಪಷ್ಟವಾದಂತಹ

ಉತ್ತರ ಹೇಳಬೇಕು. ಯಾವ ಸನ್ನಿವೇಶದಲ್ಲಿ ಅವರು ಹೇಳಿದರು. ಏಕೆ ಇದು ಬಂತು? ಇದು ಒಂದು ದೊಡ್ಡ ಆಪಾದನೆ ನಮ್ಮ ಕರ್ನಾಟಕ ರಾಜ್ಯದ ಜನತೆಯ ಮೇಲೆ ಬಂದ ಹಾಗೆ ಆಗಿದೆ. ಇದರ ಬಗ್ಗೆ ಕೂಡ ಸ್ಪಷ್ಟೀಕರಣ ಕೊಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ನಂತರ ಇನ್ನೂ ಅನೇಕ ವಿಷಯ ಕೂಡ ಪ್ರಸ್ತಾಪ ಮಾಡತಕ್ಕಂಥಾದ್ದು ಇದೆ. ಕೆ.ಪಿ.ಸಿ. ಮತ್ತು ಕೆ.ಇ.ಬಿ. ಯವರು ಇವತ್ತು ನಾವು ಅಸಮರ್ಥರಿದ್ದೇವೆ, ನಮಗೆ ಇನ್ನು ಹೆಚ್ಚಿನ ಶಕ್ತಿ ಕೊಡಬೇಕು ಎಂದು ಏನು ಕೇಳುತ್ತಿದ್ದಾರೆ ಅದಕ್ಕೆ ನಮಗೆ ಸ್ವಲ್ಪ ಸಂಶಯ ಬರುತ್ತಿದೆ. ಏಕೆಂದರೆ ಪಬ್ಲಿಕ್ ಸೆಕ್ಟಾರ್‌ನಲ್ಲಿ ಯಾವುದೇ ಒಂದು ಕಾರ್ಪೊರೇಷನ್ ತೆಗೆದುಕೊಂಡರೆ ಅಥವಾ ಬೇರೆ ಯಾವುದೇ ಒಂದು ಬೋರ್ಡ್ ತೆಗೆದುಕೊಂಡರೆ ಅಲ್ಲಿ ನಾನ್ ಅಫೀಷಿಯಲ್ಸ್ ಮೆಂಬರನ್ನು ಚೇರ್‌ಮನ್ ಮಾಡತಕ್ಕಂಥ ಪ್ರಾವಿಜನ್ ಇದೆ. ಆದರೆ ಕೆ.ಇ.ಬಿ. ಮತ್ತು ಕೆ.ಪಿ.ಸಿ. ಯಲ್ಲಿ ಆ ಪ್ರಾವಿಜನ್ ಇಲ್ಲ. ಅಲ್ಲಿ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಪ್ರೊಫೆಷನಲ್ಸ್ ಮತ್ತು ಅದರಲ್ಲಿ ಆಳವಾಗಿ ಅಭ್ಯಾಸ ಮಾಡಿರತಕ್ಕಂಥವರಿಗೆ ಹಾಕಬೇಕು ಎಂದು, ಇಂಜಿನಿಯರ್ಸ್ ಅನ್ನು ಟೆಕ್ನಿಕಲ್ ಬೋರ್ಡ್‌ನಲ್ಲಿ ಚೇರ್‌ಮನ್ ಮಾಡಬೇಕು ಎಂದು ಹೇಳಿ ನೂರಕ್ಕೆ ನೂರರಷ್ಟು ಅವರೇ ಇದ್ದಾರೆ. ಈ ರೀತಿ ಇರುವಾಗಲೂ ಕೂಡ ಏಕೆ ಬೋರ್ಡ್‌ಗಳು, ಕಾರ್ಪೊರೇಷನ್‌ಗಳು ಲಾಸ್‌ನಲ್ಲಿ ಇವೆ? ಇವತ್ತು ಯಾವುದೋ ಒಂದು ಹ್ಯಾಂಡ್‌ಲೂಂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಒಬ್ಬರು ಎಂ.ಎಲ್.ಎ. ಅಥವಾ ನಾನ್ ಅಫೀಷಿಯಲ್ ಅನ್ನು ಚೇರ್‌ಮನ್ ಮಾಡಿದ್ದರೆ, ಆಗ ಅವನಿಗೆ ಏನೂ ಬರುವುದಿಲ್ಲ, ಅದಕ್ಕೆ ಅದು ಹಾಳಾಯಿತು ಎಂದು ಹೇಳುತ್ತಾರೆ. ಅಥವಾ ಇನ್ನೊಂದು ಯಾವುದಾದರೂ ನಿಗಮ ಅಥವಾ ಮಂಡಳಿಗೆ ನಾನ್ ಅಫಿಷಿಯಲ್ ಇದ್ದಾರೆ ಅದಕ್ಕೆ ಅದೇ ರೀತಿಯಾಯಿತೆಂದು ಹೇಳುತ್ತಾರೆ. ಸುಮಾರು 20-25 ವರ್ಷದಿಂದ ಈ ಬೋರ್ಡ್‌ನಲ್ಲಿ ಎಕ್ಸ್‌ಪರ್ಟ್ ಇರುತ್ತಾರೆ, ಇದ್ದ ಮೇಲೂ ಕೂಡ ಇಷ್ಟೊಂದು ಲಾಸ್ ಆಗತಕ್ಕಂಥ ಕಾರಣ ಏನು? ಇದನ್ನು ಸರಿಪಡಿಸತಕ್ಕಂಥ ವ್ಯವಸ್ಥೆ ಏಕೆ ಆಗಲಿಲ್ಲ? ಮತ್ತು ಈ ವ್ಯವಸ್ಥೆ ಆಗಿಲ್ಲವೆಂದು ಹೇಳಿ ತಾವೇನಾದರೂ ರಿವ್ಯೂ ಮಾಡಿ ಅವರಿಗೆ ಬೇಕಾದಂತಹ ಸೌಲಭ್ಯಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೀರೋ? ಅವರಿಗೆ ಬೇಕಾದಂತಹ ಸ್ವಾಯತ್ತತೆ ಕೊಡತಕ್ಕಂಥಾದ್ದು ಮಾಡಿದ್ದೀರೋ? ಇದೆಲ್ಲಾ ಪ್ರಶ್ನೆ ಕೂಡ ಇದೆ. ಆದುದರಿಂದ ಆ ಬೋರ್ಡ್ ವರ್ಕಿಂಗ್ ಬಗ್ಗೆ, ಲೀಕೇಜ್ ಬಗ್ಗೆ ಮಾತನಾಡಬೇಕಾಗಿದೆ. ಮತ್ತು ಎಲ್ಲಿ ನೀವು ಹಣವನ್ನು ಗಳಿಸಬಹುದು ಮತ್ತು ಎಲ್ಲಿ ನೀವು ಇವತ್ತು ಎಲೆಕ್ಟ್ರಿಸಿಟಿ ಕನ್‌ಸಂಪ್‌ಷನ್ ಕಡಿಮೆ ಮಾಡಬಹುದು ಇವೆಲ್ಲದರ ಬಗ್ಗೆ ಕೂಡ ಸವಿಸ್ತಾರವಾಗಿ ಹೇಳುವುದಕ್ಕೆ ಅವಕಾಶವಾಗುತ್ತದೆ. ಅದಕ್ಕೋಸ್ಕರ ದಯವಿಟ್ಟು ಈ ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನಾನು ಹೇಳಿ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮತ್ತು ಇದರ ಬಗ್ಗೆ ನಮಗೆ ಹೆಚ್ಚಿನ ಆಸಕ್ತಿ ಕೂಡ ಇದೆ. ಒಂದು ವೇಳೆ ಇಲ್ಲ ಎಂದರೆ ನಾವು ಹಠ ಹಿಡಿದರೆ ಮುಂದೆ ಏನು ಮಾಡಬೇಕು ಎಂದು ನಾವು ನಿಮಗೆ ತಿಳಿಸುತ್ತೇವೆ. ದಯವಿಟ್ಟು ಈಗಲಾದರೂ ಅವರು ಒಪ್ಪಿಕೊಳ್ಳಲಿ ಎಂದು ತಮ್ಮ ಮುಖಾಂತರ ಕೇಳುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ:- ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆ ಕೊಟ್ಟಿರತಕ್ಕಂಥಾದ್ದು ಸರಿ. ಆದರೆ ಇಂತಹ ವಿಚಾರಗಳು ಬಂದಾಗ ಚರ್ಚೆಗೆ ಸರ್ಕಾರ ಬೇಡ ಎಂದು ಹೇಳುವುದಿಲ್ಲ. ಚರ್ಚೆ ಹೇಗೆ ಆಗಬೇಕು ಎಂದರೆ, ಮೊದಲೇ ಸರ್ಕಾರ ಒಂದು ಸ್ಟೇಟ್‌ಮೆಂಟ್

ಮಾಡಬೇಕಾಗುತ್ತದೆ. ಸ್ಟೇಟ್‌ಮೆಂಟ್ ಮಾಡಿದ ಮೇಲೆ ಸರ್ಕಾರದ ನಿಲುವೇನು? ಅವರ ಜಸ್ಟಿಫಿಕೇಷನ್ ಏನು.......?

ಶ್ರೀ ಸಿ.ಬೈರೇಗೌಡ:- ನೀವು ಯಾವುದಕ್ಕೂ ತಯಾರು ಇಲ್ಲವಲ್ಲ?

ಶ್ರೀ ಹೆಚ್.ಎನ್.ನಂಜೇಗೌಡ:- ನೀವು ಮಾಡುತ್ತೇವೆ ಎಂದು ಹೇಳಿಬಿಟ್ಟರೆ ಏನು ಇರುವುದೇ ಇಲ್ಲವಲ್ಲ? ಸರ್ಕಾರದ ನಿಲುವು ಏನೆಂದು ಗೊತ್ತಾದ ಮೇಲೆ ನಾವು ಚರ್ಚೆ ಪ್ರಾರಂಭ ಮಾಡಿದರೆ ಅದಕ್ಕೆ ಅರ್ಥ ಇರುತ್ತದೆ. ಪ್ರೊಸೀಜರ್ ಇದ್ದು ಅದು ಆಗಬೇಕಾದ್ದೆ ಆ ರೀತಿಯಲ್ಲಿ. ಕೊನೆಯಲ್ಲಿ ಅವರು ಉತ್ತರ ಕೊಡುವುದಾದರೆ ಪತ್ರಿಕೆ ವರದಿ ಅನುಸರಿಸಿ ಅಲ್ಲಿ ಬಂದಿರತಕ್ಕಂಥ ವ್ಯಾಖ್ಯಾನ ತಿಳಿದುಕೊಂಡು ನಾವು ವಾದ ಮಾಡತಕ್ಕಂಥ ಪರಿಸ್ಥಿತಿ ಆಗಿದೆ. ನಿಲುವಳಿ ಸೂಚನೆಯನ್ನು ಟೆಕ್ನಿಕಲ್ ಆಗಿ ತೆಗೆದುಕೊಂಡಾಗ ಮಾತ್ರ ಅದರ ಪ್ರಶ್ನೆ ಬೇರೆ ಆಗುತ್ತಿತ್ತು. ಸರ್ಕಾರ ಅಪೇಕ್ಷೆಪಟ್ಟರೆ ಅವರು ಒಂದು ಸ್ಟೇಟ್‌ಮೆಂಟನ್ನು ಮಾಡಿ ಚರ್ಚೆ ಮಾಡೋಣ ಎಂದು ಹೇಳಬೇಕಾಗುತ್ತದೆ. ಅವರೇ ಸ್ಟೇಟ್‌ಮೆಂಟ್ ಮಾಡಿದರೆ ಅದರ ಮೇಲೆ ನಾವು ಏನೇನು ಹೇಳಬಹುದು ಅದನ್ನು ಹೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ನಂಜೇಗೌಡರು ಹಿಂದಿನ ಯಾವುದೋ ಒಂದು ಪರಿಸ್ಥಿತಿ ಹೇಳುತ್ತೀರಿ. ಆಗ ಪ್ರಾಮಾಣಿಕರಾಗಿದ್ದರು. ಶ್ವೇತಪತ್ರ ಇಟ್ಟು ಜನರ ಹಿತದೃಷ್ಟಿಯಿಂದ ಸರ್ಕಾರ ಯೋಚನೆ ಮಾಡುತ್ತಿತ್ತು. ಇವರು ಯಾರಿಗೂ ಹೇಳದೆ ಕೇಳದೆ ತೆರಿಗೆ ಏರಿಸಿಬಿಟ್ಟು, ಅದು ಈಗಾಗಲೇ ಜಾರಿಗೆ ಬಂದಾಗ ಪ್ರಶ್ನೆ ಎಲ್ಲಿ ಉದ್ಭವವಾಗುತ್ತದೆ.

ಅಧ್ಯಕ್ಷರು:- ನೀವಿಬ್ಬರೂ ಕುಳಿತುಕೊಂಡು ಮಾತನಾಡಿಕೊಂಡು ಬರಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ನಂಜೇಗೌಡರು ಸಂಸದೀಯ ಪಟುವಾಗಿ ಹೇಳುವಂಥಾದ್ದು ಬಹಳ ಅರ್ಥಗರ್ಭಿತವಾಗಿದೆ. ಯಾರಿಗೆ ಅನ್ವಯವಾಗುತ್ತದೆ, ಯಾರಾದರೂ ವಿಶ್ವಾಸಕ್ಕೆ ತೆಗೆದುಕೊಂಡು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಕೆಲಸ ಮಾಡಬೇಕು ಎಂದು ಕಳಕಳಿ ಇದ್ದಂತಹವರಿಗೆ ಅನ್ವಯವಾಗುತ್ತದೆ. ಒಂದೇ ಬಾರಿಗೆ ಹೇರಿ ಒಂದನೇ ತಾರೀಖಿನಿಂದ ಜಾರಿಗೆ ಬರುತ್ತದೆ ಎಂದ ಮೇಲೆ ಅವರ ಶ್ವೇತ ಪತ್ರ ತೆಗೆದುಕೊಂಡು ಏನು ಮಾಡುತ್ತೀರಿ? ಅವರ ಹೇಳಿಕೆ ತೆಗೆದುಕೊಂಡು ಏನು ಮಾಡುತ್ತೀರಿ? ಅವರು ಎಲ್ಲಾ ತೀರ್ಮಾನ ಮಾಡಿಕೊಂಡು ಬಂದು ಇಲ್ಲಿ ಕುಳಿತಿದ್ದಾರೆ. ಹೇರಿ ಆಗಿ ಹೋಯಿತು. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ಇಲ್ಲಿ ಎಷ್ಟು ಬಾರಿ ಡಿಮ್ಯಾಂಡ್ ಮಾಡಿದ್ದೇವೆ? ಎಷ್ಟು ಬಾರಿ ವಿನಂತಿ ಮಾಡಿದ್ದೇವೆ. ಇಡೀ ರಾಜ್ಯ ಸುತ್ತಿ ಬಂದಾಗ ಎಲ್ಲರೂ ಒಂದು ವೈಟ್ ಪೇಪರ್ ಪ್ರಕಟಿಸಬಹುದಾಗಿತ್ತು, ತಿಳಿಸಬಹುದಾಗಿತ್ತು ಎಂದರು. ಸರ್ಕಾರ ಇಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಂಡು ನುಂಗುವ ಹಾಗೆ ಇಲ್ಲ, ಉಗುಳುವ ಹಾಗೆ ಇಲ್ಲ ಎನ್ನುವ ಪರಿಸ್ಥಿತಿಯಲ್ಲಿ ಇರುವುದರಿಂದ, ನಿಮ್ಮ ಕಷ್ಟ ನನಗೆ ಅರ್ಥವಾಗುತ್ತದೆ.

ಶ್ರೀ ಜಿ.ಹೆಚ್.ಪಟೇಲ್:- ಮಾನ್ಯ ಅಧ್ಯಕ್ಷರೇ, ಮಲಗಿದ್ದವರನ್ನು ಎಬ್ಬಿಸಬಹುದು, ಆದರೆ ಸುಮ್ಮನೆ ಮಲಗಿದ ಹಾಗೆ ಮಾಡುವವರನ್ನು ನಾವು ಹೇಗೆ ಎಬ್ಬಿಸಬೇಕಾಗುತ್ತದೆ? ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕೇಳುತ್ತೇವೆ, ಎಷ್ಟು ಸಾರಿ ಈ ಸದನದಲ್ಲಿ ಈ ವಿಚಾರದ ಬಗ್ಗೆ ಚರ್ಚೆಯಾಗಿಲ್ಲ? ನಾನು ಆ ವಿವರಗಳನ್ನು ಕೊಡಲೇ? ಮಾನ್ಯ ಅಧ್ಯಕ್ಷರಿಗೆ ಗೊತ್ತಿಲ್ಲವೇ? ಇದರ ಬಗ್ಗೆ ಹೇಳಿದ್ದೇವೆ.

ಈಗ ನಾವು ಹೇಳದೆ ಇದ್ದದ್ದು ಯಾವುದು ಹೊಸದೇನು ಮಾಡಿಲ್ಲ. ಮಾನ್ಯ ನಂಜೇಗೌಡರು ಹೇಳಿದ ಹಾಗೆ, ಆಯಿತು ನೀವು ಒಂದು ಹೇಳಿಕೆ ಕೊಡಿ, ನಿಮ್ಮ ಸರ್ಕಾರದ ಆರ್ಡರ್ ಏನು ಅಥವಾ ಕೆ.ಇ.ಬಿ. ಪ್ರಕಟಣೆ ಏನು ಎಂದು ಕೇಳಿ. ಆದರ ಮೇಲೆ ಚರ್ಚೆ ಮಾಡೋಣ ಎಂದು ಹೇಳಬಹುದಾಗಿತ್ತು. ನೀವು ಪ್ರಶ್ನೋತ್ತರ ಬೇಡ ಎಂದು ಏಕ್‌ದಂ ಮೈಮೇಲೆ ಬಂದಾಗ ಅದಕ್ಕೆ ನಾವು ಏನು ಮಾಡಬೇಕು?

ಶ್ರೀ ಬಿ.ಎಸ್.ಯಡಿಯೂರಪ್ಪ:- ಒಳ್ಳೆಯ ಸರ್ಕಾರ ಇದ್ದಾಗ ಏನು ನಡೆದಿದೆ ಎನ್ನುವ ವಿಚಾರ ಅವರು ಹೇಳಿದರು.

ಶ್ರೀ ಜಿ.ಹೆಚ್.ಪಟೇಲ್:- ಆಗ ಒಳ್ಳೆಯ ವಿರೋಧ ಪಕ್ಷ ಇತ್ತು. ಆಗ ನಾವು ಅಲ್ಲಿ ಇದ್ದೆವು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಯಾರು ನಿಜವಾಗಿ ಮಲಗಿದ್ದಾರೆ ಅವರನ್ನು ಎಬ್ಬಿಸಬಹುದು. ಆದರೆ ಯಾರು ಮಲಗಿದ ಹಾಗೆ ಸೋಗು ಮಾಡಿ ಏಳಬಾರದು ಎಂದು ಮಲಗಿದ್ದಾಗ ಅಂತಹ ಸರ್ಕಾರಕ್ಕೆ ಎಬ್ಬಿಸುವುದಕ್ಕೆ ಆಗುವುದಿಲ್ಲ. ಅದಕ್ಕೆ ನಾವು ಏನು ಹೇಳಿದರೂ ಪ್ರಯೋಜನವಾಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಅಧ್ಯಕ್ಷರು:- ತಾವು ಹೇಳಿದಿರಿ ಪಟೇಲರು ಸತ್ಯ ಹೇಳುತ್ತಾರೆ ಎಂದು, ಪಟೇಲರು ಆಗಿರುವವರು ಯಾರಿದ್ದರೂ ಸತ್ಯವನ್ನೇ ಹೇಳುವುದು.

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಈಗ ಊಟಕ್ಕೆ ಸಭೆಯನ್ನು ಮುಂದಕ್ಕೆ ಹಾಕಬಹುದು.

ಅಧ್ಯಕ್ಷರು:- ನಿಲುವಳಿ ಸೂಚನೆ ಎಂದರೆ ನಾನು ಊಟಕ್ಕೆ ಬ್ರೇಕ್ ಕೊಡುವುದಕ್ಕೆ ಬರುವುದಿಲ್ಲ. ಅವರು ಮಾತನಾಡುವುದನ್ನು ಪೂರ್ಣ ಮಾಡಬೇಕು. ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತೇನೆ, ತಾವು ಮುಂದಕ್ಕೆ ಹಾಕುವುದಾದರೆ ಅರ್ಧ ಗಂಟೆ ಮುಂದಕ್ಕೆ ಹಾಕಿ. ನಮಗೂ ವೋಲ್ಟೇಜ್ ಕಡಿಮೆಯಾಗುತ್ತಿದೆ. ಮತ್ತೊಂದು ಕಡೆ ಸರ್ಕಾರ ಕೇಳುವುದಕ್ಕೆ ವೋಲ್ಟೇಜ್ ಕಡಿಮೆಯಾಗುತ್ತದೆ. ಊಟಕ್ಕೆ ಹೋಗುವುದಕ್ಕೆ ಸಭೆಯನ್ನು ಮುಂದೆ ಹಾಕಿ.

ಅಧ್ಯಕ್ಷರು:- ಪ್ರಿಲಿಮಿನರಿ ಸಬ್‌ಮಿಷನ್ ಟೈಂನಲ್ಲಿ ಅಡ್ಜರ್ನ್ ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೋ ನೋಡಬೇಕಾಗುತ್ತದೆ.

★**ಶ್ರೀ ಎಂ.ವೀರಪ್ಪ ಮೊಯಿಲಿ:-** ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದಂತಹ ಮಾನ್ಯ ನಂಜೇಗೌಡರು ಏನು ಸೂಚನೆ ಕೊಟ್ಟರು ಹಾಗೂ ಸರ್ಕಾರದವರು ಹೇಳಿದ್ದುದು ನಿಲುವಳಿ ಸೂಚನೆಯನ್ನು ಏಕಾಏಕಿ ತೆಗೆದುಕೊಂಡು ಬಿಟ್ಟರಿ, ಆದುದರಿಂದ ನಮಗೆ ಹೇಳಿಕೆ ಕೊಡುವುದಕ್ಕೆ ಆಗಲಿಲ್ಲ ಎಂದು. ಕರ್ನಾಟಕ ರಾಜ್ಯದಲ್ಲಿ ಇದಕ್ಕಿಂತ ಒಂದು ತೀವ್ರತರವಾದ ಅತ್ಯಂತ ಗಂಭೀರವಾದಂತಹ ವಿಷಯದ ವಿಚಾರದಲ್ಲಿ ನಿಲುವಳಿ ಸೂಚನೆ ಮತ್ತೊಂದು ಇಲ್ಲ. ಅನೇಕ ಬಾರಿ ಇಂತಹ ವಿಚಾರಗಳಲ್ಲಿ ನಿಲುವಳಿ ಸೂಚನೆ ಕೊಟ್ಟಾಗ ಇದೇನು ಏಕಾಏಕಿಯಾಗಿ ಬಂದಂತಹ ಒಂದು ದೊಂಬಿ ವಿಚಾರವಲ್ಲ. ಏಕೆಂದರೆ ಕೆ.ಇ.ಬಿ. ಮತ್ತು ಕೆ.ಪಿ.ಸಿ. ಸಮಸ್ಯೆಯನ್ನು ಅರಿತುಕೊಂಡು ಅವರು ಪವರ್ ಟ್ಯಾರಿಫ್ ಜಾಸ್ತಿ ಮಾಡಿದ್ದಾರೆ. ಪವರ್ ಟ್ಯಾರಿಫ್ ಜಾಸ್ತಿ ಮಾಡುವ ಮೊದಲು ಪವರ್ ಟ್ಯಾರಿಫ್

ಕಮಿಟಿ ವರದಿ ಇರಬಹುದು, ಸರ್ಕಾರ ಮಾಡಿದಂತಹ ಅಧ್ಯಯನ ವರದಿ ಇರಬಹುದು, ಸರ್ಕಾರಕ್ಕೆ ನ್ಯಾಯವಾದಂತಹ ಸಮಜಾಯಿಸಿ ಮಾಡಿಕೊಳ್ಳತಕ್ಕಂಥ ವಿವರಣೆಗಳು ಇರಬಹುದು, ನಾವು ಇವತ್ತು ಏನು ಹೇಳಿಕೆ ಮಾಡಿದ್ದೆವು, ಪತ್ರಿಕಾ ಹೇಳಿಕೆ ಏನಿದೆ ಅದರ ಆಧಾರದ ಮೇಲೆ ಚರ್ಚೆ ಮಾಡಬಹುದು. ಬಹುಶಃ ಕೆಲವೊಂದು ಅಂಶ ಒಪ್ಪಬಹುದು. ಆದರೆ ಇಂತಹ ಗಂಭೀರ ವಿಚಾರಗಳು ಬಂದಾಗ ಸರ್ಕಾರ ತನ್ನ ನಿಲುವಳಿ ಸೂಚನೆಯಲ್ಲಿ ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ಮೊದಲು ಹೇಳಿಕೆ ಕೊಟ್ಟಂತಹ ಪ್ರಸಂಗಗಳು ಈ ಸದನದಲ್ಲಿ ಇವೆ. ಇದು ಏನು ಹೊಸ ಸಂಪ್ರದಾಯ ಅಲ್ಲ. ನಿಲುವಳಿ ಸೂಚನೆ ತಂದಿದ್ದೀರಿ, ಇದಕ್ಕೆ 1.40.ಪಿ.ಎಂ.ಅವಕಾಶ ಕೊಡುವುದಿಲ್ಲ ಎಂದು ಹೇಳುವ ಪ್ರತಿಷ್ಠೆಯ ಪ್ರಶ್ನೆ ಬರಬಾರದು. ಪ್ರತಿಷ್ಠೆಯನ್ನು ಕಣದಿಂದ ಸ್ವಲ್ಪ ದೂರ ಸರಿಸಿ. ವಾಸ್ತವಿಕ ಜಗತ್ತಿನಲ್ಲಿ ನಾವು ಇದನ್ನು ಚರ್ಚೆ ಮಾಡಬೇಕಾಗುತ್ತದೆ. ಆದ್ದರಿಂದ ಅವರು ಹೇಳಿಕೆಯನ್ನು ಕೊಡತಕ್ಕಂಥದ್ದು ಬಹಳ ಯೋಗ್ಯ ಇರುತ್ತದೆ. ಇದರಿಂದ ಏನಾಗುತ್ತದೆ ಎಂದರೆ ಸದನದಲ್ಲಿ ಅನೇಕ ವಿಚಾರಗಳನ್ನು ಚರ್ಚೆ ಮಾಡುವಂತಹದ್ದನ್ನು ಕಡಿಮೆ ಮಾಡಬಹುದು. ಅವರು ಹೇಳಿರುವಂತಹ ವಿಷಯವನ್ನು ನಾವು ಪುನರುಚ್ಚರಿಸತಕ್ಕಂಥ ಅವಶ್ಯಕತೆ ಇರುವುದಿಲ್ಲ ಇದನ್ನೂ ಸಹ ಸ್ವಲ್ಪ ಕಡಿಮೆ ಮಾಡಬಹುದು. ಎರಡನೆಯದು ಏನು ಎಂದು ಹೇಳಿದರೆ, ಅಜರ್ನ್‌ಮೆಂಟ್ ಮೋಷನ್ ಇವೊತ್ತು ಮೂವ್ ಮಾಡಿದರು, ಪ್ರಿಲಿಮಿನರಿ ಸಬ್ ಮಿಷನ್ ಇವೊತ್ತೇ ಮುಗಿಯಬೇಕು ಎಂದೇನೂ ಇಲ್ಲ. ನಾವು 2-3 ಸಾರಿ ನಿಲುವಳಿ ಸೂಚನೆಯನ್ನು ಚರ್ಚೆಯ ಉದ್ದೇಶದಿಂದ ತೆಗೆದುಕೊಂಡಿದ್ದೂ ಕೂಡ ಇದೆ. ಆದ್ದರಿಂದ ನನ್ನ ಸೂಚನೆಯೇನೆಂದರೆ, ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಹೇಳಿದ ಪ್ರಕಾರ ಸರ್ಕಾರ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡತಕ್ಕಂಥದ್ದು ಯೋಗ್ಯವಾಗಿದೆ, ತಾವು ಆ ಹೇಳಿಕೆಯ ಜೊತೆಯಲ್ಲಿ ಏನಾದರೂ ವರದಿಗಳು ಇದ್ದರೆ, ಏಕೆಂದರೆ ವಿಧಾನ ಮಂಡಲದ ವರದಿಗಳ ಪ್ರತಿ ಎಲ್ಲರ ಹತ್ತಿರವೂ ಇರುವುದಿಲ್ಲ, ತಾವು ದಯಮಾಡಿ ಈ ವರದಿ ಎಲ್ಲರ ಕೈಗೆ ಸಿಗುವ ಹಾಗೆ ಅದನ್ನೂ ಕೂಡ ಸ್ವಲ್ಪ ಸರ್ಕ್ಯುಲೇಟ್ ಮಾಡಿ ಅದನ್ನು ಅಧ್ಯಯನ ಮಾಡಿಕೊಂಡು, ಮತ್ತೆ ಅವರು ಒಂದು ವರದಿಯನ್ನು ಕೊಟ್ಟ ಮೇಲೆ ಇದು ಚರ್ಚೆಯಾಗತಕ್ಕಂಥದ್ದು ಬಹಳ ಯೋಗ್ಯವಾಗಿರುತ್ತದೆ. ಅದರ ಮೇಲೆ ನಿಜವಾದಂಥ ಒಳ್ಳೆಯ ಗಂಭೀರವಾದಂಥ ಚರ್ಚೆಯಾಗುತ್ತದೆ ಬಹುಶಃ ಅವರು ಹೇಳಿದ ಮೇಲೆ ನಾವು ಕೆಲವು ಸೂಚನೆಗಳನ್ನು ಕೊಟ್ಟಾಗ ಅವರು ಅದರಲ್ಲಿ ಅನೇಕ ಅಂಶಗಳನ್ನು ಒಪ್ಪಬಹುದು, ಅವರು ಹೇಳಿದಂಥ ಅನೇಕ ಅಂಶಗಳನ್ನು ನಾವು ಒಪ್ಪಲಿಕ್ಕೆ ಕೂಡ ಅವಕಾಶವಾಗುತ್ತದೆ ಎಂಬುದು ನನ್ನ ಸೂಚನೆ.

★**ಶ್ರೀ ಬಿ.ಎಸ್.ಯಡಿಯೂರಪ್ಪ:-** ಸನ್ಮಾನ್ಯ ಅಧ್ಯಕ್ಷರೆ, ನಾವು ಬಹಳ ಗಂಭೀರವಾಗಿ ಯೋಚನೆ ಮಾಡಿ ಇದರ ಮಹತ್ವವನ್ನು ಅರ್ಥ ಮಾಡಿಕೊಂಡು ನಿಲುವಳಿ ಸೂಚನೆ ಮೂಲಕ ನಾವು ಈ ವಿಚಾರವನ್ನು ತಮ್ಮ ಮುಂದೆ ಇಟ್ಟು ನಿಮಗೆ ಕನ್ವಿನ್ಸ್ ಮಾಡುವಂಥ ಹಂತದಲ್ಲಿ ಈಗಾಗಲೇ ಬಂದಿದ್ದೇವೆ. ಸನ್ಮಾನ್ಯ ಕರ್ಕಿಯವರು ನಾನು ಮಾತನಾಡಿ ಆಗಿದೆ. ಸನ್ಮಾನ್ಯ ನಂಜೇಗೌಡರು, ವೀರಪ್ಪ ಮೊಯಿಲಿಯವರು ಯಾವ ರೀತಿ ಇದು ಚರ್ಚೆಯಾಗಬೇಕಾಗಿತ್ತು, ಒಂದು ಕಳಕಳಿ ಇರತಕ್ಕಂಥ ಸರ್ಕಾರ ಯಾವ ದಿಕ್ಕಿನಲ್ಲಿ ಹೋಗಿದ್ದರೆ ಸರಿ ಹೋಗುತ್ತಿತ್ತು ಎನ್ನುವಂಥ ವಿಚಾರವನ್ನು ಅವರು ಇಟ್ಟಿದ್ದಾರೆ. ಆದರೆ ನಮ್ಮ ನಿಲುವಳಿ ಸೂಚನೆ ಸೀಮಿತವಾಗಿದೆ. ಏನು ಎಂದರೆ 43 ಪರ್ಸೆಂಟ್ ವಿದ್ಯುತ್ ದರವನ್ನು ಏಕಾಏಕಿ ಏರಿಸಿದ್ದೀರಾ ಅಂತಹ ಯಾವುದೇ ಸಂದರ್ಭ ಇರಲಿಲ್ಲ ಅದಕ್ಕೆ ಬೇಕಾದಂಥ ಮಾಹಿತಿಗಳನ್ನು ನಾವು

ಈಗಾಗಲೇ ಕೊಟ್ಟಿದ್ದೇವೆ. ಯಾವುದೇ ಸುಧಾರಣೆ ಆಗಿಲ್ಲ. ಇವೊತ್ತು ಕೆ.ಇ.ಬಿ. ಅವರದೇ ಆದಂತಹ ತಪ್ಪಿನಿಂದಾಗಿ ಲಾಸಾಗುತ್ತಿದೆ. ಅದನ್ನು ಜನರ ಮೇಲೆ ಹೇರುತ್ತಿದ್ದೀರಿ ಆದ್ದರಿಂದ ಇದನ್ನು ವಾಪಸ್ಸು ಪಡೆಯಬೇಕು ಎನ್ನುವಂಥ ಸೀಮಿತವಾದಂಥ ವಿಷಯದ ಬಗ್ಗೆ ನಾವು ಚರ್ಚೆಯನ್ನು ಮಾಡುತ್ತಿದ್ದೇವೆ. ಉತ್ಪಾದನೆ ಬಗ್ಗೆ, ಇದನ್ನು ನೀವು ಸರಿಮಾಡದ ಬಗ್ಗೆ, ಸಮಗ್ರ ವಿದ್ಯುತ್ ಇಲಾಖೆ ಬಗ್ಗೆ ನಾವೇನು ಚರ್ಚೆ ಮಾಡುತ್ತಿಲ್ಲ. ಏರಿಕೆಯಾಗಿದೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಏರಿಕೆ ಮಾಡಿರುವುದು ಸಾಧುವಲ್ಲ. ಇದು ಸೀಮಿತವಾಗಿರುವುದರಿಂದ ದಯಮಾಡಿ ಎಲ್ಲರೂ ಮಾತನಾಡಿದ ಮೇಲೆ ಸರ್ಕಾರ ಉತ್ತರವನ್ನು ಕೊಡಲಿಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಈ ಹಂತದಲ್ಲಿ ತಮ್ಮನ್ನು ಕನ್ವಿನ್ಸ್ ಮಾಡಿ ಈ ನಿಲುವಳಿ ಸೂಚನೆಯನ್ನು ಮೂವ್ ಮಾಡುತ್ತಿದ್ದೇವೆ. ನೀವು ಅದನ್ನು ನಿಲುವಳಿ ಸೂಚನೆ ಮೂಲಕವಾಗಿಯೇ ತೆಗೆದುಕೊಳ್ಳುವುದಕ್ಕೆ, ನಿಮ್ಮ ಮನಸ್ಸನ್ನು ಗೆಲ್ಲುವುದಕ್ಕೆ ಅನೇಕ ಅಂಕಿ ಅಂಶಗಳನ್ನು ನಿಮಗೆ ಮನದಟ್ಟು ಮಾಡುವಂಥ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಆದ್ದರಿಂದ ದಯಮಾಡಿ ನಿಲುವಳಿ ಸೂಚನೆ ಮೂಲಕವೇ ಚರ್ಚೆ ಮುಂದುವರಿಯುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಇಲ್ಲದಿದ್ದರೆ ಇದರ ಮಹತ್ವವೇ ಹೊರಟು ಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ತಾವು ಸಭೆಯನ್ನು ಅರ್ಧ ಗಂಟೆ ಮುಂದಕ್ಕೆ ಹಾಕುತ್ತೀರಾ ಹೇಗೆ? ಇದು ಎಲ್ಲರ ಅಭಿಲಾಷೆ ಕೂಡ. ತಾವು ಹೇಗೆ ಮಾಡುವುದಾದರೂ ಸರಿ.

ಅಧ್ಯಕ್ಷರು:- ಇಲ್ಲ. ಪ್ರಿಲಿಮನರಿ ಸಬ್‌ಮಿಷನ್ ಸ್ಟೇಜ್‌ನಲ್ಲಿ ನಾವು ಸಭೆಯನ್ನು ಮುಂದಕ್ಕೆ ಹಾಕುವಂಥ ಪದ್ಧತಿ ಇದೆಯೋ ಏನೋ ಎಂಬುದನ್ನು ಪರಿಶೀಲಿಸುತ್ತಿದ್ದೇನೆ. ನಾನು ಅಧ್ಯಕ್ಷನಾದ ಮೇಲೆ ಇದು ನನಗೆ ಹೊಸದು, ಈ ರೀತಿ ಯಾವಾಗಲೂ ಮಾಡಿರುವಂಥದ್ದು ನನಗೆ ನೆನಪಿಲ್ಲ. ಹಿರಿಯ ಸದಸ್ಯರುಗಳಲ್ಲಿ ಯಾರಿಗಾದರೂ ನೆನಪಿದ್ದರೆ ಹೇಳಬಹುದು.

ಶ್ರೀ ಜಿ.ಹೆಚ್.ಪಟೇಲ್:- ಈಗ ನಿಲುವಳಿ ಸೂಚನೆ ಯಾವ ಕಾಲಂನಲ್ಲಿ ಬರುತ್ತದೆಯೋ ಅದನ್ನು ಬಿಟ್ಟು, ತಾವು ಅನುಮತಿಯನ್ನು ಕೊಟ್ಟರೆ, ಸಾರ್ವಜನಿಕ ಮಹತ್ವದ ವಿಷಯಗಳ ಚರ್ಚೆ ಇದೆಯಲ್ಲ ಅದಕ್ಕೆ...... ನಂಜೇಗೌಡರು ಹೇಳಿದ್ದೇನು ಮತ್ತು ಮೊಯಿಲಿಯವರು ಹೇಳಿದ್ದೇನು? ಮಾನ್ಯ ಅಧ್ಯಕ್ಷರು ಈಗ ನಿಲುವಳಿ ಸೂಚನೆಯನ್ನು ಬಿಟ್ಟು ಇದೇ ವಿಷಯವನ್ನು ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಚರ್ಚೆ ಮಾಡಿದರೆ ನಾನು ಹೇಳಿಕೆಯನ್ನು ಕೊಡುತ್ತೇನೆ......

ಶ್ರೀ ಬಿ.ಎಸ್.ಯಡಿಯೂರಪ್ಪ:- ಅವರು ಹಿರಿಯ ಸದಸ್ಯರಾಗಿ ಈ ರೀತಿ ನಡೆದಿದ್ದರೆ ಒಳ್ಳೆಯದಾಗುತ್ತಿತ್ತು ಎನ್ನುವ ಸಲಹೆಯನ್ನು ಸನ್ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು, ಮಾಜಿ ಮುಖ್ಯ ಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಹೇಳಿದ್ದಾರೆ. ಆದರೆ ನಾವು ಈ ನಿಲುವಳಿ ಸೂಚನೆಯನ್ನು ಸೀಮಿತವಾಗಿ ಇಟ್ಟಿದ್ದೇವೆ ಅದಕ್ಕೋಸ್ಕರ ಅಷ್ಟಕ್ಕೆ ಸೀಮಿತವಾಗಿ ನಾವು ಮಾತನಾಡುತ್ತಿದ್ದೇವೆ. ದಯಮಾಡಿ ನೀವು ಉತ್ತರವನ್ನು ಕೊಡಿ ನಾವು ಮುಂದಿನ ಕಾರ್ಯಕ್ರಮವನ್ನು ಮಾಡುವುದಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಈ ನಿಲುವಳಿ ಸೂಚನೆ ಮೇಲೆ ಸಾಕಷ್ಟು ಜನ ಮಾತನಾಡುವುದಕ್ಕೆ ಸಹಿ ಮಾಡಿದ್ದಾರೆ. ಅವರೂ ಕೂಡ ಪ್ರಸ್ತಾಪ ಮಾಡಬೇಕಾಗಿದೆ. ಅದಕ್ಕಾಗಿ ದಯವಿಟ್ಟು ಮೊದಲು ಕೇಳಿಕೊಳ್ಳಿ, ಆಮೇಲೆ ಅವರು ಪುನಃ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು

ಎಂದು ಹೇಳಿದರೆ ನೋಡೋಣ. ಈಗ ನಾವು ಹೇಳಿದ ವಿಷಯವನ್ನು ಅವರು ಬೇರೆ ರೀತಿಯಲ್ಲಿ ಹೇಳಬಹುದು, ಅವರಲ್ಲಿ ಹೊಸ ವಿಷಯಗಳಿರಬಹುದು, ವೀರಪ್ಪ ಮೊಯಿಲಿಯವರಲ್ಲಿ ಹೊಸ ವಿಷಯಗಳಿರಬಹುದು, ನಂಜೇಗೌಡರೇನಾದರೂ ಹೊಸ ವಿಷಯವನ್ನು ಪ್ರಸ್ತಾಪ ಮಾಡಬಹುದು. ಅದಕ್ಕೆ ಪ್ರಿಲಿಮನರಿ ಸಬ್‌ಮಿಷನ್ ತಮ್ಮ ಮನವನ್ನು ಒಲಿಸಿಕೊಂಡು ಸರ್ಕಾರ ಯಾವ ರೀತಿಯಾಗಿ ಇದಕ್ಕೆ ಸ್ಪಂದಿಸುತ್ತದೆ ಎಂಬುತಕ್ಕಂಥದ್ದಕ್ಕೆ ಅನೇಕ ಜನ ಸ್ವಲ್ಪ ಏನಾದರೂ ಹೇಳಬೇಕಲ್ಲ!

ಶ್ರೀ ಬಿ.ಎಸ್.ಯಡಿಯೂರಪ್ಪ:- ನಿಲುವಳಿ ಸೂಚನೆ ಒಂದು ರೀತಿಯಿಂದ ಅದು ನೋ ಕಾನ್ಫಿಡೆನ್ಸ್ ಮೋಷನ್‌ಗೆ ಎಷ್ಟು ಬೆಲೆ ಇದೆ ಅಷ್ಟೇ ಬೆಲೆ ಇರುವಂಥ ಅತ್ಯಂತ ಪ್ರಬಲವಾದಂಥ ಅಸ್ತ್ರ. ಅದನ್ನು ಅನಿವಾರ್ಯವಾಗಿ ನಾವು ಈ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುತ್ತಿದ್ದೇವೆ. ದಯಮಾಡಿ ಚರ್ಚೆಗೆ, ತಮಗೆ ಕನ್ವಿನ್ಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:- ವಾಟಾಳ್ ನಾಗರಾಜ್‌ರವರೆ ಒಂದು ಕೆಲಸ ಮಾಡೋಣ, ಎರಡು ಗಂಟೆಯವರೆಗೆ ತಾವು ಮಾತನಾಡಿ. ತಮ್ಮದು ಇನ್ನೂ ಮಾತನಾಡುವುದಿದ್ದರೆ ಎರಡು ಗಂಟೆಯ ಹೊತ್ತಿಗೆ ಸಭೆಯನ್ನು ಮುಂದೂಡಿ ಆಮೇಲೆ ಮುಂದುವರಿಸೋಣ. ಏಕೆಂದರೆ ಪ್ರಿಲಿಮಿನರಿ ಸಬ್‌ಮಿಷನ್ಸ್ inconclusive ಆಗಿದೆ.

ಶ್ರೀ ವಾಟಾಳ್ ನಾಗರಾಜ್:- ಆಗಬಹುದು.

ಶ್ರೀ ಹೆಚ್.ಎನ್.ನಂಜೇಗೌಡ:- ನಾನು ಏನು ಹೇಳುತ್ತೇನೆಂದರೆ, ಈಗ ಸರ್ಕಾರದವರು ನಿಲುವಳಿ ಸೂಚನೆಗೆ ವಿರೋಧವನ್ನು ವ್ಯಕ್ತಪಡಿಸಿಲ್ಲ. ಚರ್ಚೆಗೆ ತೆಗೆದುಕೊಳ್ಳೋಣ ಎಂದು ನೇರವಾಗಿ ಹೇಳಿಬಿಟ್ಟರೆ ಮುಗಿದೇ ಹೋಯಿತಲ್ಲ, ಕಂಟಿನ್ಯೂ ಮಾಡಿಬಿಡಬಹುದು.

ಶ್ರೀ ಜೆ.ಹೆಚ್.ಪಟೇಲ್:- ನಿಲುವಳಿ ಸೂಚನೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಅದನ್ನು ಓಟಿಗೆ ಹಾಕಿ, ಸರ್ಕಾರವನ್ನು ಕೆಡುವುದಕ್ಕೆ, ಸರ್ಕಾರವನ್ನು ಬೀಳಿಸುವ ಶಕ್ತಿ ಇದ್ದರೆ ಬೀಳಿಸಬಹುದು ಆ ಮಾತು ನನಗೇನು ಈಗ ಅನ್ವಯಿಸುವುದಿಲ್ಲ. ನೀವು ಏನು ಮಾಡಿದರೂ ಸರ್ಕಾರವನ್ನು ಬೀಳಿಸುವುದಕ್ಕೆ ಆಗುವುದಿಲ್ಲ.........

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ವಿಷಯದಲ್ಲಿ ನಿಮ್ಮಲ್ಲಿ ಇರುವಂಥ ಅನೇಕ ಸದಸ್ಯರು ನಿಮ್ಮ ಜೊತೆಯಲ್ಲಿ ಇಲ್ಲ. ನಿಮ್ಮ ಮಂತ್ರಿಮಂಡಲದ ಸದಸ್ಯರೂ ನಿಮ್ಮ ಜೊತೆಗೆ ಇಲ್ಲ.

ಶ್ರೀ ಜೆ.ಹೆಚ್.ಪಟೇಲ್:- ಆ ಪರೀಕ್ಷೆಗೆ ನಾವು ತಯಾರಿದ್ದೇವೆ.........

ಶ್ರೀ ಬಿ.ಎಸ್.ಯಡಿಯೂರಪ್ಪ:- ನೋಡೋಣ.

ಶ್ರೀ ಜೆ.ಹೆಚ್.ಪಟೇಲ್:- ಆದರೆ ಚರ್ಚೆಯ ದೃಷ್ಟಿಯಿಂದ ಇನ್ನೂ ಬಹಳ ಜನ ಮಾತನಾಡಬೇಕು, ಮಾತನಾಡಲಿ ನಾನೇನು ಬೇಡ ಎಂದು ಹೇಳುವುದಿಲ್ಲ. ಸರ್ಕಾರದ ಪರವಾಗಿ ಬೇಕಾದರೆ ನಿಮಗೇನಾದರೂ ಇದರ ಬಗ್ಗೆ ಸಾಹಿತ್ಯ ಇದ್ದರೆ ಚರ್ಚೆಯನ್ನು ಬೇರೆ ರೂಪದಲ್ಲಿ ಮುಂದುವರಿಸಬಹುದು. ಅದರಲ್ಲಿ ನಿಲುವಳಿ ಸೂಚನೆಯೆ ಆಗಬೇಕು ಎಂದೇನು ಇಲ್ಲ. ಆ ಉದ್ದೇಶ ಇದ್ದರೆ ಪರವಾಗಿಲ್ಲ.

★ **ಶ್ರೀ ವಾಟಾಳ್ ನಾಗರಾಜ್:-** ಮಾನ್ಯ ಅಧ್ಯಕ್ಷರೆ, ಈಗ ನಿಲುವಳಿ ಸೂಚನೆಯನ್ನು ನಾನು ತಮಗೆ ಮುಂಚಿತವಾಗಿ ಕಳುಹಿಸಿ ಇದರ ಮಹತ್ವ ಎಷ್ಟು ಇದೆ ಎಂಬುದನ್ನು ತಮಗೆ ತಿಳಿಸುವುದಕ್ಕೆ ನಾನು

ಕೆಲವು ವಿಚಾರಗಳನ್ನು ತಮ್ಮ ಮುಂದೆ ಹೇಳಬೇಕೆಂದು ಮಾಡಿದ್ದೇನೆ. ಶ್ರೀಮಾನ್ ಜೆ.ಎಚ್.ಪಟೇಲ್‌ರವರು ಈ ರಾಜ್ಯ ಮುಖ್ಯ ಮಂತ್ರಿಗಳಾಗಿ ಅಧಿಕಾರವನ್ನು ವಹಿಸಿಕೊಂಡಾಗ ನಮ್ಮೆಲ್ಲರಿಗೂ ಬಹಳ ಸಂತೋಷ, ಒಂದು ರೀತಿಯ ಅಭಿಮಾನ. ಇವರು ಬಹಳ ಶಕ್ತಿವಂತರು ಮತ್ತು ಬಹಳ ದಕ್ಷರು, ಅಪಾರವಾದಂಥ ಅನುಭವ ಇರತಕ್ಕಂಥ ಹಿರಿಯ ವ್ಯಕ್ತಿ ಎನ್ನತಕ್ಕಂಥದ್ದರಲ್ಲಿ ಎರಡನೆಯ ಅಭಿಪ್ರಾಯ ಇಲ್ಲ. ಜೊತೆಗೆ ಸಮಾಜವಾದಿ ಸಿದ್ಧಾಂತದಲ್ಲಿ ಹತ್ತಾರು ವರ್ಷಗಳ ಕಾಲ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಂಥ ಹಿನ್ನೆಲೆ ಇದೆ. ಇವರು ಮುಖ್ಯ ಮಂತ್ರಿಯಾಗಿ ಆಯ್ಕೆಯಾದ ನಂತರ ದೂರದರ್ಶನದಲ್ಲಿ ಒಂದು ಕಡೆ ಲೋಹಿಯಾ ರವರು ಬಲಗೈಯಲ್ಲಿ ಜೆ.ಎಚ್.ಪಟೇಲ್‌ರವರನ್ನು, ಎಡಗೈಯಲ್ಲಿ ಗೋಪಾಲಗೌಡರನ್ನು ಹಿಡಿದು ನಿಂತಿದ್ದಂಥ ಒಂದು ಚಿತ್ರ. ಆ ಚಿತ್ರ ದೂರದರ್ಶನದಲ್ಲಿ ನೋಡಿದಾಗ ಹಳೆಯ ಇತಿಹಾಸ ನೆನಪು. ಲೋಹಿಯಾ ಅವರ ಜೊತೆಯಲ್ಲಿ ಇವರ ತತ್ವಗಳು, ಸಿದ್ಧಾಂತಗಳು, ಇವರ ಹೋರಾಟ ಇದರ ಹಿನ್ನೆಲೆಯನ್ನು ನೋಡಿದರೆ ನಿಜವಾಗಲೂ ಅದು ಈ ರಾಜ್ಯಕ್ಕೆ ಮತ್ತು ದೇಶಕ್ಕೆ ಅಪಾರವಾದಂಥ ಸೇವೆಯನ್ನು ಮಾಡಿರತಕ್ಕಂಥ ವ್ಯಕ್ತಿಗಳಲ್ಲಿ ಜೆ.ಎಚ್.ಪಟೇಲ್ ಒಬ್ಬರು. ಆದರೆ ಮುಖ್ಯ ಮಂತ್ರಿಯಾದ ನಂತರ ಈ ವಿದ್ಯುತ್ ದರವನ್ನು ಏರಿಸುವ ಮೂಲಕ ತಮ್ಮ ದಕ್ಷತೆಗೆ ಸವಾಲನ್ನು ಒಡ್ಡಿಕೊಂಡಿದ್ದಾರೆ. ನಿಜವಾಗಲೂ ಒಂದು ರೀತಿಯಲ್ಲಿ ನಮ್ಮೆಲ್ಲರಿಗೂ ಯಾವ ಒಂದು ಅನುಭವ ಇವರನ್ನು ಕಂಡು, ಇವರ ಜೊತೆಯಲ್ಲಿ ಇದ್ದು, ಹತ್ತಾರು ವರ್ಷಗಳ ಕಾಲ ಓಡಾಡಿ ಇವರ ಮಾತುಗಳು, ಇವರ ಭಾಷಣ, ಇವರ ಧೋರಣೆ, ಇವರ ಸಿದ್ಧಾಂತಗಳನ್ನು ನೋಡಿದಾಗ, ಈಗ ಮುಖ್ಯ ಮಂತ್ರಿಯಾದ ತಕ್ಷಣವೇ, ನಾಲ್ಕು ವರ್ಷಗಳಿಂದ ಯಾರೂ ವಿದ್ಯುತ್ ದರವನ್ನು ಏರಿಸಿರಲಿಲ್ಲ. ವಿದ್ಯುಚ್ಛಕ್ತಿ ದರವನ್ನು ಏರಿಸುತ್ತಿದ್ದಾರೆ ಎಂದು ಹೇಳಿ ಏಕಾಏಕಿಯಾಗಿ ನಾನು ಅವರನ್ನು ನೇರವಾಗಿ ಸರ್ವಾಧಿಕಾರಿ ಎಂದು ಕರೆಯುವುದಕ್ಕೆ ಹೋಗುವುದಿಲ್ಲ. ಆದರೆ ಸರ್ವಾಧಿಕಾರವನ್ನು ನಾಚಿಸತಕ್ಕಂಥಹ ದೃಷ್ಟಿಗೆ ಜೆ.ಎಚ್.ಪಟೇಲ್‌ರು ಹೊರಟರಲ್ಲ ಎಂಬ ನೋವು ಅಷ್ಟೆ. ಬೇರೆ ಇನ್ನಾವರಾದರು ಮಾಡಿದ್ದರೆ ನಾನು ತಲೆಯನ್ನು ಕೆಡಿಸಿಕೊಳ್ಳುತ್ತಾ ಇರಲಿಲ್ಲ. ಆದರೆ ಪಟೇಲರವರಿಗೆ ಏನಾದರೂ ಪರಕಾಯ ಪ್ರವೇಶ, ವಿದ್ಯುಚ್ಛಕ್ತಿಯ ದರ ಏರಿಕೆಯ ಭೂತದ ಪರಕಾಯ ಪ್ರವೇಶ ಆಗಿ ಈ ರೀತಿಯಾದಂಥ ಚೇಷ್ಟೆಗಳು ರಾಜ್ಯದಲ್ಲಿ ನಡೆಯುತ್ತಿದೆಯೇ ಎನ್ನುವಷ್ಟು ನೋವು........

ಅಧ್ಯಕ್ಷರು:- ಯಾರೋ ಮಾಟ ಮಾಡಿರಬೇಕು.

ಶ್ರೀ ವಾಟಾಳ್ ನಾಗರಾಜ್:- ಇತ್ತೀಚೆಗೆ ಎಲ್ಲಾ ಮುಖ್ಯ ಮಂತ್ರಿಗಳು ಮಾಟ ಮಾಂತ್ರಿಕರ ಕಡೆ ಹೋಗುತ್ತಿದ್ದಾರೆ. ನನಗೆ ಮೊನ್ನೆ ಅನುಮಾನ ಬಂತು. ನಾನು ವಿಧಾನಸೌಧದ ಬಾಗಿಲಿನಲ್ಲಿ ಧರಣಿ ಮಾಡುತ್ತಾ ಕುಳಿತಿದ್ದೆ. ಆಗ ಮಾನ್ಯ ಮುಖ್ಯ ಮಂತ್ರಿಯವರು ಧರಣಿ ನಡೆಸುತ್ತಿದ್ದ ಸ್ಥಳಕ್ಕೆ ಬಂದರು. ನನ್ನ ಕೈ ಹಿಡಿದುಕೊಂಡು ನಡಿ ಒಳಗಡೆ ಎಂದರು. ನನಗೆ ಸಂತೋಷ, ಅವರು ಹಾಗೆ ಹೇಳುವುದಕ್ಕೆ ಅಧಿಕಾರವಿದೆ. ನನಗೆ ಅವರ ಬಗ್ಗೆ ಅಪಾರವಾದಂಥ ಗೌರವವಿದೆ. ಆದರೆ ಅವರು ಹಣೆಯಲ್ಲಿ ವಿಭೂತಿ ಹಾಕಿಕೊಂಡು ಬಂದಿದ್ದರು. ಇವರ ಹಣೆಬರಹ ಏಕೆ ಹೀಗೆ ಆಯಿತು? ಮಾನ್ಯ ದೇವೇಗೌಡರು ವಿಭೂತಿ ಹಾಕಿದರು, ಕುಂಕುಮ ಹಾಕಿದರು, ಕತ್ತಿಗೆ ಸರ ಹಾಕಿದರು, ಇವರಿಗೂ ಅದೇ ಅನುಭವವಾಗಿದೆ. ಇವರು ಯಾರ್‍ಯಾರು ಮಾಂತ್ರಿಕರನ್ನು ಹಿಡಿದುಕೊಂಡಿದ್ದಾರೆ. ಯಾರ್‍ಯಾರು

ಶಾಸ್ತ್ರದವರನ್ನು, ಸೂತ್ರದವರನ್ನು, ಮಾಯಮಾಟದವರನ್ನು ಎಷ್ಟು ಜನರನ್ನು ಹಿಡಿದುಕೊಂಡಿದ್ದಾರೋ ನನಗಂತೂ ಗೊತ್ತಿಲ್ಲ. ಅವರಿಗೆ ಅದೆಲ್ಲಾ ಇರಲಿಲ್ಲ. ಅವರ ಹಣೆಗೆ ಕುಂಕುಮ ಹಚ್ಚಿಕೊಳ್ಳುವ ಚಾಳಿ ಇರಲಿಲ್ಲ.

ಅಧ್ಯಕ್ಷರು:- ನೀವು ಈ ಮಧ್ಯೆ ಸ್ವಲ್ಪ ದಿವಸ ಕಾಣಿಸಲಿಲ್ಲ. ನಾನು ಮಾನ್ಯ ನಂಜೇಗೌಡರನ್ನು ಕೇಳಿದೆ. ಯಾರೋ ಮಾಂತ್ರಿಕರನ್ನು ಹುಡುಕಿಕೊಂಡು ಮಾನ್ಯ ವಾಟಾಳ್ ನಾಗರಾಜ್‌ರವರು ಕೇರಳಕ್ಕೆ ಹೋಗಿದ್ದಾರೆಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್:- ನಾನು ಅದರ ಬಗ್ಗೆ ಒಂದು ಕಥೆಯನ್ನು ಮಾಡಿಕೊಂಡು ಬಂದಿದ್ದೇನೆ. ಅದನ್ನು ನಾನು ಉಪಾಧ್ಯಕ್ಷರ ಚುನಾವಣೆಯ ಸಂದರ್ಭದಲ್ಲಿ ಹೇಳಬೇಕಾಗಿದೆ. ನೀವು ಆಗ ನನಗೆ ಸಿಗುತ್ತೀರಿ. ಅದಕ್ಕೆ ಮಾನ್ಯ ಪಟೇಲರು ಸಾಕ್ಷಿ ಮತ್ತು ಮಾನ್ಯ ನಂಜೇಗೌಡರು ಬಹಳ ಸಾಕ್ಷಿಯಾಗಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ವಿದ್ಯುತ್ ದರ ಏರಿಕೆಯ ಭೂತ ಏನೋ ಹೊಕ್ಕಿಕೊಂಡು, ಪರಕಾಯ ಪ್ರವೇಶ ಏನೋ ಹೇಳಿದ್ದಿರಲ್ಲಾ, ನೀವು ನಾನು ಮಾತನಾಡುವಾಗ ಗಮನಿಸಲಿಲ್ಲ, ಅವರಿಗೆ ಗೊತ್ತಿಲ್ಲದೆ ಅವೆಲ್ಲ ಸುತ್ತಿಕೊಂಡಿವೆ. ಅದಕ್ಕೆ ದೊಡ್ಡ ಒಂದು ಧರ್ಮ ಕಾರ್ಯ ಮಾಡಿ, ಒಂದು ಪೂಜೆ ಮಾಡಿ ಎಲ್ಲಾ ಅನಿಷ್ಟಗಳನ್ನು ತೆಗೆದು ಹಾಕಿ ಈ ಭೂತ ಏನು ಹೊಕ್ಕಿಕೊಂಡಿದೆ, ವಿದ್ಯುತ್ ದರ ಏರಿಸಲೇ ಬೇಕು ಎನ್ನುವುದು, ಅದನ್ನು ತೆಗೆಯಿರಿ ಆಗ ಮುಖ್ಯಮಂತ್ರಿಗಿರಿ ಉಳಿಯುತ್ತದೆ, ರಾಜ್ಯ ಉಳಿಯುತ್ತದೆ ಇದಕ್ಕೆ ಒಬ್ಬ ಒಳ್ಳೆಯವರನ್ನೇ ಸರಿಯಾಗಿ ಪೂಜೆ ಮಾಡುವಂಥವರನ್ನು ಕಳುಹಿಸಿ ಕೊಡುತ್ತೇನೆ. ಹಾಗೆ ಮಾಡಿಸಿ ಆಗ ಏನಾದರೂ ಸರಿಹೋಗಬಹುದೇನೋ ಎಂದು ನನಗೆ ಅನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಈ ಪೂಜೆ ಇದೆಲ್ಲಾ ಮಾನ್ಯ ದೇವೇಗೌಡರಿಗೆ, ಮಾನ್ಯ ಯಡಿಯೂರಪ್ಪನವರಿಗೆ, ಬಿಟ್ಟು ಬಿಡೋಣ. ನಮಗೆ ಪೂಜೆ ಮಾಡಿ ಕುಂಕುಮ ಹಾಕಿಕೊಂಡು ಅಧಿಕಾರ ಮಾಡುವುದು ಬೇಡ. ಅದನ್ನು ಸೀಮಿತವಾಗಿ ಇಟ್ಟುಕೊಂಡು ಬಿಡೋಣ. ಅದನ್ನು ಮಾಡುವುದು ಬೇಡ. ನನಗೆ ಏನು ಅನಿಸುತ್ತದೆಂದರೆ ನಾವು ಎಲ್ಲಾ ಒಗ್ಗಟ್ಟಾಗಿ ನಿಮ್ಮ ಸರ್ಕಾರವನ್ನು ಓಡಿಸಿಬಿಡುತ್ತೇವೆಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ಆದರೆ ನಾವು ಇನ್ನೂ ಒಟ್ಟಾಗಿ ಸೇರಿಲ್ಲ, ಅದು ಸ್ಪಷ್ಟ ಮತ್ತು ಸತ್ಯ ಏಕೆಂದರೆ ನಾವು ಇನ್ನು ಒಂದಾಗೆ ಇಲ್ಲ. ಅವರು ಒಂದು ಸಭೆಯನ್ನು ಕರೆದಿದ್ದು, ಅದಕ್ಕೆ ನಾವು ಇನ್ನು ಹೋಗಿಲ್ಲ. ಅವರು ಏತಕ್ಕಾಗಿ ಸಭೆಯನ್ನು ಕರೆದರು ಎಂದು ತೀರ್ಮಾನವಾಗಿಲ್ಲ. ನಾವು ಹೋಗಿಲ್ಲ ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೋಗಿಲ್ಲ. ಅವರು ಕರೆದ ಮೇಲೆ ಈಗ ನಾವು ಏನು ತೀರ್ಮಾನ ಮಾಡುತ್ತೇವೆ, ಯಾವ ಸರ್ಕಾರ, ಯಾರು ಓಡಿಸುವುದು ಎನ್ನುವ ತೀರ್ಮಾನಕ್ಕೆ ನಾವುಗಳೇ ಇನ್ನು ಬಂದಿಲ್ಲ. ನೀವಾಗಿ ನೀವೆ ತೀರ ಮಿತಿ ಮೀರಿ ಬೀಳುವಂತಹ ಪರಿಸ್ಥಿತಿಗೆ ಬಂದರೆ ಬಹುಶಃ ನಿಮ್ಮಲ್ಲೇ ಏನಾದರೂ 30 ಜನರು ಆ ಕಡೆಯೋ ಈ ಕಡೆಯೋ ಅಲ್ಲಾಡಿದರೆ ಕಷ್ಟ. ನೀವು ಇರಬೇಕೆಂಬುದು ನನ್ನ ಆಸೆ, ನಾನು ಸತ್ಯವಾಗಿ ಹೇಳುತ್ತೇನೆ. ನೀವು ಬೀಳುವಂತಹ ಕಾಲ ಬಂದರೆ ನನ್ನ ಓಟನ್ನು ನಿಮಗೆ ಕೊಡುತ್ತೇನೆ. ನಿಮ್ಮ ಸರ್ಕಾರ ಬಿದ್ದ ಹೋಗುತ್ತದೆಂಬ ತೀರ್ಮಾನಕ್ಕೆ ಬಂದರೆ ನನ್ನ ಓಟನ್ನು ನಿಮಗೆ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಈಗ ಇಲ್ಲಿ ಸ್ಪಷ್ಟವಾಗಬೇಕು. ಅವರು

ಈ ಕಡೆ ವಿರೋಧ ಪಕ್ಷದಲ್ಲಿ ಕುಳಿತಿದ್ದಾರೆ. ನಿಲುವಳಿ ಸೂಚನೆಗೆ ಸಹಿ ಮಾಡಿದ್ದಾರೆ. ತಾವು ಆ ಕಡೆ ಇರುವುದಾದರೆ ಒಂದು ಪರಿಸ್ಥಿತಿ ಬೆಳವಣಿಗೆಯಾಗುತ್ತದೆ. ಅದು ತಮಗೆ ಗೊತ್ತಿರಲಿ, ನಿಮಗೆ ಹೆಸರು ಹೇಳುವುದಿಲ್ಲ. ಅನೇಕ ಜನ ಜನತಾ ಪಕ್ಷದ ಶಾಸಕರು ಗಟ್ಟಿಯಾಗಿ ನಿಂತುಕೊಂಡು ಓಟು ಎಂದು ಮಾಡಿ ಆಗ ಈನಾವು 35-40 ಜನರು ಮಾಡುತ್ತೇವೆ. ಮಾನ್ಯ ಪಟೇಲರು ಈ ಕೆಲಸವನ್ನು ಮಾಡಬಾರದಿತ್ತು, ರೋಸಿ ಹೋಗಿದ್ದೇವೆ. ಶಾಸಕರಾಗಿ ಮುಖ ತೋರಿಸುವುದಕ್ಕೆ ಆಗುವುದಿಲ್ಲ. ಇದು ಖಂಡಿತವಾಗಿ ನಿಲುವಳಿ ಸೂಚನೆಯಾಗಬೇಕು. ಬಲಾಬಲ ಪರೀಕ್ಷೆ ಆಗಬೇಕು ಎಂದು ಹೇಳಿದ್ದಾರೆ. ಆಗ ನೀವು ಯಾವ ಕಡೆಗೆ ಹೋಗುತ್ತೀರಿ?

ಶ್ರೀ ಜೆ.ಹೆಚ್.ಪಟೇಲ್:- ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದ ಮಾತು ನಿಮಗೂ ಅರ್ಥವಾಗಿದೆ, ಅರ್ಥವಾಗಿಲ್ಲವೆಂದಲ್ಲ. ಅವರು ಸರ್ಕಾರ ಬಿದ್ದು ಹೋಗುವ ಹೊತ್ತಿನಲ್ಲಿ ಒಂದು ಓಟಿನಿಂದ ಉಳಿಯುವಂತಹ ಪ್ರಸಂಗ ಬಂದರೆ ನಿಮ್ಮ ಪರ ಓಟು ಕೊಡುತ್ತೇನೆಂದು ಹೇಳಿದರು. ಆ ಪ್ರಸಂಗ ಬರುವುದಿಲ್ಲ. ಆದರೆ ನನ್ನ ಮೇಲಿನ ಅಭಿಮಾನಕ್ಕಾಗಿ ಅವರು ಹಾಗೆ ಹೇಳಿದರು. ನೀವು ಹಾಗೆ ಹೇಳಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈಗ ಬಹಳಷ್ಟು ಬದಲಾವಣೆಯಾಗಿ ಹೋಗಿದೆ. ಅದು ನಿಶ್ಚಿತ, ಅದಕ್ಕೆ ಜನತಾ ದಳ ಎ, ಬಿ, ಸಿ ಎಂದು ಹೇಳಿದ್ದು. ಏನೇನು ಆಗುತ್ತದೆಯೋ ಗೊತ್ತಿಲ್ಲ. ಖಂಡಿತವಾಗಿಯೂ ನೀವು ಹೇಳುವುದರಲ್ಲಿ ಸತ್ಯವಿದೆ. ಸಾಕಷ್ಟು ಆ ಕಡೆ ಈ ಕಡೆ ಬದಲಾವಣೆಯಾಗತಕ್ಕಂಥದ್ದು ಇನ್ನು ಒಂದು ತಿಂಗಳಲ್ಲೊ, ಸದನ ಮುಗಿಯುವದರೊಳಗೊ, ನಾಳೆ, ನಾಡಿದ್ದೊ ಹೇಳುವುದಕ್ಕಾಗುವುದಿಲ್ಲ. ಖಂಡಿತವಾಗಿಯೂ ಏನು ಏನೊ ಆಗುವುದಿದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಯಡಿಯೂರಪ್ಪನವರೇ ನಿಮಗೆ ಬೆಂಬಲ ಕೊಡುವ ಪ್ರಶ್ನೆಯೇ ಬರುವುದಿಲ್ಲ. ಏಕೆಂದರೆ ಅವರು ಈಗಾಗಲೇ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಬೆಂಬಲ ಕೊಡುತ್ತಾರೆಂದು ತೀರ್ಮಾನ ಮಾಡಿಕೊಂಡಿದ್ದಾರೆ. ಆದುದರಿಂದ ನಿಮಗೆ ಅವರು ಬೆಂಬಲವನ್ನು ಕೊಡುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ರಾಮಕೃಷ್ಣ ಹೆಗಡೆಯವರು, ಮಾನ್ಯ ಜೆ.ಹೆಚ್.ಪಟೇಲರು ಒಂದಾಗಿಲ್ಲವೆಂದು ಯಾರು ಹೇಳಿದರು? ಅವರು ಬೇರೆ ಬೇರೆಯಾಗಿದ್ದಾರೆಂದು ನಿಮಗೆ ಯಾರು ಹೇಳಿದರು? ನಿಮಗೆ ರಾಜಕಾರಣವೇ ಅರ್ಥವಾಗಿಲ್ಲ. ನಿಮಗೆ ಬಹಳ ಅನುಭವವಿದೆ ಎಂದು ನಾವು ತಿಳಿದುಕೊಂಡಿದ್ದೆವು. ಈಗ ನಿಮ್ಮ ಪರಿಸ್ಥಿತಿ ಏನು ಎಂಬುದು ನಮಗೆ ಅರ್ಥವಾಗುತ್ತಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗ ಎಲ್ಲರ ಬಣ್ಣ ಬಯಲಿಗೆ ಬಂತಲ್ಲಾ, ಸುಮ್ಮನೆ ಇರಲಾರದೆ ನಮಗೆ ಮುಂಜಾನೆಯಿಂದ ಗಂಟು ಬಿದ್ದಿದ್ದರು. ಈಗ ಎಲ್ಲಾ ಒಂದಾಗಿ ಇದ್ದಾರೆ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:- ಈಗ ತಾತ್ವಿಕವಾಗಿ ಕೂಡ ಸಾಕಷ್ಟು ಚರ್ಚೆಯಾಗಬೇಕು. ಈಗ ಏನಾಗಿದೆ ಎಂದರೆ ಬಿ.ಜೆ.ಪಿ. ನೀತಿ, ನಿಯಮ.......

ಅಧ್ಯಕ್ಷರು:- ತಾವು ಚರ್ಚೆಯಾಗಬೇಕೆಂದು ಏನೋ ಹೇಳಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ:- ತಾತ್ವಿಕವಾಗಿ ಚರ್ಚೆಯಾಗಬೇಕು.

ಅಧ್ಯಕ್ಷರು:- ಇದಕ್ಕೆ ತತ್ವ ಬೇರೆ ಇದೆಯೇ?

ಶ್ರೀ ಕೆ.ಎಸ್.ಈಶ್ವರಪ್ಪ:- ಗುಂಪುಗಾರಿಕೆ ನಡೆಯುವಂತಹ ಸಂದರ್ಭದಲ್ಲಿ ಅನೇಕರು ಕೇಳುತ್ತಾರೆ. ಬಿ.ಜೆ.ಪಿ. ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಬೆಂಬಲ ನೀಡುತ್ತದೆಯೇ? ಹಾಗೆ ಹೀಗೆ ಎಂದು ಕೇಳುತ್ತಾರೆ. ಅವರು ಬಿ.ಜೆ.ಪಿ.ಯ ನೀತಿ, ನಿಯಮ, ಸಿದ್ಧಾಂತ, ಇವೆಲ್ಲವನ್ನು ಒಪ್ಪಿಕೊಂಡು ಅವರು ಬಂದರೆ, ಈ ಪ್ರಶ್ನೆಗಳು ಬಂದಾಗ ಬರುತ್ತದೆ. ಇಲ್ಲದಿದ್ದರೆ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಇದು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಸ್ಪಷ್ಟವಾಗಿಲ್ಲ. ಯಾವ ಕಾರಣಕ್ಕೂ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಬೆಂಬಲ ಕೊಡುವಂತಹ ಪ್ರಶ್ನೆ ಇಲ್ಲವೆ ಇಲ್ಲ. ಅದನ್ನು ನಾನು ಇಲ್ಲಿ ಕ್ಲಿಯರ್ ಆಗಿ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಈಗ ನಾನು ಮಾನ್ಯ ನಂಜೇಗೌಡರನ್ನು ಕುರಿತು ಹೇಳುತ್ತೇನೆ. ಅವರು ನಿಮ್ಮ ಸಿದ್ಧಾಂತ, ತತ್ವ, ಮೆಚ್ಚಿಕೊಂಡು ಬಂದಿದ್ದಾರೆಂದು ತಿಳಿದುಕೊಂಡಿದ್ದೀರೋ? ಅವರ ನಡೆ ನುಡಿ ಅವರ ಹಿನ್ನಲೆಯನ್ನು ನೋಡಿದಾಗ ನನಗೆ ಅವರೊಡನೆ 25 ವರ್ಷಗಳಿಂದ ಸ್ನೇಹ ಇದೆ. ನಿಮ್ಮ ತತ್ವ ಎಂದೂ ಅವರು ಒಪ್ಪಿಕೊಂಡಿರಲಿಲ್ಲ, ಅದು ಹೇಗೆ?

ಅಧ್ಯಕ್ಷರು:- ಶ್ರೀ ವಾಟಾಳ್ ನಾಗರಾಜ್‌ರವರು ಬುಡಕ್ಕೆ ಕೈ ಹಾಕುವುದಕ್ಕೆ ಹೋಗುತ್ತಾರೆ. ಈಗ ಒಬ್ಬೊಬ್ಬರ ಕಾರ್ಯಾಚರಣೆ ಇದೆಯಲ್ಲಾ, ನೀವು ಮೇಲಿನಿಂದ ಬರುತ್ತೀರಿ, ಅವರು ಕೆಳಗಿನಿಂದ ಬರುತ್ತಾರೆ.

ಶ್ರೀ ಹೆಚ್.ಎನ್.ನಂಜೇಗೌಡ:- ಈಗ ವಿಚಾರವೇನೆಂದರೆ ಮಾನ್ಯ ವಾಟಾಳ್ ನಾಗರಾಜ್‌ರವರಿಗೂ ನನಗೂ ಭಾರಿ ಸ್ನೇಹ, ಒಂದು ವಿಚಾರವಂತೂ ನಿಜ, ಅವರಿಗೆ ಯಾವುದೇ ರಾಜಕೀಯ ಸಿದ್ಧಾಂತದ ಬಗ್ಗೆ ಅರಿವು ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ನನಗೆ ರಾಜಕೀಯ ತತ್ವ, ಸಿದ್ಧಾಂತದ ಅರಿವು ಇರುವುದರಿಂದಲೇ ನನ್ನ ಜನ್ಮಾಂತರದಲ್ಲೂ ಒಂದೇ ಪಕ್ಷ, ಒಂದೇ ರೀತಿ, ಒಂದೇ ನೀತಿ ಇಟ್ಟುಕೊಂಡಿದ್ದೇನೆ. ವರ್ಷ ವರ್ಷ ಪಕ್ಷಾಂತರ ಮಾಡಿಕೊಂಡು ಅಧಿಕಾರಕ್ಕೋಸ್ಕರ ನಾನು ಎಂದೂ ಹೋದವನಲ್ಲ. ನಾನು ನಂಜೇಗೌಡರೊಬ್ಬರ ಬಗ್ಗೆಯಲ್ಲ, ಅವರ ಬಗ್ಗೆ ನನಗೆ ಅಪಾರವಾದಂತಹ ಗೌರವವಿದೆ. ತಮಗೂ ನನ್ನ ಬಗ್ಗೆ ಗೊತ್ತಿದೆ.

(ಗೊಂದಲ)

ಅಧ್ಯಕ್ಷರು:- ಈಗ ದೇಶ, ವಿದೇಶಗಳಿಗೆ ಪರ್ಯಾಟನೆ ಮಾಡುತ್ತಾರೆ, ಏಕೆ? ಅನುಭವಕ್ಕೋಸ್ಕರ, ಜ್ಞಾನಕ್ಕೋಸ್ಕರ ಅವರು ಹೋಗುತ್ತಾರೆ. ಹಾಗೆಯೆ ಪಕ್ಷ ಬಿಟ್ಟು ಪಕ್ಷಕ್ಕೆ ಹೋಗುವುದು ಜ್ಞಾನಾರ್ಜನೆಗೋಸ್ಕರ ಹೋಗಿರಬಹುದು, ಅನುಭವಕ್ಕಾಗಿ ಹೋಗಿರಬಹುದು.

ಶ್ರೀ ವಾಟಾಳ್ ನಾಗರಾಜ್:- ಅದನ್ನು ನಾನು ಒಪ್ಪುತ್ತೇನೆ.

ಅಧ್ಯಕ್ಷರು:- ಹಾಗಾದರೆ ಈಗ ನಿಮಗೆ ಅನುಭವ ಕಡಿಮೆಯಾಯಿತು.

ಶ್ರೀ ವಾಟಾಳ್ ನಾಗರಾಜ್:- ಇದರ ಬಗ್ಗೆ ನನಗೆ ಏನೂ ತಕರಾರು ಇಲ್ಲ. ಏಕೆಂದರೆ ಮಾನ್ಯ ಈಶ್ವರಪ್ಪನವರು ಏನು ಹೇಳಿದರು ತಮ್ಮಲ್ಲಿ ತತ್ವ, ಸಿದ್ಧಾಂತ ಎಂದು ಹೇಳಿದರಲ್ಲಾ ಅವರು ಹೇಳಿ, ನಿಮಗೆ ಬಹುತೇಕ ಜನರು ಸೇರಿರುವಂಥವರು ಅವರೆಲ್ಲರನ್ನು ನಾನು ತೆಗಳುವುದಕ್ಕೆ ಹೋಗುವುದಿಲ್ಲ.

ಅವರು ತತ್ವ, ಸಿದ್ಧಾಂತಗಳ ಮೇಲೆ ಬಂದಿದ್ದಾರೆ. ನಾಳೆ ಆ ಕಡೆಯಿಂದ 30 ಜನರು ಬಂದರೆ ಸೇರಿಸಿಕೊಳ್ಳುವುದಿಲ್ಲವೇ?

ಶ್ರೀ ಕೆ.ಎಸ್.ಈಶ್ವರಪ್ಪ:- ಅವರು ಬಿ.ಜೆ.ಪಿ.ಗೆ ಬರಬೇಕೆಂದು ಅಪೇಕ್ಷೆ ಇಟ್ಟುಕೊಂಡು ಬರುವಂತಹ ಸಂದರ್ಭದಲ್ಲಿ ಬಿ.ಜೆ.ಪಿ. ನೀತಿ, ಸಿದ್ಧಾಂತ, ಅಭಿವೃದ್ಧಿ ಕಾರ್ಯಗಳು, ರೈತರ ಪರವಾಗಿ ನಾವು ಮಾಡಿರುವಂಥ ಹೋರಾಟಗಳು ಒಪ್ಪಿಕೊಂಡೆ ಅವರು ಬರುತ್ತಾರೆಂದೇ ನಾವು ಅಂದುಕೊಂಡಿರುವುದು. ಅದಕ್ಕೆ ನಾವು ಅವರನ್ನು ಸೇರಿಸಿಕೊಳ್ಳುವುದು. ಇಲ್ಲದಿದ್ದರೆ ಅವರು ಆಡಳಿತರೂಢ ಪಕ್ಷದಲ್ಲೇ ಇರುತ್ತಿದ್ದರು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಇದು ಒಂದು ಸ್ಪಷ್ಟವಾದ ಗೆರೆ ಎಳೆದ ಹಾಗೆ ನಮ್ಮ ವಿಚಾರಗಳನ್ನು ನಂಬಿಕೊಂಡು ಇರುವಂಥವರು ಬಿ.ಜೆ.ಪಿ. ಕಡೆಗೆ ಬರುವಂಥವರು, Single largest party ಇವತ್ತು ಬಿ.ಜೆ.ಪಿ. ಆಗಿರುವಂಥ ಕಾಲದಲ್ಲಿ ಸುಮಾರು 49 ವರ್ಷಗಳಿಂದ ಅಧಿಕಾರದಲ್ಲಿದ್ದು ಅಲ್ಲಿ ಮತ್ತು ಇಲ್ಲಿ ಇದ್ದು ಓಡಾಡಿಕೊಂಡಿರತಕ್ಕಂಥವರೆಲ್ಲ ಒಂದು ಕಡೆ It is very clear ಇದು ಸ್ಪಷ್ಟವಾಗಿದೆ. ಈಗ ಇಲ್ಲಿರುವವರಿಗೆ ಅನಿಸುತ್ತಾ ಇದೆ, ಇಲ್ಲ, ದೇಶ ಏನಾದರೂ ಉಳಿಯಬೇಕಾದರೆ ಬಿ.ಜೆ.ಪಿ. ಯಿಂದ ಮಾತ್ರ ಸಾಧ್ಯ ಎಂದು, ಅನೇಕ ಜನರು ನಮ್ಮ ವಿಚಾರವನ್ನು ಒಪ್ಪಿಕೊಂಡು ಬರುತ್ತಿದ್ದಾರೆ. ಅದಕ್ಕೆ ನಮ್ಮ ಸ್ವಾಗತವಿದೆ.

★ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಈಗ ನಾವು ಒಂದು ನಿಲುವಳಿ ಸೂಚನೆಯ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ಇಲ್ಲಿ ಏನಾಗುತ್ತಿದೆ ಎಂದರೆ ಬಿ.ಜೆ.ಪಿ.ಗೆ ಹೇಗೆ ಅಡ್‌ಮಿಷನ್ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ಚರ್ಚೆ ನಡೆದಿದೆ. ದಯಮಾಡಿ ಈ ನಿಲುವಳಿ ಸೂಚನೆಗೆ ಏನು ಬೇಕೋ ಅದನ್ನು ಮಾತನಾಡಲಿ, ಈಗ ಬಿ.ಜೆ.ಪಿ.ಗೆ ಅಡಿಮಿಷನ್ ಆಗುವುದಕ್ಕೆ ಏನೇನು ಕ್ವಾಲಿಫಿಕೇಷನ್ ಬೇಕು ಎಂಬುದನ್ನು ಮಾನ್ಯ ಈಶ್ವರಪ್ಪನವರು ಹೇಳುವುದು, ಮಾನ್ಯ ರಾಮಕೃಷ್ಣ ಹೆಗಡೆಯವರ ಪರ ಇರುವಂಥಾವರು ಇಲ್ಲ ಎಂದು ಹೇಳುವುದು ಅದೆಲ್ಲಾ ಇಲ್ಲಿ ಬೇಡ. ಏಕೆಂದರೆ ರಾಮಕೃಷ್ಣ ಹೆಗಡೆಯವರನ್ನು ಯಾವಾಗ ಎಕ್ಸ್‌ಪೆಲ್ ಮಾಡಿದರು. ಅದೇ ದಿವಸ ಮಾನ್ಯ ಈಶ್ವರಪ್ಪನವರು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಅವರನ್ನು ನಮ್ಮ ಪಕ್ಷಕ್ಕೆ ಸ್ವಾಗತ ಮಾಡುವುದಕ್ಕೆ ನಾವು ನಿಂತಿದ್ದೇವೆ ಎಂದು. ಈಗ ಅವರು ತಮ್ಮ ಧಾಟಿಯನ್ನು ಬದಲಾಯಿಸಿದ್ದಾರೆ. ಬಿ.ಜೆ.ಪಿ. ಏನು ಅಂಥ ಕೆಟ್ಟ ಪಕ್ಷವಲ್ಲ. ಅದು ಅನ್‌ಟಚೇಬಲ್ ಅಲ್ಲ. ಅದು ಹಾಗೆ ಅಲ್ಲವೆಂದು ಅವರು ಈ ಧಾಟಿಯಲ್ಲಿ ಹೊರಟಿದ್ದಾರೆ. ಅದಕ್ಕೆ ಆ ಕಡೆಯಿಂದ ಜ್ಞಾನೋದಯವಾಗುತ್ತಿದೆ. ಅಂತಹವರನ್ನು ತೆಗೆದುಕೊಳ್ಳುವುದಕ್ಕೆ ಇವರಿಗೆ ಕೂಡ ಸ್ವಲ್ಪ ಜ್ಞಾನೋದಯವಾಗಿ ಅದು ಯಾವ ರೀತಿಯಲ್ಲಿ ಮಾಡಿಕೊಳ್ಳಬೇಕೆಂದು ಅಡ್‌ಜಸ್ಟ್‌ಮೆಂಟ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಹೆಚ್.ಎನ್.ನಂಜೇಗೌಡ:- ಒಬ್ಬರಿಗಾದರೂ ಬೇಗ ಜ್ಞಾನೋದಯ ಬರಲಿ ಎಂದು ನಮ್ಮ ಅಪೇಕ್ಷೆ.

ಶ್ರೀ ವಾಟಾಳ್ ನಾಗರಾಜ್:- ಒಬ್ಬರಿಗೆ ಜ್ಞಾನೋದಯವಾಗಿ, ಶ್ರೀಮಾನ್ ಜೀವರಾಜ್ ಆಳ್ವರವರು ಮತ್ತೆ ಮರು ಜ್ಞಾನೋದಯಕ್ಕೆ ಹೊರಟಿದ್ದಾರೆ. ಇನ್ನು ಎಷ್ಟು ಜನಕ್ಕೆ ಜ್ಞಾನೋದಯವಾಗುತ್ತೊ....?....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದಕ್ಕೋಸ್ಕರ ಅವರು ಇಲ್ಲಿ ರಾಜೀನಾಮೆ ಕೊಡಿಸಿ ಅವರನ್ನು ಬಿಟ್ಟು ಪುನಃ ಅವರನ್ನು ತರಬೇಕೆಂದು ಮಾಡಿದ್ದೇನೊ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಆದುದರಿಂದ ಮಾನ್ಯ ಅಧ್ಯಕ್ಷರೆ, ಏಕೆಂದರೆ, ನನಗೆ ಈಶ್ವರಪ್ಪನವರು ಹೇಳುವಾಗ, ಅವರ ಪತ್ರಿಕಾ ಹೇಳಿಕೆಯನ್ನು ಸಂಪೂರ್ಣವಾಗಿ ನಾನು ಓದಿದ್ದೇನೆ. ರಾಮಕೃಷ್ಣ ಹೆಗಡೆಯವರು ತತ್ವ, ಸಿದ್ಧಾಂತ, ಆಧಾರವನ್ನು ಒಪ್ಪಿ ತಮ್ಮ ಪಕ್ಷಕ್ಕೆ ಬರುವ ತರಹ ಅವರು ಹೇಳಲೇ ಇಲ್ಲ. ತಕ್ಷಣ ಬಿಟ್ಟು ಬಂದು ಬಿಟ್ಟರೆ ನಾವು ಏನು ಬೇಕಾದರೂ ಬೆಂಬಲ ಕೊಡುತ್ತೇವೆಂದು ಪಟಾಪಟನೆ ತಕ್ಷಣ ಹೇಳಿಬಿಟ್ಟರು.

ಶ್ರೀ ಕೆ.ಎಸ್.ಈಶ್ವರಪ್ಪ:- ನಾನು ಸ್ಪಷ್ಟವಾಗಿ ಆ ಪತ್ರಿಕಾಗೋಷ್ಠಿಯಲ್ಲಿ ಹುರುಪಿನಿಂದ ಹೇಳಿದ್ದೇನೆ, ಅವರು ಅದನ್ನು ತರಿಸಿಕೊಂಡು ನೋಡಿಕೊಳ್ಳಲಿ, ನೀವು ಓದಿರುವ ಪತ್ರಿಕೆಯಲ್ಲಿ ಬಂದಿಲ್ಲವೆಂದರೆ ನಾನೇನು ಮಾಡುವುದಕ್ಕಾಗುವುದಿಲ್ಲ, ಈಗಲೂ ಕೂಡ ಈ ಸದನದ ಮುಖಾಂತರ ಹೇಳುತ್ತೇನೆ, ಯಾರು ಬಿ.ಜೆ.ಪಿ.ಯ ನೀತಿ, ವಿಚಾರ, ಸಿದ್ಧಾಂತವನ್ನು ಒಪ್ಪುತ್ತಾರೋ ಅವರಿಗೆ ಮಾತ್ರ ಪ್ರವೇಶವಿರುತ್ತದೆ ಬೇರೆಯವರಿಗಲ್ಲ.

(ಗೊಂದಲ)

ಅಧ್ಯಕ್ಷರು:- ಒಂದು ನಿಮಿಷ, ಪುಟ್ಟಣ್ಣಯ್ಯನವರು ಏನೋ ಹೇಳುತ್ತಿದ್ದಾರೆ......

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಉತ್ತರ ಪ್ರದೇಶದಲ್ಲಿ ಮಾಯಾವತಿಯವರಿಗೆ ಬೆಂಬಲ ಕೊಟ್ಟಿದ್ದು ಕೂಡ ತತ್ವ ಸಿದ್ಧಾಂತ ಆಧಾರದ ಮೇಲೆ......

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಬಾಬಾ ಗೌಡರು ಯಾವುದೇ ಸಭೆಯಲ್ಲಿ ಬಿ.ಜೆ.ಪಿ.ಯನ್ನು ಬಹಳ ಬೈಯುತ್ತಿದ್ದರು, ಇದ್ದಕ್ಕಿದ್ದಂತೆ ಬಿ.ಜೆ.ಪಿ.ಯಲ್ಲಿ ಅವರು ಏತಕ್ಕೆ ಐಕ್ಯವಾದರೆಂದು ನನಗೆ ಗೊತ್ತಿಲ್ಲ. ಅವರು ಯಾವ ಸಿದ್ಧಾಂತ ಒಪ್ಪಿಕೊಂಡು ಹೋದರೋ, ಒಟ್ಟಿನಲ್ಲಿ ಅಲ್ಲಿ ಉತ್ತರ ಕರ್ನಾಟಕದಲ್ಲಿ ಎರಡನೆಯ ಬಸವಣ್ಣ ಎನ್ನುತ್ತಿದ್ದರು, ಇದ್ದಕ್ಕಿದ್ದಂತೆ ಬಿ.ಜೆ.ಪಿ.ಗೆ ಹೋಗಿ ಸೇರಿಕೊಂಡರು.

ಶ್ರೀ ಹೆಚ್.ಎನ್.ನಂಜೇಗೌಡ:- ಅವರಿಗೂ ಜ್ಞಾನೋದಯವಾಯಿತು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಆಗ ಇರುವ ಜ್ಞಾನವೆಲ್ಲಾ ಕಳೆದುಕೊಂಡು ಹೋಯಿತು. ನನಗೆ ನಂಜೇಗೌಡರಿಗೆ ಯಾವಾಗ ಜ್ಞಾನೋದಯವಾಯಿತೆಂದು ಗೊತ್ತಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಅವರು ಹಿರಿಯರು, ಅವರೇನಾದರೂ ಹೇಳಿದರೆ ಅದಕ್ಕೆ ನಾವೇನಾದರೂ ಪ್ರಯತ್ನ ಮಾಡಬಹುದು ಅಂತ.

ಅಧ್ಯಕ್ಷರು:- ಈಗ ಒಂದುಕೆಲಸ ಮಾಡೋಣ, ಎರಡು ಗಂಟೆಯಾಯಿತು, ಊಟ ಮಾಡಿಕೊಂಡು ಬಂದು ಮೂರು ಗಂಟೆಗೆ ಪುನಃ ಸೇರೋಣ. ಈಗ ಸಭೆಯನ್ನು ಮುಂದೂಡಿ, ಪುನಃ ಮೂರು ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ ಎರಡು ಗಂಟೆ ಎರಡು ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ ಮೂರು ಗಂಟೆಗೆ ಸೇರಲು ನಿಶ್ಚಯಿಸಿತು)

(3.30 ಗಂಟೆಗೆ ಸಭೆ ಪುನಃ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು

ಪೀಠದಲ್ಲಿ ಉಪಸ್ಥಿತರಾದರು)

ಅಧ್ಯಕ್ಷರು:- ನಿಮ್ಮ ವಸ್ತ್ರ ಎಲ್ಲಿ? ನಿಮ್ಮ ವಸ್ತ್ರ ತೆಗೆದುಬಿಟ್ಟಿದ್ದೀರಲ್ಲ! ಸಬ್ಜಕ್ಟ್ ಇನ್ನೂ ಪೂರ್ತಿಯಾಗಿಲ್ಲ. ಆವಾಗಲೇ ವಸ್ತ್ರ ತೆಗೆದುಬಿಟ್ಟಿದ್ದೀರೋ?

ಶ್ರೀ ವಾಟಾಳ್ ನಾಗರಾಜ್:- ಯಡಿಯೂರಪ್ಪನವರೇ, ನಿಮಗೆ ವಸ್ತ್ರ ಬೇಕಾದರೆ ನಾನು ಕೊಡುತ್ತೇನೆ.

(ನಗು)

ಅಧ್ಯಕ್ಷರು:- ಅವರು ನೋಡಿ, ವಸ್ತ್ರವನ್ನು ಸ್ಟಾಕ್ ಇಟ್ಟುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಯಡಿಯೂರಪ್ಪನವರೇ, ವಸ್ತ್ರ ಬೇಕೇ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಇಡೀ ರಾಜ್ಯದಲ್ಲೇ ಕರಾಳ ವಸ್ತ್ರ ಮುಸುಕಿರುವುದು ಎದ್ದು ಕಾಣುತ್ತಿದೆ. ಇನ್ನು ನಾನು ವಸ್ತ್ರ ಹಾಕಿಕೊಂಡರೂ ಒಂದೇ, ಇಲ್ಲದಿದ್ದರೂ ಒಂದೇ.

ಶ್ರೀ ವಾಟಾಳ್ ನಾಗರಾಜ್:- ಆದರೆ ನೀವು ಬಿಳಿಯದು ಹಾಕಿಕೊಂಡಿದ್ದೀರಲ್ಲ!

ಅಧ್ಯಕ್ಷರು:- ಕಸ್ಟೋಡಿಯನ್ ಆಫ್ ದಿ ಹೌಸ್ ಆಗಿ ಇದು ನನ್ನ ಡ್ಯೂಟಿ. ಯಾರ್‍ಯಾರು ಏನೇನು ಮಾಡಬೇಕು ಅಂತ ನಿಮಗೆ ನೆನಪು ಮಾಡಬೇಕಲ್ಲ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ತಾವು ಅವರಿಗೆ ಕಪ್ಪು ಬಾವುಟ ಧರಿಸಿರಿ ಎಂದು ನೆನಪು ಮಾಡಿಕೊಡುತ್ತಿದ್ದೀರಿ. ಇದರಿಂದ ಸಂಶಯ ಬರುತ್ತಿದೆ.

ಅಧ್ಯಕ್ಷರು:- ನನ್ನ ಬಗ್ಗೆ ಯಾರಿಗೂ ಏನೂ ಸಂಶಯ ಬರುವುದು ಬೇಡ. ನಾನು ಹೇಗೆ ಇದ್ದೆನೋ, ಹಾಗೆಯೇ ಇದ್ದೇನೆ. ಬದಲಾವಣೆ ಎಲ್ಲ ನಿಮ್ಮ ನಿಮ್ಮ ಮಧ್ಯೆ ನಡೆಯುತ್ತಿದೆ.

★**ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ):-** ಮಾನ್ಯ ಅಧ್ಯಕ್ಷರೇ, ಈ 25ರಿಂದ 43ರವರೆಗೆ ವಿದ್ಯುತ್ ದರವನ್ನು ಏರಿಸಿರತಕ್ಕಂಥಾದ್ದು, ಯಾವ ಆಧಾರದ ಮೇಲೆ ಎನ್ನುವುದು ನಮಗೆ ಯಾರಿಗೂ ಅರ್ಥವಾಗುತ್ತಿಲ್ಲ. ಈ ಒಂದು ಏರಿಕೆಯಿಂದ ಜನರ ಮೇಲೆ 850 ಕೋಟಿ ರೂಪಾಯಿಗಳ ಹೊರೆಯನ್ನು ಹಾಕಿದ್ದಾರೆ. ನನಗನ್ನಿಸುತ್ತಿದೆ, ಮಾನ್ಯ ಪಟೇಲರು ಈ ರೀತಿ ದರವನ್ನು ಏರಿಸುವುದಕ್ಕಿಂತ ಮುಂಚಿತವಾಗಿ ತಮ್ಮ ಇಲಾಖೆಯನ್ನು ಪರಿಣಾಮಕಾರಿಯಾಗಿ ಸರಿಪಡಿಸಿ ಈ ಇಲಾಖೆಗೆ ಬರತಕ್ಕಂಥ ಸಾಲ, ಅದು ಸ್ವಲ್ಪ ಹೆಚ್ಚು ಕಡಿಮೆ 94-95ರಲ್ಲಿ 655 ಕೋಟಿ ರೂಪಾಯಿಗಳ ಬಿಲ್ಲುಗಳು ಬಾಕಿ ಇವೆ. ಇದು ಪ್ರತಿವರ್ಷ ಈ ರೀತಿಯಾಗಿ ಬಾಕಿ ಉಳಿದಿದೆ. ಇಷ್ಟು ಬಾಕಿ ಹಣ ವಸೂಲಿಯಾಗಬೇಕಾಗಿದೆ ಮತ್ತು ವಿದ್ಯುಚ್ಛಕ್ತಿ ಇಲಾಖೆಯ ಸಂಪೂರ್ಣ ವ್ಯವಸ್ಥೆ, ವ್ಯವಹಾರ ಬಗ್ಗೆ ಮತ್ತು ಸರ್ಕಾರ ದರ ಏರಿಸಬೇಕಾದಂಥ ಪರಿಸ್ಥಿತಿ ಬಗ್ಗೆ ಒಂದು ಶ್ವೇತಪತ್ರವನ್ನು ಸರ್ಕಾರ ಹೊರಡಿಸಬೇಕು. ಈಗಾಗಲೇ ಹೊರಡಿಸಬೇಕಾಗಿತ್ತು. ನಮ್ಮ ಪರಿಸ್ಥಿತಿ ಹೀಗೆ ಇದೆ, ನಮ್ಮ ಸರ್ಕಾರದ ನಷ್ಟ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಈ ರೀತಿಯಾಗಿ ಆಗುತ್ತಿದೆ, ಸಾಲ ಇಷ್ಟು ಬರಬೇಕಾಗಿದೆ, ಇಷ್ಟು ದರ ಏರಿಸಬೇಕಾಗಿದೆ ಎಂದು ಈ ಎಲ್ಲಾ ವಿವರಗಳನ್ನು ಒಳಗೊಂಡಂಥ ಒಂದು ಶ್ವೇತಪತ್ರವನ್ನು ಈ ಸಭೆಯ ಮುಂದೆ ಮಂಡಿಸಿ, ಇದರ ಬಗ್ಗೆ ಒಂದು ಸಮಗ್ರವಾದ ಚಿಂತನೆಯಾದ ನಂತರ ದರವನ್ನು ಏರಿಸತಕ್ಕಂಥ ನಿರ್ಧಾರ ಕೈಗೊಂಡಿದ್ದರೆ ನಿಜವಾಗಿಯೂ ಇದು ಒಂದು ರೀತಿಯಲ್ಲಿ ಪ್ರಜಾಪ್ರಭುತ್ವ ತಳಹದಿಯ ಮೇಲೆ ಸರ್ಕಾರ ಒಂದು ಚಿಂತನೆ ಮಾಡುತ್ತಿದೆ ಎನ್ನಬಹುದಿತ್ತು. ನನಗನ್ನಿಸುತ್ತದೆ ಪಟೇಲರು ಏಕಾಏಕಿಯಾಗಿ ಮಾಡಿದ್ದಾರೆ.

ನನಗೆ ಅವರ ಚಿಂತನೆಗಿಂತ ಹೆಚ್ಚಾಗಿ ಅವರ ಸುತ್ತ ಇರತಕ್ಕಂಥ ಅಧಿಕಾರಿಗಳು ಏನಿದ್ದಾರೆ, ಅವರಲ್ಲಿ ಕೆಲವರು ದಕ್ಷರು ಇದ್ದಾರೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ದಕ್ಷತೆ ಎಂದರೆ ಏನು? ದರವನ್ನು ಏರಿಸತಕ್ಕಂಥಾದ್ದು ದಕ್ಷತೆಯೇ? ಅಥವಾ ವಿದ್ಯುಚ್ಚಕ್ತಿ ಇಲಾಖೆಯನ್ನು ಸಮಗ್ರವಾಗಿ, ಈ ಇಲಾಖೆಯ ಪ್ರಗತಿಯ ದೃಷ್ಟಿಯಿಂದ ಚಿಂತನೆ ಮಾಡಿ ದರ ಏರಿಸಿಕೊಂಡು ಹೋಗಬೇಕಾದ್ದು ಕರ್ತವ್ಯ. ಈ ಕರ್ತವ್ಯ ಯಾವುದನ್ನೂ ಮಾಡಿಲ್ಲ. ಇದು ನಷ್ಟವಾಗುತ್ತಿದೆ, ನಮಗೆ ಇಷ್ಟು ಹಣ ಬಾಕಿ ಇದೆ, ಇದನ್ನು ಯಾವ ರೀತಿ ಮಾಡಬೇಕು ಎಂದು ಯೋಚಿಸಿದರೆ ಕಳೆದ ನಾಲ್ಕು ವರ್ಷಗಳಿಂದ ಏರಿಸದೇ ಇದ್ದುದನ್ನು ಶೇಕಡಾ 23 ಇರುವುದನ್ನು 43ಕ್ಕೆ ಏರಿಸುವುದಕ್ಕೆ ಇರತಕ್ಕಂಥ ವೈಜ್ಞಾನಿಕ ಚಿಂತನೆ ಏನು? ಯಾವ ದೃಷ್ಟಿಯಿಂದ ನೀವು 43ರಷ್ಟು ಏರಿಸಿದ್ದೀರಿ? ಇದಕ್ಕೆ ಕಾರಣ ಏನು? ಇವರು ಯಾವ ಕಾರಣವನ್ನೂ ಕೊಡುತ್ತಿಲ್ಲ. ಏನಾಗಿದೆ ಪರಿಸ್ಥಿತಿ? ನೀವು ದರವನ್ನು ಏರಿಸುವುದಕ್ಕೆ ಬಹಳ ಹಿಂದೆಯೇ ಚಿಂತನೆ ಮಾಡಿದಿರಿ. ನನಗೆ ಗೊತ್ತು, ನೀವು ಈ ಚುನಾವಣೆಗೆ ಮುಂಚಿತವಾಗಿ ಈ ಚಿಂತನೆ ಬಂದು ದರ ಏರಿಸಬೇಕೆಂದು ಹೇಳಿದಿರಿ. ಆದರೆ ಆಗ ಚುನಾವಣೆ ಬರುತ್ತಿದೆ, ನಾವು ದರ ಏರಿಸಬಾರದು ಎಂದು ಹೇಳಿ ನೀವು ನಿಲ್ಲಿಸಿದಿರಿ. ಇದು ಸತ್ಯ. ಇವತ್ತು ಚುನಾವಣೆಯನ್ನು ಮುಗಿಸಿಕೊಂಡು, ಲೋಕಸಭೆ ಚುನಾವಣೆ ಮುಗಿಯಿತು, ಪುರಸಭೆಗಳ ಚುನಾವಣೆ ಮುಗಿಯಿತು, ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿಗಳ ಚುನಾವಣೆಯೂ ಮುಗಿಯಿತು. ಎಲ್ಲಾ ಮುಗಿದ ನಂತರ ನೀವು ದರವನ್ನು ಏರಿಸಿದಿರಿ ''ನದಿ ದಾಟಿದ ನಂತರ ಅಂಬಿಗನ ಹಂಗೇನು'' ಎಂದು ಈ ಜನರನ್ನು ಮೋಸಕ್ಕೆ ಸಿಕ್ಕಿಸಿದ್ದೀರಿ. ಜನ ಏನು ಚಿಂತನೆ ಮಾಡುತ್ತಿದ್ದಾರೆ. ತಾವು ತಿಳಿದುಕೊಂಡಿರಬಹುದು, ಜನ ರಸ್ತೆಗೆ ಬಂದಿಲ್ಲ, ಬೀದಿಗೆ ಬಂದಿಲ್ಲ. ಮಂತ್ರಿಗಳ ಕಾರುಗಳನ್ನು ತಡೆಯುತ್ತಿಲ್ಲ, ಎಲ್ಲೂ ಹೋರಾಟ ಮಾಡುತ್ತಿಲ್ಲ. ಇವೆಲ್ಲ ತಲೆಯಲ್ಲಿಟ್ಟುಕೊಂಡು ನೀವು ಏನು ಆಗುವುದಿಲ್ಲವೆಂದು ದರವನ್ನು ಏರಿಸಿದಿರಿ. ನನಗೆ ಒಂದು ರೀತಿಯಲ್ಲಿ ಜನರ ಮೇಲೆ ಸಿಟ್ಟು ಬರುತ್ತಿದೆ. ನನಗೆ ಅವರ ಬಗ್ಗೆ ಬಹಳ ಅನುಕಂಪ ಇದೆ. ಹಿಂದೆ ಶೇಕಡ ಒಂದೇ ಒಂದು ಭಾಗ ಬಸ್ಸು ದರ ಏರಿಸಿದರೆ ಇಡೀ ರಾಜ್ಯಾದ್ಯಂತ ಹೋರಾಟ ಮಾಡಿದ್ದಂಥಾದ್ದು ಇದೆ. 20 ವರ್ಷಗಳ ಹಿಂದೆ ಒಂದು ಎಕ್ಸ್‌ಪೋ-70 ಅಂತ ಮಾಡಿದರು, ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರಬೇಕು. ಅವಾಗ ಒಂದು ದೊಡ್ಡ ಅಂದೋಳನ, ಹೋರಾಟ ನಡೆಯಿತು. ಸರ್ಕಾರವೇ ಕೆಳಗಿಳಿಯಿತು. ಅದನ್ನು ಲೆಕ್ಕ ಹಾಕಿ ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ನಮ್ಮ ಜನರಿಗೆ ಇದನ್ನು ವಿರೋಧ ಮಾಡತಕ್ಕಂಥ ಸ್ಥೈರ್ಯ, ಆತ್ಮ ಸ್ಥೈರ್ಯ ಕಳೆದುಕೊಂಡಿದ್ದಾರೆಯೇ ಎನ್ನತಕ್ಕಂಥ ನೋವು ನನಗೆ ಉಂಟಾಗುತ್ತಿದೆ. ಆ ಒಂದು ಚಿಂತನೆಯನ್ನು ಇಟ್ಟುಕೊಂಡು, ನೀವು ಇವತ್ತು ದರವನ್ನು ಏರಿಸಿದ್ದೀರಿ. ಯಾರು ಏನು ಬೇಕಾದರೂ ಏರಿಸಬಹುದು. ಇವತ್ತು ನೀವು ವಿದ್ಯುಚ್ಚಕ್ತಿ ದರವನ್ನು ಏರಿಸಿದ್ದೀರಿ. ನಾವು ಸಾರಿಗೆ ದರವನ್ನು ಏರಿಸುವುದಿಲ್ಲವೆಂದು ಸಿಂಧ್ಯಾರವರು ಹೇಳುತ್ತಿದ್ದಾರೆ. ಇದು ಯಾವ ಭರವಸೆ? ವಿದ್ಯುಚ್ಚಕ್ತಿ ದರವನ್ನೂ ಏರಿಸುವುದಿಲ್ಲವೆಂದು ಈಗಾಗಲೇ ಅನೇಕ ಸಾರಿ ಹೇಳಿದ್ದಿರಿ. ಕೇಂದ್ರ ಸರ್ಕಾರದವರು ಪೆಟ್ರೋಲ್, ಡೀಸೆಲ್ ಮತ್ತು ಅನಿಲದ ದರವನ್ನು ಏರಿಸಿದ್ದಾರೆ. ಇದು ನಾಳೆ ಯಾರ ಮೇಲೆ ಬೀಳುತ್ತದೆ, ಸಾರಿಗೆ ಮೇಲೆ ಪರಿಣಾಮ ಬೀರುತ್ತದೆ. ಅದಕ್ಕೋಸ್ಕರ ನೀವು ನಾಳೆ ಸಾರಿಗೆ ದರವನ್ನೂ ಏರಿಸುತ್ತೀರಿ, ಏರಿಸಬೇಕಾಗುತ್ತದೆ. ನೀವು, ಯಾವ ಕಾರಣಕ್ಕೂ ಬಿಡುವುದಿಲ್ಲ. ಇವತ್ತು ಸಿಂಧ್ಯಾರವರು ಸಾರಿಗೆ ದರವನ್ನು ಏರಿಸುವುದಿಲ್ಲವೆಂದು ಹೇಳಿರಬಹುದು. ಆದರೆ, ನಾಳೆ ಈ ಪರಿಸ್ಥಿತಿ

ನಿರ್ಮಾಣವಾಗುತ್ತದೆ. ನನಗನ್ನಿಸುತ್ತದೆ, ನಿಮಗೆ ಜನರ ಬಗ್ಗೆ ಒಂದು ರೀತಿಯ ಭಾವನೆ ಇದೆ. ನಾಳೆ ಹೆಂಗಾದರೂ ಓಟು ಕೊಡುತ್ತಾರೆ, ನಾವು ಹೇಗಾದರೂ ಗೆಲ್ಲುತ್ತೇವೆ ಎನ್ನುವ ಅಹಂ, ಒಂದು ಅಹಂಕಾರದ ಪರಮಾವಧಿ ತಮ್ಮ ತಲೆಯ ಮೇಲೆ ಕುಳಿತಿದೆಯೋ? ಆ ದೃಷ್ಟಿಯಲ್ಲಿ ನೀವು ಮಾಡುತ್ತಿದ್ದೀರಿ? ಇದು ಅಲ್ಲವೇ ಅಲ್ಲ. ನಾನು ತಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ವಿದ್ಯುಚ್ಛಕ್ತಿ ದರದಿಂದ ರೈತನು ಸರ್ವನಾಶವಾಗುತ್ತಾನೆ, ಗ್ರಾಹಕರ ಮೇಲೆ ಹೊರೆ ಜಾಸ್ತಿಯಾಗುತ್ತದೆ, ಕಾರ್ಖಾನೆಗಳವರು ಸಂಪೂರ್ಣವಾಗಿ ಮುಚ್ಚುತ್ತಾರೆ. ಕರ್ನಾಟಕ ವಾಣಿಜ್ಯ ಮಂಡಳಿ, ಅದೊಂದು ಒಳ್ಳೆಯ ಮಡಿವಂತ ಸಂಸ್ಥೆ. ಅವರು ಸರ್ಕಾರದ ವಿರುದ್ಧ ಯಾವುದೇ ಮಾತನಾಡಿದ್ದನ್ನು ನಾನು ನೋಡಲೇ ಇಲ್ಲ. ನಿಮ್ಮೆಲ್ಲರನ್ನೂ ಕರೆದು, ವಿಚಾರ ಸಂಕೀರಣ ಮಾಡಿ, ಮಾತನಾಡುವುದನ್ನು ಬಿಟ್ಟರೆ, ಬೇರೆ ಸಂದರ್ಭದಲ್ಲಿ ಅವರು ಮಾತನಾಡುವುದಿಲ್ಲ. ಇವತ್ತು ವಾಣಿಜ್ಯ ಮಂಡಳಿಯವರು ನೇರವಾಗಿ ಹೇಳುತ್ತಿದ್ದಾರೆ, ಒಂದು ನಯಾಪೈಸೆ ವಿದ್ಯುಚ್ಛಕ್ತಿ ದರವನ್ನು ಕಟ್ಟುವುದಿಲ್ಲವೆಂದು ಹೇಳಿದ್ದಾರೆ. ಈ ತೀರ್ಮಾನಕ್ಕೆ ಅವರು ಬರಬೇಕಾದರೆ, ಅಲ್ಲಿಗೆ ಪರಿಸ್ಥಿತಿ ಎಷ್ಟು ವಿಕೋಪಕ್ಕೆ ಹೋಗುತ್ತದೆ? ಇಷ್ಟು ತೀವ್ರವಾಗಿ ನಿಲ್ಲುತ್ತದೆಂದು ನೀವು ತಿಳಿದುಕೊಳ್ಳಬೇಡಿ. ಇವತ್ತು ನಿಲುವಳಿ ಸೂಚನೆಯನ್ನು ತಂದು ಚರ್ಚೆಯನ್ನು ಮಾಡುತ್ತಿದ್ದೇವೆ. ಈ ನಿಲುವಳಿ ಸೂಚನೆಯ ಚರ್ಚೆಗೆ ತಾವು ಉತ್ತರವನ್ನು ಕೊಡುತ್ತೀರಿ. ನನಗೆ ಗೊತ್ತು, ಮಾನ್ಯ ಮುಖ್ಯ ಮಂತ್ರಿಗಳು ಅತ್ಯಂತ ನಾಜೂಕಾಗಿ ಬಹಳ ಚೆನ್ನಾಗಿ ಉತ್ತರ ಕೊಡುತ್ತಾರೆ. ಮಾನ್ಯ ಜೆ.ಹೆಚ್.ಪಟೇಲರ ಉತ್ತರವನ್ನು ನಾವು ಹಿಂದಿನಿಂದಲೂ ನೋಡಿದ್ದೇವೆ. ಅತ್ಯಂತ ಸೌಮ್ಯದಿಂದ ಸೊಗಸಾಗಿ, ಅಷ್ಟೊಂದು ಅರ್ಥಗರ್ಭಿತವಾಗಿ ಉತ್ತರವನ್ನು ಕೊಟ್ಟು, ಎಲ್ಲರನ್ನೂ ಬಾಯಿ ಮುಚ್ಚಿಸುವಂಥ ಚಿಂತನೆಯನ್ನು ಮಾಡುತ್ತಾರೆ. ನಾವು ಅದಕ್ಕೆ ತಯಾರಾಗಿಲ್ಲ. ತಮಗೆ ಹೇಳುತ್ತಿದ್ದೇನೆ, ಸರ್ಕಾರ ಸ್ಪಷ್ಟವಾಗಿ ಹೇಳಬೇಕು. ಇವತ್ತು ಏರಿಸಿರತಕ್ಕ ದರವನ್ನು ನಾವು ಇಳಿಸಿದ್ದೇವೆ. ಇಲ್ಲಿ ಸಮಗ್ರವಾಗಿ ಚರ್ಚೆಯಾದ ನಂತರ, ದರವನ್ನು ಯಾವ ರೀತಿ ವೈಜ್ಞಾನಿಕವಾಗಿ ಮಾಡಬೇಕೆನ್ನುವ ತೀರ್ಮಾನಕ್ಕೆ ಬರಲಿಲ್ಲವೆಂದು ಹೇಳಿದರೆ, ನಾವು ಸರ್ಕಾರವನ್ನು ಅಷ್ಟು ಸುಲಭವಾಗಿ ಬಿಡುವುದಿಲ್ಲ. ನೀವು ಹೇಳಬಹುದು, ನೀವೇನು ಮಾಡುವುದಕ್ಕಾಗುತ್ತದೆ, ಧರಿಣಿ ಕುಳಿತುಕೊಳ್ಳಬಹುದು, ಸಭಾತ್ಯಾಗ ಮಾಡಬಹುದು ಎಂದು. ನಿಜ, ಪ್ರಜಾಪ್ರಭುತ್ವದ ವೇದಿಕೆಯಲ್ಲಿ ನಾವು ಮಾಡುವಂಥಾದ್ದು ಅಷ್ಟೆ. ಇದನ್ನು ಬಿಟ್ಟು ಇನ್ನೇನು ಮಾಡುವುದಕ್ಕೆ ಸಾಧ್ಯ? ಇವೆಲ್ಲವನ್ನೂ ನಾವು ಮಾಡುತ್ತೇವೆ. ಇದು ಬರೀ ಇವತ್ತಿಗೇ ಮುಗಿಯುವುದಿಲ್ಲ, ಇದು ಪ್ರಾರಂಭ. ಇಡೀ ವರ್ಷ, ನಿಮ್ಮ ಸರ್ಕಾರ ಈ ವಿಚಾರದಲ್ಲಿ ಪ್ರಾಮಾಣಿಕವಾಗಿ ನಡೆದುಕೊಳ್ಳುವವರೆಗೂ, ಒಂದಲ್ಲ ಒಂದು ರೀತಿಯಲ್ಲಿ ನಾವು ಮಾಡುತ್ತೇವೆ. ಅದು ಬೇರೆ ಬೇರೆ ದಿಕ್ಕಿನಲ್ಲಿ ಹೋಗಬಹುದು. ಆದರೆ ಚಳುವಳಿ ನಡೆಯುತ್ತದೆ. ತಮಗೆ ಹೇಳುತ್ತಿದ್ದೇನೆ, ಈಗಾಗಲೇ 15ನೇ ತಾರೀಖು, 8ನೇ ತಾರೀಖು ರೈತಸಂಘ, ಕಮ್ಯುನಿಸ್ಟ್ ಪಕ್ಷ, ಬಹುಜನ ಸಮಾಜವಾದಿ ಪಕ್ಷ, ಸಮಾಜವಾದಿ ಪಕ್ಷ ಮತ್ತು ನಮ್ಮ ಪಕ್ಷ ಎಲ್ಲರೂ ಸೇರಿ ಸಮಾವೇಶ ಮಾಡುತ್ತಿದ್ದೇವೆ. 15ನೇ ತಾರೀಖು ಬೆಂಗಳೂರು ಸೇರಿದಂತೆ ಇಡೀ ಕರ್ನಾಟಕ ರಾಜ್ಯಾದ್ಯಂತ ಸಂಪೂರ್ಣ ಬಂದ್ ಕರೆಯನ್ನು ಕೊಡುತ್ತಿದ್ದೇವೆ. ಅದಾದ ನಂತರ, ಕಾರ್ಖಾನೆಗಳನ್ನು ಮುಚ್ಚುತ್ತೇವೆ. ಅದಾದನಂತರ, ಕರನಿರಾಕರಣೆ ಚಳುವಳಿ ಮಾಡುತ್ತೇವೆ. ಕಂದಾಯ ಕೊಡಬೇಡಿ ಎನ್ನತಕ್ಕಂಥ ಚಳವಳಿಯನ್ನು ಮಾಡುತ್ತೇವೆ. ನಾವೂ ನೀವೂ ಒಟ್ಟಿಗೆ ನಿಂತು, ಎಲ್ಲಿಗೆ ತಲುಪುತ್ತೇವೆಂಬುದನ್ನು ನೋಡೋಣ. ಇವೆಲ್ಲಾ ಒಂದರ ಹಿಂದೆ

ಒಂದು. ಇಡೀ ರಾಜ್ಯಾದ್ಯಂತ ಚಳುವಳಿಗೆ ನೀವು ಅಹ್ವಾನ ಮಾಡಿಕೊಳ್ಳುತ್ತಿದ್ದೀರಿ. ನನಗನ್ನಿಸುತ್ತದೆ, ಈ ನಿರ್ಧಾರಕ್ಕೆ ನಿಮ್ಮ ಪಾರ್ಟಿ ಕೇಳಲಿಲ್ಲ, ಸಚಿವ ಸಂಪುಟ ಕೇಳಲಿಲ್ಲ. ನಾನು ಇದನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ಪಾರ್ಟಿ ಕೇಳಿ ತೀರ್ಮಾನ ತೆಗೆದುಕೊಳ್ಳುವುದು ನಿಮಗೆ ಸೇರಿದ್ದು. ಸಚಿವ ಸಂಪುಟ ಕೇಳಿ ತೀರ್ಮಾನ ತೆಗೆದುಕೊಳ್ಳುವುದು ತಮಗೆ ಸೇರಿದ್ದು. ಆದರೆ, ಏಕಾಏಕಿ, ಪಟೇಲರು ಮುಖ್ಯ ಮಂತ್ರಿಯಾದ ನಂತರ, ರಾಜ್ಯದ ಜನತೆಗೆ ಕೊಟ್ಟಂಥ ಕೊಡುಗೆ ಇದು. ಇದಕ್ಕೆಲ್ಲ ಜನರು ಶಾಪ ಹಾಕುತ್ತಿದ್ದಾರೆ. ಈ ಶಾಪ ಅಷ್ಟು ಸುಲಭವಾಗಿ ನಿಮಗೆ ಬಿಡುವುದಿಲ್ಲ. ಇದು ಒಂದು ಜ್ವಾಲೆಯ ರೀತಿಯಲ್ಲಿ ನಿಮ್ಮ ಸರ್ಕಾರವನ್ನು ಸುಡತಕ್ಕ ಪರಿಸ್ಥಿತಿಗೆ ಹೋಗುತ್ತದೆ ಎನ್ನುವ ಎಚ್ಚರಿಕೆಯ ಮಾತನ್ನು ಕೊಡುತ್ತಿದ್ದೇನೆ. ಇವತ್ತು ನಿಮ್ಮ ದೃಷ್ಟಿಯಲ್ಲಿ, ಜನರು ಸೌಮ್ಯದಿಂದ ಇದ್ದಾರೆ, ಜನರು ಏನೂ ಮಾತನಾಡುತ್ತಾ ಇಲ್ಲ ಎಂಬ ದಿಕ್ಕಿನಲ್ಲಿ ಹೋಗುವುದಾದರೆ, ನಾನು ಅತ್ಯಂತ ಚಿಂತನೆಯಿಂದ, ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ನೀವು ಜನರಿಗೆ ಬಹಳವಾಗಿ ಮೋಸವನ್ನು ಮಾಡುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ. ರೈತರ ಪಂಪುಸೆಟ್ಟುಗಳಿಗೆ ಒಂದು ಅಶ್ವಶಕ್ತಿಗೆ ಮುನ್ನೂರು ರೂಪಾಯಿ. ನೀವು ಕರಂಟೇ ಕೊಡುವುದಿಲ್ಲ. ವಿದ್ಯುಚ್ಛಕ್ತಿ ಕೊಟ್ಟು, ನಾವೇನೋ ಒಂದು ರೇಟ್ ಹಾಕಿದ್ದೇವೆಂದು ಹೇಳಿದರೆ ಸರಿ. ಆದರೆ, ನೀವು ಕರಂಟೇ ಕೊಡುತ್ತಾ ಇಲ್ಲ ಜೊತೆಗೆ ಇವತ್ತು ಕರೆಂಟ್ ಇದ್ದರೆ ತಾನೆ, ನೀವು ಕೊಡುವುದು. ನನಗನಿಸುತ್ತದೆ, ಇವತ್ತು ತಯಾರು ಮಾಡತಕ್ಕ ವಿದ್ಯುಚ್ಛಕ್ತಿ ಮತ್ತು ಬೇಡಿಕೆ ಇರುವುದನ್ನು ನೋಡಿದಾಗ, ನಮಗೆ 10 ಸಾವಿರ ಮೆಗಾವ್ಯಾಟ್ ವಿದ್ಯುಚ್ಛಕ್ತಿಯ ಬೇಡಿಕೆ ಇದೆ. ನಮ್ಮಲ್ಲಿರತಕ್ಕಂಥಾದ್ದು 3 ಸಾವಿರ ಮೆಗಾವ್ಯಾಟ್. ನೀವು ಬೆಳಿಗ್ಗೆ ಒಂದು ಲೈನ್ ಕೊಡುತ್ತೀರಿ , ಮಧ್ಯಾಹ್ನ ಒಂದು ಲೈನ್ ಕೊಡುತ್ತೀರಿ, ರಾತ್ರಿ ಒಂದು ಲೈನ್ ಕೊಡುತ್ತೀರಿ, ಅರ್ಧ ರಾತ್ರಿ ಒಂದು ಲೈನ್ ಕೊಡುತ್ತೀರಿ. ಈ ರೀತಿ ಸಂದರ್ಭವಿಲ್ಲದೇ ಕೊಡುತ್ತೀರಿ. ನಿಗದಿತ ವೇಳೆಯಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುವುದಿಲ್ಲ. ಈಗ ಸ್ಯಾಂಕ್ಷನ್ ಆಗಿರತಕ್ಕಂಥ ಸಾವಿರಾರು ಪಂಪ್‌ಸೆಟ್ಟುಗಳು ಕೆಟ್ಟು ಹೋಗಿವೆ. ಅದರ ಮೇಲೂ ಮುನ್ನೂರು ರೂಪಾಯಿ ಹಾಕುತ್ತೀರಿ. ಇವೆಲ್ಲವನ್ನೂ ನೋಡಿದಾಗ ನನಗನಿಸುತ್ತದೆ ನೀವು ರೈತರಿಗೆ ವಿದ್ಯುಚ್ಛಕ್ತಿಯನ್ನು ಪ್ರಾಮಾಣಿಕವಾಗಿ ಹರಿಸುತ್ತೇವೆ ಎಂದು ಹೇಳುವಂಥ ಶಕ್ತಿ ನಿಮಗಿದೆಯೇ? ಅದು ಖಂಡಿತಾ ಇಲ್ಲ. ನನಗನಿಸುತ್ತದೆ, ಮಾನ್ಯ ನಾಣಯ್ಯನವರು ವಿರೋಧಪಕ್ಷದ ನಾಯಕರಾಗಿದ್ದಾಗಿನ ನಿಮ್ಮ ಹಳೆಯ ಮಹಾಭಾರತ, ರಾಮಾಯಣ ಪುಸ್ತಕಗಳನ್ನು ತೆಗೆದು ಓದಿದರೆ, ಸರ್ಕಾರದ ವಿರುದ್ಧ ಎಂಥೆಂಥ ಮಾತುಗಳನ್ನು ಆಡಿದ್ದಾರೆ ಎಂಬುದನ್ನು ನೋಡಬಹುದು. ಆದರೆ, ಇವತ್ತು ಇಂಥ ಪ್ರಶ್ನೆ ಬಂದಾಗ, ಬಾಯಿ ಮೇಲೆ ಕೈ ಇಟ್ಟುಕೊಂಡು ಕುಳಿತಿದ್ದಾರೆ. ನಿಮಗೆ ಏನಾಗಿದೆ, ಪರಿಸ್ಥಿತಿ ಏನು? ನೀವು ಧೈರ್ಯ ಮಾಡಿ, ಸ್ವಾಮಿ ಇದು ಸರಿಯಿಲ್ಲವೆಂದು ಹೇಳುವಷ್ಟು ಸೌಜನ್ಯ ಇಲ್ಲವೇ? ಆದರೆ, ಅವರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾರೆ. ಅವರಿಗೆ ಜನರ ಬಗ್ಗೆ ಕಳಕಳಿ ಇಲ್ಲವೆಂದು ನನಗನಿಸುತ್ತದೆ. ನೇರವಾಗಿ ಮಾತನಾಡುವುದಾದರೆ, ನೀವು ನಮ್ಮಿಂದ ಮತ ಪಡೆದು ಬರುವವರು ತಾನೆ. ಆದ್ದರಿಂದ ಸಾಮಾನ್ಯ ಜನರ ಕಳಕಳಿ ಇಲ್ಲವೆಂದು ನನಗನಿಸುತ್ತದೆ.

ಶ್ರೀ ಎಂ.ಸಿ.ನಾಣಯ್ಯ:- ನೀವು ಜನರ ಮುಖಾಂತರ, ನಿಮ್ಮ ಮುಖಾಂತರ ನಾವು.

ಶ್ರೀ ಎನ್.ರಾಜಣ್ಣ:- ಮಾನ್ಯ ನಾಣಯ್ಯನವರು ಹಿಂದೆ ವಿರೋಧಪಕ್ಷದಲ್ಲಿದ್ದರು. ವಿರೋಧ ಪಕ್ಷದಲ್ಲಿದ್ದಾಗ ಏನು ಕರ್ತವ್ಯವಿದೆಯೋ ಅದನ್ನೇ ಮಾಡಬೇಕು. ಈಗ ರೂಲಿಂಗ್

ಪಾರ್ಟಿಯಲ್ಲಿರುವುದರಿಂದ, ರೂಲಿಂಗ್ ಪಾರ್ಟಿಯಲ್ಲಿ ಏನು ಮಾಡಬೇಕೋ ಅದನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು:- ನೀವು ಇದುವರೆಗೂ ಕಾಣಲಿಲ್ಲವೆಂದು ನಾನು ವರಿ ಮಾಡಿಕೊಂಡಿದ್ದೆ. ಸಂತೋಷ. ಈಗ ಗೊತ್ತಾಯಿತು.

ಶ್ರೀ ವಾಟಾಳ್ ನಾಗರಾಜ್:- ರಾಜಣ್ಣನವರು ನಿಜವಾಗಿಯೂ ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಅವರ ಉತ್ತರ ಸರಿ, ಸತ್ಯ. ಒಂದು ವಿರೋಧ ಪಕ್ಷದ ಪಾತ್ರ, ಇನ್ನೊಂದು ಸರ್ಕಾರಿ ಒಡೆತನದ ಪಾತ್ರ, ಎರಡೂ ಮಾಡುತ್ತಾರೆಂದು ನಿಮ್ಮ ಪಕ್ಷದವರು ಹೇಳಿದ್ದಾರೆ. ಅದಕ್ಕೆ ನಾಣಯ್ಯನವರನ್ನು ಕುರಿತು ನೇರವಾಗಿ ಹೇಳುತ್ತಿದ್ದೇನೆ. ಏನೆಂದರೆ, ನೀವು ವಿಧಾನ ಪರಿಷತ್ತಿನಲ್ಲಿ ಏನು ಅಬ್ಬರ ಮಾಡಿದ್ದೀರಿ. ಗಂಟೆಗಟ್ಟಲೆ, ದಿನಗಟ್ಟಲೆ ಪ್ರತಿದಿನವೂ ಸ್ವಲ್ಪ ಹೆಚ್ಚು ಕಡಿಮೆ 24 ಗಂಟೆಯೂ ಸರ್ಕಾರವನ್ನು ಬೈಯ್ದಿದ್ದೀರಿ. ನೀವು ಮಲಗಿದಾಗ, ಎದ್ದಾಗ ಎಲ್ಲಾ ಸಂದರ್ಭಗಳಲ್ಲೂ ಸರ್ಕಾರವನ್ನು ಬೈಯ್ದಿದ್ದೀರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- 10 ಪರ್ಸೆಂಟ್ ರಿಸರ್‌ವಾಯರ್‌ನಲ್ಲಿ ನೀರು ಇದ್ದು, ಅಲ್ಲಿ ವಿದ್ಯುತ್ ಉತ್ಪಾದನೆ ಮಾಡತಕ್ಕ ಶಕ್ತಿ ಇಲ್ಲದಿದ್ದರೂ ಕೂಡ, ಹಾಗೂ ಜನರಿಗೆ ಕರೆಂಟ್ ಕೊಡುವ ಆದ್ಯತೆ ಇದ್ದರೂ ಕೂಡ, ಜನರಿಗೆ ಹೆಚ್ಚಿನ ಕರಭಾರವನ್ನು ಹಾಕಿ, ಅದು ತೃಪ್ತಿ ಮಾಡಿತು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನೇರವಾಗಿ ಪ್ರಶ್ನೆ ಕೇಳುತ್ತಿದ್ದೇನೆ. ತಾವು ಪ್ರಾಮಾಣಿಕವಾಗಿ ಹೇಳಿ. ನೀವು ವಿರೋಧಪಕ್ಷದಲ್ಲಿದ್ದಾಗ, ಇಷ್ಟು ಸೌಮ್ಯವಾಗಿ ಕುಳಿತುಕೊಳ್ಳುತ್ತಿದ್ದೀರೋ? ನಿಮ್ಮ ಆತ್ಮಶೋಧನೆಯನ್ನು ಮಾಡಿಕೊಳ್ಳಿ.

ಶ್ರೀ ಡಿ.ಟಿ.ಜಯಕುಮಾರ್:- ತಾವು ಆಡಳಿತ ಪಕ್ಷದಲ್ಲಿದಿದ್ದರೆ ಏನು ಮಾಡುತ್ತಿದ್ದಿರಿ ಎನ್ನುವುದನ್ನೂ ಯೋಚನೆ ಮಾಡಿ.

★ಶ್ರೀ ವಾಟಾಳ್ ನಾಗರಾಜ್:- ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಗಳು, ಮಂತ್ರಿಗಳ ಪರಿಚಯ ಮಾಡಿಸುವಾಗ, ಕೆಲವು ಮಂತ್ರಿಗಳು ಇರಲಿಲ್ಲ. ನೀವು ತೋಟಗಾರಿಕೆ ಇಲಾಖೆಯನ್ನು ವಹಿಸಿಕೊಂಡಿದ್ದೀರಿ, ಸಂತೋಷ. ಅದರ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ನನಗನಿಸುತ್ತದೆ, ಇದು ನೀವು ರೈತರಿಗೆ ಮಾಡಿದಂಥ ದೊಡ್ಡ ಮೋಸ. ಈ ಮೋಸದಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ, ನಾವೇನು ನಿಲುವಳಿ ಸೂಚನೆಯನ್ನು ತಂದಿದ್ದೇವೆ, ಇದನ್ನು ಮಾನ್ಯ ಅಧ್ಯಕ್ಷರು ಒಪ್ಪಬೇಕು. ಇದು ಸಮಗ್ರವಾಗಿ ಚರ್ಚೆಯಾದ ನಂತರ, ಸರ್ಕಾರದ ಉತ್ತರದ ಮೇಲೆ, ನಾವು ಏನು ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಸರ್ಕಾರ ಉತ್ತರ ಕೊಡಲಿ, ನಂತರ ಯಾವ ರೀತಿಯ ಚರ್ಚೆಗೆ ಹೋಗಬೇಕು, ಸರ್ಕಾರದ ವಿರುದ್ಧ ಯಾವ ರೀತಿ ನಿಲ್ಲಬೇಕು ಎಂಬುದು ನಮ್ಮ ಸ್ಪಷ್ಟವಾದ ನಿಲುವಾಗಿದೆ. ಆ ದೃಷ್ಟಿಯಲ್ಲಿ ನೂರಕ್ಕೆ ನೂರು ಇದು ಅತ್ಯಂತ ಅಪ್ರಾಮಾಣಿಕವಾದಂತಹ ಏರಿಕೆ. ಈ ಏರಿಕೆಯನ್ನು ಮಾಡುವಾಗ ಸರ್ಕಾರ ಸಂಪೂರ್ಣವಾಗಿ ಜನರನ್ನು ಕಡೆಗಾಣಿಸಿ, ವಿರೋಧಪಕ್ಷಗಳನ್ನು ಕಡೆಗಾಣಿಸಿ ಶಾಸನ ಸಭೆಗಳನ್ನು ಕಡೆಗಾಣಿಸಿ ಸಂಪೂರ್ಣವಾಗಿ ನಿಷ್ಪಕ್ಷಪಾತವಾಗಿ ಮಾಡದೇ ಏಕ ಪಕ್ಷೀಯವಾಗಿ ಸರ್ವಾಧಿಕಾರಿ ಮನೋಭಾವನೆಯಲ್ಲಿ ದರಗಳನ್ನು ಏರಿಸಿದ್ದಾರೆ ಇದನ್ನು ಸ್ಪಷ್ಟವಾಗಿ ನಾವು ವಿರೋಧಿಸುತ್ತೇವೆ. ಈ ನಿಲುವಳಿ ಸೂಚನೆಗೆ ತಾವು

ಒಪ್ಪಿಗೆಯನ್ನು ಕೊಡಬೇಕೆಂದು ಹೇಳುತ್ತಾ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ:- ಮಾನ್ಯ ಅಧ್ಯಕ್ಷರೇ, ನಿಯಮಾವಳಿ ಸೆಕ್ಷನ್ 60ರ ಪ್ರಕಾರ ನೋಟೀಸ್ ಕೊಟ್ಟಿದ್ದೇವೆ. ಈಗ ಸಬ್‌ಮಿಷನ್ ಸ್ಟೇಜ್. ನಾವು ತಮ್ಮಲ್ಲಿ ರೂಲ್ಸ್ 62ರ ಪ್ರಕಾರ ಗಮನ ಸೆಳೆಯಬಹುದು. "Not more than one such motion shall be made at the same sitting" ಇದು ಒಂದೇ ಕಳುಹಿಸಿರತಕ್ಕಂಥಾದ್ದು. "Not more than one matter shall be discussed on the same motion" ವಿಚಾರ ಒಂದೇ. "The motion shall be restricted to a specific matter of recent occurrence". ಮೊನ್ನೇ ಸಾರ್ವಜನಿಕರ ತಲೆ ಮೇಲೆ ಏರಿಸುವಂತಹ 857 ಕೋಟಿ ಕರಭಾರದ ಬಗ್ಗೆ ತಂದಿರತಕ್ಕಂಥಾದ್ದು. "The motion shall not raise a question of privilege". ಯಾರ ಮೇಲೂ ನಾವು ಪ್ರಿವಿಲೇಜ್ ಮೋಷನ್ ಹಾಕಿಲ್ಲ. "The motion shall not revive discussion on a matter which has been discussed in the same session" ಇದರ ಬಗ್ಗೆ ಚರ್ಚೆಯೇ ಆಗಿಲ್ಲ. ಇನ್ನೂ ಎರಡೂ ಮೂರು ಇವೆ. ಅವುಗಳನ್ನು ನಾನು ಓದುತ್ತಾ ಹೋಗುವುದಿಲ್ಲ. ಟೆಕ್ನಿಕಲಿ the Speaker has no option except to admit this. ನಾನು ಅಂದುಕೊಂಡೆ ಇದನ್ನು ಅಡ್ಮಿಟ್ ಮಾಡುವುದಕ್ಕೆ ಒಪ್ಪಿ ನೀವು ಎಷ್ಟು ಜನ ಪರವಾಗಿ ಇದ್ದೀರಿ ಎದ್ದು ನಿಂತುಕೊಳ್ಳಿ ಎಂದು ಹೇಳುತ್ತಾರೆ ಆಗ ನಾವು ಒಂದು 23 ಜನ ಎದ್ದು ನಿಂದತುಕೊಳ್ಳುತ್ತಿದ್ದೆವು ಆಗ ಇದು ಚರ್ಚೆ ಆಗಬೇಕಾಗಿತ್ತು. ಆಮೇಲೆ ನಾವು ಸಬ್ ಸ್ಟ್ಯಾನ್‌ಷಿಯಲ್ ಮೋಷನ್ ಕೊಡುವುದೋ ಏನು ಮಾಡುವುದೋ ನಾವು ಮಾಡಿಕೊಳ್ಳಬಹುದಿತ್ತು. ಈಗ ಒಂದು ರೀತಿಯಲ್ಲಿ ಸಬ್‌ಮಿಷನ್ ಸ್ಟೇಜ್‌ನಲ್ಲಿಯೇ, ಮೆರಿಟ್ ಮೇಲೆ ಚರ್ಚೆಯಾಗುತ್ತಿದೆ. I am not speaking here just to hear my own voice. ಮುಖ್ಯ ಮಂತ್ರಿಗಳು ಇಲ್ಲ. ಅವರು ಈ ಖಾತೆಗೆ ಇನ್‌ಚಾರ್ಜ್. ಕೆ.ಇ.ಬಿ.ಯವರು ಯಾರೂ ಇರುವಂತೆ ಕಾಣುತ್ತಿಲ್ಲ.. ಪವರ್ ಕಾರ್ಪೊರೇಷನ್‌ನವರು ಯಾರೂ ಇರುವಂತೆ ಕಾಣುತ್ತಿಲ್ಲ.

ಅಧ್ಯಕ್ಷರು:- ಕೆ.ಇ.ಬಿ. ಮಂತ್ರಿಗಳು ಇದ್ದಾರೆ.

ಶ್ರೀ ಎಚ್.ಎನ್.ನಂಜೇಗೌಡ:- ಇದ್ದಾರೋ? ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ನಮಗೂ ಗೊತ್ತಾಗುವುದಿಲ್ಲ. ಇರಲಿ. ಈಗ ಮೆರಿಟ್ ಮೇಲೆ ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ಒಂದು ವಿಚಾರ ಮಾನ್ಯ ಅಧ್ಯಕ್ಷರೇ ಮೊದಲು ನಾನು ನಿಮ್ಮ ಕ್ಷಮೆ ಕೇಳಿ ಬಿಡುತ್ತೇನೆ. ಆಮೇಲೆ ಇಡೀ ಸಮಸ್ತ ಕತ್ತೆಗಳ ಸಮೂಹದ ಕ್ಷಮೆ ಕೇಳಿಕೊಳ್ಳುತ್ತೇನೆ. ಕತ್ತೆಗಳ ಕ್ಷಮೆ ಕೇಳಬೇಕಾಗುತ್ತದೆ. ಅತಿ ವಿನಯದಿಂದ ಅಗಸರು ಯಾರಾದರೂ ಇದ್ದರೆ ಅವರ ಕ್ಷಮೆಯನ್ನು ಕೇಳುತ್ತೇನೆ. ಏಕೆಂದರೆ ವಾಟಾಳ್‌ರವರೇ, ಕತ್ತೆಗಳ ಕ್ಷೇತ್ರದಲ್ಲಿ ಚುನಾವಣೆ ಆಯಿತು. ನಾವು ನಿಂತೆವು, ಯಡಿಯೂರಪ್ಪನವರು ನಿಂತರು, ಅಗಸರು ಎಲೆಕ್ಷನ್‌ಗೆ ನಿಂತರು. ಜೆ.ಎಚ್.ಪಟೇಲರು ದೇವೇಗೌಡರು ಎಲ್ಲಾ ನಿಂತರು. ಕತ್ತೆಗಳು ಏನು ಯೋಚನೆ ಮಾಡಿದವು ಅಗಸ ನಮ್ಮವನು ಅವನಿಗೆ ಓಟು ಕೊಟ್ಟುಬಿಡೋಣ ಅಂತ ಅಂದವು, ಕತ್ತೆಗಳೆಲ್ಲಾ ಅಗಸರಿಗೆ ಓಟು ಕೊಟ್ಟವು. ಕತ್ತೆಗಳಿಗೆ ಬಂದ ಲಾಭ ಏನಪ್ಪ ಅಂದರೆ ಅಗಸನಿಗೆ

ಗೊತ್ತಿದ್ದು ಒಂದೇ ಮೂಟೆ ಹೇರುವುದು. ಈ ದಳ ಅಧಿಕಾರಕ್ಕೆ ಬಂದ ಮೇಲೆ ನಮ್ಮ, ತಮ್ಮವರು ಅಂತ ಹೇಳಿ ಎಲ್ಲಾ ಜಾತಿಯವರು ಬಂಧು ಬಳಗದವರು ಎಲ್ಲಾ ಅಧಿಕಾರಕ್ಕೆ ಬಂದರು. ಪೆಟ್ರೋಲ್ ಬೆಲೆ ಏರಿಸು, ಡೀಜಲ್ ಬೆಲೆ ಏರಿಸು, ಎಲೆಕ್ಟ್ರಿಕಲ್ ಚಾರ್ಜಸ್ ಏರಿಸು, ಬಸ್ಸು ರೇಟು ಏರಿಸು, ಹಾಲಿನ ದರ ಏರಿಸು, ಇವತ್ತು ಹೇಗೆ ಆಗಿದೆ ಅಂದರೆ ಪಟ್ಟಣವಾಸಿಗಳ ಜೀವನ, ಪಟ್ಟಣದಲ್ಲಿ ವಾಸ ಮಾಡುವವರು ಇಲ್ಲಾ ಸ್ಮಗ್ಲರ್ಸ್ ಇರಬೇಕು, ಇಲ್ಲಾ ಬೆಗ್ಗರ್ಸ್ ಆಗಿ ಇರಬೇಕು, ಪ್ರಾಮಾಣಿಕವಾಗಿ ಬದುಕತಕ್ಕಂಥ ಮಧ್ಯಮ ವರ್ಗದ ಜನ ಇರಕೂಡದು. ಮಧ್ಯಮ ವರ್ಗದ ಜನ Honourable ಆಗಿ ಬದುಕಲೇ ಬಾರದು ಎನ್ನುವಂತಹ ತೀರ್ಮಾನ ಈ ಸರ್ಕಾರ ಮಾಡಿದಂತೆ ಕಾಣುತ್ತದೆ.....

Sri H.Shivappa:- What the Hon'ble Member has said, doesn't fit into this. It is not apt.......

ಶ್ರೀ ಎಚ್.ಎನ್.ನಂಜೇಗೌಡರು:- ಹೊರೆ ಏರಿಸಿದ್ದೀರಿ. ಅದನ್ನು ಒಡೆದು ಹೇಳಬೇಕೇ? ಅದರ ಅರ್ಥ ಏನು? ನಾನು ಅದಕ್ಕೆ ಮೊದಲೇ ಕ್ಷಮೆ ಕೇಳಿಬಿಟ್ಟಿದ್ದೇನೆ. ಜನರು ಒಳ್ಳೆಯವರು ಆಗಿದ್ದರೆ ನಿಮಗೆ ಹೇಗೆ ಓಟು ಕೊಡುತ್ತಿದ್ದರು?

ಶ್ರೀ ವಾಟಾಳ್ ನಾಗರಾಜ್:- ಕತ್ತೆಗಳು ಹೊರೆ ಹಾಕಿಕೊಳ್ಳುತ್ತವೆ. ಕತ್ತೆ ಒಳ್ಳೆಯ ಪ್ರಾಣಿ. ತಾವು ಒಳ್ಳೆಯ ಪ್ರಾಣಿ ಹೆಸರು ಹೇಳಿಬಿಟ್ಟಿರಿ. ಕತ್ತೆ ಒಳ್ಳೆಯ ಪ್ರಾಣಿ. ಸೌಜನ್ಯ ಇರತಕ್ಕಂಥ ಪ್ರಾಣಿ. ಅದರ ಕೆಲಸ ಏನೆಂದರೆ ಹೊರುವಂತಹ ಕೆಲಸವೇ. ತೀರಾ ಮಿತಿ ಮೀರಿದಾಗ ಅದು ಒದೆಯುವುದು. ಅದು ಒದೆಯುವುದಕ್ಕೆ ಕಲಿತಾಗ ಹೊರೆ ಹಾಕುವುದು ತಪ್ಪುತ್ತದೆ. ಆದ್ದರಿಂದ ಜನ ಒದೆಯುವುದನ್ನು ಕಲಿಯಬೇಕು ಆಗ ಹೊರೆ ಹಾಕುವುದನ್ನು ನಿಲ್ಲಿಸುತ್ತಾರೆ.

★ಶ್ರೀ ಎಚ್.ಎನ್.ನಂಜೇಗೌಡ:- ನಾನು ಏನು ನಿರೀಕ್ಷೆ ಮಾಡಿದೆ ಅಂದರೆ ಸರ್ಕಾರದವರು ಸಕಾರಣವಾಗಿ ತೆರಿಗೆಗಳನ್ನು ಏರಿಸಿದ್ದರೆ ನಾನು ಅಂದುಕೊಂಡೆ ಅದು ಟೆಕ್ನಿಕಲ್ ಆರ್ಗ್ಯುಮೆಂಟ್ ಮೇಲೆ ನಿಲ್ಲಬೇಕೆಂದು ಇಲ್ಲ ಪ್ರಾರಂಭದಲ್ಲಿಯೇ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿ, ಒಂದು ಸ್ಟೇಟ್‌ಮೆಂಟ್ ಮಾಡಿ ನಮಗೆ ಇಂತಹ ದರ್ದು ಇತ್ತಪ್ಪ, ಇದು ಜಸ್ಟಿಫಿಕೇಶನ್ ಎಂದು ಹೇಳಿ ಒಂದು ಸ್ಟೇಟ್‌ಮೆಂಟ್ ಮಾಡಿ ಚರ್ಚೆಗೆ ಆಹ್ವಾನ ಕೊಡಬೇಕಾಗಿತ್ತು. ಬಹುಶಃ ಕೊನೆ ಗಳಿಗೆಯಲ್ಲಿ ಹೇಳುತ್ತಾರೆ, ಆಗ ಅವರು ಒಪ್ಪುವುದಿಲ್ಲ. ನೀವು ಅಡ್ಜರ್ನ್ ಮಾಡುತ್ತೇನೆ, ನಾನು ಅಲೋ ಮಾಡುವುದಿಲ್ಲ ಎಂದು ಹೇಳುತ್ತೀರಿ, ಇದು ಪರಿಪಾಠವಾಗಿ ಬಂದಿರತಕ್ಕಂಥಾದ್ದು ಈ ಸಭೆಯ ನಡವಳಿಕೆಗಳಲ್ಲಿ. ಈ ವಿಚಾರದಲ್ಲಿ ಇದು ಆಗಬಾರದಾಗಿತ್ತು. ಸರ್ಕಾರದಿಂದ ನಾನು ಇದನ್ನು ನಿರೀಕ್ಷೆ ಮಾಡಿದ್ದಿಲ್ಲ. ಧೈರ್ಯವಾಗಿ ಕುಳಿತುಕೊಂಡು ಚರ್ಚೆ ಮಾಡೋಣ ಒಂದು ದಿನ ಅಲ್ಲ ಎರಡು ದಿನ ಸಭೆಯನ್ನು ತಾವು ನಂಬಿಕೆಗೆ ತೆಗೆದುಕೊಳ್ಳಬೇಕಾಗಿತ್ತು. ಅದನ್ನು ಮಾಡಲಿಲ್ಲ. ಪತ್ರಿಕೆಯಲ್ಲಿ ಒಂದು ಪ್ರಕಟಣೆಯನ್ನು ಮಾಡಿದರು. "Why tariff hike"? ಜಸ್ಟಿಫೈ ಮಾಡಿಕೊಂಡು ಒಂದು ಅಡ್ವರ್‌ಟೈಸ್‌ಮೆಂಟನ್ನು ಎಲ್ಲಾ ಪತ್ರಿಕೆಗಳಲ್ಲೂ ಕೊಟ್ಟರು. ನಾನು ಅವರು ಕೊಟ್ಟಿರತಕ್ಕಂಥಾದ್ದನ್ನು ಒಂದಾದ ಮೇಲೆ ಒಂದರಂತೆ ಎರಡು ನಿಮಿಷದಲ್ಲಿ ಅನಲೈಜ್ ಮಾಡುತ್ತೇನೆ. ಯಾವ ರೀತಿ ಅವರು ಜಸ್ಟಿಫೈ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ, ಯಾವ ರೀತಿ ಇದು ವಾದ ಸಮರ್ಪಕವಾಗಿಲ್ಲ, ಇದು ಅನಾವಶ್ಯಕವಾಗಿತ್ತು, ಏತಕ್ಕೆ ಏರಿಸಿದರು ಎನ್ನತಕ್ಕಂಥಾದ್ದನ್ನು ಸರ್ಕಾರದವರು ಹೇಳಬೇಕಾಗುತ್ತದೆ.

ಜೊತೆಗೆ ಇದು ಸರಿ ಇಲ್ಲ ಎಂದು ಹೇಳಿ ಮನವರಿಕೆ ಮಾಡಿಕೊಂಡು ಈ ಏರಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಬಹುಶಃ ನಾಣಯ್ಯನವರು ಇದನ್ನು ಒಪ್ಪುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ. ಪರ್ಚೇಜ್ ಕಾಸ್ಟ್ ಹೇಳುತ್ತೇನೆ. 1993ರಲ್ಲಿ 55 ಪೈಸೆ ಇತ್ತು ಪರ್ ಯೂನಿಟ್‌ಗೆ. ಈಗ 142 ಪೈಸೆ ಆಗಿದೆ ಅಂತ ಹೇಳುತ್ತಾರೆ. ಈಗ ನಮಗೆ ಎಷ್ಟು ಕಾಸ್ಟ್ ಬೀಳುತ್ತಿದೆ ಹೇಳಿ. ಶರಾವತಿಯಲ್ಲಿ ಒಂದು ಯೂನಿಟ್‌ಗೆ 12.75 ಪೈಸೆ. ಕಾಳಿ ನಾಗಜರಿ, 35 ಪೈಸೆ ಪರ್ ಯೂನಿಟ್. ವರಾಹಿ 50 ಪೈಸೆ ಪರ್ ಯೂನಿಟ್, ಇಂಪೋರ್ಟ್ ಫ್ರಮ್ ರಾಮಗುಂಡಂ, ನೈವೇಲಿ, ಕಲ್ಪಾಕಂ, 105 ಪೈಸೆ ಪರ್ ಯೂನಿಟ್. ಹೆಚ್ಚು ಎಲ್ಲಿ ಬೀಳುತ್ತಿದೆ? ರಾಯಚೂರು ಥರ್ಮಲ್ ಪ್ಲಾಂಟ್ 4 ಬೇಸಿನ್‌ಗಳು ಮೂರು ಹಂತದಲ್ಲಿ 73 ಪೈಸೆಯಂತೆ ಪ್ರಾರಂಭವಾಯಿತು. ಈಗ ಪರ್ ಯೂನಿಟ್ 232 ಪೈಸೆ ಆಯಿತು. ಏಕೆ 232 ಪೈಸೆ ಆಯಿತು. ಇದು ಯಾರ ತಪ್ಪು? ಈ 232 ಪೈಸೆ ಕೊಡುವಂತಹ ಪ್ರಮೇಯ ಏಕೆ ಬಂತು? ಏನು ಮಾಡಿದಿರಿ 4ನೇ ಹಂತ ಅನುಷ್ಠಾನಕ್ಕೆ ತರಬೇಕಾದರೆ ಎಲ್ಲಿ ಸಾಲೆ ತೆಗೆದುಕೊಂಡಿರಿ? ಟೈಮ್ ಸರಿಯಾಗಿ ಪೂರ್ಣ ಮಾಡಲಿಲ್ಲ. ಡಿಲೇ ಆಯಿತು ಇಂಪ್ಲಿಮೆಂಟೇಶನ್ ಮಾಡುವುದಕ್ಕೆ. 4ನೇ ಹಂತ ಡಿಲೇ ಆದಂತೆ ಏನಾಯಿತು ರೂಪಾಯಿ ಬೆಲೆ ಡೀವ್ಯಾಲ್ಯೂ ಆಯಿತು. ಡೀ ವ್ಯಾಲ್ಯು ಆಗಿ ಏನ್ ರೇಟ್ ಜಾಸ್ತಿ ಆಯಿತು, ತೆಗೆದುಕೊಂಡಷ್ಟೆ ಸಾಲಕ್ಕೆ ಜಾಸ್ತಿ ಸಾಲದ ಹೊರೆ ಆಯಿತು. ಕಾರಣ ಡೀವ್ಯಾಲ್ಯುವೇಶ್ನ್. ಬಡ್ಡಿಯ ಹೊರೆ ಜಾಸ್ತಿ ಆಯಿತು. ಕಾಸ್ಟ್ ಜಾಸ್ತಿ ಆಯಿತು. 232 ಪೈಸೆ ಪರ್ ಯೂನಿಟ್ ರಾಯಚೂರು ಥರ್ಮಲ್ ಪ್ಲಾಂಟ್‌ನಿಂದ ಕೆ.ಇ.ಬಿ. ಯವರು ಕೊಳ್ಳುವಂತಹ ಪರಿಸ್ಥಿತಿ ಬಂತು. 1993ರಲ್ಲಿ ಕೋಲ್ ಇಂಪೋರ್ಟ್ ಮಾಡಿಕೊಳ್ಳುವುದಕ್ಕೆ ಟೆಂಡರ್ ಕರೆಯುತ್ತಾರೆ. ಎಷ್ಟು ಬಂತು ಸ್ವಾಮಿ ಟೆಂಡರ್? ಲೋಯಸ್ಟ್ ಟೆಂಡರ್ ಎಷ್ಟು ಬಂತು? ಒಂದು ಟನ್‌ಗೆ ಡೆಲವರಿ ಸ್ಪಾಟ್‌ನಲ್ಲಿ ಕೊಡತಕ್ಕಂಥಾದ್ದಕ್ಕೆ ಲೋಯಸ್ಟ್ ಟೆಂಡರ್ ಬಂದಿದ್ದು 1057 ರೂಪಾಯಿ 12 ಪೈಸೆ ಪರ್ ಟನ್. ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಕಮಿಟಿಯಲ್ಲಿ ಇದ್ದರು ಕೊಂಡುಕೊಳ್ಳಿ ಅಂತ ಅಂದರು. ಆಗ ನಿಮ್ಮವರು ಜಾಸ್ತಿ ಅಂತ ವಾದ ಮಾಡಿದರು. ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಹೇಳಿದರು ಹೀಟ್ ವ್ಯಾಲ್ಯು ಜಾಸ್ತಿ ಇದೆ. ಪರ್ ಟನ್‌ಗೆ 1057 ರೂಪಾಯಿ 12 ಪೈಸೆ ಜಾಸ್ತಿ ಆಗುವುದಿಲ್ಲ ಕೊಂಡುಕೊಳ್ಳಿ ಅಂತ ಹೇಳಿದರು ಕೊಂಡುಕೊಳ್ಳಲಿಲ್ಲ. ಕೊನೆಗೆ ಏನು ಮಾಡಿದರು ಮದ್ರಾಸ್‌ನಲ್ಲಿ ಯಾರೋ ಒಬ್ಬರು ಹಳೆ ಸ್ಟಾಕ್ ತಂದು ಇಟ್ಟಿದ್ದ ಈಗ 2300 ರೂಪಾಯಿಗಳಿಗೆ ಕೊಂಡುಕೊಂಡರು. 1057 ರೂಪಾಯಿ ಜಾಸ್ತಿ ಆಯಿತು. ಅವತ್ತು. 2200 ರೂಪಾಯಿ 2300 ರೂಪಾಯಿ ಟನ್ನಿಗೆ ಕಡಿಮೆ ಆಯಿತು ಇವತ್ತು. ಯಾರ ಮೇಲೆ ಹಾಕುತ್ತೀರಿ ಈ ಹೊರೆಯನ್ನು? ಎಷ್ಟು ಲಕ್ಷಟನ್ ಹೀಗೆ ಕೊಂಡುಕೊಂಡಿದ್ದೀರಿ? ಯಾರ ಮನೆ ದುಡ್ಡು ಕೊಡುತ್ತಿದ್ದೀರಿ? ಯಾರನ್ನು ಕೇಳಿ ಕೊಟ್ಟಿರಿ? ಇದರಲ್ಲಿ ಹಿಂಬಾಗಿಲಿನ ವ್ಯವಹಾರ ಏನು ನಡೆದಿದೆ? ಇದರಿಂದ ಇವತ್ತು ಪ್ರೊಡಕ್ಷನ್ ಕಾಸ್ಟ್ ಜಾಸ್ತಿ ಆಗಿದೆ. ಎಲೆಕ್ಟ್ರಿಸಿಟಿ ಪರ್ಚೇಜ್ ರೇಟ್ ಕೆ.ಇ.ಬಿ.ಗೆ ಜಾಸ್ತಿ ಆಯಿತು. ಇದನ್ನು ಯಾರ ಮೇಲೆ ಹಾಕುತ್ತೀರಿ? ಇದನ್ನು ಸಾಮಾನ್ಯ ಜನರು ಕೊಡಬೇಕೇ? ಕೊಡಿ ನೀವು. 'ನಾವು ಅಂಥಾ ದರ್ಬಾರ್ ಮಾಡುತ್ತೇವೆ, ಇಷ್ಟ ಬಂದ ಹಾಗೆ ಇಷ್ಟ ಬಂದಷ್ಟು ಖರ್ಚು ಮಾಡಿಕೊಳ್ಳುತ್ತೇವೆ, ನಮಗೆ ಹೇಳಿ ಕೇಳುವವರು ಯಾರೂ ಇಲ್ಲ, ನಾವು ಏನು ಬೇಕಾದರೂ ನಡೆಸಿಕೊಂಡು ಹೋಗುತ್ತೇವೆ, ಸಾಮಾನ್ಯ ಜನರಾದ ನೀವು ಇದಕ್ಕೆ ಬೆಲೆ ಕೊಡಿ ಎಂದು ಹೇಳುವುದು ಒಂದು, ಈ ಪರ್ಚೇಸ್ ರೇಟ್ ಬಗ್ಗೆ ನೀವು ಏನು ಸಮರ್ಥನೆ ಮಾಡಿಕೊಳ್ಳುವುದಕ್ಕೆ

ಹೊರಟಿದ್ದೀರೋ? 50 ಪೈಸೆಯಿಂದ 142 ಪೈಸೆಯವರೆಗೆ ಏನು ಹೆಚ್ಚಾಗಿದೆಯೋ ಅದಕ್ಕೆ ಯಾರು ನಿರ್ವಹಣೆ ಮಾಡುತ್ತಿದ್ದಾರೋ, ಅಂಥವರ ಹಂತದಲ್ಲಿ ಆಗುತ್ತಿರತಕ್ಕಂಥ ಅವ್ಯವಹಾರಗಳಿಂದ ಈ ಪರ್ಚೇಸ್ ರೇಟ್ ಹೆಚ್ಚಾಗಿದೆ. Tax transfer the burden on the customer, you have no right. ಇದು ಒಂದು. ಎರಡನೆಯ ಸಮರ್ಥನೆ ಏನು? 1993ರಲ್ಲಿ ಡಿಪ್ರಿಸಿಯೇಶನ್ 63 ಕೋಟಿ ಇದ್ದದ್ದು ಇವತ್ತು 184 ಕೋಟಿ ರೂಪಾಯಿಯಾಗಿದೆ. ಈ ಡಿಪ್ರಿಸಿಯೇಷನ್ ಆಗಿದೆಯೆಂದು ಯಾರಿಗೆ ಹೇಳುತ್ತಿದ್ದೀರಿ? ಸಮರ್ಥನೆ ಮಾಡುವುದಕ್ಕೆ ಇದು ಕಾರಣನಾ? 184 ಕೋಟಿ ಡಿಪ್ರಿಸಿಯೇಷನ್ ಆಗಿದ್ದರೆ ಅದು ಅನುಕೂಲವೇ? What is depreciation value? How it is accounted for? That Rs.184 crores is an internal resource additionally available to the K.E.B. for its improvement. ಎಲ್ಲೋ ಹೊರಗಡೆ ಹೋಗಿರತಕ್ಕಂಥ ಹಣ ಇದಲ್ಲ. ಡಿಪ್ರಿಸಿಯೇಷನ್ ಅಂದರೆ ಎಲ್ಲೋ ಕಳೆದುಕೊಂಡಿರತಕ್ಕಂಥ ದುಡ್ಡಲ್ಲ. It will act as an additional internal resource for the K.E.B.'s benefit. ಈ ಡಿಪ್ರಿಸಿಯೇಷನ್ ಜಾಸ್ತಿ ಆಗಿರುವುದನ್ನೇ ರೇಟ್ ಎನ್ನುವುದಕ್ಕೆ ಕಾರಣ ಮಾಡಿಕೊಳ್ಳುತ್ತಿದ್ದಾರೋ? ಇನ್ನೊಂದು ಕಾರಣ ಡೆಟ್ ಸರ್ವೀಸಿಂಗ್ 1991ರಲ್ಲಿ 121 ಕೋಟಿ ಡೆಟ್ ಸರ್ವೀಸಿಂಗ್ ಇದ್ದದ್ದು 1993ರಲ್ಲಿ ಅದು 283 ಕೋಟಿ ರೂಪಾಯಿ ಆಯಿತು. ಇದು ಏಕೆ ಆಯಿತು? This is due to heavy borrowings at high rate of interest. ಅಂಥಾ ಅವಶ್ಯಕತೆ ಏನು ಬಂತು? ಏಕೆ ಹೈ ರೇಟ್ ಆಫ್ ಇಂಟರೆಸ್ಟ್‌ನಲ್ಲಿ ಸಾಲ ತೆಗೆದುಕೊಳ್ಳಬೇಕು? ಸರ್ಕಾರಕ್ಕೆ ಕೊಟ್ಟಿದ್ದ ವರ್ಲ್ಡ್ ಬ್ಯಾಂಕ್ ಲೋನ್ ಏನಾಯಿತು? What about your 470 million dollars which was given to K.E.B. by World Bank. 1993ರಲ್ಲಿ ಏಕೆ ಸಾಲ ನಿಂತು ಹೋಯಿತು? ಸರ್ಕಾರ ಸ್ಟಿಪ್ಯುಲೇಟೆಡ್ ಪ್ರೊಗ್ರೆಸ್ ಕೊಡಲಿಲ್ಲ. ವರ್ಲ್ಡ್ ಬ್ಯಾಂಕ್‌ನವರು ಕರ್ನಾಟಕ ಸರ್ಕಾರದ ಚೀಫ್ ಸೆಕ್ರೆಟರಿಯವರಿಗೆ ದಿನಾಂಕ 14, ಜುಲೈ 1993 ರಂದು ಒಂದು ಪತ್ರ ಬರೆಯುತ್ತಾರೆ, ಅದರಲ್ಲಿ

> "Unless sufficient progress can be demonstrated by July 31st 1993, we would have no choice but to recommend to our senior management for cancella tion of the balance in the 2 loans".

ಚೀಫ್ ಸೆಕ್ರೆಟರಿಯವರಿಗೆ ಪತ್ರ ಬರೆದು ಅವರು ಅಷ್ಟಕ್ಕೆ ಸುಮ್ಮನಾಗುವುದಿಲ್ಲ, lastly they write as follows:

> We have taken the liberty in sending a copy of this letter to Mr. R.Vasudevan, Secretary, Ministry of Power, Mr. N.R.Singh, Additional Secretary, Depart ment of Economic Affairs, Mr. K.V.Irniraya, Chairman, K.E.B. and Dr. A.Ravindra, Managing Director,

ಎಲ್ಲರಿಗೂ ಹೀಗೆ ಪತ್ರ ಬರೆಯುತ್ತಾರೆ. ಏನೂ ಪ್ರೊಗ್ರೆಸ್ ಕೊಡುವುದಿಲ್ಲ. ಅದಕ್ಕಾಗಿ 10 ಪರ್‌ಸೆಂಟ್ ಇಂಟರೆಸ್ಟ್ ರೇಟ್‌ನಲ್ಲಿ ವರ್ಲ್ಡ್ ಬ್ಯಾಂಕ್‌ನವರು ಕೊಡಲಿದ್ದ ಸಾಲವನ್ನು ನಿಲ್ಲಿಸಿದರು. ಅದರಿಂದ ಅವರಿಗೆ ಸಂತೋಷವಾಯಿತು. ಏಕೆಂದರೆ, ಅವರು ಪಿಯರ್‌ಲೆಸ್ ಕಂಪನಿಯಿಂದ 18 ಪರ್‌ಸೆಂಟ್ ಇಂಟರೆಸ್ಟ್ ಮೇಲೆ ಸಾಲ ತೆಗೆದುಕೊಳ್ಳಬಹುದು, ಇದರಿಂದ ಡೆಟ್ ಸರ್ವೀಸ್ ಜಾಸ್ತಿಯಾಗುತ್ತದೆ. ಇದನ್ನು ನಾನು ಏಕೆ ಹೇಳುತ್ತೇನೆಂದರೆ, 1967ರಿಂದ ನಾನು ಇಲ್ಲಿ ಸದಸ್ಯನಾಗಿದ್ದೇನೆ. ಎಲೆಕ್ಟ್ರಿಸಿಟಿ ಬೋರ್ಡ್ ಎಂದರೆ ಅದಕ್ಕೆ ಹೇಳಿ ಕೇಳುವವರು ಮತ್ತು ದಿಕ್ಕೂ ಇಲ್ಲ. ಯಾರಿಗೂ ಬೇಡದ ಕೂಸು ಅದಾಗಿದೆ. ಯಾರೂ ಅದರ ಬಗ್ಗೆ ಸೀರಿಯಸ್ ಆಗಿ ತೆಗೆದುಕೊಳ್ಳುವುದಿಲ್ಲ. ನಿಜವಾಗಿ ಆ ಇಲಾಖೆ ಟೆಕ್ನಿಕಲಿ ಇಂಪಾರ್ಟೆಂಟ್ ಆಗಿರುತ್ತದೆ. ಅಲ್ಲಿಗೆ ಟೆಕ್ನಿಕಲ್ ಪರ್ಸನ್ಸ್ ಮಾತ್ರ ಆಡಳಿತಕ್ಕೆ ಹಾಕಬೇಕು. ನಮ್ಮ ಗ್ರಹಚಾರ ಏನಾಗಿದೆಯೆಂದರೆ, ಐ.ಎ.ಎಸ್. ಆಫೀಸರ್ಸ್ ಎಂದರೆ ಎಲ್ಲದಕ್ಕೂ ಸಿದ್ಧೌಷಧ ಎಂದು ತಿಳಿದುಕೊಂಡಿದ್ದಾರೆ. ಅವರು ಕೆಟ್ಟವರೆಂದು ನಾನು ಹೇಳುವುದಿಲ್ಲ. ಬರುವ ಎಲ್ಲಾ ಸರ್ಕಾರಗಳೂ ಕೂಡ ಐ.ಎ.ಎಸ್. ಆಫೀಸರ್‌ಗಳನ್ನು ಕಂಪನಿಗಳಿಗೆ ಆಡಳಿತಾಧಿಕಾರಿಗಳನ್ನಾಗಿ ಹಾಕುತ್ತಾರೆ. ಐ.ಎ.ಎಸ್. ಆಫೀಸರ್‌ಗಳನ್ನು ಹಾಕಿರುವ ಯಾವ ಕಂಪನಿಗಳು ಉದ್ಧಾರವಾಗಿವೆಯೆಂದು ಹೇಳಿ? ಅವರನ್ನು ಅಲ್ಲಿಗೆ ಏಕೆ ಹಾಕುತ್ತೀರಿ? ಕಂಪನಿಗಳನ್ನು ಹ್ಯಾಂಡಲ್ ಮಾಡುವುದಕ್ಕೆ ಟೆಕ್ನಿಕಲ್ ಪೀಪಲ್ಸ್ ಇಲ್ಲವೇ? ಮಾನ್ಯ ಅಧ್ಯಕ್ಷರೆ, 1980ನೇ ಇಸವಿಯಲ್ಲಿ ಮಾನ್ಯ ಗುಂಡೂರಾಯರು ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಏನು ನಡೆಯಿತೆಂಬ ಬಗ್ಗೆ ನನಗೆ ನೆನಪು ಇದೆ, ಅದರ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ, ಆಗ ಚೀಫ್ ಸೆಕ್ರಟರಿ ಮತ್ತು ಎನರ್ಜಿ ಸೆಕ್ರೆಟರಿಯವರು ರೆಕಮೆಂಡೇಷನ್ ಪ್ರಕಾರ ಹೆಚ್.ಟಿ. ಯೂಸರ್ಸ್‌ಗೆಲ್ಲಾ 100 ಪರ್‌ಸೆಂಟ್ ಪವರ್ ಕಟ್ ಎಂದು ಸರ್ಕಾರದಿಂದ ನೋಟಿಫಿಕೇಶನ್ ಇಶ್ಯೂ ಆಗಿ ಹೋಯಿತು. ಆ ದಿವಸಗಳಲ್ಲಿ ಟೆಕ್ನಿಕಲ್ ಮ್ಯಾನ್ ಕೆ.ಇ.ಬಿ. ಚೇರ್ಮನ್ ಆಗಿದ್ದರು. ಆಗ ಅವರು ಮುಖ್ಯ ಮಂತ್ರಿಗಳ ಹತ್ತಿರ ಬಂದು ಆ ರೀತಿ ಮಾಡಿರುವುದು ತಪ್ಪು ಮತ್ತು ಆ ರೀತಿ ಮಾಡುವ ಅವಶ್ಯಕತೆ ಇಲ್ಲವೆಂದು ಹೇಳಿದರು, ನೆಕ್ಸ್ಟ್ ಡೇನೇ ಆ ನೋಟಿಫಿಕೇಷನ್ ಅನ್ನು ವಿತ್‌ಡ್ರಾ ಮಾಡಿಕೊಳ್ಳಲಾಯಿತು. ಈ ರೀತಿ ಮಾಡುವುದಕ್ಕೆ ಎರಡು ಕಾರಣಗಳಿರುತ್ತವೆ, ಒಂದು ತಿಳುವಳಿಕೆ ಇಲ್ಲದೆ ಮಾಡುವುದು, ಇನ್ನೊಂದು ಪವರ್ ಕಟ್ ಎಂದು ಅನೌನ್ಸ್ ಮಾಡಿದ ತಕ್ಷಣ ಇಂಡಸ್ಟ್ರಿಯಲಿಸ್ಟ್ಸ್ ಸೂಟ್‌ಕೇಸ್ ತೆಗೆದುಕೊಂಡು ತಮ್ಮನ್ನು ಹುಡುಕಿಕೊಂಡು ಬರಲಿ ಎಂದು ಪವರ್ ಕಟ್ ಮಾಡಬಹುದಲ್ಲವೇ? ಇದು ಆಗುತ್ತಿರತಕ್ಕಂಥಾದ್ದು. ಇಲ್ಲಿಗೆ ಡೆಟ್ ಸರ್ವೀಸ್ ವಿಚಾರವನ್ನು ನಿಲ್ಲಿಸುತ್ತೇನೆ. ಮತ್ತೆ ಇನ್ನೊಂದು ವಿಷಯ ನನ್ನ ಗಮನಕ್ಕೆ ಬಂದಿದೆ. ಇದನ್ನು ಮುಖ್ಯ ಮಂತ್ರಿಗಳು ಕೇಳಿಸಿಕೊಳ್ಳಬೇಕು.

(INTERRUPTIONS)

★ **SRI H.N.NANJEGOWDA:-** Sir, the K.E.B. has resorted to sale of properties. ನನಗೆ ಗೊತ್ತಿರುವುದು ಅಷ್ಟೇ, ಕೆ.ಇ.ಬಿ.ಯನ್ನು ಸೇಲ್ ಮಾಡುವುದು ಪುನಃ ಅದನ್ನೇ ಲೀಸ್‌ಗೆ ತೆಗೆದುಕೊಳ್ಳುವುದು. ಫಂಡ್ಸ್ ಬೇಕು ಮಾರಾಟ ಮಾಡುತ್ತೇವೆ - ಉಪಯೋಗಕ್ಕೆ ಬೇಕು, ಪುನಃ ಅದನ್ನೇ ಲೀಸ್‌ಗೆ ತೆಗೆದುಕೊಳ್ಳುತ್ತೇವೆ. ಈ ವಿಷಯ

ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಆದುದರಿಂದ ಡೇಟ್ ಸರ್ವೀಸ್‌ಗೆ ಕೊಟ್ಟಿರತಕ್ಕಂಥ ಕಾರಣ ಸಮರ್ಥನೀಯವಲ್ಲ. ಇನ್ನು ಆಪರೇಷನಲ್ ಮೇಂಟೆನೆನ್ಸ್ ಎಕ್ಸ್‌ಪೆನ್ಸಸ್ ಇದು 1993ರಲ್ಲಿ 55 ಕೋಟಿ ರೂಪಾಯಿ ಇದ್ದದ್ದು ಈಗ 95 ಕೋಟಿ ರೂಪಾಯಿಗೆ ಬಂದಿದೆ. ಅಂದರೆ, ಅವರೇಜ್ ವರ್ಷಕ್ಕೆ 20 ಪರ್‌ಸೆಂಟ್ ಇನ್‌ಕ್ರೀಸ್ ಆಗಿದೆ. ಆದರೆ, ಬೇರೆ ರಾಜ್ಯದ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಹೋಲಿಕೆ ಮಾಡಿದರೆ ಇದು 5 ಪರ್‌ಸೆಂಟ್ ಕೂಡ ಇನ್‌ಕ್ರೀಸ್ ಆಗಿಲ್ಲ. 3 ವರ್ಷಕ್ಕೆ 60 ಪರ್‌ಸೆಂಟ್ ಜಾಸ್ತಿಯಾಗಿದೆಯೆಂದು ಹೇಳುವುದು ಸಮರ್ಥನೆಯೇ? ಇದು ಏಕೆ ಆಗುತ್ತಿದೆ? Number of transformers both distribution transformers and Board's transformers have failed, burnt. Why? Due to poor maintenance. ಸ್ವಿಚ್‌ಗೇಯರ್ಸ್, ಕೇಬಲ್ಸ್, ಅವುಗಳು ಕೂಡ ಟರ್ನ್ ಔಟ್ ಆಗುತ್ತಾ ಇವೆ. This is due to lack of supervision and human errors in operation. ಈಗ ಇತ್ತೀಚೆಗೆ Number of transmission towers have fallen down. Why? Because of the poor quality of work. ಮಾನ್ಯ ಅಧ್ಯಕ್ಷರೇ, ಹಿಂದೆ ಏನು ಆಗುತ್ತಾ ಇತ್ತು? ಡಿಪಾರ್ಟ್‌ಮೆಂಟ್‌ನವರೇ ಎಲ್ಲಾ ಕೆಲಸಗಳನ್ನು ಮಾಡುತ್ತಾ ಇದ್ದರು. ಲೈನ್ ಎಳೆಯುವ ಕೆಲಸ, ಕಂಬ ಹಾಕುವ ಕೆಲಸ ಮುಂತಾಗಿ ಅವರೇ ಮಾಡುತ್ತಾ ಇದ್ದರು. ಆದರೆ ಈಗ ಇಂಥ ಒಂದು ಕೆಲಸವನ್ನು ಕೂಡ ಡಿಪಾರ್ಟ್‌ಮೆಂಟ್‌ನವರು ಮಾಡುವುದಿಲ್ಲ, ಎಲ್ಲಾ ಕಂಟ್ರಾಕ್ಟರ್ಸ್ ಮುಖಾಂತರ ಮಾಡಿಸುತ್ತಾರೆ. ಇದರಿಂದಾಗಿ ಖರ್ಚು ಜಾಸ್ತಿ. ಏಕೆಂದರೆ ಕಂಟ್ರಾಕ್ಟರ್ಸ್‌ಗೆ ಪ್ರಾಫಿಟ್ ಕೊಡಬೇಕು, ಈ ಮ್ಯಾನ್‌ಪವರ್ ಮುಂತಾಗಿ ಮೈಂಟೇನ್ ಮಾಡಬೇಕು, ಹೀಗಾಗಿ ಖರ್ಚು ಜಾಸ್ತಿಯಾಗಿಯೇ ಆಗುತ್ತದೆ. ಇದನ್ನು ನೀವು ಪವರ್ ರೇಟ್ ಹೆಚ್ಚು ಮಾಡುವುದಕ್ಕೆ ಮತ್ತು ಅದನ್ನು ಸಮರ್ಥನೆ ಮಾಡುವುದಕ್ಕೆ ಕಾರಣ ಎಂದು ಕೊಡುತ್ತೀರಿ. ಜೊತೆಗೆ ಇನ್ನೂ ಸುಮಾರು 5000 ಜನರನ್ನು ನೇಮಕ ಮಾಡಬೇಕೆಂದಿದ್ದಾರಂತೆ. ಇದಕ್ಕಾಗಿ ತಿಂಗಳಿಗೆ ಎರಡೂವರೆ ಕೋಟಿ ರೂ.ಗಳು ಖರ್ಚಾಗುತ್ತವೆ. ಅದನ್ನೂ ನಾವು ಕನ್‌ಸ್ಯೂಮರ್ ಮೇಲೆ ಹಾಕಬೇಕು. ಇರುವವರಿಗೆ ಕೆಲಸವಿಲ್ಲ. ಇರುವ ಕೆಲಸವನ್ನೆಲ್ಲಾ ಕಂಟ್ರಾಕ್ಟರ್‌ಗಳ ಮುಖಾಂತರ ಮಾಡಿಸುತ್ತಾ ಇದ್ದಾರೆ ಆದರೂ ಇನ್ನೂ ಐದು ಸಾವಿರ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರಂತೆ. ಸುಮ್ಮನೆ ಎರಡೂವರೆ ಕೋಟಿ ತಿಂಗಳಿಗೆ ಹೆಚ್ಚುವರಿ ಖರ್ಚು. ವರ್ಷಕ್ಕೆ 30 ಕೋಟಿ ಖರ್ಚು. ಹೀಗೆ ನಾವು ನಮ್ಮ ಹುಚ್ಚಾಟಗಳಿಗೆಲ್ಲಾ ಹಣವನ್ನು ಖರ್ಚು ಮಾಡಿ ಖರ್ಚುಗಳನ್ನೆಲ್ಲಾ ಕನ್‌ಸ್ಯೂಮರ್‌ಗಳ ತಲೆಯ ಮೇಲೆ ಹಾಕಬೇಕು. ಇಲ್ಲಿಯೂ ಕೂಡ ಆಪರೇಶನಲ್ ಅಂಡ್ ಮೈಂಟೇನನ್ಸ್ ಖರ್ಚು ಹೆಚ್ಚು ಆಗಿದೆ ಎಂದು ಹೇಳುತ್ತಿದ್ದೀರಿ ಇದು ಸಮರ್ಥಿಸತಕ್ಕಾಂಥಾದ್ದು ಅಲ್ಲ. ಚಾಟಿ ತೆಗೆದುಕೊಂಡು ಏಕೆ ಇಷ್ಟು ಜಾಸ್ತಿ ಖರ್ಚು ಮಾಡುತ್ತಿದ್ದೀರಿ ಎಂದು ಬಾರಿಸಬೇಕು. Why twenty percent increase in your Operational and Maintenance charges? Can you not control them? ಹುಚ್ಚಾಬಟ್ಟೆ ಏಕೆ ಖರ್ಚು ಮಾಡಬೇಕು? ಹೀಗೆ ಖರ್ಚು ಮಾಡುವುದು ಜನರ ತಲೆಯ ಮೇಲೆ ಹಾಕುವುದು.... ಅಂತೆಯೇ ಕೆ.ಇ.ಬಿ.ಯಲ್ಲಿ ಹಿಂದೆ ಇದ್ದ ವರ್ಕ‌ಕಲ್ಚರ್ ಈಗ ಇಲ್ಲ. ಇದು ಒಂದು ಸಂಪೂರ್ಣವಾಗಿ ಮಾಯವಾಗಿದೆ. ಅಲ್ಲಿ ಮೊದಲಿಂದ ಹಿಡಿದು ಕೊನೆಯ

ಮನುಷ್ಯನವರೆಗೂ ವರ್ಕ್ ಕಲ್ಚರ್ ಇಲ್ಲ. ಅವರ ಧೋರಣೆಯಂತೆ ಬಂದುದನ್ನು ಎಷ್ಟಾದರೂ ಗಿಟ್ಟಿಸಿಕೊಳ್ಳಬೇಕು, ತಮ್ಮ ಪಾಕೀಟುಗಳನ್ನು ತುಂಬಿಸಿಕೊಳ್ಳಬೇಕು. ಇಂಥ ಕಲ್ಚರ್ ಅಲ್ಲಿ ಬಹಳ ಡೆವಲಪ್ ಆಗಿದೆ. You have to inclucate the work culture again in K.E.B. if K.E.B. has to survive ಎಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಟೆಕ್ನಿಕಲ್‌ಬಾಡೀಸ್ ಇರುತ್ತಾರಲ್ಲ ಅವು ನಮ್ಮ ರಾಜ್ಯದಲ್ಲಿ ಇಲ್ಲದಿದ್ದರೆ ಹೊರರಾಜ್ಯಗಳಿಂದ ತರಿಸಿಕೊಳ್ಳಿ. Put technical experts to head such organisatiions not others. ನಿಮಗೆ ಅಡ್ಮಿನಿಸ್ಟ್ರೇಟಿವ್ ಅಡ್‌ವೈಸರ್ಸ್ ಬೇಕಾದರೆ ಬೇರೆಯವರನ್ನು ಇಟ್ಟುಕೊಳ್ಳಿ. ಒಬ್ಬ ಮೆಂಬರ್ ಅಡ್ಮಿನಿಸ್ಟ್ರೇಶನ್ ಎಂದು ಮಾಡಿಕೊಳ್ಳಿ. But to head an Organisation which is technically operated and supervised. ನಿಮ್ಮಲ್ಲಿ ಇದ್ದರೆ ಟೆಕ್ನಿಕಲ್ ಅಡ್ವೈಸರ್ಸ್ ಅಂತ ಹಾಕಿಕೊಳ್ಳಿ, ಇಲ್ಲವಾದರೆ ಹೊರಗಿನಿಂದ ಕರೆದುಕೊಂಡು ಬನ್ನಿ. Don't spoil the organisation. ಆಮೇಲೆ ವರ್ಕ್‌ಲೋಡ್ ಕಮಿಟಿ ಎಂದು ಮಾಡಬೇಕಾಗುತ್ತದೆ. ಅದನ್ನು ಮಾಡಿ ವರ್ಕ್‌ಲೋಡ್ ಎಷ್ಟಿದೆ ಮ್ಯಾನ್‌ಪವರ್ ಎಷ್ಟಿದೆ? ನಾವು ಎಷ್ಟು ಖರ್ಚು ಮಾಡುತ್ತಾ ಇದ್ದೇವೆ, ಎಕ್ಸ್‌ಪೆಂಡೀಚರ್‌ನ್ನು ರೆಡ್ಯೂಸ್ ಮಾಡುವುದಕ್ಕೆ ಸಾಧ್ಯವೇ? ಎಂಬಿತ್ಯಾದಿಗಳನ್ನು ನೋಡಿಕೊಳ್ಳಲು ವರ್ಕ್‌ಲೋಡ್ ಕಮಿಟಿಯನ್ನು ನೀವು ಸೆಟ್ ಅಪ್ ಮಾಡಬೇಕಾಗುತ್ತದೆ. Don't think of additional recruitment to K.E.B. ದಯಮಾಡಿ ಅದು ಆಗಕೂಡದು. ಅದನ್ನು ಮಾಡಲೆಬೇಕಾದರೆ Let the Workload Committee, Expert Committee examine whether there is necessary or not? ಸುಮ್ಮನೆ ಯಾರೋ ಹೇಳುತ್ತಾರೆಂದು ಮಾಡುವುದಲ್ಲ. ನಮ್ಮ ಕಡೆಯ ಕೆಲವು ಹುಡುಗರಿಗೆ ಕೆಲಸ ಕೊಡಬಹುದೆಂದು ಅವರು ಹೇಳಬಹುದು. ನಮ್ಮ ಸರಕಾರದವರು ಕೆಲಸ ಕೊಟ್ಟಿಲ್ಲ ಎಂದು ಯಾರೋ ಬಂದು ಹೇಳುತ್ತಾರೆಂದು ಅವರು 5 ಸಾವಿರ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳೋಣ ಎಂದು. ಹೇಳಿ ಈ ಕೆಲಸವನ್ನು ದಯಮಾಡಿ ಮಾಡಬೇಡಿ. ಆದ್ದರಿಂದ ಈ ಮೈಂಟೇನನ್ಸ್ ಅಂಡ್ ಆಪರೇಶನಲ್ ಕಾಸ್ಟ್ ಏನು ಇನ್‌ಕ್ರೀಸ್ ಆಗಿದೆ ಎಂದು ಹೇಳುತ್ತಿದ್ದೀರಿ ಅದನ್ನು ಕೂಡ ಸಮರ್ಥನೆ ಮಾಡುವುದಕ್ಕೆ ಸಕಾರಣವೆಂದು ಹೇಳುವುದಿಲ್ಲ. ಇನ್ನೊಂದು ಅಗ್ರಿಕಲ್ಚರ್ ಕನ್‌ಸ್ಯೂಮರ್ಸ್‌ನ ವಿಚಾರ ಹೇಳಿದ್ದೀರಿ. ಇದರಲ್ಲಿ ನಾನು ಎಲ್ಲರೂ ಹೇಳಿದ ಹಾಗೆ ಹೇಳುವುದಕ್ಕೆ ತಯಾರಾಗಿಲ್ಲ. Let me be frank. Regarding availing free power 1993ರಲ್ಲಿ 8 ಲಕ್ಷ 69 ಸಾವಿರ ಐ.ಪಿ. ಸೆಟ್ಸ್ ಇತ್ತು ಎಂದು ಹೇಳಿದ್ದೀರಿ. ಈಗ 10 ಲಕ್ಷದ 14 ಸಾವಿರ ಐ.ಪಿ.ಸೆಟ್ಸ್ ಆಗಿವೆ ಎಂದು ಹೇಳುತ್ತಿದ್ದೀರಿ. ಒಂದು ಐದು ಹೆಚ್.ಪಿ. ಅವರೇಜ್ ಇಟ್ಟುಕೊಂಡರೆ 1500 ರೂ. ಹೆಚ್.ಪಿ.ಗೆ ಆಯಿತು. ಯುನಿಟ್‌ವೈಸ್ ಲೆಕ್ಕ ಹಾಕಿದರೆ 21 ಪೈಸ್ ಬೀಳುತ್ತದೆ. ಇದರಲ್ಲಿ 7,098 ಮಿಲಿಯನ್ ಯುನಿಟ್ಸನ್ನು ರೈತರು ಬಳಸುತ್ತಾರೆಂದು ಹೇಳಿದ್ದೀರಿ. ಈ ವಿಚಾರದಲ್ಲಿ ನನಗೆ ಸ್ವಲ್ಪ ಅನುಮಾನವಿದೆ. ನಾನೂ ಕೂಡ 10 ಹೆಚ್.ಪಿ. ಪವರ್‌ನ ಪಂಪ್‌ಸೆಟ್ಟನ್ನು ಇಟ್ಟುಕೊಂಡಿದ್ದೇನೆ. ವರ್ಷದಲ್ಲಿ ಅವರೇಜ್ 200 ಗಂಟೆ ನಾವು ನೀರುಣಿಸುತ್ತೇವೆ. ತೆಂಗಿನ ತೋಟ ಇದೆ, ಮಳೆಗಾಲದಲ್ಲಿ ನಾವು ಉಪಯೋಗ ಮಾಡುವುದಿಲ್ಲ. ಹೀಗೆ ಅನೇಕ ಪಂಪ್‌ಸೆಟ್‌ಗಳು ಕೆಲಸ ಮಾಡುವುದಿಲ್ಲ. ಇವೊತ್ತು

ಲೋಡ್‌ಶೆಡ್ಡಿಂಗ್ ಆಗಿಬಿಟ್ಟು ಸಿಂಗಲ್‌ಲೈನ್ ಆಗಿ ಮೋಟಾರ್‌ಗಳು ಸುಟ್ಟು ಅನಾಹುತಗಳು ಏನಾಗುತ್ತಿವೆ ಇದು ಆಗತಕ್ಕದ್ದು ಅಲ್ಲ. ಇದರಲ್ಲಿ ಅರ್ಧ ಎಂದು ಲೆಕ್ಕ ಹಾಕಿದರೂ ಕೂಡ ಮೂರೂವರೆ ಸಾವಿರ ಮಿಲಿಯನ್ ಯುನಿಟ್ಸ್ ಆಯಿತು. ಹಾಗೆ ಲೆಕ್ಕ ಹಾಕಿದರೂ 42 ಪೈಸೆ ಪರ್ ಯೂನಿಟ್ ಆಗುತ್ತದೆ. ಇದನ್ನು ರೈತರು ಕೊಡಬೇಕಾಗುತ್ತದೆ. Let us be frank. ನಾವು ಫ್ರೀಯಾಗಿ ಕೊಡುವುದು, ಸಬ್ಸಿಡೈಸ್ ಮಾಡುವುದು, ಸಾಲ ಮನ್ನಾ ಮಾಡುವುದು, ಇಂಥ ಪ್ರಿನ್ಸಿಪಲ್‌ಗಳನ್ನು ನಾನು ಲೈಕ್ ಮಾಡುವುದಿಲ್ಲ. ರೈತರುಗಳು ಏನು ನಿರೀಕ್ಷೆ ಮಾಡುತ್ತಾರೆಂದರೆ, ನಾನು ಈ ಬಗ್ಗೆ ಒಂದು ಸೂಚನೆಯನ್ನು ಏನು ಕೊಡಬಯಸುವುದೆಂದರೆ, ಐ.ಪಿ. ಸೆಟ್‌ಗಳಿಗೆ ಮೀಟರನ್ನು ಹಾಕಿ. ಏಕೆಂದರೆ ಎಷ್ಟೋ ರೈತರು ನೀರನ್ನು ಮಾರಾಟ ಮಾಡುತ್ತಾರೆ. ಆದರೆ ಇನ್ನು ಕೆಲವು ರೈತರು ಪಂಪ್‌ಸೆಟ್‌ಗಳನ್ನು ನಡೆಸುತ್ತಾನೇ ಇಲ್ಲ. ನಿಮ್ಮ ಪ್ರಕಾರ ನಡೆಸುವವರೂ ಅಷ್ಟು ಕೊಡಬೇಕು, ನಡೆಸದಿದ್ದರೂ ಅಷ್ಟು ಕೊಡಬೇಕು. ಹಾಗೆ ಆಗುವುದು ಬೇಡ. ಮೀಟರನ್ನು ಅಸವಡಿಸಿ. ಹಿಂದೆ ಮೀಟರ್ಸ್ ಇದ್ದು ಅದು ಯಾವ ಕಾರಣಕ್ಕಾಗಿ ಮೀಟರನ್ನು ಕಿತ್ತು ಹಾಕಿದರೋ ನನಗೆ ಗೊತ್ತಾಗಲಿಲ್ಲ. It is time that we introduce the meter system even for the farmers. ಅದು ಐ.ಪಿ. ಸೆಟ್‌ಗಳಿಗೆ ಪರ್ ಹಾರ್ಸ್‌ಪವರ್ ಎಂದು ಏನು ಲೆಕ್ಕ ಹಾಕಿದ್ದೀರೋ ಅದನ್ನು ಯೂನಿಟ್‌ವೈಸ್ ಲೆಕ್ಕ ಹಾಕಿ ಅದನ್ನು 20-30 ಪೈಸೆ ಎಂದು ಮಾಡುತ್ತೀರೋ ಅದನ್ನು ಮಾಡಿ. ಏಕೆಂದರೆ ಎಲೆಕ್ಟ್ರಿಸಿಟಿ ಅಥಾರಿಟಿ ಆಫ್ ಇಂಡಿಯಾ ಅವರ ಲೆಕ್ಕಾಚಾರದಲ್ಲಿ 50 ಪೈಸೆಗಳಿಗೆ ಕಡಿಮೆ ನಾವು ಪವರೂ ಮಾರಾಟ ಮಾಡುವ ಹಾಗೆ ಇಲ್ಲ. ನಾವು ಅವರಿಂದಲೂ ಗ್ರ್ಯಾಂಟನ್ನು ತೆಗೆದುಕೊಳ್ಳುತ್ತಾ ಇದ್ದೇವೆ. ಅವರು ಕೆ.ಇ.ಬಿ.ಗೆ ಎಷ್ಟು ಗ್ರ್ಯಾಂಟ್ಸ್ ಕೊಟ್ಟಿದ್ದಾರೆ? ಎಷ್ಟು ಗ್ರ್ಯಾಂಟ್ ಬಂದುದನ್ನು ಕೆ.ಇ.ಬಿ.ಗೆ ಪಾಸ್ ಆನ್ ಮಾಡಿದ್ದೀರಿ? ಎಷ್ಟನ್ನು ಸರಕಾರದವರು ಬಳಸಿಕೊಂಡಿದ್ದೀರಿ? ರೈತರಿಗೆ ಕೊಡುವ ಕರೆಂಟನ್ನು ಫ್ರೀ ಕೊಡಿ ಎಂದು ಹೇಳಿರಲಿಲ್ಲ. You have to make good Government. ಅದನ್ನು ಮಾಡಿದ್ದೀರಾ ಇಲ್ಲಿಯವರೆಗೆ? ಎಷ್ಟು ಬಾಕಿ ಕೊಡಬೇಕು ನೀವು? ಕೆ.ಇ.ಬಿ.ಗೆ ರೆವಿನ್ಯೂ ಗ್ಯಾಪ್ ಇರುತ್ತದೆ. ಏಕೆ ಇರುತ್ತದೆ? ನೀವು ಕೊಡುವುದನ್ನು ಕೊಡದೇ ಹೋದರೆ ಕೊಡುವುದೆಲ್ಲಾ ಸರಕಾರ ವಿನಿಯೋಗಕ್ಕೆ ಬಳಸಿಕೊಂಡು.... ನೀವು ಬಜೆಟ್ ಮಾಡುವಾಗ ರೈತರಿಗೆ ಇಷ್ಟು ಕೊಡುತ್ತೇವೆಂದರೆ ಇಷ್ಟು ಇಟ್ಟುಕೊಳ್ಳಬೇಕು. ಗ್ರಾಮಪಂಚಾಯಿತಿಗೆ, ಸ್ಟ್ರೀಟ್ ಲೈಟ್‌ಗೆ ಇಷ್ಟು ಕೊಡತ್ತೇವೆಂದು ಹೇಳುವುದಾದರೆ ಅದರಲ್ಲಿ ಬಜೆಟ್‌ನಲ್ಲಿ ಇಟ್ಟುಕೊಳ್ಳಬೇಕು. ಟೌನ್‌ಪಂಚಾಯತ್‌ಗೆ ಎಷ್ಟು ಕೊಡುತ್ತೇವೆಂದರೆ ಅಷ್ಟು ಇಟ್ಟುಕೊಳ್ಳಬೇಕು. ಅಂಥ ಕೆಲವು ಆರ್ಗನೈಸೇಶನ್‌ಗಳಿಂದ ಕೆ.ಇ.ಬಿ.ಗೆ ಎಷ್ಟು ಬಾಕಿ ಬರಬೇಕು? ಅದರ ಡಿಟೈಲ್ಸ್ ನಿಮ್ಮ ಅಡ್‌ವರ್‌ಟೈಸ್‌ಮೆಂಟ್‌ನಲ್ಲಿ ಇಲ್ಲ. ರೆವಿನ್ಯೂ ಗ್ಯಾಪನ್ನು ಹೇಳಿದ್ದೀರೇ ಹೊರತು, ಇಷ್ಟು ಬಾಕಿ ಬರಬೇಕು, ಸರಕಾರವೇ ಕೆ.ಇ.ಬಿ.ಗೆ ಇಷ್ಟು ಕೊಡಬೇಕು ಎಂಬಿತ್ಯಾದಿ ವಿವರಗಳಿಲ್ಲ. ದೊಡ್ಡ ದೊಡ್ಡ ಇಂಡಸ್ಟ್ರೀಸ್‌ನವರು ಎಷ್ಟು ಬಾಕಿ ಕೊಡಬೇಕು?

ಶ್ರೀ ವಾಟಾಳ್ ನಾಗರಾಜ್:- ನಮ್ಮ ವಾಟರ್‌ಬೋರ್ಡ್‌ನವರೇ 45 ಕೋಟಿ ಬಾಕಿ ಇಟ್ಟುಕೊಂಡಿದ್ದಾರೆ.

★**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಅಧ್ಯಕ್ಷರೇ, ಒಂದು ಸತ್ಯ ಸಂಗತಿಯನ್ನು ಈ ಸದನದಲ್ಲಿರುವವರಿಗೆ, ಕೆ.ಇ.ಬಿ. ಅಧಿಕಾರಿಗಳಿಗೆ ನಮಗೆ ಯಾರಿಗೂ ಲೆಕ್ಕಬುಕ್ ಸಿಗದೇ ಇರುವ ಸಂಗತಿ

ಇದು. ಮಾತೆತ್ತಿದರೆ ನಾವು ರೈತರಿಗೆ ಕೊಟ್ಟಿದ್ದೇವೆ ಪಂಪ್‌ಸೆಟ್‌ಗಳಿಗೆ ಪುಕ್ಕಟೆಯಾಗಿ ಕೊಡುತ್ತಾ ಇದ್ದೇವೆಂದು ಹೇಳುತ್ತಾರೆ. 40 ಪರ್‌ಸೆಂಟ್, 45 ಪರ್‌ಸೆಂಟ್‌ನಷ್ಟು ಕೊಡುತ್ತಾ ಇದ್ದೇವೆ ಎಂದು ಹೇಳುತ್ತಾರೆ. ತಾವು ಕೊಟ್ಟ ಕೆ.ಇ.ಬಿ.ಯ ವರದಿ ಪ್ರಕಾರವೇ ಅಟ್ ಪ್ರೆಸೆಂಟ್ ನಮ್ಮ ಹತ್ತಿರ ಶೇಕಡ 45ರಷ್ಟು ಮಾತ್ರ ವಿದ್ಯುತ್ ಎಷ್ಟು ಕೊಟ್ಟಿದ್ದೇವೆ ಎಂಬ ಬಗ್ಗೆ ನೋಡಲು ಮೀಟರ್ ವ್ಯವಸ್ಥೆ ಇದೆ ಎಂದು ಹೇಳಿದ್ದಾರೆ. ಅಂದ ಹಾಗೆ ಇನ್ನೂ ಶೇಕಡಾ 55 ಪರ್‌ಸೆಂಟ್‌ನಷ್ಟು ವಿದ್ಯುತ್ ವಿನಿಯೋಗಕ್ಕೆ ಮೀಟರ್ ಇಲ್ಲ. ಆಲ್ ಇಂಡಿಯಾ ಆವರೇಜ್‌ನಂತೆ ಟ್ರಾನ್ಸ್‌ಮಿಷನ್ ಲಾಸ್ ಜಾಸ್ತಿ ಅಂದರೆ 23 ಪರ್‌ಸೆಂಟ್ ಹಾಗೂ ಒಂದೆರಡು ಪರ್‌ಸೆಂಟ್ ಹಿಂದೆ ಮುಂದೆ ಇಟ್ಟುಕೊಳ್ಳಿ. ನಿಮ್ಮ ಅಧಿಕಾರಿಗಳು ಕೆಲವು ಕಡೆಗಳಲ್ಲಿ ರೈಡ್ ಮಾಡಿದ ಸಂದರ್ಭಗಳಲ್ಲಿ theft ಏನು ಕಂಡು ಬಂದಿದೆ ಅದನ್ನು ಮಾನ್ಯ ಮುಖ್ಯ ಮಂತ್ರಿಯವರು ಚೆಕ್‌ಅಪ್ ಮಾಡಿಕೊಳ್ಳಿ. I think more than ten percent theft is there. ಈಗಾಗಲೇ ವಿಜಿಲೆನ್ಸ್‌ನವರು ಸರ್ಚ್ ಮಾಡಿರುವುದು ಅದೇ ರೀತಿ ಮೀಟರ್ ಕನೆಕ್ಷನ್ ಇಲ್ಲದೇ ಇರುವುದು. ನಿಮ್ಮ ಪ್ರಕಾರವೇ 1.40 ಲಕ್ಷ ಕನೆಕ್ಷನ್‌ಗಳಿಗೆ ಕೆ.ಇ.ಬಿ. ಯವರು ಮೀಟರ್ ಹಾಕಿಲ್ಲ. ಅಂದರೆ ಮೀಟರಿಲ್ಲದೆ ಕನೆಕ್ಷನ್ ಕೊಟ್ಟಿರುವುದು 5 ಪರ್ಸೆಂಟ್ 1.40 ಲಕ್ಷ ಕನೆಕ್ಷನ್ ಇಲ್ಲದೇ ಇರುವುದು ಎಲ್ಲ ಸೇರಿ ಸುಮಾರು 38 ಪರ್ಸೆಂಟ್ ಥೆಫ್ಟ್ ಆಗುತ್ತಿದೆ, ಇದು ನಿಮ್ಮ ತಜ್ಞರೇ ಕೊಟ್ಟಿರುವ ಲೆಕ್ಕ. ಈಗ ರೈತರಿಗೆ ಪಂಪ್‌ಸೆಟ್‌ಗಳದು, ಬಹುಶಃ ನಂಜೇಗೌಡರು ಒಪ್ಪುತ್ತಾರೇನೋ ನೋಡಬೇಕು 10 ಲಕ್ಷ ಕನೆಕ್ಷನ್ ಅಂದರೂ 5 ಲಕ್ಷ ವಿದ್ಯುತ್ ಪಂಪ್‌ಸೆಟ್‌ಗಳಿಗೆ ಕೊಡುತ್ತಿಲ್ಲ. ಹೇಗೆ ನೀವು ಲೆಕ್ಕ ಹಾಕಿದರೂ 15 ಪರ್‌ಸೆಂಟ್‌ಗಿಂತ ಜಾಸ್ತಿ ವಿದ್ಯುತ್ ರೈತರಿಗೆ ಕೊಡುತ್ತಿಲ್ಲ. ಹೇಗೋ ಏನೋ ಕೆ.ಇ.ಬಿ. ಅಧಿಕಾರಿಗಳು ಹೇಳುವಂತೆ ಥೆಫ್ಟ್, ಟ್ರಾನ್ಸ್‌ಮಿಷನ್ ಲಾಸ್, ಮೀಟರ್ ಹಾಕದೇ ಇರುವುದು, ಕೆ.ಇ.ಬಿ. ಸಿಬ್ಬಂದಿಗೆ ಕೊಡುವಂಥದು ಎಲ್ಲಾ ಸೇರಿಸಿ 40 ಪರ್ಸೆಂಟನ್ನು ರೈತರಿಗೆ ಕೊಡುತ್ತಿದ್ದೇವೆ ಎಂದು ಮನಬಂದಂತೆ ನಾವು ಹೇಳುತ್ತಿದ್ದೇವೆ. ಆದರೆ ನಮ್ಮ ವಿದ್ಯುದುತ್ಪಾದನೆಯಲ್ಲಿ ರೈತರಿಗೆ ಕೊಡುತ್ತಿರುವುದು 15 ಪರ್ಸೆಂಟ್ ಆಗುವುದಿಲ್ಲ. ಥೆಫ್ಟ್ 10 ಪರ್ಸೆಂಟಿದೆ, ಟ್ರಾನ್ಸ್‌ಮಿಷನ್ ಲಾಸ್ 23 ಪರ್ಸೆಂಟಿದೆ, ಕನೆಕ್ಷನ್ ಕೊಡದೇ ಇರುವಂಥದು 5 ಪರ್ಸೆಂಟಿದೆ. ಇದನ್ನೆಲ್ಲಾ ನೋಡಿ ರೈತನ ಪ್ರಶ್ನೆ ಬಂದಾಗ ಮಾನ್ಯ ನಂಜೇಗೌಡರು ಹೇಳಿದಂತೆ ಮೀಟರೇ ಇಲ್ಲ! ಅವನೆಷ್ಟು ಉಪಯೋಗಿಸುತ್ತಿದ್ದಾನೆ ಎನ್ನುವುದು ಪ್ರಶ್ನೆಯಾಗಿದೆ. ರೈತನಿಗೆ ನೀವು ಸವಲತ್ತು ಕೊಟ್ಟರೆ ಅವರು ಇನ್‌ಡೈರೆಕ್ಟಾಗಿ ದೇಶದ ಜನರ ಸೇವೆ ಮಾಡುತ್ತಾನೆ. ಆದ್ದರಿಂದ ನಾವು ಅವನಿಗೆ ವಿದ್ಯುತ್ತಿನ ಅನುಕೂಲವನ್ನು ಮಾತ್ರ ಮಾಡಿಕೊಡಿ. ನೂರು ರೂ. ಒಂದು ಹೆಚ್.ಪಿ.ಗೆ ಹಾಕಿ, ಅವನು ಇಂಪ್ರೂವ್ ಆದಮೇಲೆ ಅವರ ಸ್ಥಿತಿ ನೋಡಿ ಮುಂದೆ ಯೋಚನೆ ಮಾಡೋಣ.

★**ಶ್ರೀ ಎಚ್.ಎನ್.ನಂಜೇಗೌಡ:-** ಇನ್ನು ಕೆ.ಪಿ.ಸಿ. ಯವರಿಗೆ 200 ಕೋಟಿ ಅರಿಯರ್ಸನ್ನು ಕೆ.ಇ.ಬಿ. ಯವರು ಕೊಡಬೇಕು. ಅದನ್ನು ಜಾಹಿರಾತಿನಲ್ಲಿ ಹಾಕುತ್ತೀರಿ. ಇನ್ನು ಯಾರ್‍ಯಾರು ಕೆ.ಇ.ಬಿ.ಗೆ ಬಾಕಿ ಕೊಡಬೇಕೆಂದು ಜಾಹಿರಾತಿನಲ್ಲಿಲ್ಲ. ಕೆ.ಇ.ಬಿ.ಗೆ ಸರ್ಕಾರದಿಂದ ಎಷ್ಟು ಬರಬೇಕು. ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿ ಸರ್ಕಾರಕ್ಕೆಷ್ಟು ಕೊಟ್ಟಿದ್ದಾರೆ? ರೈತರ ಪರವಾಗಿ ನೀವು ಕೆ.ಇ.ಬಿ.ಗೆ ಕೊಡಬೇಕಾದ ಸಬ್ಸಿಡಿ ಎಷ್ಟು ಕೊಡಬೇಕು? ಯಾರ್‍ಯಾರ ಪರವಾಗಿ ಸರ್ಕಾರ ಕೆ.ಇ.ಬಿ.ಗೆ ಏನೇನು ಕೊಡಬೇಕು? ದೊಡ್ಡ ಕುಳ ಇಂಡಸ್ಟ್ರಿಯಲಿಸ್ಟ್ಸ್, ಸ್ಟೀಲ್ ಪ್ಲಾಂಟ್ಸ್‌ನವರು ಎಷ್ಟೆಷ್ಟು ನಿಲ್ಲಿಸಿಕೊಂಡಿದ್ದಾರೆ? ಈ ವಿವರಗಳನ್ನು ನೀವು ಕೊಡಬೇಕಾಗಿತ್ತು. ಆ ಬಾಕಿ ವಸೂಲು ಮಾಡಿದ್ದೀರೋ? ರೆವಿನ್ಯೂ ಗ್ಯಾಪಿದೆ ಎಂದು ಟ್ಯಾರಿಫ್

ರೈಜ್ ಮಾಡಿ ಬಳಕೆದಾರರ ಮೇಲೆ ಹಾಕುವಂಥದ್ದು ಸಮರ್ಥನೀಯ ಕೆಲಸವಲ್ಲ ಎಂಬುದನ್ನು ನಾನು ಹೇಳುತ್ತೇನೆ. ಇನ್ನು ಅಧ್ಯಕ್ಷರೇ 1997ಕ್ಕೆ ಮುಂದೆ ಏನಾದರೂ ರೇಟ್ ಏರಿಸಬೇಕಾದರೆ ಒಂದು ಟ್ಯಾರಿಫ್ ಕಮಿಟಿಯವರು ವಿವಿಧ ವರ್ಗಗಳನ್ನೆಲ್ಲ ಕರೆಯಿಸಿ ವಿಚಾರ ಮಾಡಿ ಎಷ್ಟು ಏರಿಸಬಹುದು ಹೇಗೆ ಮಾಡಬಹುದು ಒಂದು ನೀತಿ, ಕಾನ್‌ಸೆನ್ಸಸ್ ತಗೊಂಡು, ಕೆ.ಇ.ಬಿ. ಯಲ್ಲಿ ಕಷ್ಟ ಇದೆ ಏನು ತೊಂದರೆ ಇದೆ ಅದನ್ನೆಲ್ಲಾ ಆ ಟ್ಯಾರಿಫ್ ಕಮಿಟಿಯವರು ಎಕ್ಸಾಮಿನ್ ಮಾಡಿ ಶಿಫಾರಸ್ ಮಾಡಬೇಕು. 1990ರಿಂದೀಚೆಗೆ ಇದೂ ಸೇರಿ ಮೂರು ಸಾರಿ ಏರಿಸಿದ್ದಾರೆ, ಟ್ಯಾರಿಫ್ ಕಮಿಟಿ ಶಿಫಾರಸ್ ಇಲ್ಲ. ಇದು ಆಗತಕ್ಕದ್ದಲ್ಲ. ಯಾವ ಆಧಾರದ ಮೇಲೆ ಏರಿಸಿದ್ದೀರಿ? ಯಾರು ಅಡ್ವೈಸ್ ಮಾಡಿದವರು, ಏರಿಸಿದ್ದಕ್ಕೆ ಕ್ರೈಟೀರಿಯಾ ಏನು? ಒಂದು ಲೆಕ್ಕ ಬೇಕಲ್ಲ. ಆದ್ದರಿಂದ ಇದನ್ನು ಆರ್ಬಿಟ್ರರಿಯಾಗಿ ಮಾಡುವಂಥದ್ದು ಒಳ್ಳೆಯದಲ್ಲವೆಂದು ನಾನು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರೇ, ಮುಖ್ಯ ಮಂತ್ರಿಗಳಲ್ಲಿ ನಾನು ಒಂದು ವಿನಂತಿಸಿಕೊಳ್ಳುತ್ತೇನೆ: The arbitrary increase in power tariff is not good. If the K.E.B. is in red, there are many reasons. The consumer is not responsible. Don't punish the consumers for the mistake of somebody. ತಾವು ಯೋಚನೆ ಮಾಡಿ ನೋಡಿ, ನಿಮಗೂ ಅನ್ನಿಸಿದೆ ಈಗ. ಏರಿಸಿರುವುದು ಜಾಸ್ತಿಯಾಗಿದೆ. ಇವತ್ತು ನಿಲುವಳಿ ಸೂಚನೆ ಅಂತ ನಾವು ಕೊಟ್ಟಿದ್ದೇವೆ, ನಾನು ಅದಕ್ಕೆ ಮೊದಲೇ ಹೇಳಿದೆ, ಇಜ್ಜತ್ ಮೇಲೆ ನಿಂತುಕೊಳ್ಳುವುದು ಬೇಡ, ಟೆಕ್ನಿಕಲಾಗಿ ಹೋಗುವುದು ಬೇಡ ಅಂತ. ನೀವು ಉತ್ತರ ಕೊಡುವಾಗ ಹೇಳಿ, ಏರಿಸಿರುವುದು ಸರ್ವಥಾ ಸರಿಯಲ್ಲವೆಂದು ತಮಗರಿವಾಗಿರುವುದರಿಂದ, ಏರಿಕೆಯೇ ತಪ್ಪು ಅಂತ ನಾನು ಹೇಳುವುದಿಲ್ಲ. ನೀವು ಪೂರ್ತಿ ಏರಿಸಿರುವುದು ನೂರರಷ್ಟು ತಪ್ಪು ಅಂತ ಅದನ್ನೂ ನಾನು ಹೇಳುವುದಿಲ್ಲ. ಸಕಾರಣವಾಗಿ ಮಾಡಿ. ಮೊದಲು ನೀವಿರಲಿಲ್ಲ, ಆಗ ನಾನು ಕೆಲವಾರು ವಿಚಾರ ಹೇಳಿದೆ. ಜಾಹಿರಾತಿನಲ್ಲಿ ಸಮರ್ಥನೀಯವಲ್ಲದ ಕಾರಣಗಳನ್ನೆಲ್ಲ ಕೊಟ್ಟು ಕೊಂಡಿದ್ದೀರಿ. ಆದ್ದರಿಂದ ನೀವು ಹಾಕಿರುವುದರಲ್ಲಿ 10 ಪರ್ಸೆಂಟ್, ಯಾವುದು ಸರಿ ಅನಿಸುತ್ತದೋ ನೋಡಿ ಜಾಸ್ತಿ ಮಾಡಿ. .ಮಾಡಬೇಡಿ ಅಂತ ನಾನು ಹೇಳುವುದಿಲ್ಲ. ಲೆಕ್ಕಾಚಾರವಾಗಿ ಮಾಡಿ. ಆಮೇಲೆ ನೋಡಿ ಫ್ರೀಯಾಗಿ ಯಾವುದು ಕೊಟ್ಟರೂ ಅದು ದುರುಪಯೋಗವಾಗುತ್ತದೆ. ರೈತರಿಗೆ ಕೊಡಿ, ಕೆ.ಇ.ಬಿ. ಅಫಿಶಿಯಲ್ಸ್‌ಗೆ ಕೊಡ ಸರ್ಕಾರಿ ನೌಕರರಿಗೆ ಕೊಡಿ ಏನು ಬಿಟ್ಟು ಸಿಕ್ಕಿತು ಅಂದರೆ ಯಾರಿಗೆ ಏನು ಜವಾಬ್ದಾರಿ ಇರುತ್ತದೆ. ಏನಾದರೂ ಸಾಂಕೇತಿಕವಾಗಿ ನೀವು ಅದಕ್ಕೆ ಟ್ಯಾಕ್ಸ್ ಮಾಡದೇ ಹೋದರೆ ಅವರಿಗೆ ಇದನ್ನು ಎಕನಾಮಿಕಲ್ ಆಗಿ ಉಪಯೋಗಿಸಿಕೊಳ್ಳಬೇಕು ಇದನ್ನು ಕಂಟ್ರೋಲ್ ಮಾಡಬೇಕು ಎನ್ನುವ ಬುದ್ಧಿಯೇ ಬರುವುದಿಲ್ಲ. ಯಾವುದೇ ವರ್ಗಕ್ಕಾಗಲಿ ನೀವು ಫ್ರೀ ಕೊಟ್ಟಾಗ ಇಷ್ಟು ಹೇಳಿ ತಾವು ಟೆಕ್ನಿಕಲ್ ಗ್ರೌಂಡ್ಸ್ ಮೇಲೆ ಇದನ್ನು ಅಡ್ಮಿಟ್ ಮಾಡಬೇಡಿ ಅಂತ ಅದೂ ಇದೂ ಹೇಳದೇ ರಿಪ್ಲೈ ಕೊಡುವ ಕಾಲದಲ್ಲಿ ರೈಜಾಗಿರುವುದನ್ನು ಇಷ್ಟಕ್ಕೆ ನಾವು ಸೀಮಿತಗೊಳಿಸುತ್ತೇವೆ, ನಮಗೂ ಸಾರ್ವಜನಿಕರ ಬಗ್ಗೆ ಕಳಕಳಿ ಇದೆ ಎಂಬುದನ್ನು ತಾವು ತೋರಿಸಿಕೊಳ್ಳಬೇಕೆಂದು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

★**ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:-** ಮಾನ್ಯ ನಂಜೇಗೌಡರು ಪ್ರಸ್ತಾಪಿಸಿದಾಗ ಒಂದು ಮಾತು ಹೇಳಿದರು. ಬಹುಶಃ ನನಗನ್ನಿಸಿದ ಮಟ್ಟಿಗೆ ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಂಜೇಗೌಡರು

ಬಹುಶಃ ರೆಫರ್ ಮಾಡಿದ್ದುದು ಫ್ರೀ ಎಲೆಕ್ಟ್ರಿಸಿಟಿ ಪಂಪ್‌ಸೆಟ್‌ಗೆಂದು ಏನು ಕೊಡುತ್ತೇವೆ ಅದನ್ನು ನಾವೆಲ್ಲರೂ ಕಂಟಿನ್ಯೂ ಆಗಬೇಕೆಂದು ಸಮರ್ಥನೆ ಮಾಡಿದ್ದೇವೆ. ವಿರೋಧ ಪಕ್ಷದ ನಾಯಕರೂ ಕೂಡ ಹೇಳಿದ್ದಾರೆ. ಅದರ ಉದ್ದೇಶ ಏನು ಎಂದರೆ ಯಾವುದೇ ವಿದ್ಯುತ್ ಅಥವಾ ಸಬ್ಸಿಡಿ ಫ್ರೀಯಾಗಿ ಕೊಡುವಾಗ ಆಗಲೇ ಆ ಅಮೌಂಟನ್ನು ಸಂಬಂಧಪಟ್ಟ ಸಂಸ್ಥೆಗೆ ಕೊಡುವ ವ್ಯವಸ್ಥೆ ಮಾಡಬೇಕು. ಇಲ್ಲ ನಾಳೆ ನೀವು ಇದನ್ನು ಫ್ರೀ ಎಂದು ಮಾಡಿದ ಮೇಲೆ ಅಲ್ಲಿ ಹಣ ಕೊಡಲಿಲ್ಲವೆಂದರೆ ಅದನ್ನು ಅನೌನ್ಸ್ ಮಾಡುವುದಕ್ಕೇ ಹೋಗಬಾರದು. ಇದನ್ನು 1981ರಲ್ಲಿ ಮಾಡಿದ್ದು ಅಂದರೆ 16 ವರ್ಷದಿಂದ ಇದು ನಡೆದುಕೊಂಡು ಬಂದಿರುವುದನ್ನು ಸಡನ್ನಾಗಿ ನೀವು ಸ್ಟಾಪ್ ಮಾಡಿ ಇವತ್ತು 300 ಮಾಡುತ್ತೇವೆಂದರೆ, ಅದಕ್ಕೇನಾದರೂ ಒಂದು ಕಾರಣ ಬೇಕಲ್ಲ, ತಾವೇ ಹೇಳಿದಂತೆ ಒಂದು ಟ್ಯಾರಿಫ್ ಕಮಿಟಿಯೋ ಅಥವಾ ಸದನದ ಸಮಿತಿಯೋ ಕರೆದು ಇದಕ್ಕಾಗಿ ತಾವು ಮಾಡುತ್ತಿದ್ದೇವೆ ಇಷ್ಟನ್ನು ಸಾಂಕೇತಿಕವಾಗಿ ಏರಿಸೋಣ ಅಂತ ಹೇಳಿದರೆ ಆ ಮಾತು ಬೇರೆ. ಇಲ್ಲವೆಂದರೆ 100-200 ಕೋಟಿಗಳನ್ನೋ ಅದಕ್ಕೆ ತೆಗೆದಿಟ್ಟು ಫ್ರೀ ಸಪ್ಲೈ ಮಾಡುವುದರಲ್ಲಿ ಏನು ಖೋತ ಬೀಳುತ್ತದೆ ಅದನ್ನು ಸರ್ಕಾರವೇ ಭರಿಸಬೇಕು, ಹೀಗೆ ಫರ್ಟಿಲೈಜರ್ ಸಬ್ಸಿಡಿ ಕೊಡುತ್ತೀರಿ, ಮೊನ್ನೆ ಸಹಕಾರಿ ಸಾಲಕ್ಕೆ ಬಡ್ಡಿ ಸಬ್ಸಿಡಿ ಕೊಟ್ಟಿರಿ. ಹಾಗೆ ಪ್ರಾವಿಜನ್ ಮಾಡಿಕೊಂಡು ಇದನ್ನು ಕೊಡಬೇಕೇ ಹೊರತಾಗಿ ಈ ಫ್ರೀ ಸಪ್ಲೈ ಸರೀನೆ ಇಲ್ಲ ಅಂತ ಭಾವನೆ ಬಂದರೆ ಏನಾಗುತ್ತದೆ ನೀವು ಹೇಳುವುದು ಸರಿ ಅಂತ ಅದನ್ನೇ ಹಿಡಿದುಕೊಂಡು ನೀವು 1 ರೂ. ಹೇಳಿದರೆ 10 ರೂ ಖರ್ಚು ಮಾಡುತ್ತಾರೆ. ನೀವು ಅವರ ಭಾವನೆ ಅರ್ಥ ಮಾಡಿಕೊಳ್ಳಿ. ತಾವೇನೋ ಸದುದ್ದೇಶದಿಂದ ಯಾವ ಸಂಸ್ಥೆಯೂ ಲಾಸ್‌ನಲ್ಲಿ ಹೋಗಬಾರದು ಅಥವಾ ಪುಕ್ಕಟ್ಟೆ ಕೊಟ್ಟರೆ ಅದರ ದುರುಪಯೋಗವಾಗುತ್ತದೆ ಎಂದು ಹೇಳಿದಿರಿ. ಆಗ ಅವರು ಹಾಗಾದರೆ ಎಷ್ಟು ಮಾಡಬೇಕು ಅಂತ ಹೇಳಿ ಅಥವಾ ಈಗಿರುವುದೇ ಸರಿ ಅಂತ ಕುಳಿತರೆ, ಅದಕ್ಕೆ ನೀವು 100-200 ಕೋಟಿ ಪ್ರಾವಿಜನ್ ಮಾಡಿಕೊಂಡು ಬೇರೆ ಕಡೆ ಹೇಗೆ ಪಂಪ್‌ಸೆಟ್ ಮಾಡುತ್ತಾರೋ ಆ ರೀತಿ ಮಾಡಿ. ಇಲ್ಲಾಂದರೆ ಸದನದ ಸಮಿತಿ ಮಾಡಿ ಚರ್ಚೆ ಮಾಡಿ ಏನು ಇಡಬೇಕು ಏನು ಬಿಡಬೇಕು ಅಂತ ತೀರ್ಮಾನಕ್ಕೆ ಬರೋಣ. ಸಡನ್ನಾಗಿ 5, 10 ಪರ್ಸೆಂಟ್ ಮಾಡಿ ಅಂತ ರ್‍ಯಾಂಡಮಾಗಿ ಹೇಳಿದರೆ ಇದರಿಂದ ಬಗೆಹರಿಯುವುದಿಲ್ಲ. ಅದಕ್ಕಾಗಿ ಒಂದು ಸಮಿತಿ ಮಾಡಿ ಎಲ್ಲ ಪ್ರತಿನಿಧಿಗಳನ್ನು ಕರೆಸಿ ಆಮೇಲೆ ನಿರ್ಣಯ ತೆಗೆದುಕೊಂಡರೆ ಒಳ್ಳೆಯದು. ಸಡನ್ನಾಗಿ ನಾವು ಮಾಡಿದರೆ ಮುಂದಕ್ಕೂ ಇದು ಚರ್ಚೆ ವಿಷಯ ಹಾಗೆ ಉಳಿಯುತ್ತದೆ ಎಂಬ ಮಾತು ಹೇಳಬಯಸುತ್ತೇನೆ.

ಶ್ರೀ ಯು.ಬಿ.ಬಣಕಾರ್:- ಮಾನ್ಯ ನಂಜೇಗೌಡರು ಕಳಪೆ ಮಟ್ಟದ ಸಾಮಗ್ರಿಗಳನ್ನು ಕೆ.ಇ.ಬಿ. ಪೂರೈಸುವ ಬಗ್ಗೆ ಹೇಳಿದರು. ಒಂದು ಉದಾಹರಣೆ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಕೆ.ಇ.ಬಿ. ಇನ್‌ಸುಲೇಟರ್‌ಗಳನ್ನು ಸಪ್ಲೈ ಮಾಡಿದ್ದಾರೆ ಕಳೆದ ಸಲ ಚಂಡಮಾರುತ ಬೀಸಿದಾಗ 15 ದಿವಸ ನೌಕರಿ ಮಾಡಿದ್ದು ತ್ರಾಸಾಯಿತು ಎಂಬುದು ಕೆ.ಇ.ಬಿ. ಯವರ ಅಧಿಕಾರಿಗಳ ಅಭಿಪ್ರಾಯ. 11.ಕೆ.ವಿ. ಇನ್‌ಸೂಲೇಟರ್ ಬಹಳ ಕಳಪೆ ಮಟ್ಟದ್ದನ್ನು ಒದಗಿಸಲಾಗಿದೆ ಅಂತ ಇಡೀ ರಾಜ್ಯದಲ್ಲಿ ಎಲ್ಲ ಕೆ.ಇ.ಬಿ. ಅಧಿಕಾರಿಗಳ ದೂರಿದೆ.

★ ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ಅಧ್ಯಕ್ಷರೇ, ವಿದ್ಯುತ್ ದರ ಏರಿಕೆ ಬಗ್ಗೆ ಈಗಾಗಲೇ ಎಲ್ಲರೂ ಸಾಕಷ್ಟು ಚರ್ಚೆ ಮಾಡಿದ್ದಾರೆ ನಾನು ಮತ್ತೆ ಮತ್ತೆ ಅದನ್ನೇ ಚರ್ವಿತಚರ್ವಣ

ಮಾಡಲಿಕ್ಕೆ ಬಯಸುವುದಿಲ್ಲ. ಈ ವಿದ್ಯುತ್ ದರದ ಏರಿಕೆ ಏನು ಇದೆ ಇದು ಬೇಕೇ ಅಥವಾ ಬೇಡವೇ ಎನ್ನುವ ತೀರ್ಮಾನವನ್ನು ಕೈಗೊಳ್ಳುವುದಾದರೆ ಏರಿಕೆ ಬೇಕೇ ಬೇಕಾಗುತ್ತದೆ . ಏಕೆಂದರೆ ಇಂದಿನ ಕೆ.ಇ.ಬಿ. ಹಾಗೂ ನಿಗಮದ ಪರಿಸ್ಥಿತಿಯನ್ನು ನೋಡುವಾಗ ಈ ಏರಿಕೆಯ ರೀತಿ ಏರಿಕೆಯನ್ನು ಏನೂ ತಪ್ಪಾಗಲಿಕ್ಕಿಲ್ಲವೆಂಬುದು ನನ್ನ ಅನಿಸಿಕೆ. ಆದರೆ ಈ ದರ ಏರಿಕೆ ಮಾಡಿದ್ದಾರೆನ್ನುವುದನ್ನು ನೋಡುವುದಾದರೆ ಇದನ್ನು ಮಾತ್ರ ತೀವ್ರವಾಗಿ ಖಂಡಿಸಲೇಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ತಮ್ಮ ಪತ್ರಿಕಾ ಗೋಷ್ಠಿಯಲ್ಲಿ ನಾವು ತಪ್ಪು ಮಾಡಿದ್ದೇವೆ ಜನ ನಮ್ಮನ್ನು ಕ್ಷಮಿಸುತ್ತಾರೆಂದು ಒಪ್ಪಿಕೊಂಡಿದ್ದಾರೆ. ಇದನ್ನು ಮತ್ತೆ ಮತ್ತೆ ಅವರು ಹೇಳಿದ್ದಾರೆ. ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ಹೆಚ್ಚು ಐಕ್ಯ ರೂಪದ ನಿಗಧಿ ವ್ಯಕ್ತಪಡಿಸಿರುವುದನ್ನು ಸಮರ್ಥಿಸಿಕೊಂಡ ಅವರು ರೈತ ಸಮುದಾಯ ನಮ್ಮನ್ನು ಕ್ಷಮಿಸುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಹಾಗಾದರೆ ಅವರು ತಪ್ಪು ಮಾಡಿಕೊಂಡಿದ್ದನ್ನು ಈ ಸದನದಲ್ಲಿ ಬಹುಶಃ ಒಪ್ಪುತ್ತೀರಿ ಎಂದು ಕಾಣುತ್ತದೆ. ಹಾಗಾದರೆ ಮತ್ತೆ ಮತ್ತೆ ಇದೇ ರೀತಿಯ ತಪ್ಪುಗಳನ್ನು ಮಾಡುತ್ತಾ ಹೋಗುತ್ತೀದ್ದೀರಿ ಎನ್ನುವುದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ಈಗ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಇದೇ ರೀತಿ ಹೆಚ್ಚಿಸಿದ್ದೀರಿ. ಮೊನ್ನೆ ತಾನೆ ನೀವು ಚುನಾವಣೆಯನ್ನು ಎದುರಿಸಿದ್ದೀರಿ ಜನ ನಿಮಗೆ ಆಶೀರ್ವಾದ ಮಾಡಿದ್ದಾರೆ ನಿಮಗೆ ಜನ ಬೆಂಬಲ ಕೊಟ್ಟಿದ್ದಾರೆನ್ನುವ ಮಾತಿನೊಂದಿಗೆ ಮತ್ತೆ ಇದೇ ತಪ್ಪು ಕೆಲಸಗಳನ್ನು ಮುಂದುವರಿಸುತ್ತಾ ಹೋದರೆ ಜನರು ಒಂದು ದಿವಸ ಏನು ಮಾಡುತ್ತಾರೆನ್ನುವ ಗಂಭೀರ ಆಲೋಚನೆಯನ್ನು ತಾವು ಮಾಡಬೇಕು. ಇವತ್ತು ನಾವೂ ಕೂಡ ಚುನಾಯಿತರಾಗಿ ಬಂದಿದ್ದೇವೆ. ನಮ್ಮನ್ನು ಜನ ಕೇಳುತ್ತಾರೆ ನೀವೇನು ಮಾಡಿದ್ದೀರಿ ಅವರು ತಪ್ಪು ಮಾಡಿರುತ್ತಾರೆ ಎಂದು ಹೇಳಿದರೆ ನಾವು ಅದನ್ನು ಕ್ಷಮಿಸಿದ್ದೇವೆಂದು ಅದರ ಅರ್ಥವೇ? ಹೀಗೆ ನಮ್ಮನ್ನು ಕೇಳುತ್ತಾರೆ. ಖಂಡಿತವಾಗಿ ನಾವು ಕ್ಷಮಿಸುವುದಿಲ್ಲವೆನ್ನುವ ಭಾವನೆಯನ್ನು ಜನಸಾಮಾನ್ಯರು ನಮ್ಮ ಎದುರು ಮಂಡಿಸಿದಾಗ ನಾವು ನಿಮ್ಮನ್ನು ಕೇಳುವಂತಹ ಪರಿಸ್ಥಿತಿ ಇಲ್ಲಿ ಆಗಲೇಬೇಕಾಗುತ್ತದೆ ಇಲ್ಲಿ ಒಂದು ಗಂಭೀರವಾದಂತಹ ಸಮಾಚಾರವನ್ನು ಹೇಳುವುದಿದ್ದರೆ, ಮಂಡಲ ಪಂಚಾಯಿತಿಗಳಿಗೆ ನೀವು ಹಾಕಿದಂತಹ ದಾರಿ ದೀಪದ ಬಗ್ಗೆ ಬರಬೇಕಾದಂತಹ ವಿದ್ಯುತ್ತಿನ ಶುಲ್ಕವೇನು ಇದೆ.ಅದು ಬಹಳಷ್ಟು ಹೆಚ್ಚಾಗಿದೆ. ಇವತ್ತು ನಮ್ಮ ಕರ್ನಾಟಕದ ಮಂಡಲ ಪಂಚಾಯಿತಿಗಳಿಂದ ಬರಬೇಕಾದಂತಹ ತೆರಿಗೆ 96 ಕೋಟಿ ಬಾಕಿ ಇದೆ ಅದನ್ನೆ ರೆಕವರಿ ಮಾಡಲಿಕ್ಕಾಗುತ್ತಿಲ್ಲ. ಈಗ ಮತ್ತೆ ದಾರಿ ದೀಪಕ್ಕೆ ಹೆಚ್ಚು ಮಾಡಿದ್ದೀರಿ. ಆದರೆ ಅದನ್ನು ಪುನಃ ಹಿಂದಕ್ಕೆ ಪಡೆಯುವಂತಹ ಯೋಜನೆಯಾದರೂ ಇದೆಯೇ ಹೇಗೆ? ಇನ್ನು ಗ್ರಾಮಾಂತರ ಪ್ರದೇಶದ ಮತಗಳನ್ನು ಪಡೆದು ನಿಮ್ಮ ಪಕ್ಷ ಅಧಿಕಾರಕ್ಕೆ ಬಂದಿದೆ. ಮಣ್ಣಿನ ಮಗ ಎಂದು ಹೇಳಿಕೊಂಡಿರಿ ರೈತನ ಮಗ ಎಂದು ಹೇಳಿಕೊಂಡಿರಿ ಎಲ್ಲಾ ಸರಿ. ಆದರೆ ರೈತನ ಬಗ್ಗೆ ನಿಮ್ಮ ಧೋರಣೆ ಏನು ಎನ್ನುವುದಾದರೆ ಒಂದು ಕಡೆಯಿಂದ ಪೆಟ್ರೋಲಿಗೆ ಏರಿಸಿದ್ದೀರಿ ಮತ್ತೊಂದು ಕಡೆಯಿಂದ ಡೀಸೆಲ್ ಬೆಲೆ ಏರಿಸಿದ್ದೀರಿ ಇನ್ನೊಂದು ಕಡೆಯಿಂದ ವಿದ್ಯುತ್ ಏರಿಸಿದ್ದೀರಿ. ಇವತ್ತು ರೈತನಿಗೆ ವಿದ್ಯುತ್‌ನಲ್ಲಿ ರಿಯಾಯಿತಿ ಕೊಡಬೇಕೆನ್ನುವ ತೀರ್ಮಾನವನ್ನು ನಮ್ಮ ನಾಯಕರಾದ ಶ್ರೀ ಬಂಗಾರಪ್ಪನವರು ತೆಗೆದುಕೊಂಡುದ್ದುದು ರೈತನಿಗೆ ಉಪಕಾರವಾಗುವುದರೊಂದಿಗೆ ಕೃಷಿ ಉತ್ಪನ್ನ ಹೆಚ್ಚಾಗಬೇಕು ಎನ್ನುವ ದೂರ ದೃಷ್ಟಿ ಕೂಡ ಇತ್ತು. ಆದರೆ ಇವತ್ತು ಕೃಷಿ ಉತ್ಪನ್ನ ಹೆಚ್ಚಿಸುವಲ್ಲಿ ರೈತನಿಗೆ ಕೊಡುವ ರಿಯಾಯಿತಿ ಅತ್ಯಗತ್ಯವೆನ್ನುವ ದೃಷ್ಟಿಯಿಂದ ನಾನು ನನ್ನ ಪಕ್ಷದ ಪರವಾಗಿ ವಿನಂತಿಸುವುದೇನೆಂದರೆ, ರೈತನಿಗೆ ಕೊಡುವ

ವಿದ್ಯುತ್ ಶುಲ್ಕವನ್ನು ನೀವು ಸಂಪೂರ್ಣವಾಗಿ ಮನ್ನಾ ಮಾಡಬೇಕೆನ್ನುವ ವಾದವನ್ನು ನಾನು ಇಲ್ಲಿ ಮಂಡಿಸುತ್ತಿದ್ದೇನೆ. ಅಷ್ಟೇ ಅಲ್ಲ ಏರಿಕೆ ಬಗ್ಗೆ ನೀವು ಬಹಳ ಸುಲಭವಾಗಿ ತೆಗೆದುಕೊಂಡಿದ್ದರೆ ನಾವು ಅದನ್ನು ಸುಲಭವಾಗಿ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಒಂದು ವೇಳೆ ನೀವು ಇದನ್ನು ಬಹಳಷ್ಟು ಹಗುರವಾಗಿ ತೆಗೆದುಕೊಂಡು ನಾವು ಈ ಏರಿಕೆಯನ್ನು ಕೈ ಬಿಡುವುದಿಲ್ಲ ನಾವು ಮಾಡಿದ್ದೇ ಸರಿ ಎಂದು ಹೇಳುವಾದಾದರೆ ನಾವು ಖಂಡಿತವಾಗಿಯೂ ಜನಸಾಮಾನ್ಯರ ಮುಂದೆ ಹೋಗುತ್ತವೆ ಚಳುವಳಿಯ ಹಾದಿ ಹಿಡಿಯಬೇಕಾಗುತ್ತದೆ. ವಿಧಾನ ಸಭೆಯ ಒಳಗೂ ಹೊರಗೂ ಹೋರಾಟ ಮಾಡಬೇಕಾಗುತ್ತದೆ. ಈ ನಮ್ಮ ಸ್ಪಷ್ಟವಾದ ನಮ್ಮ ಪಕ್ಷ ಅಭಿಪ್ರಾಯವನ್ನು ಇವತ್ತು ಈಸಭೆಯಲ್ಲಿ ಮಂಡಿಸಬಯಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಹಾಗೂ ಈ ನಿಲುವಳಿಯನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

★ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೆ, ವಿದ್ಯುತ್ ಬೆಲೆ ಏರಿಕೆ ಬಗ್ಗೆ ಈಗಾಗಲೇ ಚರ್ಚೆ ನಡೆಯುತ್ತಿದೆ. ನಾನು ಸರಕಾರವನ್ನು ಕೇಳುವುದು ಇಷ್ಟೆ. ವಿದ್ಯುತ್ ದರವನ್ನು ಏರಿಸಲಿಕ್ಕೆ ಅವರು ಮೂಲತಃ ಕೊಟ್ಟಿರತಕ್ಕಂತಹ ಕಾರಣವೇನೆಂದರೆ ಕೆ.ಇ.ಬಿ. ನಷ್ಟದಲ್ಲಿ ಅದನ್ನು ತುಂಬಿಸಲಿಕ್ಕೆ ಬೆಲೆಯನ್ನು ಏರಿಸಿದ್ದೇವೆಂದು ಹೇಳಿದ್ದಾರೆ. ಆದರೆ ನಷ್ಟವಾಗುತ್ತಿರತಕ್ಕಂಥಾದ್ದಕ್ಕೆ ಕಾರಣಗಳೇನು ಎನ್ನುವುದನ್ನು ಕಂಡುಹಿಡಿಯದೆ ಬೆಲೆ ಏರಿಕೆ ಒಂದೇ ಆ ನಷ್ಟವನ್ನು ತುಂಬಲಿಕ್ಕೆ ಕಾರಣ ಎನ್ನುವ ವಾದ ಸರಕಾರದ್ದೇನು ಇದೆ ಖಂಡಿತವಾಗಿಯೂ ಆ ವಾದದಲ್ಲಿ ಯಾವುದೇ ಅರ್ಥ ಇಲ್ಲ. ಕೆ.ಇ.ಬಿ. ನಷ್ಟದಲ್ಲಿದೆ. ಅದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಷಯ. ಆದರೆ ಯಾವ ಕಾರಣದಿಂದ ಅದು ನಷ್ಟದಲ್ಲಿದೆ ಎಂದು ವಿಚಾರ ಮಾಡಬೇಕು. ವಿದ್ಯುತ್ ದರವನ್ನು ಏರಿಸಿಲ್ಲ ಜನರು ಅದಕ್ಕೆ ಹೆಚ್ಚಾಗಿ ಬೆಲೆಯನ್ನು ಕೊಟ್ಟಿಲ್ಲ ಆದಕ್ಕಾಗಿ ಇವತ್ತು ಅದು ನಷ್ಟದಲ್ಲಿದೆ ಎಂದು ಸರಕಾರ ಉತ್ತರ ಹೇಳುವಾಗ ಹೇಳಬೇಕಾಗುತ್ತದೆ ನಿಜವಾಗಲೂ ಕೆ.ಇ.ಬಿ. ನಷ್ಟದಲ್ಲಿದ್ದರೆ ಅದಕ್ಕೆ ಜನರು ಹೆಚ್ಚು ದರ ಕೊಟ್ಟಿಲ್ಲವೆನ್ನು ಕಾರಣಕ್ಕೋಸ್ಕರ ಅಲ್ಲಿ ನಷ್ಟವಾಗಿಲ್ಲ. ವಿದ್ಯುಚ್ಛಕ್ತಿ ಮಂಡಲಿ ನಷ್ಟದಲ್ಲಿ ಇಲ್ಲ. ವಿದ್ಯುಚ್ಛಕ್ತಿ ಮಂಡಲಿ ಇವತ್ತು ನಷ್ಟದಲ್ಲಿದೆ ಎಂದಾದರೆ ಅದು ಅವರ ಸ್ವಯಂಕೃತ ಅಪರಾಧದಿಂದ ನಷ್ಟದಲ್ಲಿ ಅದು ಇದೆ. ಜನರಿಂದ ಅದಕ್ಕೆ ನಷ್ಟವಾಗುತ್ತಿಲ್ಲ. ಅದಕ್ಕೋಸ್ಕರ ಅದು ಪಾಪರ್ ಆಗಿಲ್ಲ. ಅಥವಾ ಸಣ್ಣ ಬಳಕೆದಾರರು ಮಧ್ಯಮವರ್ಗದ ಜನರು ಮನೆಯಲ್ಲಿ ಎ.ಇ.ಹೆಚ್. ಇಟ್ಟುಕೊಂಡಿರತಕ್ಕಂತಹವರು ಹೆಚ್ಚು ದರ ಕೊಡಲಿಲ್ಲವೆನ್ನುವ ಕಾರಣಕ್ಕೋಸ್ಕರ ಕೆ.ಇ.ಬಿ. ನಷ್ಟಕ್ಕೆ ಒಳಗಾಗಲಿಲ್ಲ. ಕೆ.ಇ.ಬಿ. ನಷ್ಟಕ್ಕೆ ಒಳಗಾಗಿರತಕ್ಕಂಥಾದ್ದು ಮೊಟ್ಟ ಮೊದಲನೆಯದಾಗಿ ಅವರಲ್ಲಿ ಯಾವುದೇ ರೀತಿಯಾಗದಂತಹ ದೂರದೃಷ್ಟಿಯಿಂದ ತುಂಬಿದಂತಹ ಯೋಜನೆ ಅವರಲ್ಲಿ ಇಲ್ಲ ಕೆ.ಇ.ಬಿ.ಯನ್ನು ಹೇಗೆ ಉತ್ತಮಪಡಿಸಬೇಕು, ಕರ್ನಾಟಕ ರಾಜ್ಯದಲ್ಲಿ ಹೇಗೆ ವಿದ್ಯುತ್‌ನ್ನು ಉತ್ಪಾದನೆ ಮಾಡಬೇಕು, ಉತ್ಪಾದನೆಯಾದಂತಹ ವಿದ್ಯುತ್ತನ್ನು ಉತ್ಪಾದನೆ ಯಾವ ರೀತಿ ಸರಬರಾಜು ಮಾಡಬೇಕು, ಯಾವ ರೀತಿ ಸರಬರಾಜು ಮಾಡಿದರೆ, ಯಾವ್ಯಾವ ರೀತಿಯಾದಂತಹ ಪ್ರಯೋಜನವಾಗುತ್ತದೆ, ಆ ಸರಬರಾಜು ಮಾಡತಕ್ಕಂತಹ ಸಂದರ್ಭದಲ್ಲಿ ನಾವು ಸರಬರಾಜು ಮಾಡುವ ವಿಧಾನದಲ್ಲಿ ಇರತಕ್ಕಂತಹ ಲೋಪದೋಷಗಳೇನು ? ಆ ವಿದ್ಯುತ್ ಮಂಡಲಿ ವಿದ್ಯುತ್ ಸರಬರಾಜಿಗೆ ಉಪಯೋಗಿಸುತ್ತಿರುವಂತಹ ಎಲ್ಲಾ ಸಾಮಗ್ರಿಗಳ ವಸ್ತುಗಳ ಗುಣಮಟ್ಟವೇನು ? ಇದೆಲ್ಲವನ್ನೂ

ಅವರೇನಾದರೂ ಯೋಚನೆ ಮಾಡಿದ್ದರೆ ಈ ನಷ್ಟ ಕೆ.ಇ.ಬಿ.ಗೆ ಬರಲಿಕ್ಕೆ ಸಾಧ್ಯಾವಲ್ಲ. ಅದರ ಜೊತೆಗೆ ವಿದ್ಯುತ್ ಮಂಡಲಿಗೆ ನಷ್ಟವಾಗುತ್ತಿರುವುದಕ್ಕೆ ಇನ್ನೊಂದು ಕಾರಣ ಆ ವಿದ್ಯುತ್ ಮಂಡಲಿಯಲ್ಲಿರುವ ಭ್ರಷ್ಟತನ ಕರ್ನಾಟಕದಲ್ಲಿ ಇವತ್ತು ವಿದ್ಯುತ್ ಕಳ್ಳತನ ಹೇರಳವಾಗಿ ನಾನಾ ರೀತಿಯಲ್ಲಿ ಆಗುತ್ತಿದೆ. ಆ ಕಳ್ಳತನವನ್ನು ತಡೆಹಿಡಿದು ನಿಲ್ಲಿಸಲಿಕ್ಕೆ ಇವತ್ತು ಆ ಅಧಿಕಾರಿಗಳಿಗೆ ಸಾಧ್ಯವಾಗುತ್ತಿಲ್ಲ. ಅದರಿಂದ ಆಗುತ್ತಿರತಕ್ಕಂತಹ ನಷ್ಟವೆಂದು ಹೇಳುತ್ತಿಲ್ಲ. 650 ಕೋಟಿ ರೂಪಾಯಿಗಳ ಬಿಲ್ಲುಗಳ ಬಾಕಿ ಇದೆ ಎಂದು ಹೇಳುತ್ತಿದ್ದಾರೆ. 655 ಕೋಟಿ ರೂಪಾಯಿಗಳ ಬಿಲ್ಲು ಬಾಕಿ ಇದ್ದರೆ ಯಾರ್‍ಯಾರಿಂದ ಎಷ್ಟು ಬಾಕಿ ಇದೆ? ಯಾವ್ಯಾವ ರಂಗದಿಂದ ಎಷ್ಟು ಬಾಕಿ ಇದೆ ಎಂದು ಅವರು ಸ್ಪಷ್ಟಪಡಿಸಬೇಕು. ಯಾರ್‍ಯಾರು ಅದಕ್ಕೆ ನಷ್ಟ ಮಾಡಿದ್ದಾರೆಂಬುದು ಆಗ ಗೊತ್ತಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕಳ್ಳತನ ಏನು ಆಗುತ್ತಿದೆ ಅ ಕಳ್ಳತನವಾಗುತ್ತಿರುವ ವಿದ್ಯುತ್‌ನಲ್ಲಿ ಶೇಕಡ 69 ಪರ್ಸೆಂಟ್ ಏನಾದರೂ ಸರಕಾರ ಮತ್ತು ಅಧಿಕಾರಿಗಳು ಕೆ.ಇ.ಬಿ. ಬೋರ್ಡ್ ನಿಲ್ಲಿಸುವುದಾದರೆ ಈ ಬೆಲೆ ಏರಿಕೆ ಅವಶ್ಯಕತೆ ಇರಲಿಲ್ಲ. ಬೆಲೆ ಏರಿಕೆಯಿಂದಾಗಿ ಹೆಚ್ಚು ಸಾಮಾನ್ಯ ಜನರೇ ಬಲಿಯಾಗುತ್ತಾರೆ. ರೈತರ ಪಂಪ್‌ಸೆಟ್ ಒಂದು ಅಶ್ವಶಕ್ತಿಗೆ 300 ರೂಪಾಯಿ ಎಂದು ಹೇಳಿದ್ದಾರೆ. ಒಂದು ಅಶ್ವ ಶಕ್ತಿಗೆ 300 ಎಂದು ಹೇಳುವುದಾದರೆ ರೈತ ಪಂಪ್‌ಸೆಟ್ ಅನ್ನು ಉಪಯೋಗ ಮಾಡದೇ ಇದ್ದರೂ 300 ರೂಪಾಯಿ ಕೊಡಬೇಕು ಉಪಯೋಗಕ್ಕೆ ಬರುವುದಿಲ್ಲ. ಉಪಯೋಗ ಮಾಡುವಾಗಲೂ, ಉಪಯೋಗ ಮಾಡದಿದ್ದರೂ 300 ರೂಪಾಯಿ ಕೊಡಬೇಕಾಗುತ್ತದೆ. ಇದರಲ್ಲಿ ಯಾವುದಾದರೂ ತರ್ಕ ಇದೆಯೇ ? ಅಶ್ವ ಶಕ್ತಿಗೆ 300 ರೂಪಾಯಿ ಎಂದು ತೆರಿಗೆ ಹಾಕುವುದರಲ್ಲಿ ಏನಾದರೂ ತರ್ಕ ಇದ್ದರೆ ಸರಕಾರದವರು ಹೇಳಬೇಕು. ಅಶ್ವ ಶಕ್ತಿಗೆ 300 ರೂಪಾಯಿ ಹಾಕುವುದರ ಬದಲು ನೀವು ಮೀಟರ್ ಫಿಕ್ಸ್ ಮಾಡಿ. ಎಷ್ಟು ಉಪಯೋಗ ಮಾಡುತ್ತಾರೋ ಅಷ್ಟು ಚಾರ್ಜ್ ತೆಗೆದುಕೊಳ್ಳಿ. ಅಶ್ವ ಶಕ್ತಿಗೆ 300 ಹಾಕುವುದು ಸರಿಯಲ್ಲ. 5 ಅಶ್ವ ಶಕ್ತಿಗಿಂತ ಹೆಚ್ಚು ಇರತಕ್ಕಂತಹ ಪಂಪ್‌ಸೆಟ್‌ಗೆ ಎಂದು ಹೇಳುತ್ತಾರೆ. 5 ಅಶ್ವ ಶಕ್ತಿ, 7 ಅಶ್ವ ಶಕ್ತಿ ಪಂಪ್‌ಸೆಟ್‌ಗಳು ವ್ಯವಸಾಯ ರಂಗದಲ್ಲಿ ಕೆಲಸಕ್ಕೆ ಬರುವುದಿಲ್ಲ. 450 ಅಡಿ ಕೆಳಗಡೆ ಹೋದರೆ ನೀರು ಸಿಗುವುದು. 5-6-7 ಅಶ್ವ ಶಕ್ತಿ ಪಂಪ್ ಅಳವಡಿಸಿದರೆ ನೀರು ಬರುವುದಿಲ್ಲ. 10 ಅಶ್ವ ಶಕ್ತಿ ಮೇಲೆ ಅವನು ಉಪಯೋಗಸಬೇಕಾಗುತ್ತದೆ ಆಗ ರೇಟ್ ಜಾಸ್ತಿಯಾಗುತ್ತದೆ. ಆದ್ದರಿಂದ ಅಶ್ವ ಶಕ್ತಿಗೆ 300 ರೂಪಾಯಿ ಎಂದು ಹೇಳುವುದರಲಿಲ ಯಾವುದೇ ವೈಜ್ಞಾನಿಕ ಚಿಂತನೆ ಇಲ್ಲ. ಉಪಯೋಗವಾದರೂ, ಉಪಯೋಗವಾಗದಿದ್ದರೂ ಕೊಡಬೇಕೆಂಬ ಪ್ರಶ್ನೆ ಬರುತ್ತದೆ ರೈತರಿಗೆ ಉಚಿತವಾಗಿ ಕರೆಂಟ್ ಕೊಡಾಬೇಕಾ ಎನ್ನುವ ಪ್ರಶ್ನೆ ಇದೆ. ಇವತ್ತು ಇರತಕ್ಕಂತಹ ಪರಿಸ್ಥಿತಿಯಲ್ಲಿ ಎಲ್ಲಾ ವಿಧದಲ್ಲೂ ಕೂಡ ಬೆಲೆ ಏರಿಕೆಯಾಗುತ್ತಿದೆ. ಬೆಲೆ ಏರಿಕೆ ಎನ್ನುವುದು ಬಂಡವಾಳಶಾಹಿಯ ಆರ್ಥಿಕ ವ್ಯವಸ್ಥೆಯಲ್ಲಿ ಎಂದು ಸರ್ವೆ ಸಾಮಾನ್ಯ ಸಂಗತಿಯಾಗಿದೆ. ಆದರೆ ಬೆಲೆ ಏರಿಕೆಯಾಗತಕ್ಕಂತಹ ಸಂದರ್ಭದಲ್ಲಿ ಜವಾಬ್ದಾರಿ ಇರುವ ಸರಕಾರಗಳು ಪೂರ್ವಾಪರವಾಗಿ ಚಿಂತನೆ ಮಾಡಬೇಕಾಗುತ್ತದೆ. ಬೆಲೆ ಒಂದೇ ನಷ್ಟವನ್ನು ಭರಿಸಲಿಕ್ಕೆ ಏಕೈಕ ಮಾರ್ಗವೆನ್ನುವ ಅಭಿಪ್ರಾಯಕ್ಕೆ ಬರುವುದರಲ್ಲಿ ಯಾವುದೇ ಅರ್ಥ ಇಲ್ಲ. ಬೆಲೆ ಏರಿಕೆಯಿಂದ ನಷ್ಟ ತುಂಬಿಸಲಿಕ್ಕೆ ಆಗುವುದಿಲ್ಲ. ಏಕೆಂದರೆ ನಷ್ಟ ತುಂಬಿದರೂ ಕೂಡ ಮತ್ತೆ ನಿಮ್ಮ ಅವ್ಯವಸ್ಥೆಯನ್ನು ಸರಿಪಡಿಸಲಿಕ್ಕೆ ಯಾವುದೇ ಕಾರ್ಯಕ್ರಮ ಹಾಕಿಲ್ಲ. ನಿಮ್ಮ ಬೆಲೆ ಏರಿಕೆಗೆ ಕೊಟ್ಟಿರತಕ್ಕಂತಹ ಸಾಮರ್ಥ್ಯ ಏನು ? ಕರೆಂಟ್ ಕಳ್ಳತನ ಆಗುತ್ತಿರುವುದನ್ನು ತಡೆಯುವುದಕ್ಕೆ ಏನು ಕಾರ್ಯಕ್ರಮ ನಿಮ್ಮ

ಹತ್ತಿರ ಇಲ್ಲ ನೀವು ಉಪಯೋಗಿಸುತ್ತಿರತಕ್ಕಂತ ಯಂತ್ರಗಳ ದುರ್ಬಳಕೆ ಇವತ್ತು ನೀವು ಟ್ರಾನ್ಸ್‌ಫಾರ್ಮರ್ಸ್‌ನ್ನು, ಕಂಡಕ್ಟರ್ಸ್‌ನ್ನು, ಸ್ವಿಚ್ ಗೇರ್ಸ್‌ನ್ನು ತೆಗೆದುಕೊಳ್ಳುತ್ತಿದ್ದೀರಿ ಬಿಹೆಚ್‌ಇಎಲ್ ಮತ್ತು ಬೇರೆ ಬೇರೆ ಕಂಪನಿಗಳಿಂದ ಅದರ ಗುಣಮಟ್ಟದ ಬಗ್ಗೆ ಹಲವಾರು ಟೀಕೆಗಳು ಇವೆ. ಅದರ ಉಪಯೋಗ ಬಗ್ಗೆ ಟೀಕೆಗಳು ಇವೆ. ಒಂದೇ ಒಂದು ಉದಾಹರಣೆಯನ್ನು ನಾನು ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಬಿಹೆಚ್‌ಇಎಲ್ ನವರು ಸರಬರಾಜು ಮಾಡಿರತಕ್ಕಂಥ ಉಪಕರಣಗಳನ್ನು ಆಪರೇಟ್ ಮಾಡುವುದು ಹೇಗೆ ಎಂದು ಗೊತ್ತಿಲ್ಲದೆ ನಾಲ್ಕು ವರ್ಷದಲ್ಲಿ ಕೆಟ್ಟುಹೋಗಿ ಅದಕ್ಕೆ ಕಾರಣ ಏನು ಕೊಟ್ಟಿದ್ದಾರೆ ಎಂದರೆ ಬಿಹೆಚ್‌ಇಎಲ್‌ನವರಿಗೆ ಇವರು ಬರೆದಿದ್ದಾರೆ. ನಿಮ್ಮ ಉಪಕರಣಗಳನ್ನು ಕೆಟ್ಟುಹೋಗಿದೆ ಎಂದು. ಅದಕ್ಕೆ ಅವರೇನು ಉತ್ತರ ಬರೆದಿದ್ದಾರೆ ಎಂದರೆ ಆ ಉಪಕರಣಗಳನ್ನು ಹೇಗೆ ಬಳಸಬೇಕು ಎನ್ನುವುದು ವಿದ್ಯುಚ್ಛಕ್ತಿ ಮಂಡಲಿಗೆ ಗೊತ್ತಿಲ್ಲದೆ ಇರುವ ಕಾರಣಕ್ಕೋಸ್ಕರ ಅವುಗಳು ನಾಶವಾಗಿವೆ ಎಂದು ಹೇಳಿದ್ದಾರೆ. ಇಂಥ ಅಸಮರ್ಥರನ್ನು ಇಂಥ ಅಸಮರ್ಥ ತಂತ್ರಜ್ಞಾನ ಇರುವ ಜನರನ್ನು ಕೆಇಬಿಯಲ್ಲಿ ಇಟ್ಟುಕೊಂಡು ಕೆಇಬಿಯನ್ನು ಸಂಪೂರ್ಣವಾಗಿ ದಿವಾಳಿ ಮಾಡಿ ಇವತ್ತು ಅವರು ಮಾಡಿರುವ ಸ್ವಯಂ ಕೃತಾಪರಾಧಕ್ಕೆ ಸಾಮಾನ್ಯ ಜನರನ್ನು ಬಲಿ ಮಾಡತಕ್ಕಂಥದ್ದು ಇದು ಸಂಪೂರ್ಣವಾಗಿ ಜನವಿರೋಧಿ ನೀತಿಯಾಗಿದೆ.. ಆದ್ದರಿಂದ ಈ ವಿದ್ಯುತ್ ದರವನ್ನು ಏರಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಆದ್ದರಿಂದ ವಿದ್ಯುತ್ ಬಳಕೆದಾರರಿಗೆ ಅದರಲ್ಲಿ ಎಇಹೆಚ್ ನವರಿಗೆ 50 ಪರ್‌ಸೆಂಟ್ ಜಾಸ್ತಿ. 150 ರೂ.ಕೊಡುವವರು 250 ರೂ. ಕೊಡಬೇಕಾಗುತ್ತದೆ. ನಾವು ಮೂಲಭೂತವಾಗಿ ಒಂದು ಅಂಶವನ್ನು ಗಮನಿಸಬೇಕಾಗುತ್ತದೆ ಎಇಹೆಚ್‌ನ್ನು ನಗರ ಪ್ರದೇಶಗಳಲ್ಲಿ ಮಾಡಿಕೊಂಡಿದ್ದಾರೆ. ಅದಕ್ಕೆ ಕಾರಣವೇನು ? ಅವರಿಗೆ ಬೇರೆ ಮಾರ್ಗವಿಲ್ಲ. ಬೇರೆ ಅವರಿಗೆ ಉರುವಲು ಸಿಗುವುದಿಲ್ಲ. ಬೇರೆ ಯಾವುದತೇ ರೀತಿಯಲ್ಲಿ ಅವರು ಅಡಿಗೆ ಮಾಡಲಿಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಎಇಹೆಚ್‌ನ್ನು ಮಾಡಿಕೊಂಡಿದ್ದಾರೆ. ಅದಕ್ಕೆ ನೀವು ಪರ್ಯಾಯವಾಗಿ ಅವರಿಗೆ ವ್ಯವಸ್ಥೆ ಮಾಡಿಕೊಟ್ಟಿದ್ದರೆ ಎಇಹಚ್‌ನ್ನು ಮಾಡಿಕೊಂಡಿದ್ದರೆ ಎಇಹೆಚ್ ಅವಶ್ಯಕತೆ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಅವರು ಅಡಿಗೆಯನ್ನೂ ಅದರಲ್ಲೇ ಮಾಡಿಕೊಳ್ಳಬೇಕು. ಪ್ರತಿಯೊಂದೂ ಅದರಲ್ಲೇ ಆಗಬೇಕಾಗಿರುವುದು ಏಕೆಂದರೆ ಅವರಿಗೆ ಅನಿವಾರ್ಯ. ಅಂಥವರಿಗೆ 150 ಪರ್‌ಸೆಂಟ್ ಏರಿಸಿಬಿಟ್ಟರೆ ನೀವು ಇವತ್ತು ಸಾಮಾನ್ಯ ಸರ್ಕಾರಿ ನೌಕರರಿಗೆ ಆಗತಕ್ಕಂಥ ತೊಂದರೆಯೇನು? ಅವರಿಗೆ ಕೊಡುವ ಸಂಬಳವೇನು ? ನೀವು ಕರೆಂಟ್ ಛಾರ್ಜ್ ಎಂದು ಆರು ನೂರು ರೂಪಾಯಿ ಕಿತ್ತುಕೊಂಡರೆ ಅವರು ಜೀವನ ಮಾಡುವುದು ಹೇಗೆ ಎಂದು ಸರ್ಕಾರ ಆಲೋಚನೆ ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಯಾವುದನ್ನೂ ಬಿಟ್ಟಿಲ್ಲ. ಅದರ ಜೊತೆಗೆ ಇವರು ಕೆಇಬಿಯಲ್ಲಿ ಕರೆಂಟನ್ನು ಉತ್ಪಾದನೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೇವೆ ಎಂದು ಕೂಡ ಇವರು ಹೇಳಿಲ್ಲ. ಹತ್ತು ವರ್ಷಗಳಲ್ಲಿ ಇದ್ದಂಥ ಎಲ್ಲಾ ಸರ್ಕಾರಗಳೂ ಸೇರಿ ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆ ಮಾಡಿರುವ ವಿದ್ಯುತ್‌ನ್ನು ಉತ್ಪಾದನೆ ಮಾಡುವುದಕ್ಕೆ ಇವರ ಹತ್ತಿರ ಯೋಜನೆ ಏನೂ ಇಲ್ಲ. ಇರುವುದನ್ನು ಹೇಗೆ ಬಳಕೆ ಮಾಡಬೇಕು ಎನ್ನುವುದಕ್ಕೂ ಯೋಜನೆ ಇಲ್ಲ. ಇವೆಲ್ಲವನ್ನೂ ಬಿಟ್ಟು ಇವತ್ತು ಸಾಮಾನ್ಯ ಜನರನ್ನು ಬಲಿ ತೆಗೆದುಕೊಂಡಿದ್ದಾರೆ. ಅದರಲ್ಲೂ ಮುಖ್ಯವಾಗಿ ಕೃಷಿರಂಗದ ಮೇಲೆ ಎಷ್ಟು ಹೊರೆಯಾಗುತ್ತದೆ ಎಂದರೆ ವ್ಯವಸಾಯವನ್ನು ಮಾಡಲಿಕ್ಕೆ ಸಾಧ್ಯವಿಲ್ಲದೇ ಇರುವ ಪರಿಸ್ಥಿತಿ ಉಂಟಾಗಿದೆ ಅದರ ಜೊತೆಗೆ ಕಡೆಯದಾಗಿ ಸನ್ಮಾನ್ಯ ಅಧ್ಯಕ್ಷರಿಗೆ

ಕೇಳುವುದು ವ್ಯವಸಾಯ ರಂಗಕ್ಕೆ ಕೊಡುವ ವಿದ್ಯುಚ್ಛಕ್ತಿ ದರವನ್ನು ಏರಿಸಲಿಕ್ಕೆ ಈ ಸರ್ಕಾರಕ್ಕೆ ನೈತಿಕವಾದಂಥ ಯಾವುದೇ ಹಕ್ಕಿಲ್ಲ. ಏಕೆಂದರೆ ಇವರು ಅವರಿಗೆ ಕರೆಂಟೇ ಕೊಡುತ್ತಿಲ್ಲ. ವಿದ್ಯುಚ್ಛಕ್ತಿಯೇ ಇಲ್ಲ. ರೈತರಿಗೆ ವಿದ್ಯುಚ್ಛಕ್ತಿ ಕೊಡಬೇಕಾದರೆ ದರ ನಿಗಧಿ ಮಾಡಿ ಎಂದು ಬೈರೇಗೌಡರು ಕೂಡ ಹೇಳಿದ್ದಾರೆ. ಆದರೆ ವಿದ್ಯುಚ್ಛಕ್ತಿ ಕೊಡದೇ ಅವರಿಗೆ ದರವನ್ನು ಏರಿಸುತ್ತೇವೆ ಎಂಧು ಹೇಳುವುದರಲ್ಲಿ ಯಾವುದೇ ಅರ್ಥವಿಲ್ಲ. ವಿದ್ಯುತ್ ದರವನ್ನು ಏರಿಸಲಿಕ್ಕೆ ವ್ಯವಸಾಯ ರಂಗಧಲ್ಲಿ ಮುಖ್ಯವಾಗಿ ನೈತಿಕವಾ ಹಕ್ಕು ಯಾವ ಇಲ್ಲ. ಇವರಿಗೆ ಆದ್ದರಿಂದ ವಿದ್ಯುತ್ತನ್ನು ಇವರು ಸಮರ್ಪಕವಾಗಿ ವ್ಯವಸಾಯ ರಂಗಕ್ಕೆ ಸರಬರಾಜು ಮಾಡಿ ಒಂದು ವರ್ಷವಾದ ಮೇಲೆ ಬೇಕಾದರೆ ಅವರಿಗೆ ರೇಟನ್ನು ನಿಗಧಿ ಮಾಡತಕ್ಕಂಥ ವ್ಯವಸ್ಥೆಯನ್ನು ಆಲೋಚನೆ ಮಾಡಬಹುದು. ಆದ್ದರಿಂದ ಸನ್ಮಾನ್ಯ ಸಭಾಧ್ಯಕ್ಷರೇ, ಈ ವಿದ್ಯುತ್ ದರ ಏರಿಕೆಯನ್ನು ಖಂಡಿಸುತ್ತಾ ಇದನ್ನು ಸರ್ಕಾರ ಕಡಿಮೆ ಮಾಡಲೇಬೇಕು, ಕಡಿಮೆ ಮಾಡದಿದ್ದರೆ ಸರ್ಕಾರದ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಮತ್ತು ಈ ನಿಲುವಳಿ ಸೂಚನೆಯನ್ನು ತಾವು ಅಂಗೀಕಾರ ಮಾಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

★ **ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: (ಪಾಂಡವ ಪುರ) :-** ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿ ಹೆಚ್ಚು ಮಾಡಿರುವುದರ ಬಗ್ಗೆ ಬಹಳ ಜನ ಗಂಭೀರವಾಗಿ ಸರ್ಕಾರದ ಮುಂದೆ ವಿಚಾರವನ್ನು ಮಂಡಿಸಿದ್ದಾರೆ. ಸನ್ಮಾನ್ಯ ಸಭಾನಾಯಕರು ಅವರು ಉಪಮುಖ್ಯ ಮಂತ್ರಿಯಾಗಿದ್ದಾಗ ವಿದ್ಯುತ್ ದರವನ್ನು ಏರಿಸುವುದರ ಬಗ್ಗೆ ಎಲ್ಲಾ ಪಕ್ಷದರವನ್ನು ಎಂದು ಮೀಟಿಂಗ್ ಕರೆದು ಆಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರದಿದ್ದರೆ ವಿದ್ಯುಚ್ಛಕ್ತಿಯಲ್ಲಿ ಆಗುತ್ತಿರುವಂಥ ನಷ್ಟವನ್ನು ಇವತ್ತು ಪರಿಣಾಮಕಾರಿಯಾಗಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ನನ್ನ ಜೊತೆ ಮಾತನಾಡಿದ್ದರು. ಬಳಕೆದಾರರ ಬಗ್ಗೆ ಬಹಳ ಗಂಭೀರವಾಗಿ ಮಾತನಾಡಿದರು. ಆದರೆ ಕೆಲವರು ಮಾತನಾಡುತ್ತಾ ರೈತರಿಗೆ ಪುಕ್ಕಟೆ ಕರೆಂಟ್ ಕೊಡುತ್ತೇವೆ, ಪುಕ್ಕಟೆ ಕರೆಂಟ್ ಕೊಡುತ್ತೇವೆ ಎಂದು ಹೇಳಿದರು. ರೈತರಿಗೆ ಏಕೆ ವಿದ್ಯುಚ್ಛಕ್ತಿ ಪುಕ್ಕಟೆ ಕೊಡುತ್ತಿದ್ದೇವೆ ಎಂದು ಮೊದಲು ಯೋಚನೆ ಮಾಡಬೇಕು. ರೈತರಿಗೆ ಯಾರೂ ಫ್ರೀ ಕರೆಂಟ್‌ನ್ನು ಕೊಡುತ್ತಿಲ್ಲ. ಅವರು ಉತ್ಪಾದನೆ ಮಾಡತಕ್ಕಂಥ ಪದಾರ್ಥಗಳನ್ನು ಹರಾಜಿನಲ್ಲಿ ಗುಲಾಮಗಿರಿ ಪದ್ಧತಿಯಲ್ಲಿ ತೆಗೆದುಕೊಳ್ಳುತ್ತಿರುವುದರಿಂದ ಅವರ ಶ್ರಮವನ್ನು ಕಳ್ಳತನ ಮಾಡುತ್ತಿರುವುದರಿಂದ ಪೆಪ್ಪರ್‌ಮೆಂಟ್ ರೀತಿ ಯಲ್ಲಿ ವಿದ್ಯುಚ್ಛಕ್ತಿಯನ್ನು ಸಬ್ಸಿಡಿ ಎಂದು ಹೇಳಿ ಅವರಿಗೆ ಕೊಡುತ್ತಿದ್ದೇವೆ ಅಷ್ಟೆ. ಸುಮಾರು ಒಂಭತ್ತರಿಂದ ಹತ್ತು ಲಕ್ಷ ಪಂಪ್‌ಸೆಂಟ್‌ಗೆ ಸರಾಸರಿ ಐದು ಎಂದರೆ ಐವತ್ತು ಲಕ್ಷ ಹೆಚ್ ಪಿ ಕೊಡುತ್ತಿದ್ದೇವೆ. ಆದರೆ ಒಂದು ಕೋಟಿ ಆರು ಲಕ್ಷ ಟನ್ ತರಕಾರಿ ಬೆಳೆದು ರೈತರು ಮಾರ್ಕೆಟ್ಟಿಗೆ ಕೊಡುತ್ತಿರುವುದು; ಎಷ್ಟು ಜನರಿಗೆ ಉದ್ಯೋಗ್ಯ ಸೃಷ್ಟಿಯಾಯಿತು. ಎಂದು ತಾವು ಯೋಚನೆ ಮಾಡಬೇಕು. ಇಡೀ ರಾಜ್ಯದ ಮೂವತ್ತು ಭಾಗ ಉತ್ಪಾದನೆ ಪಂಪ್‌ಸೆಂಟ್ ರೈತರ ಮೇಲೆ ನಿಂತಿರುವುದು. ಆದರಿಂದ ನೀವು ಸರ್ಕಾರ ಅವರಿಗೆ ಯಾವುದೇ ಮಾರ್ಕೆಟ್ ವ್ಯವಸ್ಥೆಯನ್ನು ಸೃಷ್ಟಿ ಮಾಡಿಲ್ಲ. ಜೊತೆಗೆ ಮಳೆಗಾಲದಲ್ಲಿ ಅವರಿಗೆ ಪೂರ್ಣ ಕರೆಂಟ್ ಬೇಕು. ಮಳೆಗಾಲದಲ್ಲಿ ಪೂರ್ಣಕರೆಂಟ್ ಎಂದರೆ ಅವರಿಗೆ ಏತಕ್ಕೆ ಬೇಕು ? ಕರೆಂಟ್ ಕೊಡದೇ ಇರುವುದಕ್ಕೆ ಕರೆಂಟ್ ಛಾರ್ಜ್. ಮಳೆಗಾಲದಲ್ಲಿ ಪೂರ್ಣ ಕರೆಂಟ್ ಏಕೆ ಬೇಕು? ಮಳೆಗಾಲದಲ್ಲಿ ಪೂರ್ಣಕರೆಂಟ್ ಎಂದರೆ ಏನು? ಮಳೆ ಬಂದರೆ ಕರೆಂಟ್ ಏಕೆ ಬೇಕು ನಮಗೆ ? ಈ ಸಾರಿಯೇ ನಮಗೆ ಎಷ್ಟೋ ನಮ್ರವಾಗಿದೆ? ಅದನ್ನೇನಾದರೂ ಸಮೀಕ್ಷೆ ಮಾಡಿಸಿದೆಯೇ

ಸರ್ಕಾರ. ಆದರಿಂದ ರೈತರಿಗೆ ನೀವೇನು ಪುಕ್ಸಾಟೆ ಕೊಡುತ್ತಿಲ್ಲ. ಆದ್ದರಿಂದ ಹಿಂದೆ ಏನು ಕರ ವಿಧಿಸಿರಲಿಲ್ಲ ಆದ್ದರಿಂದ ಈಗಲೂ ಫ್ರೀ ಕರೆಂಟ್ ಕೊಡಬೇಕು. ಅಕಸ್ಮಾತ್ ಕೊಡಲೇಬೇಕು ಎಂಧರೆ ಉತ್ಪಾದನಾ ವೆಚ್ಚದ ಮೇಲೆ ಉತ್ಪಾದನಾ ವೆಚ್ಚಕ್ಕೆ ಮೂರುನೂರು ರೂಪಾಯಿ ಸೇರಿಸಿ ವೈಜ್ಞಾನಿಕ ಬೆಲೆ ನಿಗಧಿ ಮಾಡಿ ರೈತರಿಗೆ ಮೂರುನೂರುರಿಂದ ಐದುನೂರು ಫಿಕ್ಸ್ ಮಾಡಬಹುದು. ಆದರಲ್ಲೇನು ತಪ್ಪಿಲ್ಲ. 500 ರೂಪಾಯಿ ಫಿಕ್ಸ್ ಮಾಡಬಹುದು. ಆದರೆ ಉತ್ಪಾದನಾ ವೆಚ್ಚಕ್ಕೆ ಸೇರಿಸಬೇಕು. ವೈಜ್ಞಾನಿಕ ಬೆಲೆ ನೀತಿ ಇರಬೇಕು. ಆಗ ರೈತರಿಗೆ ಪಂಪ್‌ಸೆಟ್ ದರವನ್ನು ನಿಗಧಿ ಮಾಡಿದರೆ ಒಂದು ಹೆಚ್.ಪಿ ಇಷ್ಟು ಎಂದು ಮಾಡಿದರೆ ಅದು ವೈಜ್ಞಾನಿಕ ವಿಚಾರ. ಆದರಿಂದ ದಯವಿಟ್ಟು ಇದನ್ನು ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ಏನು ಬಹಳ ಜನ ಹಿರಿಯರು ವಿದ್ಯುಚ್ಛಕ್ತಿ ದರವನ್ನು ಗಂಭೀರವಾಗಿ ಕಡಿಮೆ ಮಾಡಬೇಕು ಎಂದು ಹೇಳಿ ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆ ಆ ನಿಲುವಳಿಗೆ ನಾನು ಬೆಂಬಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

★ಶ್ರೀ ವಿ.ಮುನಿಯಪ್ಪ (ಗಾಂಧಿ ನಗರ):- ಸನ್ಮಾನ್ಯ ಅಧ್ಯಕ್ಷರೇ, ಜುಲೈ 1 ನೇ ತಾರೀಖಿನಿಂದ ಕರ್ನಾಟಕ ರಾಜ್ಯ ಸರ್ಕಾರ ವಿದ್ಯುಚ್ಛಕ್ತಿ ದರವನ್ನು ನಿಗಧಿ ಮಾಡಿ ಜನಸಾಮಾನ್ಯರಿಗೆ ಪಾಮರರಿಂದ ಹಿಡಿದು ಮೇಲ್ದರ್ಜೆಯ ಎಲ್ಲ ಜನರಿಗೂ ಅವಶ್ಯಕತೆ ಇರತಕ್ಕಂಥ ವಿದ್ಯುತ್‌ನ್ನು ದರ ಏರಿಸಿ. ಯಾವ ಕಾಲದಲ್ಲೂ ಏರಿಸದೇ ಇರುವಷ್ಟು ಹೆಚ್ಚು ದರವನ್ನು ಏರಿಸಿ ಜನರಿಗೆ ಹೊರೆಯಾಗಿರತಕ್ಕಂಥ ಈ ದಿನದಲ್ಲಿ ಇವತ್ತು ಬೆಳಿಗ್ಗೆಯಿಂದಲೂ ಹಲವಾರು ನಾಯಕರುಗಳು ಈ ವಿದ್ಯುತ್ ದರವನ್ನು ಹೆಚ್ಚಿಸಿರುವುದನ್ನು ದರ ಕಡಿಮೆ ಮಾಡಬೇಕು ಎಂದು ಹೇಳಿ ಇಲ್ಲಿ ಮಾತನಾಡಿದ್ದಾರೆ. ನಾನು ಹೆಚ್ಚು ಅಂಕಿಅಂಶಗಳನ್ನು ಹೇಳದೇ ಈ 10 ತಿಂಗಳ ಅವಧಿಯಲ್ಲಿ ಈ ಹೊಸ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಆಡಳಿತಕ್ಕೆ ಬಂದ ನಂತರ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ಲೋಕಸಭಾ ಚುನಾವಣೆ ಮತ್ತು ಪುರಸಭೆಗಳ ಮಹಾನಗರಪಾಲಿಕೆ, ನಗರಸಭೆ ಚುನಾವಣೆಗಳು ಬಂದಂಥ ಸಂದರ್ಭದಲ್ಲಿ ಏಷ್ಟೇ ವಿಧವಾದ ವಿರೋಧ ಪಕ್ಷಗಳು ಹಲವಾರು ರೀತಿಯ ಅಪಾದನೆಗಳನ್ನು ಮಾಡಿ ಸರ್ಕಾರದ ಮೇಲೆ ಟೀಕೆಯನ್ನು ಮಾಡಿದಂಥ ಸಂದರ್ಭದಲ್ಲೂ ಕೂಡ ಕರ್ನಾಟಕದ ಜನತೆ ಹೆಚ್ಚು ಒಲವನ್ನುತೋರಿಸಿ ಇವತ್ತಿನ ಸರ್ಕಾರಕ್ಕೆ ಬೆಂಬಲವನ್ನು ಕೊಟ್ಟಿದ್ದಾರೆ. ಆ ಬೆಂಬಲವನ್ನು ಕೊಟ್ಟಿರತಕ್ಕಂಥ ಜನರ ನಂಬಿಕೆಯನ್ನು ಕಳೆದುಕೊಳ್ಳದ ರೀತಿಯಲ್ಲಿ ಏನು ಇವತ್ತು ಜನಸಾಮಾನ್ಯರ ಮೇಲೆ ಹೊರ ಯಾಗುತ್ತಿದೆ ಪ್ರತಿಯೊಂದು ಹಂತದಲ್ಲೂ ಈ ವಿದ್ಯುಚ್ಛಕ್ತಿ ಬಳಕೆ ಮಾಡದೆ ಬೇರೆ ದಾರಿಯಿಲ್ಲದೇ ಇರತಕ್ಕಂಥ ಅದು ನಗರವಾಸಿಗಳು ಪಟ್ಟಣವಾಸಿಗಳಾಗಿರಬಹುದು, ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ರೈತರಾಗಿರಬಹುದು. ಪ್ರತಿಯೊಬ್ಬರಿಗೂ ತೊಂದರೆಯಾಗುವಂಥ ದಿನಗಳಲ್ಲಿ ಸರ್ಕಾರ ಆಗುವ ನಷ್ಟವನ್ನು ಬೇರೆ ರೂಪದಲ್ಲಿ ಅದನ್ನು ಸರಿ ಮಾಡಿ ಜನರ ಮೇಲೆ ಹೆಚ್ಚು ಹೊರೆಯನ್ನು ಹೊರಿಸದೆ ಅಲ್ಪಸ್ವಲ್ಪ ಈ ಒಂದು ವಿದ್ಯುತ್ ದರವನ್ನು ಹೆಚ್ಚಿಸಿ ಈಗ ಕೈಗೊಂಡಿರುವ ತೀರ್ಮಾನವನ್ನು ಕೈಬಿಡಬೇಕು ಎಂದು ನಾನು ಕೂಡ ಸರ್ಕಾರದಲ್ಲಿ ಒತ್ತಾಯ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

★ಶ್ರೀ ಜೆ.ಎಚ್.ಪಟೇಲ್ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ ಬಹಳ ಕಷ್ಟಕರವಾದಂತಹ ಆದರೂ ಮಾಡಲೇಬೇಕಾದಂತಹ ಕೆಲವು ಕರ್ತವ್ಯಗಳನ್ನು ನಾನು ಮಾಡುತ್ತಿದ್ದೇನೆ. ರೈತರು, ಬಡತನ, ಅವರು ಕಣ್ಣೀರು ಸುರಿಸುತ್ತಾರೆ, ಇವೆಲ್ಲಾ ಭಾಷಣದಲ್ಲಿ ಬರತಕ್ಕಂಥ ಕ್ಲೇಶಗಳು.

ನಾವು ರೈತರನ್ನು ನೋಡಿಲ್ಲ, ಅವರಿಗೆ ಏನು ಕಷ್ಟ ಆಗುತ್ತದೆ ಎನ್ನುವುದು ನಮಗೆ ಗೊತ್ತಿಲ್ಲ ಎಂದು ಆ ರೀತಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಅವರಿಗೆ ಸಂಪೂರ್ಣ ಹೃತ್ಪೂರ್ವಕವಾಗಿ ರೈತರ ಬಗ್ಗೆ ರೈತರಿಗೆ ಆಗತಕ್ಕಂಥ ಕಷ್ಟದ ಬಗ್ಗೆ ಗೊತ್ತಿರಬಹುದು, ಗೊತ್ತಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಕೆಲವು ರೋಗಗಳಿಗೆ ಔಷಧಿಯನ್ನು ಕೊಡುವಾಗ ಕೆಲವು ಹಿಂಸೆಯನ್ನು ಮಾಡಲೇ ಬೇಕಾಗುತ್ತದೆ. ಅದು ಯಾವ ಅವಸ್ಥೆಯಲ್ಲಿ ರೋಗಿ ಇದ್ದಾನೆ ಎನ್ನುವುದನ್ನು ನಾವು ನೋಡಿಕೊಳ್ಳಬೇಕಾಗುತ್ತದೆ ಈಗ. ಮೊದಲನೆಯದಾಗಿ ನಾನು ಕೆ.ಇ.ಬಿ. ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಹೇಳುತ್ತೇನೆ. ಒಂದು ಕಾಲಕ್ಕೆ ನಮ್ಮ ರಾಜ್ಯದಲ್ಲಿ ಒಂದು ಸಾವಿರ ಮೆಗಾವಾಟ್ಸ್ ಉತ್ಪಾದನೆ ಇದ್ದಂತಹ ಕಾಲದಲ್ಲಿ ವಿದ್ಯುತ್ ಸರ್‌ಪ್ಲೆಸ್ ಇತ್ತು. ಬೇರೆ ರಾಜ್ಯದವರನ್ನು ನಾವು ಆಗ ಕರೆದು ಪಂಪ್‌ಸೆಟ್‌ಗೆ ಅಲ್ಲ ಬೇರೆ ಕಡೆಗಳಲ್ಲಿಯೂ ಸಹ ಫ್ರೀಆಗಿ ವಿದ್ಯುತ್ ಕೊಡುತ್ತೇವೆಂದು ಹೇಳಿದರೂ ಉಪಯೋಗ ಮಾಡದೇ ಇದ್ದಂತಹ ಕಾಲ ಇತ್ತು. 1955ರಿಂದ 70ನೇ ಇಸವಿವರೆಗೂ ಅಂದರೆ 26 ವರ್ಷಗಳ ಕೆಳಗೆ ಒಂದು ರೀತಿಯ ತೃಪ್ತಿ ಇತ್ತು. ನಾವು ಬೇರೆ ರಾಜ್ಯಗಳ ಇಂಡಸ್ಟ್ರಿಗಳನ್ನು ನಾವು ವಿದ್ಯುತ್ ಕೊಡುತ್ತೇವೆ ಬನ್ನಿ ಅಂತ ಇನ್‌ವೈಟ್ ಮಾಡಿದ್ದೇವು. 6 ಪೈಸೆಗೆ ಒಂದು ಯೂನಿಟ್ ತರಹ ಮಾರಾಟ ಮಾಡಿದ್ದೇವೆ ನಾವು. ಆಮೇಲೆ ಕೆಲವು ಬಾರಿ ದೊಡ್ಡ ಇಂಡಸ್ಟ್ರಿಗಳು ನಮ್ಮ ಮಾನ್ಯ ಖರ್ಗೆಯವರು ಹೇಳಿದರಲ್ಲ ಅಲ್ಯುಮಿನಿಯಂ ಇಂಡಸ್ಟ್ರಿಗಳು ಅವು ಇವು, ಆಗಿನ ಕಾಲದಲ್ಲಿ ಉದ್ಯೋಗ ಸಿಗಲಿ ಎಂದು ಇಂಡಸ್ಟ್ರೀಯಲ್ ಗ್ರೋತ್ ಗಮನದಲ್ಲಿ ಇಟ್ಟುಕೊಂಡು ನಾವು ಅವರನ್ನೆಲ್ಲಾ ಇನವೈಟ್ ಮಾಡಿದೆವು. ಅವರಿಗೆ ಪ್ರೈಜ್ ಇನ್‌ಸೆಂಟೀವ್ ಕೊಟ್ಟೆವು. ನಾವು ಒಂದು ಕಡೆ ಇಂಡಸ್ಟ್ರೀಯಲ್ ಗ್ರೋತ್ ಆಗಬೇಕು, ಇನ್ನೊಂದು ಕಡೆ ನಮ್ಮ ಅಗ್ರಿಕಲ್ಚರ್ ಬೇಸ್ ಜಾಸ್ತಿ ಆಗಬೇಕು ಎಂದು ಹೇಳುತ್ತೇನೆ. ಮತ್ತು ಸಾಮಾನ್ಯ ಮನುಷ್ಯನಿಗೆ ದಿನನಿತ್ಯ ಜೀವನಕ್ಕೆ ಇವತ್ತು ಎಲೆಕ್ಟ್ರಿಸಿಟಿ ಬೇಕು. ಕೇವಲ 5-6 ಲಕ್ಷ ಇದ್ದ ನಮ್ಮ ಇನ್ಸ್‌ಟಲೇಷನ್ಸ್. ಇವತ್ತು ಸುಮಾರು 75 ಲಕ್ಷ ಇನ್‌ಸ್ಟಲೇಶನ್ಸ್ ಆಗಿವೆ. ಆ 75 ಲಕ್ಷ ಜನ ಗ್ರಾಹಕರು ಇವತ್ತು ಒಂದೇ ಸಾರಿ ನನಗೆ ಎಲೆಕ್ಟ್ರಿಸಿಟಿ ಬೇಕು ಅಂತ ಸ್ವಿಚ್ ಹಾಕಿದರೆ the whole State will plunge into darkness. ಕತ್ತಲೆಯಾಗುತ್ತದೆ. ಎಲ್ಲಾ ಸಿಸ್ಟಂ ಕೊಲ್ಯಾಪ್ಸ್ ಆಗುತ್ತದೆ. ಎಲೆಕ್ಟ್ರಿಸಿಟಿ ಬಗ್ಗೆ ಮಾಹಿತಿ ಇರತಕ್ಕಂಥವರು ಅದರ ಬಗ್ಗೆ ತಿಳುವಳಿಕೆ ಇದ್ದಂತಹವರು ನನಗೆ ಬಹಳ ಚೆನ್ನಾಗಿ ಗೊತ್ತಿದೆ ಅಂತ ಅಲ್ಲ ವಾಟಾಳ್‌ರವರೇ, ಹಿಂದೆ ಇದ್ದವರು, ನಾನು ಯಾರ ತಲೆ ಮೇಲೆ ಗೂಬೆ ಕೂಡಿಸುವುದಕ್ಕೆ ಅಲ್ಲ ಇದನ್ನು ಹೇಳುತ್ತಿರುವುದು, ಉದಾರವಾಗಿ ಇಪಂಪ್‌ಸೆಟ್‌ಗಳಿಗೆ ಫ್ರೀ ಆಗಿ ಕೊಟ್ಟರು. ನಮ್ಮ ಕಾಲದಲ್ಲಿಯೇ ಮಾನ್ಯ ಹೆಗಡೆಯವರ ಕಾಲದಲ್ಲಿ ನಾನು ಪವರ್ ಮಿನಿಸ್ಟರ್ ಆಗಿದ್ದೆ. ನಾವು ಇರಿಗೇಶನ್ ಪಂಪ್‌ಸೆಟ್‌ಗೆ ತಿಂಗಳೂ ಜಾಸ್ತಿ ಮಾಡಿ ಜಾಸ್ತಿ ಮಾಡಿ ಅಂತ ಹೇಳುತ್ತಿದ್ದೆ. ಅದು ಇವತ್ತು 10 ಲಕ್ಷ 60 ಸಾವಿರ ಪಂಪ್‌ಸೆಟ್ ಆಗಿದೆ. ಇವರ ಲೆಕ್ಕವೇ ನಾವು ನನ್ನದು ಹೇಳುತ್ತೇನೆ ಅಂತ ಅಲ್ಲ. ನಮ್ಮ ಲೆಕ್ಕದ ಪ್ರಕಾರ ಶೇಕಡ 45 ರಷ್ಟು ಎಲೆಕ್ಟ್ರಿಸಿಟಿಯನ್ನು 10 ಲಕ್ಷ ಪಂಪ್‌ಸೆಟ್‌ಗಳು ಉಪಯೋಗಿಸುತ್ತಿವೆ ಅಂತ ಲೆಕ್ಕ ಇದೆ. ರೈತರು ಯಾರಿಗೆ ಬೇಡ. ರೈತರು ಇಲ್ಲದೇ ಇದ್ದರೆ ಈ ದೇಶ ಬದುಕುತ್ತದೆಯೇ? ಸರ್ಕಾರ ಬದುಕುತ್ತದೆಯೇ? ಹಾಗಾದರೆ ಸರ್ಕಾರ ಇವತ್ತು ರೈತರಿಗೆ ಹೇಳಬೇಕಲ್ಲ. ನಾವು ನಿಜವಾಗಿಯೂ ರೈತರ ಮಕ್ಕಳಾದರೆ ಅವರ ಹಿತಾಸಕ್ತಿಯನ್ನು ಕಾಪಾಡತಕ್ಕಂಥ ಜವಾಬ್ದಾರಿ ಸರ್ಕಾರದ್ದು ಆದರೆ ಇದನ್ನು ನಾವು ಉಳಿಸಿಕೊಳ್ಳಬೇಕು. ಈ ಸಂಸ್ಥೆಗಳು ಉಳಿಯಬೇಕು. ನೀವು ಈ ಸಂಸ್ಥೆಯನ್ನು ಕೈ ಬಿಟ್ಟರೆ ಹೋಗುತ್ತದೆ ಎಂದು ಹೇಳಬೇಕು. ಇವತ್ತು ನಾನು ಆ ಕೆಲಸವನ್ನು

ಮಾಡುತ್ತಿದ್ದೇನೆ. ನಾನು ಕೈ ಎತ್ತಿ ಆರಾಮವಾಗಿ ಪಾಪ್ಯುಲರ್ ಆಗುವುದಕೋಸ್ಕರ ಆ ಹೊಡೆಯಿರಿ ಎಲ್ಲಾ ಫ್ರೀ ಆಗಿ ಅಂದರೆ ಮುಗಿದು ಹೋಯಿತು. ಒಬ್ಬ ಮೀಟರ್ ತೆಗೆದ ಒಬ್ಬ ವೈರ್ ತೆಗೆದ ನಾನು ಏನು ತೆಗೆಯಬೇಕು ಈಗ. ನಾವು ಇದನ್ನು ಅವರಿಗೆ ಹೇಳಬೇಕಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು ನಿಮ್ಮ ಬಾಯಿ ಮುಚ್ಚಿಸಿದರು ಅಂತ. ಅವತ್ತು ಅವರು ಬ್ಬರಬೇಕಾಗಿತ್ತು. I would have been very happy if he were to be present. ಎರಡು ಲಕ್ಷ ಜನ ಇದ್ದರು. ನಾನು ಹೇಳಿದೆ. ಪವರ್ ಬೇಕು. ಅವರಿಗೆ ಎಲೆಕ್ಟ್ರಿಸಿಟಿ ಪಂಪ್‌ಸೆಟ್ ಹಾಳಾಗಿ ಹೋಗುತ್ತದೆಯಲ್ಲ ಮೋಟಾರುಗಳು ಸುಡುವಂತಾದ್ದು ಅಲಲ್ಲಿ ಇಂಡಸ್ಟ್ರೀಗಳು ಅವರು ಪ್ರತಿನಿತ್ಯ ಒಂದೊಂದು ಇಂಡಸ್ಟ್ರೀಗಳಿಗೆ ವಾಟಾಳ್‌ರವರೇ ಕಂಟಿನ್ಯೂಯೆಸ್ ಆಗಿ ಪವರ್ ಇಲ್ಲದೇ ಹೊದರೆ ಉದಾಹರಣೆಗೆ ಬಿಸ್ಕೆಟ್ ಫ್ಯಾಕ್ಟರಿ, ಗ್ಯಾಸ್ ಫ್ಯಾಕ್ಟರಿ, ಅವನು ಲಿಕ್ವೀಡ್ ಮಾಡಿ ಇಟ್ಟಿರುತ್ತಾನೆ ಅದು ಇನ್ನೇನು ಶೇಪ್‌ಗೆ ಬರಬೇಕು ಆಗ ಪವರ್ ಹೋದರೆ ಮುಗಿಯಿತು ಆಗ ಅವನು ಅಷ್ಟನ್ನೂ ವಾಪಸ್ಸು ತೆಗೆದುಕೊಂಡು ಹೋಗಬೇಕು. ಕಂಟಿನ್ಯೂಯಿಸ್ ಆಗಿ ಪವರ್ ಯುಟಿಲಿಟಿ ಇರತಕ್ಕಂಥ ಫ್ಯಾಕ್ಟರಿಗಳು ಇವೆ. ನಾವು ಸ್ವಲ್ಪ ಸಮಗ್ರವಾಗಿ ರಾಜ್ಯದ ಬೇಡಿಕೆ ಏನು, ಯಾವ ಯಾವ ವಲಯಗಳಲ್ಲಿ ಏನೇನು ಬೇಡಿಕೆ ಇದೆ ಎನ್ನುವುದನ್ನು ಹೇಳದೇ ಪ್ರೀತಿ ಮಾಡಿಸುವುದಕೋಸ್ಕರ ನಾನು ಹೇಳಬಹುದು, ಇನ್ನೂ ಹತ್ತು ಲಕ್ಷ ಪಂಪ್‌ಸೆಟ್ ಮಾಡಿಕೊಳ್ಳಿ, ಅಂತ ಆದರೆ ಬೇರೆ ರಾಜ್ಯಗಳದ್ದು ನಾನು ಆ ಮೇಲೆ ಹೇಳುತ್ತೇನೆ. ಇವತ್ತು ಕೆ.ಇ.ಬಿ. ಯೂನಿಯನ್‌ನ ಸಂಸ್ಥಾಪಕರದಲ್ಲಿ ನಾನೂ ಒಬ್ಬ. ಮಾನ್ಯ ಹನುಮಂತಯ್ಯನವರ ಕಾಲದಲ್ಲಿ ಕಣ್ಣನ್ ಅಂತ ಆ ಸಂಸ್ಥೆಯಲ್ಲಿ ಒಬ್ಬರು ಇದ್ದರು ನೋಡಿದ್ದೀರೋ? ಅವರು ನಾನು ಗೋಪಾಲಗೌಡರು ಆ ಸಂಸ್ಥೆಯನ್ನು ಸ್ಥಾಪನೆ ಮಾಡಿದವರು. ಫಸ್ಟ್ ಟೈಮ್ ಕಾರ್ಮಿಕರು ಮತ್ತು ಕೆ.ಇ.ಬಿಯ ಜೊತೆ ಒಪ್ಪಂದ ಆದಾಗ ಫ್ರೀ ಪವರ್ ಕೊಡಬೇಕು ಎಂದು ಆದದ್ದು ಆಗಲೇ. 35-40 ವರ್ಷಗಳ ಕೆಳಗಿನ ಮಾತು ಇದು. ಫ್ರೀಯಾಗಿ ಪವರ್‌ನ್ನು ಕಾರ್ಮಿಕರಿಗೆ ಕೊಡಬೇಕಲು ಅಂತ ಆಯಿತು, ಆಗ ಬಹಳ ಕಡಿಮೆ ಜನ ಇದ್ದರು. ಅದು ಹಾಗೆಯೇ ನಡೆದುಕೊಳ್ಳುತ್ತಾ ಬಂತು. ಆಗಿದ್ದಂತಹ ಯೂನಿಯನ್ ಆಗಿದ್ದಂತಹ ಸಂಖ್ಯೆ ಆಗಿದ್ದಂತಹ ಪವರ್ ಜನರೇಶನ್ ಇವತ್ತು ನಮ್ಮ ಅಂದಾಜು ಮೀರಿ ಬೆಳೆದಿದೆ. ಅದರ ಜೊತೆಗೆ ಈಗ ನಾವು ಮನೆಗೆ 10 ಜನ ಊಟಕ್ಕೆ ಬಂದರೂ ಅದೇ ಅಕ್ಕಿ, ಸಾವಿರ ಜನ ಬಂದರೂ ಅದೇ ಅಕ್ಕಿ ಆಗುತ್ತದೆಯೇ? ಈಗ ನಮ್ಮ ಡಿಮ್ಯಾಂಡ್ ಏನು ಇದೆ ಆ ಡಿಮ್ಯಾಂಡ್‌ಗೆ ತಕ್ಕ ಪವರ್ ಜನರೇಶನ್ ಆಗುತ್ತಿಲ್ಲ. 10 ವರ್ಷಗಳಲ್ಲಿ ಒಂದೇ ಒಂದು ಯೂನಿಟ್ ಪವರ್ ಜನರೇಟ್ ಆಗಲಿಲ್ಲ. ನಮ್ಮ ಡಿಮ್ಯಾಂಡ್ ಪ್ರತಿ ವರ್ಷ ಕನಿಷ್ಟ ಪಕ್ಷ 500 ಮೆಗಾವಾಟ್ಸ್ ಬೇಕು. 5 ವರ್ಷಗಳ ಹಿಂದೆ ನಮ್ಮ ಉತ್ಪಾದನೆ ಎಲ್ಲಿತ್ತೋ ಅದು ಅಲ್ಲೇ ಇದೆ. 3250 ಮೆಗಾವಾಟ್ಸ್ ನಮ್ಮ ಕೆಪಾಸಿಟಿ ಇದೆ. ನಮ್ಮ ಡಿಮ್ಯಾಂಡ್ 11 ಸಾವಿರ ಮೆಗಾವಾಟ್ಸ್ ಹೋಗಿದೆ. ಹೇಗೆ ಮ್ಯಾನೇಜ್ ಮಾಡಬೇಕು? ಕೆ.ಇ.ಬಿ.ಯಲ್ಲಿ ದೋಷ ಇವೆ. ದೋಷ ಇಲ್ಲ ಅಂತ ನಾನು ಹೇಳುವುದಿಲ್ಲ. ಅಲ್ಲಿ 45 ಸಾವಿರ ಜನ ವರ್ಕರ್ಸ್ ಇದ್ದಾರೆ. ಅವರಲ್ಲಿ 80 ಭಾಗ ಕಷ್ಟಪಟ್ಟುದುಡಿದವರು ಇದ್ದರೆ ಇನ್ನು 20 ಭಾಗ ದೋಷ ಇರುವವರು ಇದ್ದರೂ ಇರಬಹುದು. ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಅದೇ ರೀತಿಯಲ್ಲಿ ಗ್ರಾಹಕರಲ್ಲಿ ಇಂಡಸ್ಟ್ರೀಯಲಿಸ್ಟ್‌ಗಳು ಎಲ್ಲರೂ ಬಹಳ ಪ್ರಾಮಾಣಿಕರು ಅಂತ ನಾನು ಹೇಳುವುದಿಲ್ಲ. ಅದರಲ್ಲಿಯೂ ಪವರ್ ಕದಿಯುವವರು ಇದ್ದಾರೆ. ಇಂಡಸ್ಟ್ರೀಯಲಿಸ್ಟ್‌ಗಳಿಗೆ ಸಹಾಯ ಮಾಡತಕ್ಕಂಥ

ನೌಕರರು ಇದ್ದಾರೆ. ಇನ್ನೂ ಬಹಳ ದೊಡ್ಡ ಇಂಡಸ್ಟ್ರೀಗಳು ಯಾರಿಗೆ ನಾವು ಇವತ್ತು ಮೀಟರ್ ಹಾಕಿ ಚೆಕ್ ಮಾಡಿ ಅವರು ಏನಾದರೂ ತಪ್ಪು ಮಾಡಿದರೆ ಶಿಕ್ಷೆ ಮಾಡಬೇಕು ಎನ್ನುವುದು ಡಿಸ್‌ಕನೆಕ್ಷನ್ ಮಾಡುವುದು ಅಲ್ಲಿಯೂ ಇದ್ದಾರೆ. ಅವರಲ್ಲಿ ಕೆಲವರು ಕೋರ್ಟಿಗೆ ಹೋಗಿದ್ದಾರೆ. ಈ 10 ವರ್ಷದಿಂದ ಪೈಲ್‌ಅಪ್ ಆಗಿರತಕ್ಕಂಥ ಎಲ್ಲಾ ದೋಷಗಳನ್ನು ನಾನು ಈಗ ಏಕಾಏಕಿ ತಡೆಗಟ್ಟಲು ಪವಾಡ ಮಾಡಲೇನು ನಾನು? ಮಾನ್ಯ ಅಧ್ಯಕ್ಷರೇ, ಇವತ್ತು ಇದು ಅನಿವಾರ್ಯ. ಕೆ.ಇ.ಬಿ. ಮೇಲೆ ಇರತಕ್ಕಂಥ ಹೊರೆ ಬಹು ಜಾಸ್ತಿ ಇವತ್ತು ಜನರಿಗೆ ನಾವು ಯಾವುದೇ ರೀತಿಯಿಂದ ಸಮಾಧಾನ ಮಾಡುವುದಕ್ಕೆ ಒಳ್ಳೆಯ ಮಾತು ಆಡಿ ಪ್ರೀತಿ ಮಾಡಿ ಮಾಡುವುದಕ್ಕೆ ಆಗುವುದಿಲ್ಲ. ಅವರಿಗೆ ನಾವು ಹೇಳಬೇಕು ಇದು ನಿಮ್ಮದು ಯಂತ್ರ. ಇದು ನಿಮಗೋಸ್ಕರ ಇರತಕ್ಕಂಥಾದ್ದು ಕೆ.ಇ.ಬಿ. ಆಗಲಿ, ಕೆ.ಪಿ.ಸಿ. ಆಗಲಿ. ಕೆ.ಇ.ಬಿ. ಮತ್ತು ಕೆ.ಪಿ.ಸಿ ಸಂಬಂಧ ನಾನು ಆಮೇಲೆ ಹೇಳುತ್ತೇನೆ. ಕೆ.ಪಿ.ಸಿ. ಮೊದಲು ಇರಲಿಲ್ಲ ಕೆ.ಇ.ಬಿ.ಯೇ ಇದ್ದದ್ದು ಮೊದಲು. ಕೆ.ಇ.ಬಿ. ಯಿಂದ ಪವರ್ ಜನರೇಶನ್ ಏನು ಮಾಡುತ್ತಿದ್ದರು ಅದನ್ನು ಬೇರೆ ಮಾಡಬೇಕು ಅಂತ ಕರ್ನಾಟಕ ಪವರ್ ಕಾರ್ಪೋರೇಷನ್ ಎಂದು ಮಾಡಿದ್ದು. ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಪವರ್ ಕಾರ್ಪೋರೇಷನ್ ಬಗ್ಗೆ ಕೆ.ಇ.ಬಿ. ಕೆಲಸ ಮಾಡುವುದರ ಬಗ್ಗೆ ನನಗೆ ಯಾವುದೇ ರೀತಿಯ ಅನುಮಾನ ಆಗಲಿ, ಸಂಶಯ ಆಗಲಿ ಇಲ್ಲ. ಕೆಲವು ದೋಷಗಳು ಇವೆ. ಆ ದೋಷಗಳಲ್ಲಿ ಕೆಲವು ಇನ್ನಹರಂಟ್ ಕೆಲವು ಇವೆ. ನಾನು ಕ್ರಿಯೇಟ್ ಮಾಡಿದಂತಹವು ಕೆಲವು ಇವೆ. ಇನ್ನಹರಂಟ್ ಪೈಕಿ ನಾವು ಪವರ್ ಜನರೇಶನ್ ಅನ್ನು ಇಂಪ್ರೂವ್ ಮಾಡಲಿಲ್ಲ ಆದ್ದರಿಂದ ಈ ಎರಡೂ ಪವರ್ ಕಾರ್ಪೋರೇಷನ್‌ಗೆ ಅಲ್ಲಿರತಕ್ಕಂಥ ನಮ್ಮ ಕೆಪಾಸಿಟಿಗೆ ಫುಲ್ ಲೋಡ್ ಇದೆ. ಅವರಿಂದ ನಾವು ತೆಗೆದು ಎಲ್ಲರಿಗೂ ಕೊಟ್ಟು ಬಿಟ್ಟೆವು ಅಂತ ಅಲ್ಲ. ರಾಯಚೂರು ಥರ್ಮಲ್ ಪ್ಲಾಂಟ್ V & VI were given to somebodyelse. I changed it. I have given it to K.P.C. Kadira, Kodasalli, they are being done by them. Ongoing projects are being done by them. Bidadi project, KPC has undertaken. It is a full work.

ನಾವು ಬರೀ ಕೆಪಿಸಿ ಯಿಂದಲೇ ಮಾಡಿಸಿಕೊಂಡು ಇನ್ನು 10 ವರ್ಷ ಹೋಗಲಿ 15 ವರ್ಷ ಹೋಗಲಿ ಇವರಿಂದಲೇ ಜನರೇಟ್ ಮಾಡಿಸಿಕೊಳ್ಳಬೇಕೆಂದು ಕಾಯುವಂತೆ ಇಲ್ಲ ಇಲ್ಲಿ. ನಮಗೆ ಪ್ರತಿದಿನವೂ ಒತ್ತಡ ಜಾಸ್ತಿಯಾಗುತ್ತಿದೆ. ಅದುದರಿಂದ, ಅನಿವಾರ್ಯವಾಗಿ ಹೊರಗಿನ ಏಜೆನ್ಸಿಗಳನ್ನು ಬಂಡವಾಳವನ್ನು ಅಹ್ವಾನಿಸಿದ್ದೇವೆ, ಆ ಭಾಗದಲ್ಲಿ ಕೆಲಸ ನಡೆಯುತ್ತಿದೆ. ಎಲ್ಲಾ ಪ್ರಾಜೆಕ್ಟ್‌ಗಳು ಕಾಲಕ್ಕೆ ತಕ್ಕಂತೆ ಸರಿಯಾಗಿ ನಡೆದುಕೊಂಡು ಹೋದರೆ ಕ್ರಿ.ಶ.2003 ಅಥವಾ 2004 ಇಸವಿ ವೇಳೆಗೆ ನಮ್ಮ ಬೇಡಿಕೆ 11,000 ಮೆಗಾವ್ಯಾಟ್‌ಗಳಿಗೆ ತಲುಪಬಹುದು, ಇಲ್ಲದಿದ್ದರೆ ಕೊರತೆ ಇರುತ್ತದೆ. ಕೊರತೆಯಲ್ಲಿ ಎರಡು ಭಾಗಗಳಿವೆ. ಖಾಸಗೀಕರಣಗೊಳಿಸಬಹುದು. ಮಾನ್ಯ ಹೆಚ್.ಡಿ.ದೇವೇಗೌಡರು ಹೇಳಿದ ಮಾತುಗಳನ್ನು ಸದಸ್ಯರಾದ ರೆಡ್ಡಿಯವರು ಮಾತನಾಡುತ್ತಾ ಉಲ್ಲೇಖಿಸಿದ್ದರು. ಈಗ ನಾವು ಎಲ್ಲಾದಕ್ಕೂ ಒಂದೊಂದು ಸಾರಿ ಹೇಳುತ್ತೇವೆ ಸ್ಟೇಟಸಾ ಅಂತ " State ownership will be in the interest of the people. It is a Marxist concept. It is already out-moded now. Even in China they have allowed more thean Rs.50,000

crores investment into that country. There is no pure marxisum avalilable in the world today.

ಪ್ಯೂರ್ ಕ್ಯಾಪಿಟಲಿಸಂ ಎಲ್ಲೂ ಎಲ್ಲ. ಪ್ರಸ್ತುತ ಯೂರೋಪಿನಲ್ಲಿರುವ ಕ್ಯಾಪಿಟಲಿಸಂನಲ್ಲಿ, ಸೋಶಿಯಲಿಸಂ ಇದೆ.

★**ಶ್ರೀ ಬಿ.ಎಸ್.ಯಡಿಯೂರಪ್ಪ:-** ನಮ್ಮ ರೈಲನ್ನು ಎಲ್ಲಿಗೋ ತೆಗೆದುಕೊಂಡು ಹೋಗುತ್ತಿದ್ದೀರಿ. ಇವೊತ್ತು ತಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿದ್ದು ತಾವು ಈ ಇಲಾಖೆಯ ಅಧಿಕಾರ ವಹಿಸಿಕೊಂಡಿದ್ದು, ನಾವು ಯಾವುದೇ ಆರೋಪಗಳನ್ನು ಮಾಡುತ್ತಿಲ್ಲ. ಇದುವರೆವಿಗೂ ಒಂದೇ ಒಂದು ಮೆಗಾವ್ಯಾಟ್‌ನಷ್ಟು ವಿದ್ಯುತ್ ಅನ್ನು ಉತ್ಪಾದಿಸುವುದಕ್ಕಾಗಲಿಲ್ಲವೆಂದು ತಾವೇ ಈಗ ಒಪ್ಪಿಕೊಂಡಿರಿ. ಇದಕ್ಕೆ ಯಾರು ಜವಾಬ್ದಾರರು? ಕಳೆದ ಹದಿನೆಂಟು ತಿಂಗಳಿನಿಂದಲೂ ಒಂದು ಮೆಗಾವಾಯಟ್‌ನಷ್ಟು ವಿದ್ಯುತ್ ಉತ್ಪಾದನೆಯಾಗಿಲ್ಲ. ಈಗತಾನೇ ಆಲಮಟ್ಟಿ ಅಣೆಕಟ್ಟು ಬಗ್ಗೆ ಪ್ರಸ್ತಾಪವಾಯಿತು. ನನಗೆ ಗೊತ್ತಿರುವಂತೆ ಕೆ.ಪಿ.ಸಿ.ಯವರು ಅರ್ಧ ಕೆಲಸ ಮಾಡಿ ಮುಗಿಸಿದ್ದಾರೆ. ತಮಗೇಕೆ ಎಲ್ಲೂ ಇಲ್ಲದ ವ್ಯಾವೋಹ? ಯಾರನ್ನೋ ಅಡ್ಡಾಡಿಸಿಕೊಂಡು ಹಿಡಿದುಕೊಂಡು ಬರುವ ಅಗತ್ಯವೇನಿದೆ? ನಾನು ಹೇಳುವಂತಾದ್ದು ಏನೆಂದರೆ, ಅನೇಕ ಕಾರಣಗಳಿಂದಾಗಿ ಆಗಿರುವ ಕೊರತೆ, ತಪ್ಪನ್ನು ಗ್ರಾಹಕನ ಮೇಲೆ ಒಂದೇ ಬಾರಿಗೆ ಹೇರಿದರೆ ನೀವು ಅಲ್ಲಿ ಕುಳಿತಾಗ ಆ ಭಾರವನ್ನು ಹೊರುವ ಶಕ್ತಿಯಿದೆಯೇ? ಎಂಬುದರ ಬಗ್ಗೆ ಮಾತನಾಡಿ. ಹೊರದೇಶದವರು ಅವರು ಏನೋ ಮಾಡುತ್ತಾರೆ, ಅವರಿಗೆ ಏಕೆ ಹೋಲಿಸುತ್ತೀರಿ? ಅವರಿಗೆ ದೇಶ ಮುಖ್ಯ, ಅವರಲ್ಲಿ ಪ್ರಾಮಾಣಿಕತೆಯಿದೆ, ನೆಮ್ಮದಿಯಿರಬೇಕೆಂದು ಅವರು ಕೆಲಸ ಮಾಡುತ್ತಾರೆ. ಆದರೆ, ಇಲ್ಲಿ ನಾವು- ನೀವು ಬೇರೆ ತರಹ ತಾನೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗ ಪ್ಯೂರ್ ಕ್ಯಾಪಿಟಲಿಸಂ ಇಲ್ಲ, ಪ್ಯೂರ್ ಕಮ್ಯುನಲಿಸಂ ಇಲ್ಲ, ಎಲ್ಲಾ ಕಲಬೆರಕೆಯಾಗ್ಗಿದೆ. ಕೆ.ಇ.ಬಿ. ಸಹ ಕಲಬೆರಕೆಯಾಗಿದೆಯೆಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಕೆ.ಇ.ಬಿ. ಕಲಬೆರಕೆಯಾಗಿರಬಹುದು, ಅದರ ಬಗ್ಗೆಯಾದರೂ ಅವರಿಗೆ ಗೊತ್ತಿದೆಯಲ್ಲ.

★**ಶ್ರೀ ಜೆ.ಹೆಚ್.ಪಟೇಲ್:-** ನಾನು ಏಕೆ ಹೇಳಿದೆನೆಂದರೆ, ಪವರ್ ಕಾರ್ಪೋರೇಷನ್ ಬಗ್ಗೆ ಹೇಳಿದರಲ್ಲ, ಕರ್ನಾಟಕ ಪವರ್ ಕಾರ್ಪೋರೇಷನ್‌ನಿಂದ ನಮಗೆ ಅಗತ್ಯವಾಗಿರುವಷ್ಟು ವಿದ್ಯುತ್ ಉತ್ಪಾದನೆಯನ್ನು ಪೂರ್ತಿಗೊಳಿಸುವಂಥ ವ್ಯವಧಾನವಿದ್ದಿದ್ದರೆ, ಅವಕಾಶವಿದ್ದಿದ್ದರೆ, ಕಾಲ ಇದ್ದಿದ್ದರೆ, ಬಂಡವಾಳವಿದ್ದಿದ್ದರೆ, I would have certainly agreed with you ಆ ವ್ಯವಧಾನ ಈಗ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಿಮಗೆ ಹಣದ ತೊಂದರೆ ಇದ್ದರೆ ಹೇಳಿ, ನಾಳೆಯೇ ಕೃಷ್ಣ ಭಾಗ್ಯ ಜಲನಿಗಮದಿಂದ ಬಾಂಡ್‌ಗಳ ಮೂಲಕ ಜನರಿಂದ ಐದು ಸಾವಿರ ಕೋಟಿ ರೂಪಾಯಿಗಳನ್ನು ಕೊಡಿಸುತ್ತೇವೆ.

★**ಶ್ರೀ ಜೆ.ಹೆಚ್.ಪಟೇಲ್:-** ಬಂಡವಾಳ ಒಂದೇ ಅಲ್ಲ. ಕೆಲವು ಸಾರಿ ಬಂಡವಾಳವಿದ್ದರೆ ಮಾಡುವ ಕೆಲಸಗಳೂ ಇರುತ್ತವೆ, ಬಂಡವಾಳವಿದ್ದರೂ ಮಾಡುವುದಕ್ಕೆ ಆಗದಿರುವಂಥ ಕೆಲಸಗಳೂ ಇರುತ್ತವೆ. ಕೆಲವು ಸಾರಿ ತಾಂತ್ರಿಕ ಸವಲತ್ತುಗಳು ಬೇಕಾಗುತ್ತದೆ. ಅದೇನೇ ಇರಲಿ, ಪವರ್

ಕಾರ್ಪೋರೇಶನ್‌ನಿಂದ ಮಾಡುವ ಹಾಗಿದ್ದರೆ ಮಾಡಿಸಬಹುದಿತ್ತು. ಪವರ್ ಕಾರ್ಪೋರೇಶನ್ ಒಂದೇ ಅಲ್ಲ, ಬೇರೆ ಕಡೆಯಿಂದ ತಂದ ಬಂಡವಾಳವನ್ನೂ ಹಾಕಿ ಆ ಸಂಸ್ಥೆಗಳನ್ನು ನಾವು ಇವೊತ್ತು ವಿದ್ಯುತ್ ಉತ್ಪಾದನಾ ಕಾರ್ಯದಲ್ಲಿ ತೊಡಗಿಸಿದ್ದೇವೆ. ಪ್ರಸ್ತುತ ರೈತರ ಬಳಿಯಿರುವ ಪ್ರತಿ ಹೆಚ್.ಪಿ. ಪಂಪ್‌ಸೆಟ್‌ಗೆ ಮುನ್ನೂರು ರೂಪಾಯಿಗಳನ್ನು ವಿಧಿಸಿದ್ದೇವೆ. 'ಇಲ್ಲಿಯವರೆವಿಗೂ ಎಲ್ಲರಿಗೂ ವಿದ್ಯುತ್ ಸೌಲಭ್ಯವನ್ನು ಪುಕ್ಕಟೆಯಾಗಿ ಕೊಟ್ಟಿದ್ದರು, ನೀವ್ಯಾಕೆ ಮುನ್ನೂರು ರೂಪಾಯಿಗಳನ್ನು ವಿಧಿಸಿದ್ದೀರಿ ಎಂದು ಕಾರಣವನ್ನೂ ಸಹ ಅವರು ಕೇಳುತ್ತಾರೆ. ಅವರು ಈ ರೀತಿ ಕೇಳಿದರೆ, ಮಧುಮೇಹ ಕಾಯಿಲೆಯಿರುವವನಿಗೆ ಪೆಪ್ಪರ್‌ಮೆಂಟ್ ಕೊಟ್ಟರೆ ಆ ಪದಾರ್ಥ ಆತನಿಗೆ ರುಚಿಯಾಗಬಹುದು, ಆದರೆ, ಅದು ಆತನಲ್ಲಿರುವ ಕಾಯಿಲೆಯನ್ನು ಹೆಚ್ಚಿಸುತ್ತದೆ. ಕಹಿಯಾಗಿರುವ ಹಾಗಲಕಾಯಿ ಕೊಟ್ಟರೆ ಆತನಿಗೆ ಅದು ವಿಷವಾಗಬಹುದು, ಆದರೆ, ಆತನ ಕಾಯಿಲೆಯನ್ನು ಗುಣಪಡಿಸುತ್ತದೆ. ಹಾಗೆಯೇ ಇವೊತ್ತು ನಾವು ಎಲ್ಲಾ ರೈತರಿಗೂ ಹೇಳಬೇಕು. ಪ್ರತಿ ಹೆಚ್.ಪಿ. ಪಂಪ್‌ಸೆಟ್ಟಿಗೆ ಮುನ್ನೂರು ರೂಪಾಯಿಗಳನ್ನು ಕೊಟ್ಟರೆ ಮೂರು ವರ್ಷಗಳ ನಂತರ ಬರೀ ಇದೇ ಬಂಡವಾಳವೆಂದಲ್ಲ, ಅದರ ಆಧಾರದ ಮೇಲೆ ಬರುವ ವರ್ಕ್‌ಲೋಡ್ ಏನಿದೆ, ಅದು ಬಂದರೆ ನಿನ್ನ ಮಗ, ಮೊಮ್ಮಗ ತೋಟಕ್ಕೆ ಪಂಪ್‌ಸೆಟ್ ಅಳವಡಿಸಿದಲ್ಲಿ ಮೋಟಾರ್ ಸುಡುವುದಿಲ್ಲ, ಬದಲಾಗಿ ಆತ ತೋಟವನ್ನು ಚೆನ್ನಾಗಿ ಮಾಡಬಲ್ಲ. ಹಿಂದಿನ ಮೂರು ತಲೆಮಾರಿಗೆ ನಾವು ಉದಾರತೆ ತೋರಿಸುವುದಕ್ಕೆ ಹೋಗಿ, ಎಲ್ಲವನ್ನೂ ಪುಗಸಟ್ಟೆ ಕೊಡುತ್ತೇವೆಂದು ಹೇಳಿ ಇವೊತ್ತು ಕಣ್ಣೀರು ಹಾಕುವಂಥ ಸ್ಥಿತಿಗೆ ಬಂದಿದ್ದೇವೆ. ನನ್ನದೂ ನಾಲ್ಕು ಪಂಪ್‌ಸೆಟ್ಟುಗಳಿವೆ, ನಾನೇನು ಬುದ್ಧಿವಂತಿಕೆ ಪ್ರದರ್ಶಿಸುತ್ತೇನೆ? ಹತ್ತು ಹೆಚ್.ಪಿ.ಗಿಂತ ಜಾಸ್ತಿಯಾದರೆ ಮೀಟರ್ ಅಳವಡಿಸುತ್ತೇವೆ, ನಲವತ್ತು ಹೆಚ್.ಪಿ. ಪಂಪ್‌ಸೆಟ್ ಇದ್ದರೂ ಮೀಟರ್ ಹಾಕುತ್ತೇವೆ. This is how we are doing. We do our level best to.... I can't say cheating the Governnment. We want to save ourselves something or the other.

ವರಮಾನ ತೆರಿಗೆ ಕದಿಯುವವರು, ವಿದ್ಯುತ್ ಕದಿಯುವವರು, ಎಲ್ಲರೂ ಇದ್ದಾರೆ. ಇದರಲ್ಲಿ ಯಾವುದು ಹಿತವೆಂದು ನಾವು ನೋಡಿಕೊಂಡು... ಈ ರೀತಿ ಹೇಳಿದಾಗ ತಕ್ಷಣಕ್ಕೆ ಇವರಿಗೆ ಸ್ವಲ್ಪ ಸಿಟ್ಟು ಬರಬಹುದು. ಪಂಪ್‌ಸೆಟ್ಟುಗಳಿವೆ ಮೀಟರ್ ಅಳವಡಿಸಿ ಎಂದು ಈಗತಾನೇ ಹೇಳಿದಿರಿ, ಅದನ್ನು ನಾನು ಒಪ್ಪುತ್ತೇನೆ. ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಸಹ ಹೇಳಿದರು. ಇವೊತ್ತು ರಾಜ್ಯಾದ್ಯಂತವಿರುವ ಹತ್ತು ಲಕ್ಷ ಪಂಪ್‌ಸೆಟ್ಟುಗಳಿಗೆ ಮೀಟರ್‌ಗಳನ್ನು ಅಳವಡಿಸುವುದಾದರೆ ಸುಮಾರು 70-80 ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಆದರೂ ಚಿಂತೆ ಇಲ್ಲ, ಒದಗಿಸೋಣ. ಆದರೆ, ಪಂಪುಸೆಟ್ಟುಗಳಿಗೆ ಮೀಟರ್ ಅಳವಡಿಸಿಸಬೇಡಿ ಎಂದು ವಾದಿಸುವವರೂ ಇದ್ದಾರೆ. ಏಕೆಂದರೆ, ಕೆಲವು ಕಡೆಗಳಲ್ಲಿ 50-60 ಹೆಚ್.ಪಿ. ಸಾಮರ್ಥ್ಯದ ಪಂಪುಸೆಟ್ಟುಗಳನ್ನು ಇಟ್ಟುಕೊಂಡು ಬೇರೆಯವರಿಗೆ ನೀರಿನ ಸೌಲಭ್ಯ ಕೊಡುವವರಿದ್ದಾರೆ. ಈಗ ಪ್ರತಿ ಹೆಚ್.ಪಿ. ಪಂಪ್‌ಸೆಟ್ಟಿಗೂ ಫ್ಲಾಟ್‌ರೇಟ್ ವಿಧಿಸಿದರೂ ಮೀಟರ್ ಅಳವಡಿಸಬೇಡಿ, ಮೀಟರ್ ಅಳವಡಿಸಿದರೆ ತಿಂಗಳಿಗೆ 5,000-6,000 ರೂಪಾಯಿಗಳಷ್ಟು ಬಿಲ್ ಆಗುತ್ತದೆಂದು ಅವರು ಹೇಳುತ್ತಾರೆ. ನಾನು ಹೇಳಿದ್ದುದು ಅದಕ್ಕಲ್ಲ. ಇವೊತ್ತು ರೈತರಿಗೆ ಬೇಕಾದರೆ 15 ಪೈಸೆ, 20 ಪೈಸೆ, 50 ಪೈಸೆಯಷ್ಟು ವಿದ್ಯುತ್ ದರ ವಿಧಿಸೋಣ. ಆದರೆ,

ಪಂಪುಸೆಟ್ಟುಗಳಿವೆ ಮೀಟರ್‌ಗಳನ್ನು ಅಳವಡಿಸಬೇಕು. ಮೀಟರ್‌ಗಳನ್ನು ಅಳವಡಿಸಿದಲ್ಲಿ ಎಷ್ಟು ವಿದ್ಯುತ್ ಎಲ್ಲಿ ಹೋಗುತ್ತದೆಂದು ವೈಜ್ಞಾನಿಕವಾಗಿ ಗೊತ್ತಾಗುತ್ತದೆ. ಅಲ್ಲದೆ, ಅಕೌಂಟಬಿಲಿಟಿಯೂ ಇರುತ್ತದೆ. ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಾ, ಕೆ.ಪಿ.ಸಿ.ಗೆ ಎಷ್ಟುಲಾಭ ಬರುತ್ತದೆ? ಕೆ.ಇ.ಬಿ.ಗೆ ಇಷ್ಟು ಪ್ರಮಾಣದಲ್ಲಿ ಲುಕ್ಸಾನು ಹೇಗಾಯಿತು? ಅದಕ್ಕೂ ಇದಕ್ಕೂ ಎಲ್ಲಿಯ ತಾರತಮ್ಯ? ಎಂದು ಕೇಳಿದರು. ಉದಾಹರಣೆಗೆ, ಯಾವುದಾದರೂ ಪದಾರ್ಥವನ್ನು ಕೆ.ಜಿ.ಯೊಂದಕ್ಕೆ ಹದಿನಾಲ್ಕು ರೂಪಾಯಿಗಳನ್ನು ತೆತ್ತು ಕೊಂಡುಕೊಂಡು ಅದನ್ನು ಪುನ: ಹನ್ನೆರಡು ರೂಪಾಯಿಗಳಿಗೆ ಮಾರಿದರೆ ಲಾಭ ಬರುತ್ತದೆಯೇ? ಹಿಂದೆ ಯಾವುದೋ ಒಂದು ಕಾಲದಲ್ಲಿ ನಾವು ಆರು ಪೈಸೆಗೆ ವಿದ್ಯುತ್ ಅನ್ನು ಮಾರಾಟ ಮಾಡಿದ್ದೇವೆ. ಆಗ ಉತ್ಪಾದನಾ ವೆಚ್ಚ ಕೇವಲ ಎರಡು ಪೈಸೆಗಳಷ್ಟಿತ್ತು. ಮಹಾತ್ಮಗಾಂಧಿ ಹೈಡೆಲ್ ಪವರ್ ಪ್ರಾಜೆಕ್ಟ್‌ನಲ್ಲಿ ಎರಡು ಪೈಸೆಗಳಷ್ಟು ಕಾಸ್ಟ್ ಆಫ್ ಪ್ರೊಡಕ್ಷನ್ ಇತ್ತು. ಹೈಡೆಲ್ ಪವರ್ ಪ್ರಾಜೆಕ್ಟ್‌ನ ಕಾಸ್ಟ್ ಆಫ್ ಪ್ರೊಡಕ್ಷನ್ 70 % ಇತ್ತೆಂದು ಅವರು ಹೇಳಿದರು. ಅಲ್ಲ, It has come down to 40% of total generation now. ಏಕೆಂದರೆ ನೀರು ಬರಲೇ ಇಲ್ಲ. ಸುಮಾರು ಎರಡು ವರ್ಷಗಳ ಕಾಲ ಜಲಾಶಯ ತುಂಬಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಜನವರಿ ಫೆಬ್ರವರಿ ಈ ಎರಡು ತಿಂಗಳು ಬಿಟ್ಟರೆ ಉಳಿದ ಎಲ್ಲಾ ತಿಂಗಳುಗಳಲ್ಲೂ ಜಲಾಶಯ ತುಂಬಿರುವ ಬಗ್ಗೆ ಪ್ರತಿ ತಿಂಗಳಿನ, ಪ್ರತಿ ವಾರದ ಅಂಕಿ-ಅಂಶಗಳನ್ನು ತಮಗೆ ಕೊಡುತ್ತೇವೆ. ತಾವು ಮುಖ್ಯಮಂತ್ರಿಗಳಾಗಿದ್ದು, ವಿದ್ಯುತ್ ಖಾತೆಯನ್ನು ನೋಡಿಕೊಳ್ಳುತ್ತಿದ್ದು, ಈ ರೀತಿ ಹೇಳಿದರೆ ಹೇಗೆ ? ಏಕೆಂದರೆ, ತಾವು ಹೇಳುತ್ತಿರುವುದು ದಾಖಲೆಗೆ ಹೋಗುತ್ತದೆ.

ಶ್ರೀ ಜೆ.ಹೆಚ್.ಪಟೇಲ್:- ಶೇಕಡವಾರು ಇದೆ, ಆದರೆ ಅದನ್ನು ಡಿಸ್‌ಪ್ಯೂಟ್ ಮಾಡುವುದು ಏಕೆ ? Percentage has come down from 62% to 43% ಶೇಕಡ 43 ಕ್ಕೆ ಬಂದಿದೆ. ಇವೊತ್ತು ಹೈಡೆಲ್ ಪವರ್ ಕಾಸ್ಟ್ ಕಡಿಮೆಯಾಗಿದೆ ನಿಜ. ರಾಯಚೂರು ಥರ್ಮಲ್ ವಿದ್ಯುತ್ ಕಾರ್ಯಾಗಾರದಲ್ಲಿ ಆರು ಘಟಕಗಳನ್ನು ಕೈಗೆತ್ತಿಕೊಂಡಿದ್ದು, ಈಗಾಗಲೇ ನಾಲ್ಕು, ಘಟಕಗಳನ್ನು ಸ್ಥಾಪಿಸಲಾಗಿದೆ. ಮೊದಲನೇ ಘಟಕ. ಪ್ರಾರಂಭಿಸುವಾಗ ಕಾಸ್ಟ್ ಆಫ್ ಪ್ರೊಡಕ್ಷನ್ ಇದ್ದುದು ಎಪ್ಪತ್ತು, ಪೈಸೆ ಎರಡನೇ ಘಟಕ ಪ್ರಾರಂಭಿಸಿದಾಗ ಐವತ್ತು ಪೈಸೆಗೆ ಜಾಸ್ತಿಯಾಯಿತು. ಮೂರನೇ ಘಟಕ ಪ್ರಾರಂಭಿಸಿದಾಗ ಇನ್ನೂ ಐವತ್ತು ಪೈಸೆ ಜಾಸ್ತಿಯಾಗಿ 170 ಪೈಸೆಯಾಯಿತು. ನಾಲ್ಕನೇ ಘಟಕ ಪ್ರಾರಂಭಿಸಿದಾಗ ರೂ. 2.60 ಪೈಸೆಯಷ್ಟು ಕಾಸ್ಟ್ ಆಫ್ ಪ್ರೊಡಕ್ಷನ್ ಆಯಿತು.

ಶ್ರೀ ಬಿ.ಎಸ್ ಯಡಿಯೂರಪ್ಪ:- (5-00 ಪಿ . ಎಂ.) ರಾಯಚೂರು 4 ನೇ ಯೂನಿಟ್ ಕಾಸ್ಟ್ ಆಫ್ ಜನರೇಟಿಂಗ್ 2.60 ರೂ. ಅಲ್ಲ, ಅದು 2.30 ರೂ. ಇರಬೇಕು.

ಶ್ರೀ ಜೆ.ಹೆಚ್.ಪಟೇಲ್:- ಹೌದು, ಅದು 2.30 ರೂ. ತಾವು ಹೇಳುವುದು ಸರಿ. ಅಧಿಕಾರಿಗಳು ಬರೆದುಕೊಟ್ಟಿರುವುದರಲ್ಲಿ ಸಂಖ್ಯೆಗಳು ಸ್ವಲ್ಪ ಸ್ಪಷ್ಟವಾಗಿ ಗೊತ್ತಾಗಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅಧಿಕಾರಿಗಳು ಏನು ಏನೋ ಬರೆದು ಕೊಟ್ಟು ಬಿಡುತ್ತಾರೆ. ನೀವು ಅದು ಸರಿಯಾಗಿದೆಯೇ ? ಎಂದು ನೋಡಿಕೊಳ್ಳಬೇಕು. ನೀವು ಅಧಿಕಾರಿಗಳು ಬರೆದು ಕೊಟ್ಟಿರುವುದನ್ನೆಲ್ಲಾ ಹಾಗೆಯೇ ಓದಿ ಬಿಟ್ಟರೆ ಹೇಗೆ ?

ಶ್ರೀ ಜೆ.ಹೆಚ್.ಪಟೇಲ್:- ನಾನು ಅಧಿಕಾರಿಗಳನ್ನು ನಂಬುತ್ತೇನೆ. ನೀವು ಹಾಗೆ

ನಂಬುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ನಿಮ್ಮನ್ನು ನಂಬುತ್ತೇನೆ.

ಶ್ರೀ ಜೆ.ಹೆಚ್.ಪಟೇಲ್:- ಹೋಗಲಿ, ಆ ವಿಚಾರ ಬಿಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಿಮ್ಮನ್ನು ಉಳಿಸುವುದಕ್ಕೆ ಅಧಿಕಾರಿಗಳು ಬರೀ ತಪ್ಪು ತಪ್ಪು ಬರೆದು ಕೊಡುತ್ತಾರೆ. ಅಧಿಕಾರಿಗಳು ಪೇಪರ್‌ನಲ್ಲಿ ಬರೆದು ಕೊಟ್ಟಿರುದ್ದನ್ನೇ ಓದಿ ಬಿಟ್ಟರೆ ಕಷ್ಟವಾಗುತ್ತದೆ.

ಶ್ರೀ ಜೆ.ಹೆಚ್.ಪಟೇಲ್:- ದಯವಿಟ್ಟು ನಾನು ಹೇಳುವುದನ್ನು ಕೇಳಿ. 235 Paise is the cost of generarion IV Unit of Raichur Thermal Station`

ಮಾನ್ಯ ಅಧ್ಯಕ್ಷರೇ, ನಾನು ಇದನ್ನು 200 ಪೈಸೆಗೆ ಮಾರುವುದೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅದಕ್ಕೆ ನಾವು ಹೇಳಿದ್ದುದು, ಅಲ್ಯೂಮಿನಿಯಂ ಫ್ಯಾಕ್ಟರಿಗೆ 235 ಪೈಸೆಗೆ ಕೊಡುತ್ತೇವೆ ಎಂದು ಅವರ ಜೊತೆಗೆ ಅಗ್ರಿಮೆಂಟ್ ಆಗಿ 40 ವರ್ಷ ಆಯಿತು. ಅದಕ್ಕೆ ಅವರಿಂದ ಹೆಚ್ಚು ತೆಗೆದುಕೊಳ್ಳಿ.

ಶ್ರೀ ಜೆ.ಹೆಚ್.ಪಟೇಲ್:- ಆ ಅಗ್ರಿಮೆಂಟ್ ಕ್ಯಾನ್ಸಲ್ ಆಗಿದ್ದು ನಿಮಗೆ ಆಗೊತ್ತಾಗಿಲ್ಲವೇ? ನಿಮ್ಮ ಸರ್ಕಾರ ಇದ್ದಾಗಲೇ ಅದು ಕ್ಯಾನ್ಸಲ್ ಆಗಿದೆ. ನಿಮ್ಮ ಸರ್ಕಾರ ಇದ್ದಾಗ ಕ್ಯಾನ್ಸಲ್ ಆಗಿದ್ದೂ ನಿಮಗೆ ಗೊತ್ತಾಗಲಿಲ್ಲವೇ ? ಸೋವಿ ಕೊಡುವುದು ಎಲ್ಲಾ ಕ್ಯಾನ್ಸಲ್ ಆಗಿದೆ. ನೀವೆಲ್ಲಾ ಫಾರ್ಮರ್ಸ್‌ಗೆ ಹೆಲ್ಪ್ ಮಾಡಬೇಕೆಂದು ತಾನೇ ಹೇಳುವುದು, ಅದನ್ನು ನಾನು ಒಪ್ಪುತ್ತೇನೆ. ರೈತರಿಗೆ ಹೇಗೆ ಹೆಲ್ಪ್ ಮಾಡುವುದು ? ನೀವೆಲ್ಲರೂ ರೈತರಿಗೆ ನಮ್ಮದೇ ಪವರ್ ಜನರೇಟಿಂಗ್ ಸ್ಟೇಷನ್‌ನಲ್ಲಿ ವಿದ್ಯುತ್ ಉತ್ಪಾದನಾ ವೆಚ್ಚ ರೂ.2.60 ಪೈಸೆ ಆಗುತ್ತದೆ ಎಂದು ಹೇಳಬೇಕು. ಅದನ್ನು ಬೇಕಾದರೆ ನಾವು 100 ಪೈಸೆ ಕಡಿಮೆಗೆ ಮಾರೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಒಂದು ನಿಮಿಷ. ತಾವು ಮತ್ತೆ ಅಂಕಿ ಅಂಶ ತಪ್ಪು ಹೇಳುತ್ತಿದ್ದೀರಿ. ದಯವಿಟ್ಟು ಅದನ್ನು ಸರಿಪಡಿಸಿಕೊಳ್ಳಿ. ತಾವು ಹೇಳುತ್ತಿರುವುದು ರೆಕಾರ್ಡ್‌ಗೆ ಹೋಗುತ್ತಿದೆ. ತಾವು ಏನು ಹೇಳುತ್ತಿದ್ದೀರಿ ಅಂದರೆ, ರಾಯಚೂರು ಫಸ್ಟ್ ಸ್ಟೇಜ್‌ನಲ್ಲಿ ಉತ್ಪಾದನಾ ವೆಚ್ಚ 70 ಪೈಸೆ ಅಂತೀರಿ, ಸೆಕೆಂಡ್ ಸ್ಟೇಜ್ 120 ಪೈಸೆ, ಥರ್ಡ್ ಸ್ಟೇಜ್ 170 ಪೈಸೆ, ಫೋರ್ತ್ ಸ್ಟೇಜ್ 260 ಪೈಸೆ . . . . .

ಶ್ರೀ ಜೆ.ಹೆಚ್.ಪಟೇಲ್:- ಇಲ್ಲ, ಫೋರ್ತ್ ಸ್ಟೇಜ್‌ದು 230 ಪೈಸೆ ಆಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:.- ಇದೆಲ್ಲದರ ಅವರೇಜ್ ಕೇವಲ 1.50 ರೂ. ಬರುತ್ತದೆ.

ಶ್ರೀ ಜೆ.ಹೆಚ್.ಪಟೇಲ್:- ಅದು ನನಗೆ ಗೊತ್ತಿಲ್ಲವೇ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ಜಾಸ್ತಿ ಹೇಳುತ್ತಿದ್ದೀರಿ.

ಶ್ರೀ ಜೆ.ಹೆಚ್.ಪಟೇಲ್:- 1960 ನೇ ಇಸವಿಯಲ್ಲಿ 2 ಪೈಸೆ ಆಗುತ್ತಿತ್ತು, 1996 ಕ್ಕೆ ನಾವು ಅವರೇಜ್ ಮಾಡುವುದಕ್ಕಾಗುತ್ತದೆಯೇ ?

ಶ್ರೀ ಬಿ.ಎಸ್.ಯಡಿಯೂರಪ್ಪ:- ರಾಯಚೂರಿನ ನಾಲ್ಕು ಘಟಕಗಳಿಂದ ಅವರೇಜ್ 150 ಪೈಸೆ ಬರುತ್ತದೆ.

Sri .J.H.Patel: Per Unit 230 paise and hereafter no additional generation will be cheaper. That is my point. . .
ಈಗ 7,000 ಮೆಗಾವ್ಯಾಟ್ ಅಡಿಷನಲ್ ಪವರ್ ಜನರೇಟ್ ಮಾಡುತ್ತೇವೆನ್ನುತ್ತೇವಲ್ಲ, ಅದನ್ನು ನಾವು ಮಾರಾಟ ಮಾಡುವಾಗ. . ., ಫಾರ್ಮರ್ಸ್‌ಗೆ ಪುಕ್ಕಟೆಯಾಗಿ ವಿದ್ಯುಚ್ಛಕ್ತಿ ಎಲ್ಲೂ ಕೊಟ್ಟಿಲ್ಲ. ಇದು ಬಹಳ ಮಿಸ್‌ಲೀಡಿಂಗ್. ತಮಿಳುನಾಡಿನಲ್ಲಿ ಒಬ್ಬ ರೈತ ಪ್ರತಿ ಪಂಪ್‌ಸೆಟ್‌ಗೆ 25,000 ರೂ ಡಿಪಾಸಿಟ್ ಮಾಡಿದರೆ ಮಾತ್ರ ಅವನಿಗೆ ಕನೆಕ್ಷನ್ ಕೊಟ್ಟಿದ್ದಾರೆ. ನಮ್ಮಲ್ಲಿ ಈಗ ಇರುವ 10 ಲಕ್ಷ ಪಂಪ್‌ಸೆಟ್‌ಗಳಿಗೆ ಪ್ರತಿಯೊಂದಕ್ಕೆ 25 ಸಾವಿರ ರೂ.ಗಳನ್ನು ಡಿಪಾಸಿಟ್ ಮಾಡಬೇಕು ಎಂದು ಆದೇಶ ಹೊರಡಿಸಿದರೆ, ಅದರಿಂದ ನಮಗೆ ಎರಡೂವರೆ ಸಾವಿರ ಕೋಟಿ ರೂಪಾಯಿಗಳು ಬರುತ್ತವೆ. ನಾವು ಅದನ್ನು ಕೇಳುತ್ತಿಲ್ಲ. ಕೆಲವು ಸರ್ಕಾರಗಳು ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಪುಕ್ಕಟೆಯಾಗಿ ಕೊಡುವ ವಿದ್ಯುತ್‌ನ ಹಣವನ್ನು ತುಂಬಿ ಕೊಡುತ್ತವೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನನಗೆ ಏನು ಭಯ ಅಂದರೆ, ಅವರೆಲ್ಲಾ ಕೇಂದ್ರದಲ್ಲಿ ನಮಗೆ ಬೆಂಬಲ ಕೊಡುತ್ತಾರೆ, ನೀವು ಈ ರೀತಿ ಅಂಕಿ ಅಂಶ ಹೆಚ್ಚು ಕಡಿಮೆ ಹೇಳಿ ಬಿಟ್ಟರೆ ಅವರು ಅಲ್ಲಿ ಬೆನ್ನು ಹತ್ತುತ್ತಾರೆ. ನೀವು ದಯವಿಟ್ಟು ಅಂಕಿ ಅಂಶ ವೆರಿಫೈ ಮಾಡಿ. ಅವು ಖಂಡಿತಾ ಸರಿಯಲ್ಲ. ನಿಮ್ಮ ಬಾಯಿಂದ ಮಾಹಿತಿ ಬಂದರೆ ಅದು ಕರೆಕ್ಟಾಗಿ ಬರಬೇಕು.

ಶ್ರೀ ಜೆ.ಹೆಚ್.ಪಟೇಲ್:- ಅಂಕಿ ಅಂಶ ವೆರಿಫೈ ಮಾಡುವ ಅಗತ್ಯ ಇಲ್ಲ. ನಾನು ಯಾವುದೇ ಅಂಕಿ ಅಂಶ ಹೇಳುವಾಗ ಬಹಳ ಕೇರ್‌ಫುಲ್ಲಾಗಿ ಇರುತ್ತೇನೆ. ಅಧಿಕಾರಿಗಳು ಸುಮ್ಮನೆ ಬರೆದು ಕೊಟ್ಟು ಬಿಟ್ಟರು ಎಂದು ನಾನು ಹೇಳುವುದಿಲ್ಲ. ನನ್ನ ಬಾಯಿಂದ ತಪ್ಪು ಹೇಳಿಸುವ ಸಲುವಾಗಿ ತಪ್ಪು ಮಾಹಿತಿ ಬರೆದು ಕೊಡಲು ನಿಮ್ಮ ಪಾರ್ಟಿಯವರು ಯಾರೂ ಅಲ್ಲಿ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ:- ನನಗೆ ಗೊತ್ತಿರುವಂತೆ ತಮಿಳುನಾಡಿನಲ್ಲಿ ಹೊಸ ಪಂಪ್‌ಸೆಟ್ ಕನೆಕ್ಷನ್ ಅನ್ನು ಸೀನಿಯಾರಿಟಿ ಬಿಟ್ಟು ಕೊಡುವುದಾದರೆ ಮಾತ್ರ 25 ಸಾವಿರ ರೂ. ಯೂನಿಟ್‌ಕಾಸ್ಟ್‌ಗೆ ಕಟ್ಟಿದರೆ ಕನೆಕ್ಷನ್ ಕೊಡುತ್ತಾರೆ. ಬೇರೆಯದಕ್ಕೆ ಆ ರೀತಿ ಇಲ್ಲ. ಆ ರೀತಿ ನಮ್ಮ ರಾಜ್ಯದಲ್ಲೂ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಮ್ಮ ಅಧಿಕಾರಿಗಳು ಹಾಗೇ ಕುಳಿತರೆ ಆಗುವುದಿಲ್ಲ. ಅಂಕಿ ಅಂಶಗಳನ್ನು ಇಲ್ಲಿ ಹೇಳಿದಾಗ ಅದು ಪತ್ರಿಕೆಗಳಲ್ಲಿ ಬರುತ್ತದೆ, ಮಿಸ್‌ಗೈಡ್ ಆಗುತ್ತದೆ.

ಶ್ರೀ ಜೆ.ಹೆಚ್.ಪಟೇಲ್:- ಹಾಗೆ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ಬರೀ ರೈತರು, ರೈತರು ಎಂದು ಅವರ ಬಗ್ಗೆಯೇ ಹೇಳುತ್ತಿದ್ದೀರಿ. ಇಂಡಸ್ಟ್ರಿಯಲ್ಲಿ ವಿದ್ಯುತ್ ಕಳ್ಳತನ, ಲೂಟಿ ಇದರ ಬಗ್ಗೆ ಹೆಚ್ಚು ಮಾತನಾಡಿ. ರೈತರು ವಿಷಯ ಆ ಮೇಲೆ ನೋಡಿಕೊಳ್ಳೋಣ.

ಶ್ರೀ ಜೆ.ಹೆಚ್. ಪಟೇಲ್:- ಈ ಕಂಪೇರಿಟಿವ್ ಪ್ರೆಸ್‌ಲಿಸ್ಟ್ ಅಥೆಂಟಿಕ್ ಆಗಿದೆ. ನೀವು ಕರ್ನಾಟಕ ರಾಜ್ಯದಲ್ಲಿರುವೆಷ್ಟು ಎ.ಇ.ಹೆಚ್. ವಿದ್ಯುತ್ ದರ ಪ್ರಪಂಚದ ಯಾವುದೇ ಕಡೆ ಇಲ್ಲ. ಇಷ್ಟು ಬೆಲೆ ಅಮೆರಿಕಾದಲ್ಲೂ ಇಲ್ಲ ಎಂದು ಹೇಳಿದಿರಿ. ಅಮೆರಿಕಾದಲ್ಲಿ ಎ.ಇ.ಹೆಚ್. ಸಿಸ್ಟಮ್ ಬಂದಿದ್ದುದು. ಅಲ್ಲಿ ಡೊಮೆಸ್ಟಿಕ್ ಲೈಟಿಂಗ್‌ನಲ್ಲೇ ಎ.ಇ.ಹೆಚ್. ಕೂಡ ಬರುತ್ತದೆ. ಈಗಲೂ ಸಹ ಡೊಮೆಸ್ಟಿಕ್ ನಮಗಿಂತ ಮಹಾರಾಷ್ಟ್ರದಲ್ಲಿ 10 ಪೈಸೆ ಜಾಸ್ತಿ ಇದೆ. ಎ.ಇ.ಹೆಚ್. ಬಗ್ಗೆ ಹೇಳುವುದಾದರೆ,

ಆಂಧ್ರಪ್ರದೇಶದಲ್ಲಿ ನಾನೂರ. . . . ನಾನು ಕೊನೆಯದು ಹೇಳುತ್ತೇನೆ. ಅಪ್ ಟು 300 ಯೂನಿಟ್ಸ್‌ದು ಮಾಹಿತಿ ಇಲ್ಲಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ಮಿಸ್‌ಗೈಡ್ ಮಾಡಬೇಡಿ. ನಿಮ್ಮ ಇಲಾಖೆಯವರು ಕೊಟ್ಟಿರುವ ಅಂಕಿ ಅಂಶಗಳು ನನ್ನ ಹತ್ತಿರ ಇವೆ. ಆಂಧ್ರಪ್ರದೇಶದಲ್ಲಿ 70 ಪೈಸೆ ಯಿಂದ 215 ಪೈಸೆವರೆಗೆ ಇದೆ.

ಶ್ರೀ ಜೆ.ಹೆಚ್.ಪಟೇಲ್:- ಅಪ್ ಟು 300 ಯೂನಿಟ್ಸ್ ಎಂದು ಇದೆಯಲ್ಲ, ಅದನ್ನು ತೆಗೆದುಕೊಳ್ಳೋಣ ಎಲ್ಲೂ 300 ಯೂನಿಟ್ಸ್‌ಗಿಂತ ಕಡಿಮೆ ಇರುವುದಿಲ್ಲ. ಸಾಮಾನ್ಯವಾಗಿ ಎಲ್ಲಾ ಎ.ಇ.ಹೆಚ್. ತೆಗೆದುಕೊಳ್ಳುವವರು . . . .

ಶ್ರೀ ಬಿ.ಎಸ್.ಯಡಿಯೂರಪ್ಪ:- ಹೌದು, ಅದು 215 ಪೈಸೆ ಆಗುತ್ತದೆ. ಮೊದಲನೆಯದ್ದು 70 ಪೈಸೆ, ಕೊನೆಯದು 215 ಪೈಸೆ.

ಶ್ರೀ ಜೆ.ಹೆಚ್.ಪಟೇಲ್:- ಅಲ್ಲ ಅದು 465 ಪೈಸೆ.

(ಗೊಂದಲ)

ಶ್ರೀ ಜೆ.ಹೆಚ್.ಪಟೇಲ್:- ಅಪ್ ಟು 300 ಯೂನಿಟ್ಸ್ ಆಂಧ್ರಪ್ರದೇಶದಲ್ಲಿ 465 ಪೈಸೆ, ತಮಿಳುನಾಡಿನಲ್ಲಿ 385 ಪೈಸೆ, ಮಹಾರಾಷ್ಟ್ರದಲ್ಲಿ 680 ಪೈಸೆ ಇದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ 530 ಪೈಸೆ ಇದೆ ಹೀಗಿರುವಾಗ ನೀವು ಕರ್ನಾಟಕದಲ್ಲಿ ಮಾತ್ರ ದರ ಹೆಚ್ಚು ಎಂದು ಹೇಗೆ ಹೇಳುತ್ತೀರಿ ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಈಗಲೂ ಇದೆ, ಆಂಧ್ರಪ್ರದೇಶ , ತಮಿಳುನಾಡು ಎಲ್ಲದಕ್ಕಿಂತ ಜಾಸ್ತಿ ಕರ್ನಾಟಕದಲ್ಲಿ ಇದೆ.

ಶ್ರೀ ಜೆ.ಹೆಚ್.ಪಟೇಲ್:- ತಮಿಳುನಾಡು ದರ ಲೀಸ್ಟ್, ಆಂಧ್ರಪ್ರದೇಶ ದರಕ್ಕೆ ನಾವು ಅಲ್‌ಮೋಸ್ಟ್ ಈಕ್ವಲ್, ಮಹಾರಾಷ್ಟ್ರ ದರ ನಮಗಿಂತ ಹೆಚ್ಚಾಗಿದೆ. ಹೆಚ್.ಟಿ. ಇಂಡಸ್ಟ್ರೀಸ್ ಬಗ್ಗೆ ಸ್ವಲ್ಪ ನೋಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಿಮ್ಮವರು ಇದಕ್ಕೆ ವಿರೋಧ ಮಾಡುತ್ತಾರೆ, ನಾನು ನೋಡಕ್ಕೆ ಹೋದರೆ. . . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಬೇರೆ ಕಡೆಗಳಲ್ಲಿ ಇರುವ ದರವನ್ನು ಹೋಲಿಸಿ ನೋಡಿದಾಗ ನಾನು ಇಲ್ಲಿ ವಿದ್ಯುತ್ ದರ ಎನ್‌ಹ್ಯಾನ್ಸ್ ಮಾಡಿದ್ದೇ ಸರಿ ಇದೆ ಎಂದು ನೀವು ಸಮರ್ಥಿಸಿಕೊಳ್ಳುತ್ತಿದ್ದೀರಿ. ಆದರೆ ಈಗ ಸಡನ್ನಾಗಿ ವಿದ್ಯುತ್ ದರವನ್ನು ಶೇಕಡ 25 ರಿಂದ 43 ಕ್ಕೆ ಏರಿಸಿದ್ದೀರಿ. ಅದರ ಬಗ್ಗೆ ಯೋಚನೆ ಮಾಡುತ್ತೇನೆ ಎನ್ನುವುದಿಲ್ಲ.

ಶ್ರೀ ಜೆ.ಹೆಚ್.ಪಟೇಲ್:- ಒಂದೇ ಗುಳಿಗೆ ಕೊಟ್ಟರೆ ಜ್ವರ ಹೋಗುತ್ತದೆ ಎನ್ನುವ ವಿಶ್ವಾಸ ಇಲ್ಲದಿರುವುದರಿಂದ, ಜಾಸ್ತಿ ಜ್ವರ ಇದ್ದುದ್ದರಿಂದ ಒಂದೇ ಸಾರಿಗೆ ಮೂರು ಗುಳಿಗೆಗಳನ್ನು ಈಗ ಅನಿವಾರ್ಯವಾಗಿ ಕೊಡಬೇಕಾಗಿದೆ.

★**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:-** ಡೋಸ್ ಜಾಸ್ತಿಯಾದರೂ ಕೂಡ ರೋಗಿ ಸತ್ತೇ ಹೋಗುತ್ತಾನೆ. ತಾವು ಹೇಳಿದ ರೀತಿಯಲ್ಲೇ ನಾವು ಒಬ್ಬ ಮನುಷ್ಯ ಎರಡು ದಿವಸ ಉಪವಾಸ ಇದ್ದಾನೆ ಎಂದು ಹೇಳಿ ಒಮ್ಮೆಗೆ ಎರಡು ಊಟವನ್ನು ಅವನಿಗೆ ಮಾಡಿಸಿದರೆ ಅದು ಅವನಿಗೆ ದಕ್ಕಲ್ಲ, ಡೈಜೆಸ್ಟ್

ಆಗುವುದಿಲ್ಲ.

★ಶ್ರೀ ಜೆ.ಹೆಚ್.ಪಟೇಲ್:- ನೀವು ಹೇಳುತ್ತಿದ್ದಾಗ ನಾನೇನಾದರೂ ಡಿಸ್ಟರ್ಬ್ ಮಾಡಿದೆನೇ. ಆದರೆ ಕರ್ನಾಟಕ ರಾಜ್ಯದಲ್ಲಿರುವ ದರ ಬೇರೆ ಯಾವ ರಾಜ್ಯದಲ್ಲೂ ಇಲ್ಲ. ಅಷ್ಟೊಂದು ಹೆಚ್ಚಾಗಿದೆ ಎಂದು ಹೇಳಿದಿರಿ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಒಂದು ಮಾತು ಹೇಳುತ್ತೇನೆ ಶೇಕಡ 60 ಭಾಗದಷ್ಟು ನಮ್ಮ ಆದಾಯ ಇರುವುದು ಹೆಚ್.ಟಿ. ಕನ್ಸ್ಯೂಮರ್ಸ್‌ನಿಂದ. ಶೇಕಡ 30 ಭಾಗ ನಾವು ಎಲೆಕ್ಟ್ರಿಸಿಟಿಯನ್ನು ಅವರಿಗೆ ಕೊಡುತ್ತಿದ್ದೇವೆ. ಅದನ್ನೇ ನಾನು ಹೇಳುವುದು. ಇದೊಂದು ವಿಷಮ ಸ್ಥಿತಿಗೆ ನಾವು ಬಂದಿದ್ದೇವೆ. ಇದಕ್ಕೆ ಕಾರಣರು ಯಾರು ಎಂದು ನಾನು ಹೇಳುವುದಿಲ್ಲ. ಅನಿವಾರ್ಯವಾಗಿ ಇಂತಹ ವಿಷಮ ಸ್ಥಿತಿಗೆ ನಾವು ಬಂದಿದ್ದೇವೆ. 30% consumers are and rest of it being accounted paying for 60% /- ಪವರ್ ಜನರೇಟ್ ಆಗದ ಹೊರತು ಈ ಸಮಸ್ಯೆ ಬಗೆಹರಿಯುವುದಿಲ್ಲ. ಬೇಸಿಕಲ್ ಜನರೇಷನ್ ಇಂಪ್ರೂವ್ ಮಾಡಬೇಕು. ಅದಕ್ಕೆ ಬೇರೆ ಪ್ರಾಜೆಕ್ಟ್ ಇದೆ. ಇರತಕ್ಕಂತಹ ಸಿಸ್ಟಮ್ ಇಂಪ್ರೂಮೆಂಟ್‌ನಲ್ಲಿ. . . ಮಾನ್ಯ ನಂಜೇಗೌಡರು ಸಿಸ್ಟಮ್ ಇಂಪ್ರೂವ್‌ಮೆಂಟ್ ಏನು ಮಾಡಿದ್ದೀರಿ ಎಂದು ಕೇಳಿದರು. ನಮ್ಮ ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೆ ಒಂದು ವರ್ಷಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ನಾನು ನಿಮಗೆ ಹೇಳುತ್ತೇನೆ. 1994-95 ನೇ ಸಾಲಿನಲ್ಲಿ 480 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, 1995-96 ನೇ ಸಾಲಿನಲ್ಲಿ 470 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದೇ ರೀತಿ 1994-95 ರಲ್ಲಿ ಹೆಚ್ಚುವರಿಯಾಗಿ 30 ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಿದ್ದು ಈ ಸಲ 60 ಉಪ ಕೇಂದ್ರಗಳನ್ನು ಇಂಪ್ರೂವ್ ಮಾಡಿದ್ದೇವೆ. ಹೊಸದಾಗಿ ಲೈನ್ ಎಳೆದಿರುವುದು, ಮತ್ತು ಹೊಸ ಉಪ ಕೇಂದ್ರಗಳನ್ನು ಇಂಪ್ರೂವ್ ಮಾಡಿರುವುದು this is how we have been able to expand the voltage.

ಬಹಳ ಚೆನ್ನಾಗಿ ನಿರ್ವಹಣೆ ಮಾಡಿದ್ದೇವೆಂದಲ್ಲ. ಇದ್ದುದರಲ್ಲಿ ವೋಲ್ಟೇಜ್ ಅನ್ನು ಇಷ್ಟು ಪ್ರಮಾಣದಲ್ಲಿ ನಿರ್ವಹಿಸುವುದಕ್ಕೆ ಸಾಧ್ಯವಾಗಿದೆ. ದೌರ್ಭಾಗ್ಯದಿಂದಲೋ ಏನೋ ಕಳೆದ ಸಲ ಜಲಾಶಯಗಳು ತುಂಬಲಿಲ್ಲ. ಆ ಕಾರಣ ಹೊರಗಡೆಯಿಂದ ವಿದ್ಯುತ್ ಅನ್ನು ಕೊಂಡುಕೊಂಡಿದ್ದೇವೆ. ಹೊರರಾಜ್ಯದಿಂದ ಸುಮಾರು 700 ರಿಂದ 800 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಕೊಂಡುಕೊಂಡಿದ್ದು, ಅದಕ್ಕೆ ಕೊಟ್ಟಿರುವ ಹಣವನ್ನಾದರೂ ನಾವು ಕಲೆಕ್ಟ್ ಮಾಡಿಕೊಳ್ಳಬೇಡವೇ ? ಹೊರಗಡೆಯಂದ ಖರೀದಿಸಿರುವ ವಿದ್ಯುತ್‌ನ ಪ್ರತಿ ಯೂನಿಟ್‌ಗೆ ರೂ. 2. 50 ಪೈಸೆಯಷ್ಟು ದುಬಾರಿ ಹಣ ತೆತ್ತಿದ್ದು, ಅದರ ಹಣವನ್ನು ಎನ್. ಟಿ. ಪಿ. ಸಿ. ಮತ್ತು ಕೆ. ಪಿ. ಸಿ. ಯವರಿಗೆ ಕೊಡಬೇಕು. ನಮಗೆ ಪವರ್ ಫೈನಾನ್ಸ್ ಕಾರ್ಪೊರೇಷನ್‌ನವರು ಹಣ ಕೊಡುವುದಿಲ್ಲ. ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಆಗಲೇ ಹೇಳಿದಂತೆ ನನಗೆ ವಾಷಿಂಗ್‌ಟನ್‌ನಿಂದ ಒಂದು ಪತ್ರ ಬಂದಿದ್ದು, ಸಾಲ ಒದಗಿಸುತ್ತಿದ್ದ ವಿಶ್ವಬ್ಯಾಂಕಿನವರು ಸಾಲವನ್ನು ಏಕೆ ವಿತ್ ಡ್ರಾ ಮಾಡಿದರೆಂದರೆ ಇವರೆಲ್ಲಾ ಸಬ್ಸಿಡೈಸ್ ಕೊಡುತ್ತಾರೆ, ಹಣವನ್ನು ಇನ್‌ವೆಸ್ಟ್ ಮಾಡಲು ಕೆ.ಇ.ಬಿ. ವಯಬಲ್ ಅಲ್ಲವೆಂದು ತೀರ್ಮಾನಿಸಿ ವಿಥ್‌ಡ್ರಾ ಮಾಡಿದರು. ನಂತರ ಸ್ಥಳೀಯವಾಗಿಯೂ ಅವಕಾಶ ಕೊಡದೆ, ಜನರೇಶನ್ ಅನ್ನು ಇಂಪ್ರೂವ್ ಮಾಡದೆ ನಾವು ಬರೀ ಜನಪ್ರಿಯತೆಗೋಸ್ಕರ ಎಲ್ಲವನ್ನೂ ಹೇಳುತ್ತಾ ಹೋಗಿ, ಸದನದಲ್ಲಿ

ಮಾತನಾಡುತ್ತಿದ್ದಾಗಲೇ ವಿದ್ಯುತ್ ಪೂರೈಕೆ ನಿಂತುಹೋಗುವ ಸ್ಥಿತಿಗೆ ಬಂದಿದೆ. ನಾನು ಆಗಲೇ ಅದಕ್ಕೋಸ್ಕರವೇ ಹೇಳಿದ್ದುದು. ಇದು ಪರಿಸ್ಥಿತಿ ಏನೆಂದು ತೋರಿಸುತ್ತದೆ. ಬೇಕಂತಲೇ ಯಾರೂ ಮಾಡುವುದಿಲ್ಲ. ಜನರಿಗೆ ತೊಂದರೆಯಾಗಲೆಂದು ಯಾರೂ ಕೂಡ ಲೈಟನ್ನು ಆಫ್ ಮಾಡುವುದಿಲ್ಲ. ರಾಮಗುಂಡಂನಿಂದ ಬರುವ ಪವರ್ ಲೈನ್ ಎಲ್ಲಿಯೋ ಒಂದು ಕಡೆ ಕಟ್ ಆದರೆ ಬೆಂಗಳೂರು ಇದ್ದಕ್ಕಿದ್ದಂತೆ ಅಂಧಕಾರದಲ್ಲಿ ಮುಳುಗುತ್ತದೆ. ಪವರ್ ಸಿಸ್ಟಮ್ ಈ ರೀತಿ ಇದೆ. ಪವರ್ ಎನ್ನುವುದು ಯಾರೋ ತೆಗೆದುಕೊಂಡು ಬಂದು ಮನೆಯಲ್ಲಿ ಸ್ಟಾಕ್ ಮಾಡಿಟ್ಟುಕೊಳ್ಳುವ ವಸ್ತುವಲ್ಲ. ವಿದ್ಯುತ್ ಉತ್ಪಾದನೆಯಾಗುತ್ತಿದ್ದಂತೆ ಅದೇ ಕಾಲಕ್ಕೆ ಅದರ ಬಳಕೆಯೂ ಆಗತ್ತಿರಬೇಕು. ವಿದ್ಯುತ್ತನ್ನು ಸ್ಟಾಕ್ ಮಾಡಿಕೊಳ್ಳಬಹುದೆಂದು ಜನರು ತಿಳಿದುಕೊಂಡರೆ, ಅಲ್ಲದೆ, ಬಡವರಿಗಾದರೆ ವಿದ್ಯುತ್ ಸೌಕರ್ಯ ಕೊಡುವುದಿಲ್ಲ. ಸಾಹುಕಾರರಿಗಾದರೆ ವಿದ್ಯುತ್ ಸೌಲಭ್ಯ ಕೊಡುತ್ತಿರೆಂದರೆ ಜಗತ್ತಿನಲ್ಲಿ ವಿದ್ಯುತ್ತನ್ನು ಸ್ಟಾಕ್ ಮಾಡಿಕೊಳ್ಳಬಹುದೇ? ಆ ರೀತಿ ಇಟ್ಟುಕೊಳ್ಳುವುದಕ್ಕಾಗುತ್ತದೆಯೇ? ಸಕ್ಕರೆ, ಗೋಧಿಯನ್ನು ಸಂಗ್ರಹಿಸಿಟ್ಟಂತೆ ವಿದ್ಯುತ್ತನ್ನು ಸಂಗ್ರಹಿಸಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇದೊಂದು ವಿಚಿತ್ರವಾದ ಶಕ್ತಿ. ಇಂತಹ ಪರಿಸ್ಥಿತಿಯ ಮಧ್ಯದಲ್ಲಿ ನಾವು ಏನು ಹೇಳಿದ್ದೇವೆಂದರೆ, ಸೌರಶಕ್ತಿಯನ್ನು ಉಪಯೋಗಿಸಿಬೇಕು. ಗಾಳಿಶಕ್ತಿಯನ್ನು ಉಪಯೋಗಿಸಬೇಕು. ಇವೆಲ್ಲಾ ನಾನ್-ಕನ್‌ವೆನ್‌ಶನಲ್ ಎನರ್ಜಿ. ನಮ್ಮ ರಾಜ್ಯದಲ್ಲಿ ಪವನಶಕ್ತಿಯಿಂದ ಎರಡು ಮೆಗಾವ್ಯಾಟ್‌ಗಳನ್ನು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದೇವೆ. Solar energy we have not been able to harness it properly. ಈಗ ಹೈಡಲ್, ಇದು ತಪ್ಪಿದರೆ ಥರ್ಮಲ್. ಈ ಎರಡೂ ವ್ಯವಸ್ಥೆಗಳೂ ಇವೊತ್ತು ನಮ್ಮಲ್ಲಿವೆ. ಹಿಂದೆ ಒಂದು ಕಾಲದಲ್ಲಿ ಹೈಡಲ್ ಪವರ್ ಪ್ರಾಜೆಕ್ಟ್ ಒಂದೇ ಇದ್ದುದರಿಂದ ಅದನ್ನು ಅಗ್ಗವಾಗಿ ನಿರ್ವಹಣೆ ಮಾಡಬಹುದಿತ್ತು. ಈಗ ಹೈಡಲ್ ಮತ್ತು ಥರ್ಮಲ್ ಎರಡೂ ದುಬಾರಿಯಾಗಿವೆ. ಹೊರರಾಜ್ಯಗಳಿಂದ ಖರೀದಿಸಿದ ವಿದ್ಯುತ್ತಿನ ದರವೂ ದುಬಾರಿಯಾಗಿದೆ. ಹೊರರಾಜ್ಯಗಳಿಂದ ಖರೀದಿಸಿದ ವಿದ್ಯುತ್ತಿನ ಸಾಲವನ್ನು ತೀರಿಸವುದಕ್ಕಾಗಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನಾವು ರೈತರಿಗೆ ದ್ರೋಹವೆಸಗುತ್ತಿದ್ದೇವೆಂದು, ಚುನಾವಣೆಯಲ್ಲಿ ಆರಿಸಿ ಬಂದ ನಂತರ ರೈತರನ್ನು ಮರೆತುಬಿಟ್ಟಿರೆಂಧು, ನಾನೂ ಸಹ ಆ ತರಹ ಗದ್ದದಿತ ಕಂಠದಿಂದ ಕಣ್ಣೀರು ಹಾಕಿ ಮಾತನಾಡಬಹುದು. ಆದರೆ, ಆ ರೀತಿ ಮಾಡಿದರೆ ಆಗುವುದಿಲ್ಲ. ರೈತರಿಗೆಇವೊತ್ತು ನಾವು ಹೇಳಬಹುದು. ಕರ್ನಾಟಕ ವಿದ್ಯುತ್ ನಿಗಮ ನಿಮ್ಮದು, ಇದನ್ನು ಉಳಿಸಬೇಕೆಂದರೆ, ನಿಗಮ ಮಾಡಿರುವ ಸಾಲವನ್ನು ಕೊಡಬೇಕು, ಹಣ ಕೊಟ್ಟರೆ ಮಾತ್ರ ನಿಗಮ ಉಳಿಯುತ್ತದೆ. ಇಲ್ಲದಿದ್ದರೆ ಉಳಿಯುವುದಿಲ್ಲ. ಅನಂತರ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಮಾತನಾಡುತ್ತಾ ಇದನ್ನು ಖಾಸಗೀಕರಣಗೊಳಿಸಿ ಬಿ.ಜೆ.ಪಿ.ಗೆ ಕೊಟ್ಟು ಬಿಡಿ, ನಾವು ನಡೆಸುತ್ತೇವೆಂದು ಹೇಳಿದರು. ತಾವು ಒಂದು ಕೆಲಸ ಮಾಡುತ್ತೀರಾ ? ನಮ್ಮ ಇಡೀ ರಾಜ್ಯಾದ್ಯಂತ ವಿದ್ಯುತ್ ವ್ಯವಸ್ಥೆ ಏನಿದೆ, ಇದನ್ನು ಸುಧಾರಿಸುವ ಸಲುವಾಗಿ ನಿಮಗೆ ಆರು ತಿಂಗಳುಗಳ ಕಾಲ ವಹಿಸಿಕೊಡುತ್ತೇವೆ. ನಾನು ನಿಮ್ಮ ಭೋನಫೈಡ್ಸ್ ಅನ್ನು ಡೌಟ್ ಮಾಡಲಿಲ್ಲ. ಆರು ತಿಂಗಳುಗಳ ಕಾಲಾವಕಾಶ ತೆಗೆದುಕೊಂಡು ವ್ಯವಸ್ಥೆಯನ್ನು ಸರಿಪಡಿಸದೇ ಇದ್ದರೆ ಭಾರತೀಯ ಜನತಾ ಪಕ್ಷ ನಮ್ಮ ರಾಜ್ಯದಿಂದ ಬಿಟ್ಟುಹೋಗಬೇಕು.

★**ಶ್ರೀ ಬಿ.ಎಸ್.ಯಡಿಯೂರಪ್ಪ:-** ಇದು ತುಂಬಾ ಜವಾಬ್ದಾರಿಯುತವಾದ ಸಂಗತಿ.

ನಾನೂ ಕೂಡ ಇದರ ಬಗ್ಗೆ ಹೇಳಬೇಕಾದರೂ ಅಷ್ಟೇ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ತಮ್ಮಲ್ಲಿ ನನ್ನ ವಿನಂತಿಯೇನೆಂದರೆ, ತಮ್ಮಲ್ಲಿ ನಿಜವಾದ ಕಳಕಳಿಯಿದ್ದು, ವಿದ್ಯುತ್‌ವ್ಯವಸ್ಥೆ ಸರಿಪಡಿಸಬೇಕೆಂಬ ವಿಶ್ವಾಸ ನಿಮ್ಮಲ್ಲಿದ್ದರೆ ಪಕ್ಷ ಭೇಧ ಮರೆಯೋಣ. ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ಸರಿಪಡಿಸುವ ಸಲುವಾಗಿ ಸಂಸ್ಥೆಯನ್ನು ಒಂದು ವರ್ಷ ಕಾಲ ಯಡಿಯೂರಪ್ಪನವರಿಗೆ ವಹಿಸಿಕೊಡುತ್ತಿದ್ದೇವೆಂದು, ಆ ಒಂದು ವರ್ಷದಲ್ಲಿ ನಾವು ಯಾವುದೇ ರೀತಿಯಲ್ಲಿ ಮಧ್ಯೆ ಪ್ರವೇಶಿಸುವುದಿಲ್ಲವೆಂದು ಹೇಳಿ ಶೇಕಡ ಹತ್ತರಷ್ಟನ್ನು ಮಾತ್ರ ದರವನ್ನು ಏರಿಸಿ ಮತ್ತು ಪ್ರತಿ ಒಂದು ಹೆಚ್.ಪಿ. ಪಂಪ್‌ಸೆಟ್‌ಗೆ ನೂರು ರೂಪಾಯಿಗಳನ್ನು ಮಾಡಿದ್ದೇ ಆದರೆ ಕರ್ನಾಟಕ ವಿದ್ಯುತ್ ನಿಗಮದ ಮೂಲಕ ಹೆಚ್ಚು ಉತ್ಪಾದನೆ ಮಾಡಿ ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ಸರಿಪಡಿಸಿದಿದ್ದರೆ ನಾನು ರಾಜಕೀಯದಿಂದ ನಿವೃತ್ತಿಯಾಗುತ್ತೇನೆ. ನಾವು ರ್‍ಆಜ್ಯ ಬಿಟ್ಟು ಹೋದರೆ ನಿಮಗೇನು ಲಾಭ? You give me one year time otherwise I will retire from politics..

ಅಲ್ಲದೆ, ನೀವು ಹೇಳಬೇಕು:ಪ್ರಾಮಾಣಿಕವಾಗಿ ನಾವ್ಯಾರೂ ಮಧ್ಯೆ ಪ್ರವೇಶಿಸುವುದಿಲ್ಲವೆಂದು. ನಾವು ಕೇಳಿದಂತಹ ಅಧಿಕಾರಿಗಳನ್ನು ಕೊಟ್ಟು ನಾವು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಬಿಟ್ಟುಬಿಡಿ. ಆ ರೀತಿ ಮಾಡದೇ ಇದ್ದರೆ I will retire from politics.

ನಾವು ಸರಿಮಾಡಿದರೆ ನಾನು ನಿಮಗೆ ಏನೂ ಹೇಳುವುದಿಲ್ಲ. ಮಾಡಿಕೊಡುತ್ತೇವೆ, ನೀವು ಮುಂದುವರೆಯಿರಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರ ವಾದ ಹೇಗಿದೆಯೆಂದರೆ, ಸರ್ಕಾರ ವಿದ್ಯುತ್ತಿನ ದರ ಏರಿಸಿದ್ದು ಸರಿ ಎನ್ನುವಂತಿದೆ. ನಾವು ಸ್ಪಷ್ಟವಾಗಿ ದರ ಏರಿಸಿದ್ದು ಸರಿಯಿಲ್ಲವೆಂದು ಹೇಳುತ್ತಿದ್ದೇವೆ. ಆದರೆ ಈಗ ಅವರು ನನಗೆ ಒಂದು ವರ್ಷ ಸಂಸ್ಥೆಯ ಆಡಳಿತವನ್ನು ವಹಿಸಿಕೊಟ್ಟು ಶೇಕ[illegible]ರಷ್ಟು ದರವನ್ನು ಜಾಸ್ತಿ ಮಾಡುತ್ತೇವೆಂದು ಹೇಳಿದರೆ ಅದರ ಅರ್ಥವೇನು ?

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ವಿದ್ಯುತ್ ದರವನ್ನು ಏರಿಸುವುದಾದರೆ ಶೇಕಡ ಹತ್ತಕ್ಕಿಂತ ಜಾಸ್ತಿ ಮಾಡಬೇಡಿ ಪ್ರತಿ ಒಂದು ಹೆಚ್.ಪಿ.ಯ ಪಂಪುಸೆಟ್‌ಗಳಿಗೆ ನೂರು ರೂಪಾಯಿ ವಿಧಿಸಿ ಮತ್ತು ಮೀಟರ್ ಅಳವಡಿಸಿ ಕೈಗಾರಿಕೆಗಳ ಮೇಲೆ ನೂರು ರೂಪಾಯಿಗಳನ್ನು ವಿಧಿಸಬೇಡಿ ಎನ್ನುತ್ತೀರಾ? ಏನು ಹೇಳಿತ್ತೀರಿ? ಆ ಬಗ್ಗೆ ಮಾತನಾಡಿರುವುದು ದಾಖಲೆಗೆ ಹೋಗಿದೆ.ತಾವು ದಯವಿಟ್ಟು ಇದನ್ನು ಒಪ್ಪಿಕೊಳ್ಳಬೇಕು.

ಶ್ರೀ ಜಿ.ಹೆಚ್.ಪಟೇಲ್:- ನಾನು ಮಾತನಾಡಿದ್ದೂ ದಾಖಲೆಗೆ ಹೋಗಿದೆ, ಮತ್ತು ನೀವು ಮಾತನಾಡಿದ್ದೂ ಸಹ ದಾಖಲೆಗೆ ಹೋಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ವಿರೋಧ ಪಕ್ಷದ ನಾಯಕನಾಗಿ ಈ ಸವಾಲನ್ನು ಸ್ವೀಕರಿಸುತ್ತಿದ್ದೇನೆ. ದಯಮಾಡಿ ಹೇಳಿ, ಎಲ್ಲಿ ಹೇಗೆ ಮಾಡೋಣವೆಂದು.

ಅಧ್ಯಕ್ಷರು: ಸವಾಲು ಸ್ವೀಕರಿಸುವುದಕ್ಕೆ ನೀವು ತಯಾರಾಗಿರಬಹುದು, ಸವಾಲು ಹಾಕುವುದಕ್ಕೆ ಅವರು ತಯಾರಾಗಿರಬಹುದು. ಆದರೆ, ನೀವು ನಿವೃತ್ತರಾಗುವುದು ನಮಗಿಷ್ಟವಿಲ್ಲ. ನಾವು ಇದನ್ನು ಒಪ್ಪುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಖಂಡಿತಾ ಹಾಗಲ್ಲ. ಪ್ರತಿ ವರ್ಷವೂ ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಕೆ.ಇ.ಬಿ. ಯಲ್ಲಿ ಲೂಟಿಯಾಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ: ಅಧ್ಯಕ್ಷರೆ, ಪಟೇಲ್‌ರಿಗೆ ಮತ್ತು ಯಡಿಯೂರಪ್ಪನವರಿಗೆ ಈ ವಿಷಯದಲ್ಲಿ ಯಾವಾಗ ಒಪ್ಪಂದವಾಯಿತೆಂದು ನಮಗೆ ಗೊತ್ತಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಯಡಿಯೂರಪ್ಪನವರಿಗೇ ಈ ಇಲಾಖೆಯನ್ನು ವಹಿಸಬೇಕೆಂದು ಸರ್ಕಾರ ತೀರ್ಮಾನ ಮಾಡಿದೆಯೆಂದು ಹೇಳುವುದಾದರೆ ನಾನು ಮತ್ತು ಮಲ್ಲಿಕಾರ್ಜುನ ಖರ್ಗೆಯವರಿಬ್ಬರೂ ಸತ್ಯಾಗ್ರಹ ಮಾಡಬೇಕಾಗುತ್ತದೆ.

ಅಧ್ಯಕ್ಷರು: ವಾಟಾಳ್ ನಾಗರಾಜ್‌ರವರಿಗೆ ಯಾವುದಾದರೊಂದು ಇಲಾಖೆಯನ್ನು ವಹಿಸುತ್ತೇವೆ.

ಶ್ರೀ ಜಿ.ವಿ. ಶ್ರೀ ರಾಮ ರೆಡ್ಡಿ: ಅವರಿಬ್ಬರ ಮಧ್ಯೆ ಯಾವಾಗ ಒಪ್ಪಂದವಾಗಿದೆ ಎಂದು ನಮಗೆ ಗೊತ್ತಾಗಬೇಕಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸದನದಲ್ಲಿ ಏನು ನಿಲುವಳಿ ಸೂಚನೆಯನ್ನು ತರಲಾಗಿದೆಯೋ ಅದನ್ನು ಅಡ್ಮಿಟ್ ಮಾಡಬೇಡಿ ಎಂದು ನಾವು ವಾದ ಮಾಡುತ್ತಿದ್ದು, ಈಗ ಶೇಕಡ 10 ಶೇಕಡ 20 ರ ಬಗ್ಗೆ ಜಗಳ ನಡೆದರೆ. . . ನಾವು ಏನು ಹೇಳುತ್ತಿದ್ದೇವೆಂದರೆ, ಇದರ ಬಗ್ಗೆ ಈಗಾಗಲೇ ಒಂದು ಸದನ ಸಮಿತಿ ಮಾಡಿದ್ದು ಮತ್ತು ಟ್ಯಾರಿಫ್ ಕಮಿಟಿ ಏನು ಸಲಹೆಗಳನ್ನು ಕೊಟ್ಟಿದೆಯೋ ಅದರ ಬಗ್ಗೆಯಾದರೂ ಸಂಬಂಧಪಟ್ಟವರನ್ನು ಕರೆಸಿ ಮಾತನಾಡಿ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದರೆ ಈ ಮಧ್ಯೆ ಶೇಕಡ 10, 20ರ ಬಗ್ಗೆ ಜಗಳ ನಡೆದರೆ ಕಷ್ಟವಾಗುತ್ತದೆ.

ಶ್ರೀ ಜೆ.ಹೆಚ್ .ಪಟೇಲ್: ಪರ್ಸಂಟೇಜ್ ಅಲ್ಲ Actual loss. Please understand the basic problem . . . . . ಇವೊತ್ತು ಕೆ.ಇ.ಬಿ.ಗೆ ಏನು ರೆವಿನ್ಯೂ ಬರುತ್ತಿದೆ, ಅದನ್ನು ನಾವು ಹೆಚ್ಚು ಮಾಡುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ಕೆಲವು ವಿಷಯಗಳನ್ನು ಸದನಕ್ಕೆ ತಿಳಿಸಬೇಕಾಗಿದೆ. ನಾವು ಟ್ಯಾರಿಫ್ ಜಾಸ್ತಿ ಮಾಡಿದನಂತರ ಹೆಚ್ಚಾಗಿರುವುದು ಯಾವುದೆಂದರೆ, ಡೊಮೆಸ್ಟಿಕ್ ರೆವಿನ್ಯೂ 280 ಕೋಟಿ, ಎಲ್.ಟಿ.ಇಂಡಸ್ಟ್ರೀಸ್‌ನಿಂದ 212 ಕೋಟಿ, ಹೆಚ್.ಟಿ.ಇಂಡಸ್ಟೀಸ್‌ನಿಂದ 1, 142 ಕೋಟಿ ರೂಪಾಯಿಗಳು. ನಾವು ಯಾರಿಂದ ಹೆಚ್ಚು ಹಣ ವಸೂಲು ಮಾಡುತ್ತೇವೆಯೋ ಅವರ ಬಗ್ಗೆ ಹೇಳುತ್ತೇನೆ.

ಈಗ ನೀವು 2-3 ಕಡೆ ರಾಜ್ಯ ಸರ್ಕಾರ ಮಾಡಿದ್ದೀರಿ, ಕೇಂದ್ರದಲ್ಲಿ ಒಂದು 13 ದಿವಸ ಇದ್ದೀರಿ, ನೀವು ಅಲ್ಲಿ ತೆರಿಗೆ ಹಾಕುವಾಗ ಯಾವುದೇ ಸರ್ಕಾರ ನಿಮ್ಮ ಮೇಲೆ ತೆರಿಗೆ ಹಾಕುತ್ತೇವೆ ಒಪ್ಪುತ್ತೀರಾ ಎಂದು ಕೇಳುತ್ತಾರೋ ? ಸರ್ಕಾರ ನಡೆಸುವಾಗ ಕೆಲವು ಸಮುಜಾಯಿಷಿ ಕೊಡುತ್ತೇವೆ, ಉತ್ತರ ಕೊಡುತ್ತೇವೆ, ಹೀಗೆ ಆಯಿತು ಎಂದು ಎಕ್ಸ್‌ಪ್ಲೇನ್ ಮಾಡಬೇಕಾಗುತ್ತದೆ. ನಾವು ಜನರನ್ನು ಕ್ಷಮಿಸಿ ಎಂದು ಎರಡು ಸಾರಿ ಕೇಳುತ್ತೇವೆ, 10 ಸಾರಿ ಕೇಳುತ್ತೇವೆ. ಏಕೆಂದರೆ ನೀವು ಹೇಳಿದಿರಿ, ಭಗವಂತನ ಇಚ್ಛೆ ಎಂದು, ನಾನು ಈ ಸ್ಥಿತಿಗೆ ಒಂದು ಈ ಸಮಯದಲ್ಲಿ ನಿಮಗೆ ಉತ್ತರ ಹೇಳುವುದು ಭಗವಂತನ ಇಚ್ಛೆಯಾಗಿದೆ. ಟ್ಯಾರಿಫ್ ಇನ್‌ಕ್ರೀನ್ ಮಾಡುವುದು ಭಗವಂತನ ಇಚ್ಛೆ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಈ ವಾದ ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏನೇನು ಮಾಡುತ್ತಾರೋ ಗೊತ್ತಿಲ್ಲ.

ಶ್ರೀ ಜಿ.ವಿ.ಶ್ರೀ ರಾಮ ರೆಡ್ಡಿ: ಭಗವಂತನಿಗೆ ಕಾಲು ಇಲ್ಲ, ಕಣ್ಣು ಇಲ್ಲ, ಮೂಗು ಇಲ್ಲ, ಬಾಯಿ ಇಲ್ಲ, ಮೂರು ಪ್ರಾಣಿ ಮೇಲೆ ಎಲ್ಲಾ ಹಾಕಿ ತಪ್ಪಿಸಿಕೊಳ್ಳುವುದಕ್ಕೆ ಹೋದರೆ ಹೇಗೆ?

ಶ್ರೀ ಜೆ.ಹೆಚ್.ಪಟೇಲ್: ನಮ್ಮ ಭಗವಂತ ನಾಲ್ಕುವರೆ ಕೋಟಿ ಕನ್ನಡಿಗರು ಅವರ ಇಚ್ಛೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ, ಯಾವ ಭಗವಂತ, ಭಗವಂತ ಯಾರು ?

ಅಧ್ಯಕ್ಷರು: ಅದರ ಮೇಲೆ ನಾಳೆ ಚರ್ಚೆ ತೆಗೆದುಕೊಳ್ಳೋಣ.

★**ಶ್ರೀ ಜೆ.ಹೆಚ್.ಪಟೇಲ್:-** ಅದರ ಮೇಲೆ ನಾಳೆ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳೋಣ. ಎಲೆಕ್ಟ್ರಿಸಿಟಿ ಬಗ್ಗೆ ಈಗ ಹೇಳುತ್ತೇನೆ. ಎಲ್ಲಾ ಮಾನ್ಯ ಸದಸ್ಯರಲ್ಲೇ ನಾನು ಇಷ್ಟೇ ಕೇಳಿಕೊಳ್ಳುವುದು, ರೈತರಿಗೆ ಸ್ವಲ್ಪ ಹೊರೆ ಆಗುತ್ತದೆ. ಮಹಾರಾಷ್ಟ್ರದಲ್ಲಿ ಒಂದು ಸಾವಿರ ರೂಪಾಯಿ ಒಂದು ಹಾರ್ಸ್ ಪವರ್‌ಗೆ ಛಾರ್ಜ್ ಮಾಡುತ್ತಾರೆ. ಅವರು ಪರ್ ಯೂನಿಟ್ ಕಾಸ್ಟ್ ಹಾಕುವುದು ಎಂದು ಹಾರ್ಸ್ ಪವರ್‌ಗೆ ಒಂದು ಸಾವಿರ ರೂಪಾಯಿ ಆಗುತ್ತದೆ. ನಮಗೆ ಕೆ.ಇ.ಬಿ. ರೆಕಮೆಂಡ್ ಮಾಡಿದ್ದುದು 800 ರೂಪಾಯಿಗಿಂತ ಕಡಿಮೆ ಆಗಬಾರದು ಎಂದು. ನೀವು ಹೇಳಿರಿ ಸಂಪುಟದಲ್ಲಿ ಚರ್ಚೆಯಾಗಿಲ್ಲ ಎಂದು ಸಂಪುಟದಲ್ಲಿ ಇರತಕ್ಕಂಥವರಾಗಲಿ, ಬೇರೆ ಯಾರೇ ಆಗಲಿ ನಮಗೆ ಕೇಳಲಿಲ್ಲ ಎಂದರೆ ಬೇರೆ ಮಾತು. ಅವರಿಗೆ ಕರೆಯಲ್ಲಿ, ಸಂಪುಟಕ್ಕೆ ಯಡಿಯೂರಪ್ಪನವರನ್ನು, ಕೆಲವು ಸಾರಿ ಅವಶ್ಯಕತೆ ಇದ್ದರೆ I can invite him and I can discuss things with him if necessary.

ಆದರೆ ಈಗ ಸಂಪುಟದಲ್ಲಿ ಆಗಲಿಲ್ಲವೆಂದು ಹೇಳುತ್ತೀರಿ, ಯಾರನ್ನೂ ಹೇಳಲಿಲ್ಲ ಎಂದು ಹೇಳಿದಿರಿ, ಸಂಪುಟದಲ್ಲಿ ಚರ್ಚೆಯಾಯಿತು, ಈ ಸದನದಲ್ಲಿ ಸಾಕಷ್ಟು ಬಾರಿ ಚರ್ಚೆ ಆಯಿತು, ಆ ಮೇಲೆ ಇದು ಅನಿವಾರ್ಯ ಇದನ್ನು ದರ ಏರಿಸದೇ ಇದ್ದರೆ ನಾವು ಕೆ.ಇ.ಬಿ.ಯನ್ನು ಕ್ಲೋಸ್ ಮಾಡಬೇಕಾಗುತ್ತದೆ ಎಂದು ಹೇಳಿದ್ದು, ಈಗಿರತಕ್ಕಂತಹ ಸಾಲ ಮತ್ತು ಒಟ್ಟು ನಾವು ಈ ವರ್ಷ ಈಗ ಪವರ್ ಫೈನಾನ್ಸ್ ಕಾರ್ಪೋರೇಷನ್‌ನಿಂದ ವರ್ಲ್ಡ್ ಬ್ಯಾಂಕಿನಿಂದ ಮತ್ತು ಬೇರೆ ಸ್ಟೇಟ್ ಬ್ಯಾಂಕ್‌ಗಳಿಂದ ಸಾಲತೆಗೆದುಕೊಂಡು, ಈ ಸಾಲಗಳನ್ನು ತೆಗೆದುಕೊಂಡು ಬಂದು ಈ ವರ್ಷ ಒಂದು ಸಾವಿರ ಕೋಟಿ ರೂಪಾಯಿ ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೆ ಹಾಕಿದ್ದೇವೆ. ಈಗ ನಾವು ಇಷ್ಟೆಲ್ಲಾ ಟ್ಯಾರಿಫ್ ಹೈಕ್ ಮಾಡಿದರೂ ನಮಗೆ ಬರುವುದು 852 ಕೋಟಿ ರೂಪಾಯಿ. ಇನ್ನು 500 ಕೋಟಿ ರೂಪಾಯಿ ಡಿಫಿಸಿಟ್ ಬರುತ್ತದೆ. 878 ಕೋಟಿ ಏನಿದೆ ಇನ್‌ಕ್ರೀಸ್ ಮಾಡಿದ ಮೇಲೆ ಕೂಡ 500 ಕೋಟಿ ರೂಪಾಯಿ ಕೆ.ಇ.ಬಿ. ಡಿಫಿಸಿಟ್ ಬರುತ್ತದೆ. ಅದಕ್ಕೋಸ್ಕರ ಒಂದೇ ಸಾರಿ ಹೆಚ್ಚಿಗೆ ಹಾಕಿ ಬಿಟ್ಟರಿ, ಒಂದೇ ಸಾರಿ ಹಾಕಿ ಬಿಟ್ಟರಿ ಮದರೆ ಇದನ್ನು ಅನಿವಾರ್ಯವಾಗಿ ಹಾಕಬೇಕಾಯಿತು. ಮೊದಲೇ ಹೆಜ್ಜೆ. ಇದಕ್ಕಿಂತ ಇನ್ನೂ ಏನೂ ಬೇರೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ದಯವಿಟ್ಟು ರಾಜಕೀಯಕ್ಕೋಸ್ಕರ ನಮ್ಮನ್ನು ಟೀಕೆ ಮಾಡಿ, ಬೇಡ ಎಂದು ಹೇಳುವುದಿಲ್ಲ. ನೀವು ಮನ ಮುಟ್ಟಿ ಹೇಳಿ, ಖರ್ಗೆಯವರೇ, ಇದಕ್ಕಿಂತ ಕಡಿಮೆ ಮಾಡಿ ನೀವು ನಿಭಾಯಿಸಬಲ್ಲಿರಾ, ನೀವು ಮಂತ್ರಿಯಾಗಿದ್ದೀರಿ, ನಿಮಗೂ ಎಲ್‌ಕ್ಟ್ರಿಸಿಟಿ ಮ್ಯಾನೇಜ್‌ಮೆಂಟ್ ಗೊತ್ತು, ಮೊಯಲಿಯವರು ಅವರು ಪವರ್ ಮಿನಿಸ್ಟರ್ ಆಗಿದ್ದರು, ಅವರಿಗೆ ಗೊತ್ತು, ಇದು ಅನಿವಾರ್ಯ ಎಂದು ಗೊತ್ತಿದ್ದರೂ ಭಾರೀ ಅನ್ಯಾಯ ಆಗಿ ಹೋಯಿತು, ಜನರಿಗೆ

ದ್ರೋಹ ಆಗಿ ಹೋಯಿತು, ಹಾಗೆ ಹೀಗೆ ಎಂದು ಹೇಳುವುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಬ್ಬರ ಮೇಲೆ ಭಾರ ಹೊರಿಸಬೇಕಾದರೆ ಅವನು ಎಷ್ಟು ಭಾರ ಹಿಡಿದುಕೊಳ್ಳಬಹುದು ಎಂದು ಅರಿವು ಇಟ್ಟುಕೊಂಡು ನಾವು ಹಾಕಬೇಕಾಗಿದೆಯೇ ಹೊರತಾಗಿ ಸಡನ್ನಾಗಿ ಇನ್ನು ಒಂದು ವರ್ಷ ಲಾಸ್ ಆಗಬಹುದಿತ್ತು, ತಾಳಿಕೊಳ್ಳಬೇಕಾಗಿತ್ತು. ಈ ಸಾಲ ಎಕನಾಮಿಕಲಿ ಎಷ್ಟು ವಯಬಲ್ ಆಗುತ್ತದೆ, ಜನರಿಗೆ ಎಷ್ಟು ಭಾರ ಆಗುತ್ತದೆ ಅವರು ಎಷ್ಟು ಸಹಿಸಬಹುದು ಎಂದು ತಿಳಿದುಕೊಂಡು ಹಾಕಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ.

★**ಶ್ರೀ ಜಿ.ಹೆಚ್.ಪಟೇಲ್:** ಲೆಜಿಸ್ಲೇಚರ್ ಕಮಿಟಿಯಲ್ಲಿ ನೀವು ಬೈರೇಗೌಡರು ಇಲ್ಲಾ ಇದ್ದೀರಿ. ಕಮಿಟಿಯಲ್ಲಿ ರೆಕಮೆಂಡ್ ಮಾಡಿದ್ದುದು 100 ರೂಪಾಯಿ ಪರ್ ಹಾರ್ಸ್ ಪವರ್, ಕೆ.ಇ.ಬಿ. ಯವರು ರೆಕಮೆಂಡ್ ಮಾಡಿದ್ದು 800 ರೂಪಾಯಿ. ಅದಕ್ಕೆ ನಾವು ಒಂದು 300 ರೂಪಾಯಿ ಪರ್ ಹಾರ್ಸ್ ಪವರ್ ನಾವು ರೇಟ್ ಹಾಕಿದರೆ ನಮಗೆ ಬರುವುದು ಬರೀ 200 ಕೋಟಿ ರೂಪಾಯಿ. ಈ ವರ್ಷ 196 ಕೋಟಿ, ಡಿಫಿಸಿಟ್ ಬಹಳ ಇದೆ. 196 ಕೋಟಿಯಿಂದ ನಾವು ಪ್ರಾರಂಭ ಮಾಡೋಣ, ಆ ಮೇಲೆ When we begin to give him quality and consistent power he will be able to share the burden. ಅದಕ್ಕೆ ನಾವು ಏನು ಹೇಳುತ್ತೇವೆ, ಜನ ಏನು ಹೇಳುತ್ತಾರೆ, ರೈತರ ಸಭೆಯಲ್ಲಿ ಕೇಳಿದೆ, 300 ರೂಪಾಯಿ ಪರ್ ಹಾರ್ಸ್ ಪವರ್ ನಾವು ಕೊಡುತ್ತೇವೆ, ಆದರೆ ನೀವು ಕರೆಕ್ಟಾಗಿ 8 ಗಂಟೆಯಿಂದ 10 ಗಂಟೆಯವರೆಗೆ ವೋಲ್ಟೇಜ್ ಫ್ಲಕ್ಚುಯೇಷನ್ ಇಲ್ಲದ ಪವರ್ ಕೊಡಿ ನಾವು ಕೊಡುತ್ತೇವೆ ಎಂದು ಹೇಳಿದರು. ಶ್ರೀ ಶಿವಪ್ಪನವರೂ ಅದೇ ಮಾತು ಹೇಳಿದರು, ನೀವು ಪವರ್ ಕರೆಕ್ಟಾಗಿ ಕೊಟ್ಟರೆ ಫ್ಲಕ್ಚುಯೇಷನ್ ಆಗದೆ, ನಮ್ಮ ಮೋಟಾರ್ ಸುಡದೆ ಇದ್ದರೆ 100 ಕೋಟಿ ಕೊಡುತ್ತೇವೆಂದು ಎಲ್ಲರೂ ಹೇಳುತ್ತಾರೆ. ರೈತರ ಪರವಾಗಿ ನಾವು ಮಾತನಾಡುತ್ತಾ ಈ ಆವೇಶದಲ್ಲಿ ಅವರಿಗೆ ಕೆಡಕು ಮಾಡಬಾರದು, When the power is not available then you will be complled to buy it. ಆ ರೀತಿ ಪಾಪ್ಯುಲಾರಿಟಿಗೆ ಹೋಗಿ ಅವರಿಗೆ ವಿಶ ಹಾಕಬಾರದು ನಾವು. ಇವತ್ತು ಆ ಸಂಸ್ಥೆಗಳನ್ನು ಉಳಿಸಬೇಕು. ಇದನ್ನು ಉಳಿಸಿಕೊಳ್ಳದೆ ಹೋದರೆ ನಮಗೆ ನಾಳೆ ತೊಂದರೆಯಾಗುತ್ತದೆಂದು ನೀವು ಹೇಳಬೇಕು. ಪ್ರೈವೆಟೈಸೇಷನ್‌ನಿಂದ ಇದಕ್ಕೆ ಪರಿಹಾರ ಸಿಗುವುದಿಲ್ಲ. ಪ್ರೈವೇಟೈಸೇಷನ್ ಆದರೆ ಆಗ ಅವನು 800 ರೂಪಾಯಿ ಹೇಳಿದರೂ ತೆಗೆದುಕೊಳ್ಳಬೇಕಾಗುತ್ತದೆ. ನಾವು 300 ರೂಪಾಯಿ ಏನು ಹೇಳುತ್ತೇವೆ, ಅವನು ಸಾವಿರ ರೂಪಾಯಿ ಹೇಳಿದರೂ ತೆಗೆದುಕೊಳ್ಳಬೇಕು. In the long range, ಆ ಸ್ಥಿತಿ ಬರಬಾರದು. ಒಂದು, ನಮ್ಮ ರಾಜ್ಯ ಸರ್ಕಾರದ ಕರ್ತವ್ಯ ಏನು, ರೈತರ ಕಷ್ಟ ಏನು, ಇವೆರಡನ್ನು ತಿಳಿದುಕೊಳ್ಳದೆ ನಾವು ಕಣ್ಣೀರು ಸುರಿಸುತ್ತಾ ಬಾಳುವೆ ಮಾಡಿ ನಮ್ಮ ಹೃದಯ ಎಲ್ಲಾ ಕರಗಿ ಹೋಯಿತು ಎಂದು ಹೇಳಿ ಬಿಟ್ಟರೆ ಅದು ಆಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈಗಲೂ ಹೇಳುತ್ತೇನೆ, ಬನ್ನಿ ರೈತರ ಹತ್ತಿರ ಹೋಗೋಣ. I am ever ready, anywhere you take me. ರೈತರನ್ನು ಕರೆಯೋಣ, ನಾನು ನನ್ನ ಕಷ್ಟ ಸ್ಥಿತಿ ಈ ರೀತಿ ಇದೆ, ಇದಕ್ಕೆ ಯಾರು ಕಾರಣ ಅದು ಈಗ ಅಪ್ರಕೃತ. ಈಗಿರುವ ಸ್ಥಿತಿಯಲ್ಲಿ ಹೀಗೆ ಇದೆ, ಇದು ನಾವು ಹೇಳುವುದು, ಮಾನ್ಯ ಯಡಿಯೂರಪ್ಪನವರು ಹೇಳಿದ್ದುದು ಇದು ಎಂದು ಒಪ್ಪಿಸೋಣ.

★**ಶ್ರೀ ಬಿ.ಎಸ್.ಯಡಿಯೂರಪ್ಪ:-** ನಾನು ತಯಾರಿದ್ದೇನೆ, ಈಗ ವಿತ್‌ಡ್ರಾ ಮಾಡಿಕೊಳ್ಳಿ, ಸದನ ಸಮಿತಿ ಮಾಡಿ ತಮ್ಮ ಲೀಡರ್‌ಶಿಪ್‌ನಲ್ಲಿ ನಾವು ಹೋಗುತ್ತೇವೆ. ಜನಾಭಿಪ್ರಾಯ ತೆಗೆದುಕೊಂಡು ಬಂದು ಮಾಡೋಣ. ನೀವು ನಮಗೆ ಇನ್ನು ಏನೂ ಬದಲಾವಣೆ ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿ. ವಿದ್ಯುತ್ ದರ ಇಳಿಸುವ ಪ್ರಶ್ನೆ ಇಲ್ಲ ಎನ್ನುವುದಾದರೆ, ಈ ನೀತಿಯನ್ನು ನಾವು ಪ್ರತಿಭಟನೆ ಮಾಡುತ್ತೇವೆ. ರೈತರಿಗೆ ಇವತ್ತು ಈ ಕಡೆ, ಜನ ಎಲ್ಲಿಂದ ದುಡ್ಡನ್ನು ಕಟ್ಟಬೇಕು, ತಾವು ಸರ್ಕಾರದ ಕಷ್ಟ ಹೇಳಿಕೊಂಡಿರಿ, ಇಲಾಖೆ ಕಷ್ಟ ಹೇಳಿದಿರಿ ಜನ ಏನು ಆರ್ಡಿನರಿ ಮೇಸ್ತ್ರಿ ಅದೂ 2,000 ದಿಂದ 3,000 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಾರೆ. ಈಗ ಅವರಿಗೆ 500 ರೂಪಾಯಿ ಜಾಸ್ತಿಯಾಗುತ್ತದೆ. ಅವನು ಎಲ್ಲಿಂದ ಕಟ್ಟಬೇಕು, ಹೋದ ವರ್ಷ ಒಂದೂ ಬೆಳೆ ಬೆಳೆದಿಲ್ಲ ಐ.ಪಿ. ಸೆಟ್ ತೆಗೆದುಕೊಂಡು ಸಾಲ ತೆಗೆದುಕೊಂಡು ಬಡ್ಡಿ ಕಟ್ಟಿಲ್ಲ, ಅವನು ಎಲ್ಲಿಂದ ಕಟ್ಟಬೇಕು? 300 ರೂಪಾಯಿ ನಿಮಗೆ ಎಲ್ಲಿಂದ ಕಟ್ಟಬೇಕು? ವಿದ್ಯುತ್ ಒಳ್ಳೆಯ ರೀತಿಯಲ್ಲಿ ಕೊಟ್ಟು ಎಲ್ಲಾ ಆದ ಮೇಲೆ ನೀವು 100 ರೂಪಾಯಿ ಹಾಕಿ ಇನ್ನೂ ಇಂಪ್ರೂವ್‌ಮೆಂಟ್ ಆದ ಮೇಲೆ ನೀವು ಅದರ ಬಗ್ಗೆ ಮಾತನಾಡಿ.

ಶ್ರೀ ಜಿ.ಹೆಚ್.ಪಟೇಲ್:- ಟ್ಯಾರಿಫ್ ಹೆಚ್ಚು ಮಾಡದೆ ಪವರ್ ಪೋಸಿಷನ್ ಇಂಪ್ರೂವ್ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಮ್ಮ ಪ್ರಾರ್ಥನೆ ಏನೆಂದರೆ, ನೀವು ನಿಮ್ಮ ಎಲ್ಲಾ ಸಂಗತಿಗಳನ್ನು ಹೇಳಿದ್ದಿರಿ, ತಮ್ಮ ಕಷ್ಟ ಎಲ್ಲಾ ಹೇಳಿದ್ದಿರಿ, 10 ಪರ್ಸೆಂಟ್ ಏರಿಸುವುದಕ್ಕೆ ಅಭ್ಯಂತರವಿಲ್ಲ, ತಾವು ಸರ್ಕಾರ ನಡೆಸಬೇಕು, ಅದು ನಮಗೂ ಅರ್ಥವಾಗುತ್ತದೆ. ವಿರೋಧ ಪಕ್ಷದವರು ಎಲ್ಲಕ್ಕೂ ಟೀಕೆ ಮಾಡುವುದಕ್ಕಾಗುವುದಿಲ್ಲ. ಐ.ಪಿ.ಸೆಟ್‌ಗೆ 100 ರೂಪಾಯಿಗಳು ಹಾಕಿ ಎಂದು ಒತ್ತಾಯ ಮಾಡುತ್ತಿದ್ದೇವೆ. ಒಂದು ಇಂಡಸ್ಟ್ರೀಯಲಿಸ್ಟ್‌ಗೆ 100 ರೂಪಾಯಿಗಳ ಡಿಪಾಸಿಟ್ ತೆಗೆದುಕೊಂಡಿದ್ದೀರಿ, ಅದು ವಾಪಸ್ ತೆಗೆದುಕೊಳ್ಳುವುದಕ್ಕೆ ಅದು ಆಗುತ್ತಾ ಇಲ್ಲವೋ ಅದನ್ನು ತಾವು ಹೇಳಿ ಬಿಟ್ಟರೆ......

ಶ್ರೀ ಜಿ.ಹೆಚ್.ಪಟೇಲ್:- ಅತ್ಯಂತ ವಿನಯದಿಂದ ಹೇಳುತ್ತೇನೆ, ಅದು ಸಾಧ್ಯವಾಗದ ಮಾತು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಹಾಗಾದರೆ ನಾವು ಪ್ರತಿಭಟನೆ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಘೋಷಣೆಗಳನ್ನು ಕೂಗುತ್ತಾ ಬಾವಿಗೆ ಬಂದು ಧರಣಿ ಕುಳಿತರು)

★**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:-** ಒಂದು ತಾವು ಗಂಭೀರವಾಗಿ ಯೋಚನೆ ಮಾಡಿ ಏನೆಂದರೆ, ಇದು ಇನ್‌ಎವಿಟಬಲ್, ಏನಾದರೂ ಎನ್‌ಹ್ಯಾನ್ಸ್ ಮಾಡುತ್ತಿದ್ದೇವೆ ಎನ್ನತಕ್ಕಂತಹ ಪರಿಸ್ಥಿತಿ ಬಂದರೂ ಕೂಡ, ಅದಕ್ಕೆ ಮೇಲ್ಮನೆ ಮತ್ತು ಈ ಮನೆ ಸದಸ್ಯರು ಕೂಡ ಇರುವಂತಹ ಒಂದು ಜಂಟಿ ಸಮಿತಿ ಮಾಡಿ, ಆ ಸಮಿತಿಯ ಶಿಫಾರಸ್ಸುಗಳ ಮೇರೆಗೆ ಯೋಚನೆ ಮಾಡಿ ತಾವು ಮುಂದಿನ ಕ್ರಮವನ್ನು ತೆಗೆದುಕೊಂಡರೆ ಅದು ಏನಾದರೂ ರೈತರಿಗೆ ಮತ್ತು ಜನರಿಗೆ ಲಾಭವಾಗುತ್ತದೆ. ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಇದರಲ್ಲಿ ಪ್ರತಿಷ್ಠೆಯ ಪ್ರಶ್ನೆ ಮಾಡಿಕೊಳ್ಳಬೇಡಿ, ಏಕೆಂದರೆ ನಾನು ಹೇಳಿದ್ದೇ ಸರಿ, ಏನು ಮಾತುಕತೆ ಇಲ್ಲ, ನಾನು ಮಾಡಿದ್ದುದು ಎಲ್ಲವೂ ಸರಿ ಇದೆ ಎಂದು ತಾವು ಸಮರ್ಥನೆ

ಮಾಡಿಕೊಂಡು ಕುಳಿತಿದ್ದೀರಿ, ಖಂಡಿತವಾಗಿ ಇದು ರಾಜ್ಯದ ರೈತರಿಗೆ ಅನ್ಯಾಯವಾಗುತ್ತದೆ, ನೀವು ನಮ್ಮನ್ನು ಚೆನ್ನಾಗಿ ಕನ್ವಿನ್ಸ್ ಮಾಡುತ್ತೀರಿ, ನೀವು ಚೆನ್ನಾಗಿ ಮಾತು ಕೂಡ ಆಡುತ್ತೀರಿ, ಬುದ್ಧಿವಂತರಿದ್ದೀರಿ, ಇದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಕನ್‌ವಿನ್ಸ್ ಮಾಡತಕ್ಕಂಥದ್ದರ ಬಗ್ಗೆ ಹೇಳುತ್ತೇನೆ, ತಾವು ಎಲ್ಲೆಲ್ಲೋ ಹೋಗಿ ಸುತ್ತಿ ಬಳಸಿ ಕನ್‌ವಿನ್ಸ್ ಮಾಡತಕ್ಕಂತಹ ಪ್ರಯತ್ನ ಮಾಡಿದಿರಿ. ಆದರೆ ತಾವು ಆರ್ಬಿಟ್ರರಿಯಾಗಿ, ನಿಮ್ಮ ಮನಸ್ಸಿಗೆ ಬಂದಂತೆ, ಒಂದೇ ಸಮಯದಲ್ಲಿ ನೀವು 25 ಪರ್ಸೆಂಟ್‌ನಿಂದ 43 ಪರ್ಸೆಂಟ್‌ವರೆಗೆ ಎನ್‌ಹ್ಯಾನ್ಸ್ ಮಾಡಿದರೆ ಇದು ಯಾವ ನ್ಯಾಯ? ಹೆಚ್ಚಿಗೆ ಕೊಡಬೇಕು ನಿಜ ಇಲ್ಲದೆ ಇದ್ದರೆ ಯಾವುದೇ ಸರ್ಕಾರ ಕೂಡ ಟ್ಯಾಕ್ಸ್ ಇಲ್ಲದೆ ನಡೆಯುವುದಿಲ್ಲ. ಆದರೆ ಇಷ್ಟು ಹೆಚ್ಚು ಪರ್‌ಸೆಂಟೇಜಿನಲ್ಲಿ ಒಂದೇ ಸಾರಿ ಮಾಡಬಾರದು. ನೀವು ಇನ್ನೊಂದು ಮಾತು ಹೇಳಿದಿರಿ, ನಮಗೆ ಕರೆದು ಕೇಳಬೇಕು ಎಂದು, ಇಂತಹ ಟ್ಯಾರಿಫ್ ಏನು ಹಾಕುತ್ತೀರಿ, ಪರ್ಟಿಕ್ಯುಲರ್‌ಲೀ ಆಕ್ಟ್ರಾಯ್ ಆಗಲಿ, ಎಲಿಕ್ಟ್ರಿಸಿಟಿಯಾಗಲಿ ಮತ್ತು ಟ್ಯಾರಿಫ್ ಆಗಲಿ, ಇಂಥವುಗಳ ಹೆಚ್ಚು ಮಾಡುವಾಗ ಅದು ಯಾರಿಗೆ ಅಫೆಕ್ಟ್ ಆಗುತ್ತದೆ, ಅವರನ್ನು ಕರೆಯಿಸಿ ಮಾತನಾಡತಕ್ಕಂಥದ್ದು ಸಾಮಾನ್ಯವಾದ ರೂಢಿ.

(5.30 ಪಿ.ಎಂ.) ಈ ಹಿಂದೆ ಯಾರೋ [illegible]ಗು ಕರೆಸದೇ ಇರಬಹುದು, ಅದನ್ನೇ ನೀವು ಹೇಳಿಕೊಂಡು ನಾನು ಏಕೆ ಕರೆಸಲಿ ಎನ್ನಬಾರದು, ಯಾವಾಗ ಮ್ಯಾಟರ್ ಸೆನ್ಸಿಟಿವ್ ಇರುತ್ತದೆಯೋ ಆಗ ಕರೆಸಿದಾಗ ನಾವು 100 ರೂ.ಗಳು ಎನ್ನುತ್ತೇವೆ ಎಂದಿಟ್ಟುಕೊಳ್ಳೋಣ, ಆಗ ನೀವು ಹೇಳಬಹುದು ಇಲ್ಲಪ್ಪಾ ಕೇವಲ 100 ರೂ.ಗಳಿಂದ ನಮ್ಮ ಸಂಸ್ಥೆ ಚೆನ್ನಾಗಿ ನಡೆಯುವುದಿಲ್ಲ ಆದ್ದರಿಂದ 350 ರೂ. ಮಾಡುತ್ತೇನೆಂದು ಅಥವಾ ನಿಮ್ಮ ಡಿಸಿಷನ್ ಏನಿದೆಯೋ ಅದನ್ನು ತೆಗೆದುಕೊಳ್ಳಬಹುದು. ಆದರೆ ನೀವು ಆ ರೀತಿ ಮಾಡದೇ ನಾವು ಏನನ್ನೂ ಕೇಳುವುದಿಲ್ಲ ಮತ್ತು ಕೇಳತಕ್ಕಂಥ ಅವಶ್ಯಕತೆಯೇ ಇಲ್ಲ ಎಂದರೆ ಹೇಗೆ?

ಶ್ರೀ ಜೆ.ಹೆಚ್.ಪಟೇಲ್(ಮುಖ್ಯ ಮಂತ್ರಿಗಳು):- ಹಿಂದಿನ ಸರ್ಕಾರದವರು ಸೆಟ್‌ಅಪ್ ಮಾಡಿದಂಥ ಪ್ಲಾನಿಂಗ್ ಬೋರ್ಡ್‌ನವರು ಸ್ಟೇಟ್‌ಮೆಂಟ್ ಮಾಡಿದ್ದಾರೆ, ಅವರು 25 ಪೈಸೆಗೆ ಮಿನಿಮಮ್ ಇರಬೇಕೆಂದು ಹೇಳಿದ್ದಾರೆ. ಲೆಜಿಸ್ಲೇಚರ್ ಕಮಿಟಿಯವರು 100 ರೂ. ಮಾಡಬಹುದು ಎಂದು ಹೇಳಿದ್ದಾರೆ. ಲೆಜಿಸ್ಲೇಚರ್‌ರವರನ್ನು ಕೇಳದೆ ಮತ್ತು ಯಾವುದು ದಾಖಲೆ ಇಲ್ಲದೇ ನಾನು ಇದನ್ನು ಮಾಡಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹೌದು, ನೀವು ಅದರ ಬಗ್ಗೆ ವಿಚಾರ ಮಾಡಬೇಕಾಗಿತ್ತು. ಈಗ ಈ ಕಮಿಟಿ ರಿಪೋರ್ಟ್ ಬಗ್ಗೆಯೇ ವಿಚಾರ ಮಾಡಿಲ್ಲವಲ್ಲ. ಕಮಿಟಿ ರಿಪೋರ್ಟನ್ನು ವಿಚಾರ ಮಾಡಿಕೊಂಡು.....

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಖರ್ಗೆಯವರೇ, ವಿಚಾರ ಮಾಡಿ ಅವರು ಯಾವ ಕಾಲದಲ್ಲಿ ರೆಕಮಂಡ್ ಮಾಡಿದ್ದರೋ-ಆಗಿದ್ದಂಥ ಇನ್‌ಪುಟ್ ಕಾಸ್ಟ್ ಏನಿತ್ತು ಅದು ಈಗ ಮೂರು ಪಟ್ಟು ಜಾಸ್ತಿಯಾಗಿದೆ. ಅದು ಎಲ್ಲಾ ಪ್ರಾಜೆಕ್ಟ್‌ಗೂ ಇನ್‌ಪುಟ್ ಕಾಸ್ಟ್ ಪ್ರತಿ ದಿನಕ್ಕೂ ಇನ್‌ಕ್ರೀಸ್ ಆಗುತ್ತಾ ಹೋಗುತ್ತಿದೆ.

★ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅದು ಎಲ್ಲರಿಗೂ ಗೊತ್ತು. ಆದರೆ ಇವೊತ್ತಿನ ದಿವಸ ನೀವು ಇನ್‌ಕ್ರೀಸ್ ಆಗಿದ್ದನ್ನು ಅರ್ಥ ಮಾಡಿಕೊಂಡು ಮತ್ತು ಈ ರೆಕಮಂಡೇಷನ್

ತಿಳಿದುಕೊಂಡು ಈ ಸಾಲಿನಲ್ಲಿ ನಾವು ಎಷ್ಟು ಎನ್‌ಹ್ಯಾನ್ಸ್ ಮಾಡಬಹುದು ಮತ್ತು ಮುಂದಿನ ವರ್ಷ ಎಷ್ಟು ಜಾಸ್ತಿ ಮಾಡಬಹುದು, ಹೀಗೆ ಎರಡೂ ಮೂರು ವರ್ಷಗಳು ಪ್ಲಾನ್ ಮಾಡಿಕೊಂಡು ತಾವು ಜಾಸ್ತಿ ಮಾಡಿದ್ದರೆ ಅದಕ್ಕೊಂದು ಅರ್ಥ ಇರುತ್ತಿತ್ತು. ಈ ಹಿಂದೆ 4 ವರ್ಷ ದರ ಜಾಸ್ತಿ ಮಾಡಿಲ್ಲ ಅದಕ್ಕೆ ನಾನು ಸಂಸ್ಥೆಯನ್ನು ಉಳಿಸುವುದಕ್ಕೋಸ್ಕರ ದಿಢೀರನೇ ಜಾಸ್ತಿ ಮಾಡಿದ್ದೇನೆ, ಇಲ್ಲದಿದ್ದರೆ ಸಂಸ್ಥೆ ಉಳಿಯುವುದಿಲ್ಲ ಅಂದ್ರೆ ಹೇಗೆ? ಈಗ ನಾವು ಸಬ್ಸಿಡಿಯನ್ನು ಏತಕ್ಕೆ ಕೊಡುತ್ತೇವೆ? ಈ ಫರ್ಟಿಲೈಸರ್ ಸಬ್ಸಿಡಿ ಬಗ್ಗೆ ತಾವು ಮಾತನಾಡುತ್ತೀರಿ ಮತ್ತು ಪ್ರಧಾನ ಮಂತ್ರಿಗಳು ಮಾತನಾಡುತ್ತಾರೆ. ಪಿ.ಎಲ್.ಡಿ.ಬ್ಯಾಂಕ್‌ಗೆ ಇಂಟರೆಸ್ಟ್ ವೇವ್ ಮಾಡಿದಿರಿ, ಏಕೆ ಮಾಡಿದಿರಿ? ಈಗ ಸಬ್ಸಿಡಿ ಕೊಡತಕ್ಕಂಥದ್ದು ಇಂಥವನ್ನೆಲ್ಲಾ ತಾವು ಏಕೆ ಮಾಡಿದಿರಿ ಎಂದರೆ ಈ ಪಾಪ್ಯುಲರ್ ಮೆಶರ್‌ನೊಳಗೆ ಜನರಿಗೆ ಸಹಾಯ ಆಗುತ್ತದೆ ಎಂದು ಹೇಳಿಕೊಂಡೇ ಬಂದಿರಿ. ಆದ್ದರಿಂದ ಇದರಲ್ಲೂ ಕೂಡ ರೈತರಿಗೆ ಲಾಭವಾಗುವಾಗ ನೀವು ಎಷ್ಟು ಲುಕ್ಸಾನು ಆಗುತ್ತದೆಯೋ ಅಷ್ಟನ್ನು ಬಜೆಟ್‌ನಿಂದ ತುಂಬಿಕೊಡಿ. ಈ ಸಾರಿ 200 ಕೋಟಿ ರೂ.ಗಳೇ ಬರುತ್ತದೆ ಎಂದಿಟ್ಟುಕೊಳ್ಳಿ, 700 ಕೋಟಿ ರೂ.ಗಳು ಬರಲಿ ಅಥವಾ 500 ಕೋಟಿ ರೂ.ಗಳು ಬರಲಿ, ಈಗ 200 ಕೋಟಿ ರೂ.ಗಳು ಬರುತ್ತಿತ್ತು, ಎಂದರೆ 5 ಪರ್ಸೆಂಟ್ ಅಥವಾ 100 ರೂ.ಗಳನ್ನು ಹಾಕುವುದರಿಂದ ಇನ್ನೂ 200 ಕೋಟಿ ರೂ.ಗಳಿಗೆ ನೀವು ಸ್ಟೇಟ್ ಬಜೆಟ್‌ನಿಂದ ಲುಕ್ಸಾನು ತುಂಬುವುದಕ್ಕೆ ಕೆ.ಇ.ಬಿ.ಗೆ ಕೊಡಿ. ಅದೇ ರೀತಿ ಮುಂದಿನ ವರ್ಷ 5 ಪರ್ಸೆಂಟ್, ಹೀಗೆ ನೀವು ಏನಾದರೂ ಒಂದು ರೀತಿಯಲ್ಲಿ ಮಾಡಿಕೊಂಡು ಹೋಗಬೇಕಾಗಿತ್ತೇ ಹೊರತಾಗಿ ಅದನ್ನು ಬಿಟ್ಟು ಮೂರು ವರ್ಷಗಳ ಕಾಯಿದೆಯನ್ನು ನಾವು ಒಮ್ಮೆಗೇ ದುರಸ್ತಿ ಮಾಡುತ್ತಿದ್ದೇವೆ ಎಂದು ಹೇಳಿ ಈ ರೀತಿಯಾಗಿ ಎನ್‌ಹ್ಯಾನ್ಸ್ ಮಾಡಿದರೆ ಹೇಗೆ? ನಿಮ್ಮ ಮನಸ್ಸಿನಲ್ಲಿ ಏನಿದೆಯೋ ಏನೋ? ಇದರ ಬಗ್ಗೆ ನಿಮ್ಮವರನ್ನೇ ಕೇಳಿ, ಈ ರೀತಿಯಲ್ಲಿ ಎನ್‌ಹ್ಯಾನ್ಸ್ ಮಾಡಿರುವುದೇ ಸರಿಯೇ ಎಂದು, ಅವರು ಈ ರೀತಿ ಮಾಡಿರುವುದು ಅನ್ಯಾಯ ಎನ್ನತಕ್ಕಂಥ ಮಾತನ್ನು ಹೇಳದೇ ಹೋದರೆ ನೀವು ಹೇಳಿದ ಹಾಗೆ ನಾನು ಕೇಳುತ್ತೇನೆ. ನೀವೇನೋ ಹೇಳಬಹುದು ಇವೊತ್ತು 1150 ಕೋಟಿ ರೂ.ಗಳು ಕೆ.ಇ.ಬಿ.ಯಲ್ಲಿ ಲುಕ್ಸಾನು ಇದೆ ಮತ್ತು ಕೆ.ಪಿ.ಸಿ.ಯಲ್ಲೂ ಕೂಡ ಇವೊತ್ತು ಯಾರು ದುಡ್ಡನ್ನು ಕೊಡುತ್ತಿಲ್ಲ ಮತ್ತು ನಮ್ಮ ಅನೇಕ ಪ್ರಾಜೆಕ್ಟ್‌ಗಳು ಹಾಗೇ ಬಿದ್ದು ಹೋಗಿವೆ. ಆ ಕಾರಣದಿಂದ ಎನ್‌ಹ್ಯಾನ್ಸ್ ಮಾಡಬೇಕಾಗಿದೆ ಎಂದು ನೀವು ಹೇಳಬಹುದು. ಆದರೆ ಅದಕ್ಕೆ ಜನ ಮನ್ನಣೆಯನ್ನೂ ಕೂಡ ಕೊಡಬಹುದು, ಅದು ಯಾವಾಗೆಂದರೆ ನಮ್ಮ ಕೈಯಲ್ಲಿ ಇಷ್ಟು ಆಗುವುದಿಲ್ಲ ನಮ್ಮ ಶಕ್ತಿ ಇಷ್ಟಿದೆ, ನಾವು ಇಷ್ಟು ಸಹಿಸಬಹುದು ಎನ್ನತಕ್ಕಂಥ ಮಾತನ್ನು ಅವರು ಹೇಳಬಹುದು. ಅದಕ್ಕೋಸ್ಕರ ದಯವಿಟ್ಟು ತಾವು ಇದನ್ನು ವಿತ್‌ಡ್ರಾ ಮಾಡಿಕೊಳ್ಳಿ ಮತ್ತು ಜಂಟಿ ಸದನ ಸಮಿತಿಯನ್ನು ಮಾಡಿ ಅದರ ರೆಕಮಂಡೇಷನ್ ರಿಪೋರ್ಟ್ ಆಧಾರದ ಮೇಲೆ ತಾವು ಕ್ರಮವನ್ನು ತೆಗೆದುಕೊಂಡರೆ ಮುಂದೆ ಅದು ಸೂಕ್ತವಾಗುತ್ತದೆ. ಈ ರೀತಿ ಮಾಡದಿದ್ದರೆ ಖಂಡಿತವಾಗಿ ಈಗ ನೀವು ಮಾಡಿರುವುದು ಅನ್ಯಾಯವಾಗುತ್ತದೆಯಾದ ಕಾರಣ ನಾನಂತೂ ಸರ್ವಥಾ ಇದನ್ನು ಒಪ್ಪುವುದಿಲ್ಲವಾದ ಕಾರಣ ನಾನೂ ಕೂಡ ಅನಿವಾರ್ಯವಾಗಿ ಧರಣಿ ಮಾಡಬೇಕಾಗಿರುವುದರಿಂದ ನಾವು ಕೂಡ ಬಾವಿಗೆ ಹೋಗಿ ಧರಣಿ ಮಾಡುತ್ತೇವೆ.

(ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಬಾವಿಯಲ್ಲಿ ಧರಣಿ ಕುಳಿತರು)

★**ಶ್ರೀ ಹೆಚ್.ಎನ್.ನಂಜೇಗೌಡ:-** ಮಾನ್ಯ ಅಧ್ಯಕ್ಷರೇ, ನಾನು ಮುಖ್ಯ ಮಂತ್ರಿಗಳಿಂದ ಈ ರೀತಿಯಲ್ಲಿ ಉತ್ತರವನ್ನು ನಾನು ನಿರೀಕ್ಷಣೆ ಮಾಡಿರಲಿಲ್ಲ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ನೀವು ಇದಕ್ಕೆ ನೇರವಾಗಿ ಕಾರಣ ಎಂದು ಹೇಳುವುದಿಲ್ಲ, ಕೇಂದ್ರ ಸರ್ಕಾರದ ಪೆಟ್ರೋಲ್, ಡೀಸೆಲ್, ದರವನ್ನು ಏರಿಸಿಬಿಟ್ಟಿದೆ. ಇವೊತ್ತು ತರಕಾರಿ ದರಗಳು ಏರಿವೆ, ನೀವು ಹೋಗಿ ತರದೇ ಇರಬಹುದು. ಎಲ್ಲಾ ಅವಶ್ಯಕ ಪದಾರ್ಥಗಳ ದರಗಳು ಏರಿವೆ. It may be incidental. You may not be responsible but your Party is responsible. ಈಗ ಕೇಂದ್ರದಲ್ಲೂ ದರಗಳನ್ನು ಏರಿಸಿ ಮತ್ತು ನೀವೂ ಕೂಡ ದರಗಳನ್ನು ಏರಿಸಿದರೆ ಸಾಮಾನ್ಯ ಮನುಷ್ಯ ಏನಾಗಬೇಕು? ನೀವು ಇನ್ನೂ ಬಂದಿರಲಿಲ್ಲ, ಆಗ ನಾನು ಹೇಳುತ್ತಿದ್ದೆ, You are making towns a place fit for beggers and smugglers. ಮಿಡ್ಲ್‌ಕ್ಲಾಸ್ ಪೀಪಲ್ಸ್ ಬದುಕುವಂಥ ಪರಿಸ್ಥಿತಿ ಬರುವುದಿಲ್ಲ. ದಯಮಾಡಿ ನಾನು ಹೇಳುವುದೇನೆಂದರೆ ಈಗಾಗಲೇ ಕೇಂದ್ರ ಸರ್ಕಾರದವರು ಏರಿಸಿರುವ ದರಗಳ ಬಗ್ಗೆ ನೀವು ತಲೆಯಲ್ಲಿಟ್ಟುಕೊಂಡು ಜನಗಳ ಕಷ್ಟವನ್ನು ಅರ್ಥ ಮಾಡಿಕೊಂಡು ದಯಮಾಡಿ ನಿಮ್ಮ ನಿಲುವನ್ನು ಬದಲಾಯಿಸಿಕೊಳ್ಳಿ. ಈ ವಿಚಾರವಾಗಿ ಬೇಕಾದರೆ ನಾಳೆ ಬೆಳಿಗ್ಗೆ ಕರೆಯಿರಿ ನಾವು ಕುಳಿತುಕೊಂಡು ಮಾತನಾಡೋಣ, ಈಗಾಗಲೇ ಏರಿಸಿರುವುದರಲ್ಲಿ ಗಣನೆಗೆ ತೆಗೆದುಕೊಂಡು ಎಷ್ಟು ರೀಸನಬಲ್ ಆಗಿ ದರವನ್ನು ಏರಿಸಬಹುದು ಎಂಬುದನ್ನು ಯೋಚನೆ ಮಾಡುವುದನ್ನು ಬಿಟ್ಟು ನೀವು ಈಗ ಮಾಡಿರುವುದೇ ಸರಿ ಎನ್ನಬಾರದು. ಆದುದರಿಂದ ಇದನ್ನು ಪುನರ್ ಪರಿಶೀಲನೆ ಮಾಡಿ. ಏಕೆಂದರೆ ಇದರಲಿ ಪ್ರೆಸ್ಟೀಜ್ ಪ್ರಶ್ನೆ ಬರುವುದಿಲ್ಲ. ದಯಮಾಡಿ ನೀವು ಇದನ್ನು ಪ್ರೆಸ್ಟೀಜ್ ಪ್ರಶ್ನೆಯೆಂದು ಮಾಡಿಕೊಳ್ಳಬೇಡಿ. ನಮಗೆ ಅರ್ಥವಾಗುತ್ತದೆ.....

ಶ್ರೀ ಜೆ.ಹೆಚ್.ಪಟೇಲ್(ಮುಖ್ಯ ಮಂತ್ರಿಗಳು):- I have never taken it as a prestige problem. ಎಂದು ನಾನು ಯಾವಾಗಲೂ ಯೋಚನೆ ಮಾಡಿಲ್ಲ ಮತ್ತು ಮಾಡುವುದೂ ಇಲ್ಲ. ಪ್ರೆಸ್ಟೀಜ್ ಪ್ರಾಬ್ಲಮ್ ಅಂತ ಅಲ್ಲ ನಾನು ಹೇಳುತ್ತಿರುವುದು. ನಿಜವಾಗಿಯೂ ಇದರ ಕಷ್ಟ ನಿಮಗೆ ಅರ್ಥವಾಗುತ್ತದೆ ಎಂದು ನಾನು ಇಲ್ಲಿಯವರೆಗೂ ಪ್ರಯತ್ನವನ್ನು ಮಾಡಿದೆ. ನಾನು ಇದನ್ನು ಒಂದು ಮಾತನ್ನು ಹೇಳುತ್ತೇನೆ, ನಿಮಗೆ ಮಾತ್ರ ಜನರಿಂದ ಒಳ್ಳೆಯ ಮಾತನ್ನು ಹೇಳಿಸಿಕೊಳ್ಳಬೇಕು ಎನ್ನುವ ಆಸೆಯೇ? ನಮಗೂ ಕೂಡ ಆ ಆಸೆ ಇಲ್ಲವೇ?

(ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಬಾವಿಯಲ್ಲಿ ಕುಳಿತು ಮಾತನಾಡುತ್ತಿದ್ದರು)

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅಧ್ಯಕ್ಷರೇ, ಪ್ರಸ್ತುತ ಪರಿಸ್ಥಿತಿಯಲ್ಲಿ ಕೆ.ಇ.ಬಿ.ಯ ವಿದ್ಯುತ್ ದರವನ್ನು ಹೆಚ್ಚಳ ಮಾಡುವುದಕ್ಕೆ ಬೆಂಬಲ ವ್ಯಕ್ತಪಡಿಸಿ ಯಾವುದೇ ರೀತಿಯಲ್ಲಿ ಪ್ರೋತ್ಸಾಹ ಕೊಡುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ತೀವ್ರವಾದಂಥ ಬೆಲೆ ಏರಿಕೆಯನ್ನು ಮಾಡಿದ್ದಾರೆ. ಇದು ವೈಜ್ಞಾನಿಕವಾಗಿಲ್ಲ. ಈ ಬೆಲೆ ಏರಿಕೆಯನ್ನು ಸಮರ್ಥಿಸಿಕೊಳ್ಳುವುದಕ್ಕೆ ತಮಗೆ ಆಗದೇ ಇದ್ದ ಕಾರಣದಿಂದ ಅದನ್ನು ದಯಮಾಡಿ ಪುನರ್‌ಪರಿಶೀಲನೆ ಮಾಡಬೇಕೆಂದು ಕೇಳಿಕೊಂಡು ನಾನು ಧರಣಿಯನ್ನು ಮಾಡುತ್ತೇನೆ.

(ಯು.ಆರ್.ಸಭಾಪತಿಯವರು ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರ

ಕೊಡುವಾಗ ಮತ್ತು ಸಮಂಜಸವಾಗಿ ನಮ್ಮೆಲ್ಲರ ಮಾತನ್ನು ಕೇಳಿ ಅವರು ಸ್ವಲ್ಪವಾದರೂ ಕೂಡ ತಮ್ಮ ನಿಲುವನ್ನು ಕೆಳಗಡೆ ಇಳಿಯಬಹುದು ಎಂದು ತಿಳಿದುಕೊಂಡಿದ್ದೆ. ಆದರೆ ಅವರ ಮನಸ್ಸಿನಲ್ಲಿ ಆ ಭಾವನೆ ಇಲ್ಲ. ಅವರು ಮಾತನಾಡುತ್ತಾ ನಾನು ಏರಿಸಿರತಕ್ಕಂಥ ದರ ಸ್ಪಷ್ಟವಾಗಿದೆ, ನಾನು ಜನರನ್ನು ಕ್ಷಮಿಸಿಬಿಡಿ ಎಂದು ಕೇಳಿಕೊಂಡು ಬಿಡುತ್ತೇನೆ, ಇಷ್ಟೇ ನನ್ನ ಮಾತುಗಳು ಎಂದು ಹೇಳಿರುತ್ತಾರೆ. ನಾವು ಅವರ ಮಾತುಗಳನ್ನು ಕೇಳಿಕೊಂಡು ಇಷ್ಟಕ್ಕೇ ಸುಮ್ಮನಿರುವುದಕ್ಕಾಗುವುದಿಲ್ಲ. ಏಕೆಂದರೆ ಅವರು ಯಾವಾಗ ತಮ್ಮ ನಿಲುವಿನಿಂದ ಹಿಂದೆ ಬರದೇ ತಮ್ಮ ನಿಲುವೇ ಸರಿ ಎಂದಿರುವುದರಿಂದ ಈಗ ನಮ್ಮ ನಿಲುವು ಸ್ಪಷ್ಟವಾಗಿ ಏನೆಂದರೆ ಇವೊತ್ತಿನಿಂದ ಈ ಕ್ಷಣದಿಂದ ರಾಜ್ಯಾದ್ಯಂತ ಹೋರಾಟ ಮಾಡುವುದಕ್ಕೆ ಸಭಾತ್ಯಾಗ ಮಾಡಿ ಹೊರಗೆ ಹೋಗುತ್ತಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಸದನದಿಂದ ಹೊರಗೆ ಹೋದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ, ಈ ವಿದ್ಯುಚ್ಛಕ್ತಿ ದರವನ್ನು ಏರಿಸಿರುವುದರ ವಿರುದ್ಧ ಪ್ರತಿಭಟನೆಯನ್ನು ಮಾಡಿ ಸರ್ಕಾರ ತಮ್ಮ ನಿಲುವಿನಲ್ಲಿ ಯಾವುದೇ ರೀತಿಯಾದ ಬದಲಾವಣೆಯನ್ನು ಮಾಡುವುದಿಲ್ಲ ಎಂದು ಹೇಳತಕ್ಕಂಥ ಹಠಮಾರಿ ಧೋರಣೆಯನ್ನು ಪ್ರತಿಭಟನೆ ಮಾಡಿ ನಾನೂ ಕೂಡ ಸಭಾತ್ಯಾಗವನ್ನು ಮಾಡುತ್ತಿದ್ದೇನೆ.

(ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಸದನದಿಂದ ಹೊರಗೆ ಹೋದರು)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೇ, ಸರ್ಕಾರದ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲದೇ ಹಠಮಾರಿತನದ ಧೋರಣೆ ಇರುವುದರಿಂದ ನಾವು ರಾಜ್ಯಾದ್ಯಂತ ಹೋರಾಟ ಮಾಡಬೇಕಾಗಿರುತ್ತದೆ. ನಮ್ಮ ಸ್ಪಷ್ಟ ನಿಲುವು ಕರ ನಿರಾಕರಣ ಚಳುವಳಿಗೆ ಕರೆ ಕೊಡುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಆದುದರಿಂದ ನಾನೂ ಕೂಡ ತಮ್ಮ ನಿಲುವನ್ನು ಪ್ರತಿಭಟನೆ ಮಾಡಿ ಹೊರಗಡೆ ಹೋಗುತ್ತಿದ್ದೇನೆ.

(ಶ್ರೀ ಕೆ.ಎಸ್.ಪುಟ್ಟಣ್ಣಯ್ಯನವರು ಸದನದಿಂದ ಹೊರಗೆ ಹೋದರು)

ಶ್ರೀ ಬಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೇ, ಈ ವಿದ್ಯುಚ್ಛಕ್ತಿ ದರವನ್ನು ಏರಿಸಿರುವುದರ ಬಗ್ಗೆ ಬೆಳಿಗ್ಗೆಯಿಂದ ಹಲವಾರು ರೀತಿಯಲ್ಲಿ ಸರ್ಕಾರದ ಗಮನವನ್ನು ಸೆಳೆದರೂ ಕೂಡ ಸರ್ಕಾರ ಸ್ವಲ್ಪ ಕೂಡ ತಮ್ಮ ನಿಲುವಿನಲ್ಲಿ ಬದಲಾವಣೆಗೆ ಬರದೇ ಇರುವ ಕಾರಣದಿಂದ ನಾನೂ ಕೂಡ ಸಭಾತ್ಯಾಗವನ್ನು ಮಾಡುತ್ತೇನೆ.

(ಶ್ರೀ ಬಿ.ಮುನಿಯಪ್ಪನವರು ಸದನದಿಂದ ಹೊರಗಡೆ ಹೋದರು)

ಅಧ್ಯಕ್ಷರು:- ಮಾನ್ಯ ಖರ್ಗೆಯವರೇ, ಇವೊತ್ತಿನ ಅಜೆಂಡಾದಲ್ಲಿ ಡೆಪ್ಯುಟಿ ಸ್ಪೀಕರ್ ಎಲೆಕ್ಷನ್ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ವಿದ್ಯುತ್ ದರದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ, ಅವರು ಇದರ ಬಗ್ಗೆ ಒಂದು ಮಾತನ್ನು ಹೇಳಿಬಿಡಲಿ.

ಅಧ್ಯಕ್ಷರು:- ಮುಖ್ಯ ಮಂತ್ರಿಗಳು ಇರಲಿ, ಅವರು ಈಗಾಗಲೇ ರಿಪ್ಲೈ ಕೊಟ್ಟಿದ್ದಾರೆ, ಆದರೆ ನಾನು ಅದರ ಬಗ್ಗೆ ಇನ್ನೂ ರೂಲಿಂಗ್ ಕೊಟ್ಟಿಲ್ಲ. ಇವೊತ್ತಿನ ಅಜೆಂಡಾದಲ್ಲಿ ಡೆಪ್ಯುಟಿ ಸ್ಪೀಕರ್ ಎಲೆಕ್ಷನ್ ಇದೆ, ಹೇಗೆ ಮಾಡೋಣ, ಏಕೆಂದರೆ ಇದೊಂದು ಅಪರೂಪದ ಪ್ರಸಂಗ. ಇವೊತ್ತು ಎಲೆಕ್ಷನ್ ಫಿಕ್ಸ್

ಮಾಡಿದ್ದೇವೆ. ನಿಮ್ಮನ್ನೆಲ್ಲಾ ನಾನು ಇಲ್ಲಿ ಇಟ್ಟುಕೊಂಡು ಎಲೆಕ್ಷನ್ ಮಾಡಬೇಕಾಗಿದೆ. ಇಲ್ಲಿ ಬಹಳಷ್ಟು ಜನ ಹಿರಿಯರು ಇದ್ದೀರಿ, ನೀವೇ ಹೇಳಿ ಎಲೆಕ್ಷನ್‌ನ್ನು ಹತಗೆ ಮಾಡಲಿ,

(ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ಬಾವಿಯಲ್ಲಿ ನಿಂತು ವಿದ್ಯುತ್ ದರದ ಬಗ್ಗೆ ಮತ್ತು ಡೆಪ್ಯುಟಿ ಸ್ಪೀಕರ್ ಎಲೆಕ್ಷನ್ ಬಗ್ಗೆ ತಮ್ಮದೇ ಆದ ಅಭಿಪ್ರಾಯವನ್ನು ಕೊಟ್ಟರು)

★**ಅಧ್ಯಕ್ಷರು:-** ಇದು ಬದಲಾವಣೆ ಮಾಡುವುದಿಲ್ಲವೆಂದು ಒಂದೇ ಬಾರಿ ಹೇಳುವುದಕ್ಕೆ ... ತಾವು ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಈ ಸದನದಲ್ಲಿ ಆಡಳಿತ ಪಕ್ಷವನ್ನು ಹೊರತುಪಡಿಸಿ ಉಳಿದ ಎಲ್ಲರ ಪರವಾಗಿ ಮಾತನಾಡತಕ್ಕಂಥ ಅಧಿಕೃತ ವಕ್ತಾರರು. ಇದು ಸದನದ ಗೌರವದ ಪ್ರಶ್ನೆ. ಸದನದ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೆ ನನ್ನ ಜೊತೆಯಲ್ಲಿ ಸಹಕರಿಸುವುದಕ್ಕೆ ಉಪಾಧ್ಯಕ್ಷರ ಆಯ್ಕೆ ಮಾಡಬೇಕಾಗಿದೆ. ಇದೊಂದು ಪ್ರಮುಖವಾದಂಥ ವಿಷಯ, ತಾವು ತಮಗೆ ಸರಿ ತೋಚಿದ ನಿಲುವನ್ನು ತೆಗೆದುಕೊಳ್ಳಲಿಕ್ಕೆ ತಮಗೆ ಹಕ್ಕಿದೆ. ನಾನು ಇದನ್ನು ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಈ ವಿಷಯ ಇವೊತ್ತೇ ಬಂದಿರುವುದು ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ನಿಗದಿ ಮಾಡಿರುವುದು ಎರಡೂ ಒಟ್ಟಿಗೇ ಆಗಿರುವುದರಿಂದ ಸ್ವಲ್ಪ ದೂರಾಲೋಚನೆಯನ್ನು ಮಾಡಿ. ನೀವು ನಿಮ್ಮ ನಿಲುವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ನನ್ನದೇನೂ ಅಕ್ಷೇಪಣೆ ಇಲ್ಲ. ಆದರೆ ಉಪಾಧ್ಯಕ್ಷರ ಚುನಾವಣೆಗೆ ಸಹಕರಿಸಿ ಆಮೇಲೆ ಮುಂದುವರಿಸುತ್ತೀರೇನೋ ನೋಡಿ ಸ್ವಲ್ಪ. ಅಷ್ಟರ ಮಟ್ಟಿಗಾದರೂ ಕನ್ಸೆಷನ್ ಕೊಡುತ್ತೀರೇನೋ ನೋಡಿ ಪುನರ್ ಪರಿಶೀಲನೆ ಮಾಡುವುದು, ಧರಣಿ ಮುಂದುವರಿಸಿಕೊಂಡು ಹೋಗುವುದು ನಿಮ್ಮ ಅವರ ಮಧ್ಯೆ ಆಗುತ್ತಿದೆ. ಇದು ಸದನದ ಗೌರವದ ಪ್ರಶ್ನೆ ಎಂದು ಮತ್ತೊಮ್ಮೆ ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಉಪಾಧ್ಯಕ್ಷರನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ದಯಮಾಡಿ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯಮಾಡಿ ಸ್ವಲ್ಪ ಆಲೋಚನೆ ಮಾಡಿ. ಇದು ಒಂದು ದಿವಸದೊಳಗೆ ಮುಕ್ತಾಯ ಆಗತಕ್ಕಂಥಾದ್ದು ಅಲ್ಲ. ಇನ್ನೂ ಜಟಿಲವಾದ ಸಮಸ್ಯೆಗಳು ಮುಂದೆ ಬರಬಹುದು. ಇಂಥ ಸನ್ನಿವೇಶದಲ್ಲಿ ನಾವೆಲ್ಲರೂ ಸದಸ್ಯರಾಗಿದ್ದಾಗ ಹೇಗೆ ನಡೆದುಕೊಂಡೆವು ಎನ್ನುವುದು ರೆಕಾರ್ಡ್‌ನಲ್ಲಿ ಉಳಿದು ಹೋಗುತ್ತದೆ. ದಯಮಾಡಿ ನಿಮ್ಮೆಲ್ಲರ ಸಹಕಾರವನ್ನು ನಾನು ಅಪೇಕ್ಷಿಸುತ್ತಿದ್ದೇನೆ. ವೈ.ರಾಮಕೃಷ್ಣರವರೇ, ತಾವು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಆಗಿ ಕೆಲಸ ಮಾಡಿರತಕ್ಕಂಥವರು. ನನ್ನ ಸಂಧಿಗ್ಧತೆಯನ್ನು ಅರ್ಥ ಮಾಡಿಕೊಂಡು ದಯಮಾಡಿ ನಮ್ಮ ನೆರವಿಗೆ ಬರಬೇಕು ನೀವು.

★**ಶ್ರೀ ಎಂ.ಸಿ.ನಾಣಯ್ಯ:-** ಸಭಾಧ್ಯಕ್ಷರೇ, ನಿಲುವಳಿ ಸೂಚನೆಯನ್ನು ವಿರೋಧ ಪಕ್ಷದವರು ಎತ್ತಿದ್ದಾರೆ. ತಾವು ಪೂರ್ವಭಾವಿಯಾಗಿ ಮಾತನಾಡಲು ಇರತಕ್ಕಂಥ ಅವಕಾಶವನ್ನು ಅವರಿಗೆ ಕೊಟ್ಟಿದ್ದೀರಿ. ಪೂರ್ವಭಾವಿಯಾಗಿ ಅವಕಾಶವನ್ನು ಕೊಟ್ಟಿರತಕ್ಕಂಥಾದ್ದು, ಈ ನಿಲುವಳಿ ಸೂಚನೆಯನ್ನು ತಾವು ಎತ್ತಿ ಹಿಡಿಯಬೇಕೇ ಅಥವಾ ಬೇಡವೇ ಎನ್ನುವುದಕ್ಕೆ ನಿಯಮದ ಅಡಿಯಲ್ಲಿ ತಾವು ಕೊಟ್ಟಿರತಕ್ಕಂಥ ಒಂದು ಅನುಮತಿ. ವಿರೋಧ ಪಕ್ಷದವರ ಮಾತನ್ನು ತಾವು ಕೇಳಿದ್ದೀರಿ. ಆಡಳಿತ ಪಕ್ಷದಿಂದ ಮಾನ್ಯ ಮುಖ್ಯ ಮಂತ್ರಿಗಳು ಅವರ ಉತ್ತರವನ್ನು ಹೇಳಿದ್ದಾರೆ. ಇದಾದ ಮೇಲೆ ತಮ್ಮ ತೀರ್ಪನ್ನು ಅವರು ಕೇಳಲೇಬೇಕಾಗುತ್ತದೆ. ಬಹುಶಃ ತಮ್ಮ ತೀರ್ಪನ್ನು ಕೊಡುವುದಕ್ಕೆ ಮೊದಲು,

ಅವರು ಮಾಡಿರತಕ್ಕಂಥಾದ್ದು ಸರಿ ಅಥವಾ ತಪ್ಪು ಎಂದು ಹೇಳುವಂಥ ವಾದಕ್ಕೆ ನಾನು ಹೋಗುವುದಿಲ್ಲ ಆದರೆ ಇವತ್ತು ಈ ಸದನ ನಡೆದುಕೊಂಡು ಬಂದಿರತಕ್ಕ ನಿಯಮಾವಳಿಗಳ ಹಿನ್ನಲೆ ಏನು ಎಂದು ಹೇಳಬೇಕಾದರೆ ಯಾವುದೇ ಒಂದು ನಿಲುವಳಿ ಸೂಚನೆಯನ್ನು ಮಂಡಿಸಿಯಾದಮೇಲೆ, ಪೂರ್ವಭಾವಿಯಾಗಿ ತಾವು ಕೊಡುತ್ತಿರತಕ್ಕಂಥ ಅಧಿಕಾರವನ್ನು ಅವರು ಸಂಪೂರ್ಣವಾಗಿ ಚಲಾಯಿಸಿ ಆದಮೇಲೆ, ಸರ್ಕಾರದ ವತಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಅದಕ್ಕೆ ತಕ್ಕಂತೆ ಉತ್ತರವನ್ನು ಕೊಟ್ಟು ಆದಮೇಲೆ, ಮಾನ್ಯ ಸಭಾಧ್ಯಕ್ಷರು ಈ ಒಂದು ನಿಲುವಳಿ ಸೂಚನೆಯನ್ನು ಎತ್ತಿ ಹಿಡಿಯಬೇಕೇ ಅಥವಾ ಬೇಡವೇ ಎಂದು ಹೇಳುವಂಥ ತಮ್ಮ ತೀರ್ಪು ಯಾವುದಿದೆ, ಆ ತೀರ್ಪಿಗೆ ಕಾಯಬೇಕಾಗಿರತಕ್ಕಂಥಾದ್ದು ಈ ಸದನದ ಎಲ್ಲರ ಕರ್ತವ್ಯ. ಕಾರಣ ತಾವು ಆ ಒಂದು ಅವಕಾಶವನ್ನು ಅವರಿಗೆ ಕೊಟ್ಟಿದ್ದೀರಿ. ಬಹುಶಃ ಆ ಒಂದು ತೀರ್ಪನ್ನು ಕೊಡುವುದಕ್ಕೆ ಮೊದಲೇ ಅವರು ಬಾವಿಗೆ ಬಂದು ಧರಣಿಯನ್ನು ಮಾಡುವುದಾದರೆ, ತಾವು ತಮ್ಮ ತೀರ್ಪನ್ನು ಕೊಡುವಂಥಾದ್ದಕ್ಕೂ ಕೂಡ ಅವರು ಅವಕಾಶ ಕೊಟ್ಟಿಲ್ಲ ಎಂದು ಹೇಳತಕ್ಕಂಥ ಭಾವನೆ ಬರುತ್ತದೆ. ಆದ್ದರಿಂದ ನಾನು ನನ್ನ ಮಾನ್ಯ ಮಿತ್ರರನ್ನು ಕೇಳಿಕೊಳ್ಳುತ್ತೇನೆ, ಈ ಸದನದ ಸಂಪ್ರದಾಯದಲ್ಲಿ ನಾವು ಬಹಳಷ್ಟು ವರ್ಷದಿಂದ ಈ ಸದನದ ಸಂಪ್ರದಾಯವನ್ನು ಎತ್ತಿ ಹಿಡಿದುಕೊಂಡೇ ಬಂದಿದ್ದೇವೆ. ಆದರೆ ಇಂಥ ಒಂದು ಬಹಳ ಅಪರೂಪವಾಗಿರತಕ್ಕಂಥ ಸಂದರ್ಭ ಇಷತ್ತಿನವರೆಗೆ ಈ ಮನೆಯಲ್ಲಿ ಬಂದಿಲ್ಲ. ಆದ್ದರಿಂದ ಅವರು ಯೋಚನೆ ಮಾಡಬೇಕಾಗುತ್ತದೆ. ಇವತ್ತು ತಮ್ಮ ತೀರ್ಪನ್ನು ಕೂಡ ಕೇಳುವುದಕ್ಕೆ ಅವರು ತಯಾರಾಗಬೇಕು. ಕೂಡಲೇ ಇವರು ಬಾವಿಗೆ ಬಂದು ಧರಣಿಯನ್ನು ಆರಂಭಿಸಿದರೆ ಮುಂದಿನ ಕಾರ್ಯಕಲಾಪವನ್ನು ಹೇಗೆ ನಡೆಸಬೇಕು ಎಂದು ಹೇಳುತ್ತಿರತಕ್ಕಂಥಾದ್ದರ ಬಗ್ಗೆಯೂ ಕೂಡ, ಬಹಳ ಹಿರಿಯ ಸದಸ್ಯರು ತಾವೆಲ್ಲರೂ ಎತ್ತಿದ್ದೀರಿ. ಆಡಳಿತ ಪಕ್ಷದಲ್ಲಿದ್ದವರು ಬಹುಶಃ ಇಲ್ಲಿ ಇರಲಿಲ್ಲ, ಅವರು ಹೊರಗಡೆ ಹೋಗಿದ್ದಾರೆ. ಮಾನ್ಯ ಖರ್ಗೆಯವರು ಭಾಷೆ ತೆಗೆದುಕೊಂಡಿದ್ದಾರೆ. ಮಾನ್ಯ ಸಭಾಧ್ಯಕ್ಷರು ಹೇಗೆ ಈ ಸದನವನ್ನು ನಡೆಸಿಕೊಂಡು ಹೋಗಬೇಕು ಎನ್ನತಕ್ಕಂಥದ್ದರ ಬಗ್ಗೆ ಕೂಡ ತಾವು ಚಿಂತನೆ ಮಾಡಬೇಕಾಗುತ್ತದೆ. ಬಹಳ ಪ್ರಾಮುಖ್ಯವಾಗಿ ಇವತ್ತು ಉಪಾಧ್ಯಕ್ಷರ ಚುನಾವಣೆ ಆಗಲೇಬೇಕು. ಉಪಾಧ್ಯಕ್ಷರ ಚುನಾವಣೆ ಆಗಬೇಕಾದರೆ ಕಾರ್ಯಕ್ರಮದ ಪ್ರಕಾರ ಅದು ಯಾವ ಸಂದರ್ಭದಲ್ಲಿ ಆಗಬೇಕು ಎಂದು ಹೇಳುವಂಥ ನಿಯಮಾವಳಿಗಳು ಕೂಡ ಇವೆ. ಅಂಥ ಸಂದರ್ಭದಲ್ಲಿ ತಾವು ಈ ಸದನದ ಬಾವಿಗೆ ಬಂದರೆ, ಉಪಾಧ್ಯಕ್ಷರ ಚುನಾವಣೆಯನ್ನು ಕೂಡ ತಾವು ಬಾವಿಯಲ್ಲೇ ಇದ್ದು ಮಾಡಬೇಕು ಎಂದು ಹೇಳುವಂಥ ಪರಿಸ್ಥಿತಿ ನಿರ್ಮಾಣವಾದರೆ ನಾವು ಈ ಸದನದಲ್ಲಿ ಒಂದು ಹೊಸ ಸಂಪ್ರದಾಯವನ್ನೆ ಸೃಷ್ಟಿ ಮಾಡಲು ಹೋಗಬೇಕಾಗಿರತಕ್ಕಂಥ ಒಂದು ಪರಿಸ್ಥಿತಿ ಬಂದಾಗಿದೆ. ತಾವು ದಯವಿಟ್ಟು ಅದಕ್ಕಾದರೂ ಸಹಕರಿಸಬೇಕು ಎಂದು ಹೇಳಿ ಮಾನ್ಯ ಸಭಾಧ್ಯಕ್ಷರ ಮೂಲಕ ನಾನು ಅವರನ್ನೆಲ್ಲ ಕೇಳಿಕೊಳ್ಳುತ್ತಿದ್ದೇನೆ.

★ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ನಾಣಯ್ಯನವರು ಏನು ಈಗಾಗಲೇ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅದು ಇಲ್ಲಿ ನಾವು ಧರಣಿ ಕುಳಿತಿದ್ದು, ಇನ್ನೂ ತಾವು ತೀರ್ಪೇ ಕೊಟ್ಟಿಲ್ಲ ಅದಕ್ಕಿಂತ ಮುಂಚೆಯೇ ಕುಳಿತಿದ್ದಾರೆ, ಏನು ತೀರ್ಪು ಕೊಡುತ್ತಾರೆ ಎನ್ನುವುದಕ್ಕೆ ಕೂಡ ಅವರು ಕಾಯಲಿಲ್ಲ, ಅದಕ್ಕಾಗಿ ಕಾಯಬೇಕಾಗಿತ್ತು, ತಮಗೆ ಅವಕಾಶ ಮಾಡಿಕೊಡಲಿಲ್ಲ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಆ ಪ್ರಶ್ನೆ ಇಲ್ಲಿ ಉದ್ಭವಿಸುತ್ತಿಲ್ಲ. ಏಕೆಂದರೆ ಈಗ ನಾವು ಮಾನ್ಯ ಮುಖ್ಯ

ಮಂತ್ರಿಗಳನ್ನು ಏನು ಕೇಳಿಕೊಂಡೆವು ಎಂದರೆ, ಈಗ ತಾವು ಏನು ದರವನ್ನು ಏರಿಸಿದ್ದೀರಿ, ಇದನ್ನು ಹಿಂತೆಗೆದುಕೊಳ್ಳಿ. ಎರಡೂ ಸದನಗಳ ಒಂದು ಸಮಿತಿ ಮಾಡಿ; ಆ ಸಮಿತಿ ಏನು ಹೇಳುತ್ತದೆ, ಹಾಗೆ ಹೇಳಿದ ಮೇಲೆ ಅಥವಾ ಅವರ ಅನಿಸಿಕೆಯಾದ ಮೇಲೆ ತಾವು ನಿರ್ಣಯ ತೆಗೆದುಕೊಳ್ಳಿ ಎಂದು ನಾವು ಹೇಳಿದೆವು. ಅವರು ಏನೆಂದರು, ನಾನು ಈಗ ಏನು ಮಾಡಿದ್ದೇನೆ ಅದರಲ್ಲಿ ವ್ಯತ್ಯಾಸ ಇಲ್ಲ, ಬದಲಾವಣೆ ಇಲ್ಲ, ಅದರ ಬಗ್ಗೆ ನಾನು ಏನೂ ಯೋಚನೆ ಮಾಡುವುದಿಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸಿದರು. ಆ ಮಾತನ್ನು ಅವರು ಸ್ಪಷ್ಟಪಡಿಸಿದ ಮೇಲೆ, ಮುಂದೆ ಈ ಚರ್ಚೆಗೆ ನಾವು ಅವಕಾಶ ಮಾಡಿಕೊಡುವುದಿಲ್ಲ ಎನ್ನತಕ್ಕಂಥ ಭಾವನೆಯನ್ನು ಅವರು ವ್ಯಕ್ತ ಮಾಡಿದ ಮೇಲೆ ಈ ಪ್ರಶ್ನೆಯೇ ಬರುವುದಿಲ್ಲ. ಅವರೇನಾದರೂ ಇನ್‌ಕ್ಲಿನೇಷನ್ ತೋರಿಸಿ, ಇದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ, ನಾನು ಏನಾದರೂ ಪರಿಗಣನೆ ಮಾಡುತ್ತೇನೆ ಎಂದು ಹೇಳಿದ್ದರೆ ಆಗ ನಾವು ತಮ್ಮ ತೀರ್ಪಿಗೆ ಕಾಯಬೇಕಾಗಿತ್ತು. ಆದರೆ ಅವರು ಇದರ ಬಗ್ಗೆ ಈಗ ಚಿಂತನೆ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಕೆ.ಇ.ಬಿ. ಬಹಳ ಕಷ್ಟದಲ್ಲಿದೆ, ತೊಂದರೆಯಲ್ಲಿದೆ, ಅದಕ್ಕಾಗಿ ನಾನು ಈ ಒಂದು ನಿಲುವನ್ನು ತೆಗೆದುಕೊಂಡಿದ್ದೇನೆ ಎಂದು ಹೇಳಿದರು. ಅವರು ಹೀಗೆ ಹೇಳಿಯಾದ ಮೇಲೆ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುವುದೇ ಹೊರತಾಗಿ ತಮ್ಮ ಬಗ್ಗೆ ಅಲ್ಲ ಎನ್ನತಕ್ಕಂಥ ಮಾತನ್ನು ಮಾನ್ಯ ನಾಣಯ್ಯನವರಿಗೆ ನಾನು ಹೇಳುತ್ತಿದ್ದೇನೆ.

